ಸಂಪುಟ ೧
ಸಂಚಿಕೆ ೮

ಕರ್ನಾಟಕ ಭಾರತಿ

ರಾಜ್ಯೋದಯ ಸಂಚಿಕೆ
೧೯೭೯

ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ

ಲೇಖಕರಿಗೆ ಸೂಚನೆಗಳು

'ಕರ್ನಾಟಕ ಭಾರತಿ'ಯು ಸೃಜನ, ವಿಮರ್ಶನ, ಸಂಶೋಧನ ಮತ್ತು ವೈಜ್ಞಾನಿಕ ಸಾಹಿತ್ಯದ ಅಭಿವೃದ್ಧಿಗಾಗಿ ಮೀಸಲಾಗಿದ್ದು, ಅದರಲ್ಲಿ ಪ್ರಕಟನೆಗಾಗಿ ಈ ಬಗೆಯ ಎಲ್ಲ ಲೇಖನಗಳಿಗೂ ಸ್ವಾಗತವಿದೆ. ಅನುವಾದ ಲೇಖನಗಳಿದ್ದರೆ, ಮೂಲಲೇಖಕರ ಹಾಗೂ ಲೇಖನದ ಹೆಸರನ್ನು ಸೂಚಿಸುವುದಲ್ಲದೆ ಮೂಲ ಲೇಖಕರ ಅಥವಾ ಪ್ರಕಾಶಕರ ಅನುಮತಿಯನ್ನು ಕಳುಹಿಸಬೇಕು.

ಲೇಖನಗಳನ್ನು ಕಾಗದದ ಒಂದೇ ಮಗ್ಗುಲಲ್ಲಿ ಸಾಕಷ್ಟು ಮಾರ್ಜಿನ್ ಬಿಟ್ಟು, ಸ್ಪಷ್ಟವಾಗಿ ಬರೆದಿರಬೇಕು, ಇಲ್ಲವೆ ಟೈಪ್ ಮಾಡಿರಬೇಕು. ಹಸ್ತಪ್ರತಿಗಳು ಯಾವ ರೀತಿಯಿಂದಲೂ ಅಸ್ಪಷ್ಟವಾಗಿಯಾಗಲಿ, ಅಸಂಪೂರ್ಣವಾಗಿಯಾಗಲಿ ಇರಬಾರದು.

ಲೇಖನ ಸ್ವೀಕೃತವಾದಕೂಡಲೆ ಲೇಖಕರಿಗೆ ತಿಳಿಸಲಾಗುತ್ತದೆ. ಅಸ್ವೀಕೃತ ಲೇಖನಗಳನ್ನು ಮರಳಿ ಪಡೆಯಲಿಚ್ಛಿಸುವವರು ಸಾಕಷ್ಟು ಅಂಚೆಚೀಟಿಗಳನ್ನು ಕಳುಹಿಸಬೇಕು.

ಲೇಖಕರಿಗೆ ಅವರ ಲೇಖನಗಳ ೨೫ ಪ್ರತಿಗಳನ್ನು ಲೇಖನ ಪ್ರಕಟವಾದ ಸಂಚಿಕೆಯ ಪ್ರತಿಯೊಂದಿಗೆ ಕಳಿಸಲಾಗುತ್ತದೆ. ಹೆಚ್ಚಿಗೆ ಪ್ರತಿಗಳು ಬೇಕಾದವರು ಅದರ ಮುದ್ರಣಾದಿ ವೆಚ್ಚವನ್ನು ವಹಿಸಬೇಕಾಗುವದು. ಲೇಖನ ಅಚ್ಚಾಗುವ ಪೂರ್ವದಲ್ಲಿ ಈ ವಿಷಯಕ್ಕೆ ತಿಳಿಸಬೇಕು.

ಲೇಖನಗಳನ್ನು, ವಿಮರ್ಶೆಗಾಗಿ ಪುಸ್ತಕಗಳನ್ನು, ಸಂಪಾದಕರು 'ಕರ್ನಾಟಕ ಭಾರತಿ', ಕನ್ನಡ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-೩ ಇವರಿಗೆ ಕಳುಹಿಸಬೇಕು. ವಿಮರ್ಶೆಗಾಗಿ ಪುಸ್ತಕಗಳನ್ನು ಕಳುಹಿಸುವವರು **ಎರಡು** ಪ್ರತಿಗಳನ್ನು ಕಳುಹಿಸಬೇಕು.

ಇನ್ನಿತರ ಯಾವದೇ ವಿಷಯಕ್ಕೆ ಡಾಯರೆಕ್ಟರ್, ವ್ಯಾಸಂಗ ವಿಸ್ತರಣ ಹಾಗೂ ಪ್ರಕಟನ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-೩ ಇವರಿಗೆ ಬರೆಯಬೇಕು.

ಕರ್ನಾಟಕ ಭಾರತಿ

೧. ರಾಜ್ಯೋದಯ ಸಂಚಿಕೆ ೨. ಅಕ್ಷಯತೃತೀಯಾ ಸಂಚಿಕೆ

ವಾರ್ಷಿಕ ಚಂದಾ : ರೂ. ೫-೦೦ (ಅಂಚೆವೆಚ್ಚ ಸಹಿತ)

ಬಿಡಿಸಂಚಿಕೆಯ ಬೆಲೆ : ರೂ. ೩-೦೦ (ಅಂಚೆವೆಚ್ಚ ಪ್ರತ್ಯೇಕ)

ಹಣವನ್ನು ಮನಿಯಾರ್ಡರ್ ಇಲ್ಲವೆ ಪೋಸ್ಟಲ್ ಆರ್ಡರ್ ಮೂಲಕ ರಜಿಸ್ಟ್ರಾರ್, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-೩ ಇವರಿಗೆ ಕಳುಹಿಸಬೇಕು.

ಕರ್ನಾಟಕ ಭಾರತಿ

ಅಯನ ಪತ್ರಿಕೆ

ಸಂಪುಟ : ೨ ಸಂಚಿಕೆ : ೧

ರಾಜ್ಯೋದಯ ಸಂಚಿಕೆ

ಕ್ರಿ. ಶ. ೧೯೬೯ ಶಾ. ಶ. ೧೮೯೧

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಕರ್ನಾಟಕ ಭಾರತಿ

ಕರ್ನಾಟಕ ವಿಶ್ವವಿದ್ಯಾಲಯದ ಅಯನ ಪತ್ರಿಕೆ

ಸಂಪುಟ : ೩, ಸಂಚಿಕೆ : ೧
ನವೆಂಬರ್ ೧೯೬೯

ಪ್ರಕಾಶಕರು :

ಶ್ರೀ ಎಸ್. ಎಸ್. ಒಡೆಯರ, ಎಂ.ಎ., ಎಲ್ಎಲ್.ಬಿ.
ರಜಿಸ್ಟ್ರಾರ್, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-೩

ಮುದ್ರಕರು :

ಶ್ರೀ ಬಿ. ಜಿ. ಗುತ್ತಲ, ಬಿ.ಎ., ಎಲ್ಎಲ್.ಬಿ.
ಸಂಯುಕ್ತ ಕರ್ನಾಟಕ ಪ್ರೆಸ್, ಕೊಪ್ಪೀಕರ ರೋಡ್, ಹುಬ್ಬಳ್ಳಿ-೨೦

ಮಹಾಕವಿ ಪಂಪನ ಸೋದರ ಜಿನವಲ್ಲಭನ ಗಂಗಾಧರಂ ಶಾಸನ ಪ್ರದೇಶದ ಚಿತ್ರಗಳು


(ಆಂಧ್ರಪ್ರದೇಶ : ಕರೀಮನಗರ ಜಿಲ್ಲೆ)



ಶಾಸನವಿರುವ ವೃಷಭಾದ್ರಿ (ಬೊಮ್ಮಲಗುಟ್ಟ)



ಪಂಪನ ಬಿರುದಿನ ಸಂಕೇತವಾಗಿ ಜಿನವಲ್ಲಭನು ನಿರ್ಮಿಸಿದ 'ಕವಿತಾಗುಣಾರ್ಣವ' ಕೆರೆ



ಗಂಗಾಧರಂ ಶಾಸನ ಮತ್ತು ಚಕ್ರೇಶ್ವರಿ ವಿಗ್ರಹ

ಪರಿವಿಡಿ

ವಚನ, ಉಗಾಭೋಗ, ಸುಳಾದಿ

ಶಿವಶರಣರ ವಚನ ಹರಿದಾಸರ ಉಗಾಭೋಗ ಸುಳಾದಿಗಳ ಮೂಲ ಮತ್ತು ರಚನೆಯ ಸ್ವರೂಪಗಳ ವಿಷಯದಲ್ಲಿ ಆಗಾಗ ಚರ್ಚೆ ನಡೆಯುತ್ತಲಿದೆ. ವಚನಗಳ ಕುರಿತಿರುವ ಚರ್ಚೆ ಅವು ಗದ್ಯವೊ ಪದ್ಯವೊ ಎಂಬುದಕ್ಕೆ ಸಂಬಂಧಿಸಿದೆ. ಗದ್ಯ-ವಾದಿಗಳು: ವಚನ ಶಬ್ದವು ಸಂಸ್ಕೃತದ ವಚ್ ಧಾತುವಿನಿಂದ ಉಂಟಾದ ನಾಮ ಪದ. ವಚನವೆಂದರೆ ಮಾತು, ನುಡಿ. ಹೇಳುವಾಗ ಅಥವಾ ಓದುವಾಗ ಯಾವುದೊಂದು ಲಯಕ್ಕೆ ಹೊಂದಿಕೊಳ್ಳುವಂತೆ ತೋರುತ್ತಿದ್ದರೂ ನಿಯತ ಛಂದಸ್ಸಿನ ಇಲ್ಲವೆ ತಾಳ-ಲಯದ ಯೋಜನೆ ಅವುಗಳಲ್ಲಿಲ್ಲ, ಎನ್ನುತ್ತಿರುವರು.

ಪದ್ಯವಾದಿಗಳು : ಬಸವೇಶ್ವರಾದಿಗಳು "ಆನು ಒಲಿದಂತೆ ಹಾಡುವೆ", "ಅರವತ್ತೆಂಟು ಸಹಸ್ರ ವಚನಗಳ ಹಾಡಿ ಹಾಡಿ ಸೋತಿತೆನ್ನ ಮನ ನೋಡಯ್ಯ" ಎಂದಿರುವರು. ಕೆಲವು ವಚನಗಳನ್ನು ತ್ರಿಪದಿ, ಚೌಪದಿ, ಮೊದಲಾದ ಛಂದಸ್ಸುಗಳಲ್ಲಿ ವಿಂಗಡಿಸಬಹುದಾಗಿದೆ. ಕೆಲವುಗಳಲ್ಲಿ ನಿಯತ ಸಂಖ್ಯೆಯ ಮಾತ್ರಾಗಣಗಳ ಓಟವಿದೆ. ಎಲ್ಲ ವಚನಗಳಲ್ಲಿ ಒಂದು ಬಗೆಯ ಲಯವಿದ್ದು ಅವು ಇಂದಿನ ಮುಕ್ತಛಂದಸ್ಸಿನ (ಬ್ಲ್ಯಾಂಕ ವ್ಹರ್ಸ) ಪೂರ್ವ-ಭಾವಿಯಾಗಿವೆ, ಎಂದು ಪ್ರತಿಪಾದಿಸುತ್ತಿರುವರು.

ಉಗಾಭೋಗವು ಸಂಗೀತಶಾಸ್ತ್ರದಲ್ಲಿ ಬರುವ ಉದ್ಗ್ರಹ ಆಭೋಗ ಎಂಬ ಪಾರಿಭಾಷಿಕ ಶಬ್ದಗಳ ಸಂಯುಕ್ತ ಅಪಭ್ರಂಶ ರೂಪ. ಸುಳಾದಿಯ ಮೂಲವನ್ನು ಸೂಡಾಲಿ ಇಲ್ಲವೆ ಸುಲಭ-ಹಾದಿಯಲ್ಲಿ ಕಾಣಬಹುದೆಂದು ಕೆಲವರ ಅಭಿಪ್ರಾಯವಿದ್ದರೆ ಉಳಿದವರು ಅದನ್ನು ಒಪ್ಪುತ್ತಿಲ್ಲ.

ಹಾಗೂ ಇರಬಹುದು, ಹೀಗೂ ಇರಬಹುದು, ಎಂಬ ದೇಹಲಿ-ಪ್ರದೀಪ ನ್ಯಾಯವನ್ನು ಅನುಸರಿಸಿದ ಮಧ್ಯವರ್ತಿ ಅಭಿಪ್ರಾಯವಾದರೂ ಇಲ್ಲದಿಲ್ಲ. ವಚನಗಳ ವಿಷಯದಲ್ಲಿ, ಅವು ಲಯಯುಕ್ತ ಗದ್ಯವೂ ಅಲ್ಲ ಪದ್ಯವೂ ಅಲ್ಲ. ಅವುಗಳಲ್ಲಿರುವದು ಶಬ್ದ-ಲಯ. ಅವು ಅವೇ (ಸೂಯಿ ಜೆನೇರಿಸ್) ಎಂದು ಹೇಳಿ ಚರ್ಚೆಯನ್ನು ಮುಕ್ತಾಯಗೊಳಿಸಬಯಸುವ ಅಭಿಪ್ರಾಯವೊಂದು ಇತ್ತೀಚೆಗೆ ವ್ಯಕ್ತವಾಗಿದೆ.

ವಚನಗಳು ಗದ್ಯವೆಂಬಲ್ಲಿ ಸಂದೇಹವಿಲ್ಲ. ಲಯದ ಅಸ್ತಿತ್ವ, ಪದ್ಯಾಭಾಸ, ಒಮ್ಮೊಮ್ಮೆ ಪದ್ಯವೇ ಇದ್ದರೂ ಇವು ವಚನಗಳು ಪದ್ಯಜನ್ಯವೆಂಬುದಕ್ಕೆ ಪೋಷಕವಾಗವು. "ಛಂದೋಹೀನ ಪದಕದಂಬಕಂ ಗದ್ಯಮಿತ್ಯುಚ್ಯತೇ" ಎಂಬುದು ಗದ್ಯದ ಸಾಮಾನ್ಯ ವ್ಯಾಖ್ಯೆ ಇದ್ದರೂ ನೃಪತುಂಗನು "ಸದಮಲ

ಸಮಸಂಸ್ಕೃತ ವಾಕ್ಯದ ಹೃದಯಂ" ಎಂದು ಕವಿರಾಜಮಾರ್ಗದಲ್ಲಿ ಬಾಣ
ಶೈಲಿಯನ್ನು ಬಣ್ಣಿಸುವಾಗ ಗದ್ಯದ ಲಯುಬದ್ಧತೆಯನ್ನು ಸೂಚಿಸಿರುವನ
ಇಲ್ಲಿ ಸಮಸಂಸ್ಕೃತ ಪದದ ಅರ್ಥ ತನ್ನದೆ ಆದ ಒಂದು ಲಯದೊಂದಿಗೆ ಗಂಗಾ
ಪ್ರವಾಹದಂತೆ ಗಂಭೀರವಾಗಿ ಹರಿವ ಗದ್ಯವೆಂದಲ್ಲದೆ ಬೇರೊಂದಾಗದು. ಅಲ್ಲ
ಭಾಷೆ ಯಾವುದೆ ಇದ್ದರೂ ಪ್ರಾಚೀನ ಗದ್ಯ ಲಯುಬದ್ಧವಿದ್ದುದು ಸುಪರಿಚಿತವಿ
ಪರಾಂಬರಿಸಿರಿ—

ರನ್ನ—

....ಭಾರದ್ವಾಜಗೋತ್ರನುಂ ಕುಂಭಸಂಭವನುಮುಭಯುಬಲಪ್ರಧ
ನೋಪಾಧ್ಯಾಯನುಂ ತ್ರೈಲೋಕ್ಯಧನುರ್ಧರನುಂ ರುದ್ರಾವತಾ
ಜನಕನುಂ ಚಾಪಸಾಮರ್ಥ್ಯಸಂಪನ್ನನುಂ....ಕನಕಕಲಶಧ್ವಜನುಮೆನಿಸಿ
ಬಿಲ್ಲಜಾಣಂ ದ್ರೋಣನಳವಿನೊಳಂ....

(ಗದಾಯುದ್

ಹರಿಹರ—

"....ಎಲೆ ಮಗನೆ ಬಸವ, ಬಸವಣ್ಣ, ಬಸವದೇವ, ನಿನ್ನಂ ಮಹಿ
ತಳದೊಳು ಮೆರೆದಪೆವು. ನೀಂ ಬಿಜ್ಜಳರಾಯನಿಪ್ಪ ಮಂಗಳವಾಡ
ಪೋಗು," ಎನಲು, ನಿದ್ರೆತಿಳಿದು ಕಣ್ತೆರೆದು ಕೆಲಬಲನಂ ನೋಡಿ, ಬೆ
ಬೆಗಡುಗೊಂಡು, ಅನುತಾಪವೇರಿ ವಿರಹಂ ಹೊಮ್ಮಿ,....ಗುರು
ಪರಮಬಂಧುವೆ, ಪ್ರಾಣವೆ, ಬೆಳದಿಂಗಳೇಕೆ ಬಿಸಿಲೇಕೆ, ಅಮೃತವೆ
ವಿಷವೇಕೆ, ಬೆಳಗೇಕೆ ತಮವೇಕೆ, ನಿನಗೆ ಈ ನುಡಿಯೇಕೆ....ಸಾರ್ದ
ಸೈರಿಸೆಂಬರೆ, ನಂಬಿದವರ ಗೋಣಂ ಕೊಯ್ವರೆ....ಎನ್ನಂ ಬಿಡುವರೆ...."

(ಬಸವರಾಜದೇವರ ರಗ

ದುರ್ಗಸಿಂಹ—

"ಸಾವಂಗೆ ಸಮುದ್ರಂ ಮೊಳಕಾಲುದ್ದಂ" ಎಂಬಂತೆ, "ಕಿಚ್ಚಿನೊ
ಬಿಳ್ವಂಗೆ ಸಾವು ತಪ್ಪದು" ಎಂಬಂತೆ, ತನಗೆ ಸಾವು ತಪ್ಪದು. ಆ
ಮುನಿದು ಇರ್ಮುಡಿಸಿ ಕೊಂದಪೆನೊ ? ಭಯಮೇಕೆನಗಿಲ್ಲ ?

(ಪಂಚತಂ

ಇವು ಒಂದರಿಂದೊಂದು ಭಿನ್ನವಿದ್ದರೂ ಪ್ರತಿಯೊಂದರಲ್ಲಿ ಅದರದೆ
ಲಯವು ಸ್ಪಷ್ಟಗೋಚರವಿದೆ—ರನ್ನನದು ಕಾವ್ಯಗದ್ಯ, ಹರಿಹರನದು ಕ
ಗದ್ಯ, ದುರ್ಗಸಿಂಹನದು ಪ್ರವಚನಗದ್ಯವೆನ್ನಬಹುದು. ಲಾಕ್ಷಣಿಕರು ಪ

ತಂತ್ರದಂಥ ಕೃತಿಗಳನ್ನು ನಿದರ್ಶನ, ಉಪದೇಶಪರ ಕಾವ್ಯಗಳೆಂದು ವರ್ಗೀಕರಿಸಿರುವನು. ದುರ್ಗಸಿಂಹನ ಗದ್ಯಕ್ಕೂ ವಚನಗಳ ಗದ್ಯಕ್ಕೂ ಕಂಡುಬರುವ ಸಾಮೀಪ್ಯವು ಗಮನಾರ್ಹವಿದೆ. ಈ ಬಗೆಯ ಗದ್ಯ ನಮ್ಮಲ್ಲಿ ಉಪನಿಷತ್ಕಾಲದಿಂದಲೂ ನಡೆದುಬಂದಿದೆ. ತೈತ್ತಿರೀಯ ಉಪನಿಷತ್ತಿನಲ್ಲಿಯ—

> ಸತ್ಯಂ ವದ। ಧರ್ಮಂ ಚರ। ಸ್ವಾಧ್ಯಾಯಾನ್ಮಾ ಪ್ರಮದಃ। ಸತ್ಯಾನ್ನಪ್ರಮಾದಿತವ್ಯಂ। ಕುಶಲಾನ್ನಪ್ರಮಾದಿತವ್ಯಂ। ಮಾತೃದೇವೋ ಭವ। ಪಿತೃದೇವೋ ಭವ। ಆಚಾರ್ಯದೇವೋ ಭವ। ಅತಿಥಿದೇವೋ ಭವ। ಯಾನ್ಯನವದ್ಯಾನಿ ಕರ್ಮಾಣಿ ತಾನಿ ತ್ವಯೋಪಾಸ್ಯಾನಿ। ನೋ ಇತರಾಣಿ।....

ಈ ವಾಕ್ಯಗಳನ್ನೂ ಬೌದ್ಧಪ್ರಾರ್ಥನೆಯಲ್ಲಿಯ ಸುಪರಿಚಿತವಿರುವ—

> ಬುದ್ಧಂ ಸರಣಂ ಗಚ್ಛಾಮಿ। ಧಮ್ಮಂ ಸರಣಂ ಗಚ್ಛಾಮಿ।
> ಸಂಘಂ ಸರಣಂ ಗಚ್ಛಾಮಿ।

ಈ ವಾಕ್ಯಗಳನ್ನೂ ನೂರಾರು ಶಿಷ್ಯರು ಸ್ನಾತಕರು ಒಕ್ಕೊರಲಿನಿಂದ ಗಂಭೀರ ಧ್ವನಿಯಲ್ಲಿ ಹೇಳುವಾಗ ಇವು ಗದ್ಯವಲ್ಲ ಪದ್ಯ ಎನ್ನಬೇಕಾಗುವದು.

ವಚನಗಳ ಗದ್ಯ ಈ ಬಗೆಯದು. ನಮ್ಮ ಪ್ರಾಚೀನ ಸಾಹಿತ್ಯವು ಪದ್ಯಮಯವೆಂಬುದು ಗೊತ್ತಿದ್ದ ವಿಷಯ. ಜ್ಞಾನಾರ್ಜನೆ ಜ್ಞಾನದಾನಗಳಿಗೆ ಪದ್ಯವೆ ಮುಖ್ಯಮಾಧ್ಯಮವಿದ್ದುದರಿಂದ ಜನರ ಒಲವೆಲ್ಲ ಪದ್ಯದತ್ತಿದ್ದಿತು. ಏನಿಲ್ಲದಿದ್ದರೂ ಕನಿಷ್ಟ ನೂರು ಶ್ಲೋಕಗಳನ್ನು ಕಟ್ಟಬಲ್ಲವನಿದ್ದರೆ ಸಾಕು, ಆತ ಪಂಡಿತ; ಎಂಬ ಮಾತಿನ ಹೊಲಬಾದರೂ ಇದನ್ನೆ ಸೂಚಿಸುತ್ತದೆ. ಇಂಥ ಪರಿಸರ ಪರಂಪರೆಗಳಲ್ಲಿ ಭಕ್ತಿ, ಸ್ಫೂರ್ತಿ, ಅನುಭವ, ಸಾಕ್ಷಾತ್ಕಾರಗಳ ಸಂಗಮದೊಂದಿಗೆ ಉಕ್ಕಿಬಂದ ನುಡಿಗಳು ಗದ್ಯದಲ್ಲಿದ್ದರೂ ಪದ್ಯದ ಪರಿಮಳದಿಂದ ಕೂಡಿ, ಒಮ್ಮೊಮ್ಮೆ ಪದ್ಯವಾಗಿಯೆ ಹರಿದುಬಂದಿದ್ದರೆ ಅದರಲ್ಲಿ ಆಶ್ಚರ್ಯ ಅಥವಾ ಅಸ್ವಾಭಾವಿಕವೆಂಬುದಿಲ್ಲ. ಆದರೂ ಅದು ಗದ್ಯ.

ವಚನಗಳು ಗದ್ಯವಿದ್ದರೂ ಸಾಮಾನ್ಯ ಗದ್ಯವಲ್ಲ. ಅವು ಗದ್ಯಪ್ರಬಂಧಗಳು. ಉಗಾಭೋಗ ಸುಳಾದಿಗಳಾದರೂ ಪ್ರಬಂಧಗಳೆ. ಪ್ರಬಂಧವೆಂದರೆ ಸಾಮಾನ್ಯವಾಗಿ ಯಾವುದೊಂದು ಸಾಹಿತ್ಯಿಕ ಕೃತಿಯೆಂದಿದೆ. ಸಂಗೀತಶಾಸ್ತ್ರದಲ್ಲಿ ಅವು ಗಾನ, ಗೀತಗಳೆನಿಸಿಕೊಂಡಿವೆ. ಪ್ರಬಂಧಗಳಲ್ಲಿ ನಿಬದ್ಧ ಅನಿಬದ್ಧವೆಂಬ ಎರಡು ಭೇದಗಳಿವೆ. ನಿಬದ್ಧ ಪ್ರಬಂಧಗಳು ನಿರ್ದಿಷ್ಟ ಧಾತು, ಅಂಗ, ಛಂದಸ್ಸಾದಿಗಳಿಂದ ಕೂಡಿರುತ್ತವೆ. ಅನಿಬದ್ಧಗಳಿಗೆ ಈ ಬಗೆಯ ನಿರ್ಬಂಧವಿಲ್ಲ.

ಧಾತುಗಳು ನಾಲ್ಕು— (೧) ಉದ್ಗ್ರಾಹ—ಪ್ರಬಂಧ ಅಥವಾ ಗೀತದ ಪ್ರಾರಂಭದ ಭಾಗ, (೨) ಮೇಲಾಪಕ—ಗೀತದ ಮಧ್ಯಭಾಗ, (೩) ಧ್ರುವ—ಗೀತಕ್ಕೆ ಸ್ಥಿರತ್ವವನ್ನು ಕೊಡುವ ಭಾಗ, (೪) ಆಭೋಗ—ಗೀತದ ಕೊನೆಯ ಭಾಗ. ಕರ್ತೃವು ಇಷ್ಟಾನುಸಾರ ಇದರಲ್ಲಿ ಮುದ್ರಿಕೆ ಅಂದರೆ ತನ್ನ ಇಷ್ಟದೇವತೆ, ಗುರು, ಆಶ್ರಯದಾತ ಇಲ್ಲವೆ ಸ್ವಂತ ಅಂಕಿತವನ್ನು ಸೇರಿಸಬಹುದಾಗಿದೆ. ಮೇಲಾಪಕವು ಉದ್ಗ್ರಾಹ ಧ್ರುವಗಳ ನಡುವಣ ಕೊಂಡಿಯಂತಿರುತ್ತದೆ. ಈ ನಾಲ್ಕು ಧಾತುಗಳಲ್ಲದೆ ಅಂತರವೆಂಬ ಐದನೆಯ ಧಾತುವಿದೆ. ಇದು ಸಾಲಗ ಅಥವಾ ಛಾಯಾಲಗ ಸೂಡಗಳಲ್ಲಿ ಮಾತ್ರ ಕಂಡುಬರುತ್ತದೆ. ಇದಕ್ಕೂ ಮೇಲಾಪಕಕ್ಕೂ ವಿಶೇಷ ವ್ಯತ್ಯಾಸವಿಲ್ಲ. ಇಂದಿನ ಪರಿಭಾಷೆಯಲ್ಲಿ ಇವುಗಳನ್ನು ಹೀಗೆ ಹೇಳಬಹುದು —

	ಹಿಂದುಸ್ತಾನಿ	ಕರ್ನಾಟಕಿ (ದಕ್ಷಿಣಾದಿ)
ಧ್ರುವ (ಉದ್ಗ್ರಾಹಯುಕ್ತ)	ಸ್ಥಾಯಿ/ಅಸ್ಥಾಯಿ	ಪಲ್ಲವಿ/ಅನುಪಲ್ಲವಿ
ಮೇಲಾಪಕ/ಅಂತರ	ಅಂತರಾ/ಸಂಚಾರಿ	ಚರಣ/ನುಡಿ
ಆಭೋಗ	ಆಭೋಗ	ಆಭೋಗ

ಅಂಗಗಳು ಆರು— (೧) ಸ್ವರ—ಸರಿಗಮಾದಿಗಳು, (೨) ಬಿರುದು—ಭಕ್ತವತ್ಸಲ, ವೀರಾಗ್ರಣಿ, ಇತ್ಯಾದಿ, (೩) ಪದ—ಶಬ್ದಸಾಹಿತ್ಯ, (೪) ತೇನಕ—ಓಂ ಮೊದಲಾದ ಮಂಗಲಸೂಚಕ ಶಬ್ದಗಳು, (೫) ಪಾಟ—ಧೀಂ ಧಿನ್ನಾ ಮೊದಲಾದ ವಾದ್ಯಾಕ್ಷರಗಳು, (೬) ತಾಲ—ಧ್ರುವ, ಮಟ್ಟ, ಮೊದಲಾದವು.

ಉದ್ಗ್ರಾಹಾದಿ ಧಾತುಗಳಲ್ಲಿ ಉದ್ಗ್ರಾಹ ಮತ್ತು ಧ್ರುವ ಎಲ್ಲ ಪ್ರಬಂಧಗಳಲ್ಲಿ ಇರಲೇಬೇಕು. ಇವು ವಾಕ್ಯದಲ್ಲಿಯ ಕರ್ತೃ ಕ್ರಿಯಾಪದಗಳಿದ್ದಂತೆ. ಮಿಕ್ಕವು ಐಚ್ಛಿಕ, ಧಾತು ಅಂಗಗಳ ಸಂಖ್ಯೆಯ ಮೇರೆಗೆ ಪ್ರಬಂಧಗಳಲ್ಲಿ ಬೇರೆ ಬೇರೆ ಜಾತಿಗಳಾಗುತ್ತವೆ. ಕನ್ನಡಸಾಹಿತ್ಯದಲ್ಲಿ ಈವರೆಗೆ ಆರು ಅಂಗಗಳಿರುವ ಒಂದೇ ಒಂದು ಪ್ರಬಂಧವು ದೊರೆತಿದೆ. ಅದೆಂದರೆ ಪುರಂದರದಾಸರ 'ಆಡಿದನೋ ರಂಗ ಅದ್ಭುತದಿಂದಲಿ' ಪದ. ಅದಿಂತಿದೆ—

ರಾಗ-ಆರಭಿ ತಾಳ-ಆದಿ

ಆಡಿದನೊ ರಂಗ ಅದ್ಭುತದಿಂದಲಿ ।
ಕಾಳಿಂಗನ ಫಣಿಯಲಿ—ಆಡಿದನೊ ॥ ಪ ॥

ಪಾಡಿದವರಿಗೆ ಬೇಡಿದ ವರಗಳ ।
ನೀಡುತಲಿ–ದಯಮಾಡುತಲಿ–ನಲಿನಲಿ-
ದಾಡುತಲಿ–ಬೆಣ್ಣೆ ಬೇಡುತಲಿ–ಕೃಷ್ಣ ॥ ಅ. ಪ. ॥

ಅಂಬುಜೋದ್ಭವ ಅಖಿಳಸುರರು ಕೂಡಿ।
ಅಂಬರದಲಿ ನಿಂತವರು ಸ್ತುತಿಸೆ।
ರಂಭೆ ಊರ್ವಸಿ ರಮಣಿಯರೆಲ್ಲರು।
ಚೆಂದದಿಂ ಭರತನಾಟ್ಯವ ನಟಿಸೆ।
ಝುಂತಕ ತಕಧಿಮಿ ತಧಿಗಣ ತೋಂ ಎಂದು।
ಝುಂಪೆತಾಳದಿ ತುಂಬುರನೊಪ್ಪಿಸೆ।
ಧಾಪಮಪದಸರಿ ಎಂದು ಧ್ವನಿಯಿಂದ।
ನಾರದತುಂಬುರು ಗಾನವ ಮಾಡಲು।
ನಂದಿಯು ಚೆಂದದಿ ಮದ್ದಲೆ ಹಾಕಲು ॥ ೧ ॥

....

....

ಚಿಕ್ಕವನಿವನಲ್ಲ ಪುರಂದರವಿಟ್ಠಲ।
ವೆಂಕಟರಮಣನ ಬೇಗ ಯಶೋದೆ।
ಬಿಂಕದೊಳೆತ್ತಿ ಮುದ್ದಾಡೆ ಶ್ರೀಕೃಷ್ಣನ ॥ ೩ ॥

ಇದರಲ್ಲಿ ಧಾತುಗಳು ಮೂರು—(೧) ಧ್ರುವ (ಉದ್ಗ್ರಾಹಯುಕ್ತ)—ಪಲ್ಲವಿ, ಅನುಪಲ್ಲವಿ; (೨) ಅಂತರ/ನುಡಿ—ಒಟ್ಟು ಮೂರು ನುಡಿಗಳಿವೆ; (೩) ಆಭೋಗ—ದಾಸರ ಅಂಕಿತವಿರುವ ಕೊನೆಯ ಮೂರು ಪಾದಗಳು. ಅಂಗಗಳು ಆರು: (೧) ಸ್ವರ—ಪದವು ಆರಭಿರಾಗದಲ್ಲಿರುವದರಿಂದ ಆ ರಾಗಕ್ಕನ್ವಯಿಸುವ ಸ್ವರಗಳು ಮತ್ತು ಧಾಪಮಪಧಸರಿ ಸ್ವರಾಕ್ಷರಗಳ ಸ್ಪಷ್ಟನಿರ್ದೇಶ, (೨) ಬಿರುದು—ಪಾಡಿದವರಿಗೆ ಬೇಡಿದ ವರಗಳ ನೀಡುವವ, ಇತ್ಯಾದಿ, (೩) ಪದ—ಪದ್ಯದ ಸಮಗ್ರ ಶಬ್ದ ಸಾಹಿತ್ಯ, (೪) ಪಾಟ—ಝುಂತಕ ತಕಧಿಮಿ ಮೊದಲಾದ ವಾದ್ಯಾಕ್ಷರಗಳು, (೫) ತಾಲ—ಪದ್ಯವು ಆದಿತಾಲದಲ್ಲಿದೆ ಮತ್ತು ಝುಂಪೆ ತಾಲದ ಉಲ್ಲೇಖವಿದೆ, (೬) ತೇನಕ—ಕೆಲವು ಪ್ರಬಂಧಗಳು ಓಂ ಮುಂತಾದ ಮಂಗಲಾರ್ಥಪ್ರಕಾಶಕ ಶಬ್ದಗಳಿಂದ ಪ್ರಾರಂಭವಾಗುತ್ತವೆ. ಮಿಕ್ಕವುಗಳಲ್ಲಿ ಅದು ಅಧ್ಯಾಹೃತವಿರುತ್ತದೆ ಅಂದರೆ ಗಾಯಕರು ಅದನ್ನು ಉಚ್ಚರಿಸಿ ಅಥವಾ ಇಷ್ಟದೇವತೆಯನ್ನು ಸ್ಮರಿಸಿ ಗಾನವನ್ನು ಪ್ರಾರಂಭಿಸುವರು. ಪ್ರಬಂಧದ ಜಾತಿ—ಧಾತುಗಳನ್ವಯ—ಸಾಲಗಸೂಡ. ಅಂಗಗಳ ಸಂಖ್ಯೆಗನುಸರಿಸಿ—ಮೇದಿನಿ.

ಪ್ರಬಂಧಗಳನ್ನು ಸೂಡ (ಶುದ್ಧ), ಆಲಿ, ವಿಪ್ರಕೀರ್ಣ ಎಂಬ ಮೂರು ಬಗೆಗಳಲ್ಲಿ ವಿವರಿಸಿರುವವನು ಸಂಗೀತರತ್ನಾಕರಕಾರ ಶಾರ್ಙ್ಗದೇವ. ಇವಲ್ಲದೆ ಸಾಲಗ/ಛಾಯಾಲಗ(ಶುದ್ಧಸದೃಶ)ವೆಂಬ ನಾಲ್ಕನೆಯ ವರ್ಗವಿದೆ. ಸೂಡ-ವೆಂದರೆ ಕನ್ನಡದ ಸೂಡು ಅಥವಾ ಕಟ್ಟು. "ಸೂಡ ಇತಿ ಗೀತವಿಶೇಷ

ಸಮೂಹವಾಚೀ ದೇಶೀಶಬ್ದಃ" ಎಂದು ವಾಕ್ಯ ಇದೆ ಇದಕ್ಕೆ. ಸೂಡಪ್ರಬಂಧಗಳಲ್ಲಿ ಏಳೆ, ಢೇಂಕಿ, ಮೊದಲಾದ ಎಂಟು ಬಗೆಗಳಿವೆ. ಆಲಿಗಳಲ್ಲಿ ಆರ್ಯಾ, ಗಾಥಾ, ದ್ವಿಪದಿ, ಕನ್ನಡದಲ್ಲಿ ಎಲ್ಲೆಡೆಗಳಲ್ಲಿ ವ್ಯಾಪಿಸಿದ ಕಂದ ಮೊದಲಾದ ೨೪ ಬಗೆಯ ಪ್ರಬಂಧಗಳಿವೆ. ವಚನಗಳಿಗೆ ಸಂಬಂಧಿಸಿದ ಗದ್ಯಪ್ರಬಂಧವು ಇವುಗಳಲ್ಲಿ ಸೇರಿದೆ. ವಿಪ್ರಕೀರ್ಣಗಳಲ್ಲಿ ಕನ್ನಡ ಛಂದೋಗಂಗೆಯ ಗಂಗೋತ್ರಿಯೆಂದು ಹೆಸರು ಗಳಿಸಿದ ತ್ರಿಪದಿ, ಅಷ್ಟೆ ಲೋಕಪ್ರಿಯವಿದ್ದ ಚೌಪದಿ, ಷಟ್ಪದಿ, ರಾಹಡಿ (ರಗಳೆ), ಮಹಾರಾಷ್ಟ್ರದಲ್ಲಿ ಮೆಚ್ಚಿಗೆಪಡೆದ ಓವಿ, ಕನ್ನಡ ಯಕ್ಷಗಾನಗಳಲ್ಲಿ ಕಂಡುಬರುವ ಧವಲ (ಧವಳಾರ) ಮೊದಲಾದ ೩೬ ಬಗೆಯ ಪ್ರಬಂಧಗಳಿವೆ. ಇನ್ನೂ ಅನೇಕ ಬಗೆಯ ಪ್ರಬಂಧಗಳುಂಟು. ಅವುಗಳಿಗೆ ಲೆಕ್ಕವಿಲ್ಲೆಂದು ಹೇಳಿರುವರು ಲಾಕ್ಷಣಿಕರು.

ಸಾಲಗಸೂಡ ಪ್ರಬಂಧಗಳು "ಧ್ರುವಾಭೋಗಾಂತರೇ ಜಾತೋ" ಅಂದರೆ ಧ್ರುವ, ಅಂತರ, ಆಭೋಗ ಧಾತುಗಳಿಂದ ಯುಕ್ತವಿವೆ. ಅಂತರವು ಈ ಜಾತಿಯ ಪ್ರಬಂಧಗಳಲ್ಲಿ ಮಾತ್ರ (ಸಾಲಗಸೂಡಸ್ಥ ರೂಪಕೇಷ್ವೇವ ದೃಶ್ಯತೇ) ಕಾಣಿಸಿಕೊಳ್ಳುತ್ತದೆ. ಇವೇ ಇಂದು ನಮ್ಮ ಸಂಗೀತಪ್ರಪಂಚವನ್ನಾಳುತ್ತಿವೆ ಎಂದರೆ ಅತಿಶಯೋಕ್ತಿಯಾಗದು. ಲಕ್ಷಣದಲ್ಲಿ ಉದ್ಗ್ರಾಹದ ನಿರ್ದೇಶವಿಲ್ಲದಿದ್ದರೂ ಅದು ಅವಶ್ಯಕ ಧಾತುವಿರುವದರಿಂದ "ಏತಾವತೋದ್ಗ್ರಾಹೇ ಜಾತೇ ಧ್ರುವಃ ಕರ್ತವ್ಯಃ" ಎಂಬ ಶಾಸ್ತ್ರವಚನಕ್ಕನುಸರಿಸಿ ಧ್ರುವಪದವನ್ನು ಒಡೆದು ಮೊದಲಿನ ಭಾಗವನ್ನು ಉದ್ಗ್ರಾಹ, ಎರಡನೆಯದನ್ನು ಧ್ರುವವೆಂದು ಕಲ್ಪಿಸಿಕೊಳ್ಳಬೇಕು. ಇದೆಂತೆಂಬುದನ್ನು ಮೇಲೆ ಉದಾಹರಿಸಿದ ಪುರಂದರದಾಸರ "ಆಡಿದನೊ ರಂಗ" ಪದ್ಯದ ವಿವರಗಳಲ್ಲಿ ಕಾಣಬಹುದು. ಕೆಲವು ಪ್ರಬಂಧಗಳಲ್ಲಿ ಪಲ್ಲವಿಯೊಂದೆ ಇರುತ್ತದೆ. ಇಂಥ ಸಂದರ್ಭಗಳಲ್ಲಿ ಪಲ್ಲವಿಯನ್ನೆ ಒಡೆದು ಒಂದು ಭಾಗವನ್ನು ಉದ್ಗ್ರಾಹ ಇನ್ನೊಂದನ್ನು ಧ್ರುವ ಎಂದು ಗ್ರಹಿಸಬೇಕು. ಉದಾಹರಣೆಗಾಗಿ "ರಾಮಕೃಷ್ಣರು ಮನೆಗೆ ಬಂದರು ಬಾಗಿಲ ತೆರೆಯಿರೊ| ಕಾಮಧೇನು ಬಂದಂತಾಯಿತು ಸುಖವ ಸುರಿಯಿರೊ" ಪಲ್ಲವಿಯಲ್ಲಿ ಮೊದಲನೆಯದು ಉದ್ಗ್ರಾಹ, ಎರಡನೆಯದು ಧ್ರುವ. ಸಾಲಗಸೂಡ ಗೀತಗಳು ಧ್ರುವ (ಉದ್ಗ್ರಾಹಯುಕ್ತ)/ಪಲ್ಲವಿಯಿಂದ ಪ್ರಾರಂಭವಾಗುವದರಿಂದ ಅವುಗಳಿಗೆ ಉತ್ತರದಲ್ಲಿ ಧ್ರುಪದ ದಕ್ಷಿಣದಲ್ಲಿ ಕೃತಿ/ಪದ (ಪಲ್ಲವಿ)ಗಳೆನ್ನುತ್ತಾರೆ.

ಸಾಲಗಸೂಡ ಪ್ರಬಂಧಗಳನ್ನು ಕ್ರಮದಿಂದ ಧ್ರುವ, ಮಂಠ, ಪ್ರತಿಮಂಠ, ನಿಸಾರುಕ, ಅಡ್ಡತಾಲ, ರಾಸ, ಏಕತಾಲಗಳಲ್ಲಿ ರಚಿಸುತ್ತಿದ್ದರು. ಕಾಲಾಂತರದಲ್ಲಿ ಇವುಗಳ ಸ್ಥಳದಲ್ಲಿ ಸದ್ಯ ಪ್ರಚಾರದಲ್ಲಿರುವ ಧ್ರುವ, ಮಟ್ಟ, ಝಂಪಾ, ರೂಪಕ, ತ್ರಿಪುಟ, ಅಟ್ಟ, ಏಕತಾಲಗಳು ಬಂದವು. ಸಾಮಾನ್ಯವಾಗಿ ಲಾಕ್ಷಣಿಕರು ದಿಗ್ದರ್ಶನವನ್ನು ಮಾಡಿ ಮಿಕ್ಕದನ್ನು ವಾಗ್ಗೇಯಕಾರರ (ಸಂಗೀ

ನಿಪುಣ ಕವಿಗಳ) ಪ್ರತಿಭೆ, ಅಭಿರುಚಿ, ಸೌಂದರ್ಯ, ರಸ, ಔಚಿತ್ಯಾದಿಗಳ ದೃಷ್ಟಿಗೆ ಬಿಟ್ಟುಕೊಡುವದರಿಂದ ಪ್ರಾರಂಭದಲ್ಲಿ ಧ್ರುವಪದ/ಪಲ್ಲವಿಯನ್ನಿರಿಸಿ ಅಂತರ/ನುಡಿ ಆಭೋಗಗಳೊಂದಿಗೆ ಕ್ರಮದಿಂದ ಧ್ರುವಾದಿ ಸಪ್ತತಾಲಗಳಲ್ಲಿ, ಇವುಗಳಲ್ಲಿಯು ಒಂದೇ ತಾಲದಲ್ಲಿ, ಅನೇಕ ತಾಲಗಳಲ್ಲಿ ರಚಿತವಾದ ಅಸಂಖ್ಯ ಪ್ರಬಂಧಗಳು ಹುಟ್ಟಿಕೊಂಡಿವೆ, ಇಂದಿಗೂ ಹುಟ್ಟುತ್ತಿವೆ.

ವಚನವು ಗದ್ಯವಿರುವುದರಿಂದ ಅದು ಆಲಿಪ್ರಬಂಧಗಳಲ್ಲಿ ಬರುವದು. "ಗದ್ಯಂ ನಿಗದ್ಯತೇ ಛಂದೋಹೀನಂ ಪದಕದಂಬಕಂ" ಎಂದು ಗದ್ಯದ ವ್ಯಾಖ್ಯೆಯನ್ನು ಹೇಳಿ ಶಾರ್ಙ್ಗದೇವನು ೧೫ ಶ್ಲೋಕಗಳಲ್ಲಿ ಗದ್ಯಪ್ರಬಂಧವನ್ನು ವಿವರಿಸಿರುನು. ಗದ್ಯದಲ್ಲಿ ಆತ ಉತ್ಕಲಿಕಾ, ಚೂರ್ಣಕ, ಲಲಿತ, ವೃತ್ತಗಂಧಿ, ಖಂಡ, ಚಿತ್ರ, ಎಂಬ ಆರು ಮುಖ್ಯ ಜಾತಿಗಳನ್ನೂ ಮತ್ತು ಪ್ರತಿಯೊಂದರಲ್ಲಿ ವೇಣೀ, ಪ್ರವೇಣೀ ಎಂಬ ಎರಡು ಉಪಜಾತಿಗಳನ್ನೂ ಹೇಳಿರುವನು. ಜೊತೆಗೆ ರಸಪೋಷಣೆಗೆ ಅವಶ್ಯವಿರುವ ರೀತಿ (ವೈದರ್ಭಿ, ಗೌಡಿ), ವೃತ್ತಿ (ಭಾರತಿ, ಕೈಶಿಕಿ, ಸಾತ್ವತಿ, ಆರಭಟಿ), ಗತಿ(ದ್ರುತ, ಮಧ್ಯ, ವಿಲಂಬಿತ)ಗಳನ್ನು ವಿವರಿಸಿರುವನು. ಪ್ರಯೋಗಸಮಯದಲ್ಲಿ ತಾಲಕ್ಕನುಸರಿಸಿ ಇಲ್ಲವೆ ತಾಲವಿಲ್ಲದೆ ಕೇವಲ ಗಮಕ ಪದ್ಧತಿಯಿಂದ ಹೇಳುವ ಸಂದರ್ಭಗಳನ್ನೂ ನಿರೂಪಿಸಿರುವನು. ಮಿಕ್ಕ ಪ್ರಬಂಧಗಳಲ್ಲಿರುವಂತೆ ಗದ್ಯಪ್ರಬಂಧಗಳಲ್ಲೂ ಉದ್ಗ್ರಾಹ ಧ್ರುವಗಳಿರಲೇಬೇಕು. ತಾಲವು ಐಚ್ಛಿಕವಿದೆ. ಆದ್ದರಿಂದ ಛಂದೋಹೀನತೆ, ಅನಿಯುತ ಪಾದ ಸಂಖ್ಯೆ ಮತ್ತು ಆಭೋಗ ಇವುಗಳ ವೈಶಿಷ್ಟ್ಯವೆನ್ನಬಹುದು. ಮಣಿಗಳಲ್ಲಿಯು ಸೂತ್ರದಂತೆ ಲಯು ಗದ್ಯಪದ್ಯ ಎರಡರಲ್ಲೂ ಇರುವದರಿಂದ ಲಾಕ್ಷಣಿಕರು ಅದನ್ನು ಪ್ರತ್ಯೇಕವಾಗಿ ಹೇಳಿಲ್ಲ. ಒಂದರ ಲಯು ಅನಿಯುತ, ಇನ್ನೊಂದರದು ನಿಯುತ, ಇಷ್ಟೇ ಭೇದ. ಪಶ್ಚಿಮ ಚಾಲುಕ್ಯದೊರೆ ಜಗದೇಕಮಲ್ಲನು (೧೧೩೮–೧೧೫೦) ಗದ್ಯಪ್ರಬಂಧಗಳಿಗೆ ೫ ಮಾತ್ರೆಗಳ ತಾಲವನ್ನು ಹೇಳಿರುವನು. ಕಾವ್ಯಾವಲೋಕನದ ಕರ್ತೃ ಇಮ್ಮಡಿನಾಗವರ್ಮ ಈತನ ಕಟಕೋಪಾಧ್ಯಾಯನಿದ್ದನು.

ವಚನಗಳನ್ನು ಚೂರ್ಣಕ ಪ್ರಬಂಧಗಳಲ್ಲಿ ಸೇರಿಸಬಹುದು. ಅಲ್ಪಸಮಾಸಗಳಿರುವ ಸುಲಭವೇದ್ಯ ಗದ್ಯಕ್ಕೆ ಚೂರ್ಣಕವೆನ್ನುವರು. ಲಾಕ್ಷಣಿಕರು ಶಾಂತ-ರಸನಿರೂಪಣೆಗೆ ವೈದರ್ಭಿರೀತಿ, ಸಾತ್ವತಿವೃತ್ತಿ ಮತ್ತು ವಿಲಂಬಿತಗತಿಗಳಿಂದ ಯುಕ್ತವಿರುವ ಚೂರ್ಣಿಕೆಯನ್ನು ಯೋಜಿಸಬೇಕೆಂದಿರುವರು. ನೃಪತುಂಗನು "ಸತತಂ ದಕ್ಷಿಣಮಾರ್ಗೋದಿತೋಕ್ತಿಭೇದಕಗುಣಂ ಸ್ವಭಾವಾಖ್ಯಾನಂ" ಎಂದು ವೈದರ್ಭಿಯು (ದಕ್ಷಿಣಮಾರ್ಗ) ಲಕ್ಷಣವನ್ನು ತಿಳಿಸಿ, ಶಾಂತಕ್ಕೆ "ಪ್ರಸನ್ನತರ ಗಂಭೀರೋಕ್ತಿ"ಗಳೆ ತಕ್ಕವೆಂಬ ಮಾತಿನಲ್ಲಿ ಸಾತ್ವತಿಯು ಲಕ್ಷಣವನ್ನು ಹೇಳಿರುವನು. ವಚನಗಳಾದರೂ ಈ ಲಕ್ಷಣಗಳಿಂದ ಭಿನ್ನವಾಗಿಲ್ಲ.

ಗದ್ಯಪ್ರಬಂಧವನ್ನು ಪಾಠ್ಯವೆಂದು ಯಾವ ಲಾಕ್ಷಣಿಕನೂ ಹೇಳಿಲ್ಲ. ಎಲ್ಲರೂ ಅದನ್ನು ಗೇಯವೆಂದೆ ವರ್ಣಿಸಿರುವರು. ಶಾರ್ಙ್ಗದೇವ: ಪ್ರಣವ ಎಂದರೆ ಓಂಕಾರದಿಂದ ಪ್ರಾರಂಭಿಸಿ, ಕೆಲವೆಡೆ ಗಮಕದಿಂದ, ಕೆಲವೆಡೆ ತಾಲದಿಂದ ಹಾಡಿಕೊಂಡು ವಿಲಂಬಿ ತಾಲದಿಂದ ಅದಕ್ಕೆ (ಗೀತ್ವಾ ವಿಲಂಬಿತಾಲೇನ ನ್ಯಾಸೋ) ಮುಕ್ತಾಯವನ್ನು ಕೊಡಬೇಕೆಂದಿರುವನು. ಭರತನ ಅನಂತರ ಪ್ರಾಚೀನತಮನಿರುವ ಮತಂಗನು (೮೫೦) "ಗೀಯತೇ ಯತ್ ತದತ್ರಾಹುರ್ಗದ್ಯಂ ಗೀತವಿಶಾರದಾಃ। ತಾಲಯುಕ್ತಾಂ ಸ್ವರೋಪೇತಂ ಮಧ್ಯೇ ಪಾಟವಿರಾಜಿತಂ" ಎಂದು ತನ್ನ ಕಾಲದ ಗದ್ಯಪ್ರಬಂಧದ ಹಾಡುಗಾರಿಕೆಯನ್ನು ವರ್ಣಿಸಿರುವನು. ಪಶ್ಚಿಮ ಚಾಲುಕ್ಯ ಅರಸು ಸೋಮೇಶ್ವರ (೧೧೩೨, ಜಗದೇಕಮಲ್ಲನ ತಂದೆ) "ತದ್ಗದ್ಯಂ ಸ್ವರಸಂಯುಕ್ತಂ ತಾಲೇನ ಚ ವಿವರ್ಜಿತಂ। ವರ್ಣನೀಯಸ್ಯ ನಾಮ್ನಾ ಯತ್ ಪ್ರಾಂತತಾಲೇನ ಗೀಯತೇ" ಎಂದಿರುವನು. ಬಸವೇಶ್ವರಾದಿಗಳು "ಆನು ಒಲಿದಂತೆ ಹಾಡುವೆ", "ಹಾಡಿ ಹಾಡಿ ಸೋತಿತೆನ್ನ ಮನ ನೋಡಯ್ಯ" ಎಂದಿರುವದಾದರೂ ವಚನವು ಕೇವಲ ಗದ್ಯವಲ್ಲ, ಅದು ಗದ್ಯಪ್ರಬಂಧ, ಗೇಯಕೃತಿ, ಎಂಬ ಕಾರಣದಿಂದಲೆ.

ಉಗಾಭೋಗ—ಉದ್ಗ್ರಾಹ-ಆಭೋಗಗಳ ಕೂಡಿಕೆಯಿಂದ ಉಂಟಾದ ಅಪಭ್ರಂಶ ರೂಪವೆ ಉಗಾಭೋಗ. ಪ್ರಬಂಧ ಯಾವುದೆ ಇರಲಿ ಅದು ಉದ್ಗ್ರಾಹ ಧ್ರುವಗಳಿಂದ ಕೂಡಿರಬೇಕಾದ್ದರಿಂದ ಧ್ರುವದ ಸೂಚನೆಯಿರದ ಉಗಾಭೋಗದ ಈ ವ್ಯುತ್ಪತ್ತಿಯು ಕೆಲವರಿಗೆ ಗ್ರಾಹ್ಯವಿಲ್ಲ. ಹೀಗಿದ್ದರೆ ಸಾಲಗಸೂಡ ಪ್ರಬಂಧಗಳ ಲಕ್ಷಣದಲ್ಲಿ ಉದ್ಗ್ರಾಹದ ನಿರ್ದೇಶವೆಲ್ಲಿದೆ? ಅಲ್ಲಿ ಧ್ರುವವನ್ನು ಇಬ್ಭಾಗಿಸಿ ಮೊದಲಿನದನ್ನು ಉದ್ಗ್ರಾಹ, ಎರಡನೆಯದನ್ನು ಧ್ರುವವೆಂದು ಗ್ರಹಿಸುವಂತೆ ಉಗಾಭೋಗಗಳ ವಿಷಯದಲ್ಲಿ "ಧ್ರುವಸ್ಯಾಭೋಗಕರಣಾದಾಭೋಗ ಇತಿ ಕೇಚನ" ಉಕ್ತಿಗನುಸರಿಸಿ ಆಭೋಗವನ್ನೇ ಧ್ರುವವೆಂದು ಭಾವಿಸಬೇಕಾಗುವದು. ವಸ್ತುಸ್ಥಿತಿಯಾದರೂ ಹೀಗೆಯೆ ಇರುವದನ್ನು ಈ ಉದಾಹರಣೆಗಳಲ್ಲಿ ನೋಡಿರಿ—

ಒಂದು ಕಾಲದಲಿ ಆನೆಕುದುರೆ ಮೇಲ್ಮೆರೆಸುವಿ।
ಒಂದು ಕಾಲದಲಿ ಬರಿಗಾಲಲಿ ನಡೆಸುವಿ।
ಒಂದು ಕಾಲದಲಿ ಅಮೃತಾನ್ನ ಉಣಿಸುವಿ।
ಒಂದು ಕಾಲದಲಿ ಉಪವಾಸವಿರಿಸುವಿ।
ನಿನ್ನ ಮಹಿಮೆಯ ನೀನೇ ಬಲ್ಲೆಯೊ ದೇವ।
ಪನ್ನಂಗಶಯನ ಶ್ರೀ ಪುರಂದರವಿಠ್ಠಲ॥

—ಇಲ್ಲಿ ಮೊದಲಿನ ನಾಲ್ಕು ಪಾದಗಳು ಉದ್ಗ್ರಾಹ, ಕೊನೆಯವೆರಡು ಆಭೋಗ ಮತ್ತು ಅವುಗಳಲ್ಲಿಯೆ ಧ್ರುವವು ಅಡಕವಾಗಿದೆ. ಉದ್ಗ್ರಾಹದ ನಾಲ್ಕು ಪಾದಗಳನ್ನಿಷ್ಟೆ ಹೇಳಿ ಮುಕ್ತಾಯಗೊಳಿಸಿದರೆ ಯಾವುದೆ ಬಗೆಯ ನಿಶ್ಚಿತಾರ್ಥ ಹೊರಡುವದಿಲ್ಲ. ಆಭೋಗದ ಕೊನೆಯವೆರಡು ಪಾದಗಳನ್ನು ಹೇಳಿದಾಗಲೆ ಪ್ರಬಂಧಕ್ಕೆ ಸ್ಥಿರತೆ ಬರುವದು, ಅರ್ಥ ಸ್ಪಷ್ಟವಾಗುವದು. ಆದ್ದರಿಂದ ಅದೇ ಧ್ರುವ. ಆಭೋಗವೂ ಹೌದು. ದಾಸರ ಅಂಕಿತವು ಅದರಲ್ಲಿಯೆ ಇದೆ. ಇವಾದರೂ ಉಗಾಭೋಗಗಳೆ.

ಎರಗಿ ಭಜಿಪೆನೊ ನಿನ್ನ ಚರಣಸನ್ನಿಧಿಗೆ ।
ಕರುಣದಿಂದಲಿ ನಿನ್ನ ಸ್ಮರಣೆಯನು ಎನಗಿತ್ತು । –ಉ.
ಮರೆಯದೆ ಸಲಹೊ ಶ್ರೀ ಪುರಂದರವಿಠ್ಠಲ । ಧ್ರು/ಆ.
　　ದೇವರ ದೇವ ಜಗತ್ರಯಂಗಳ ಕಾವ । –ಉ.
　　ಭಾವಜಪಿತ ನಮ್ಮ ಪುರಂದರವಿಠಲ ॥ ಧ್ರು/ಆ.
ಸಕಲ ಶ್ರುತಿಪುರಾಣಗಳಲದಾವನ ಮಹಿಮೆ ।
ಸುಖಪೂರ್ಣ ಸುರವರಾರ್ಚಿತಪಾದ ।
ಶಕಟಮರ್ದನ ಶಾರದೇಂದುವಕ್ತ್ರ । ರುಚಿಕರ ಕಲ್ಯಾಣರಂಗ । –ಉ.
ರುಕ್ಮಿಣಿರಮಣ ಪರಿಪೂರ್ಣ ನಮ್ಮ ಪುರಂದರವಿಠಲ ॥ ಧ್ರು/ಆ.

ಉಗಾಭೋಗವು ಪದ್ಯಜಾತಿಗೆ ಸೇರಿದೆ. ಉಗಾಭೋಗವೆಂಬ ಹೆಸರು ದಾಸಸಾಹಿತ್ಯದಲ್ಲಷ್ಟೆ ಕಂಡುಬಂದರೂ ಅದರ ಹೊಳಹನ್ನು ಮತಂಗನ ಸಮಯದಲ್ಲಿ, ಆತನ ಪೂರ್ವದಲ್ಲಿ ಸಹ, ಅಸ್ತಿತ್ವದಲ್ಲಿದ್ದ ಬ್ರಹ್ಮನಿರ್ಮಿತವೆಂದು ಗಣಿಸಲಾದ ಮಾರ್ಗಿ ಗೀತಗಳಲ್ಲಿ ಕಾಣಬಹುದು. ಈ ಗೀತಗಳಿಗೆ ರಾಗಗಳನ್ನೂ ಸಹ ಹೇಳಿರುವರು :

ಬೃಹದುದರ ವಿಕಟಗಮನ ಜಠರ ವಿಭಕ್ತಂ ।
ಸುವಿಪುಲ ಪೀನಾಂಗಂ ಅರಿದಮನ ವಿಷಮಲೋಚನಂ । –ಉ.
ಸುರನಮಿತಂ ವಿನಾಯಕಂ ವಂದೇ ॥ ಧ್ರು/ಆ;
ಭಿನ್ನಕೈಶಿಕಿ ಮಧ್ಯಮ ರಾಗ
　　ಉದಯಗಿರಿ ಶಿಖರ ಶೇಖರ । ತುರಗ ಖುರಕ್ಷತ ವಿಭಿನ್ನ
ಘನತಿಮಿರಃ । –ಉ.
　　ಗಗನತಲ ಸಕಲ ವಿಲುಲಿತ ಸಹಸ್ರಕಿರಣೋ ಜಯತು ಭಾನುಃ ॥
ಧ್ರು/ಆ, ಶುದ್ಧಸಾಧಾರಿತ

ಭಸ್ಮಾಂಗವಿಭೂಷಿತ ದೇಹಂ । ಸುರವರಮುನಿಸಹಿತಂ ।
ಭೀಮಭುಜಂಗಮವೇಷ್ಟಿತ ಬಾಹುಂ । ಸುರವರ ನಮಿತ ಪದಂ ।

ಚಂದ್ರಕಲಾಕರಸಂತತಿ ಧವಲ ಸುರಸರಿದಂಬುಧರಂ। ಪ್ರಣಮತ
ಸತತ ನಿಷ್ಕಲಂ। –ಉ

ಸಕಲ ಪರಮಶಿವಮಜೇಯಂ॥ ಧ್ರು/ಆ, ಗೌಡಕೈಶಿಕೆ.

ರಚನೆಯಲ್ಲಿ ವಚನ ಉಗಾಭೋಗಗಳು ಒಂದನ್ನೊಂದು ಹೋಲುತ್ತಿದ್ದರೂ ಶಾಸ್ತ್ರದ ದೃಷ್ಟಿಯಿಂದ ಆದು ಬೇರೆ ಇದು ಬೇರೆ ಎಲ್ಲ ಉಗಾಭೋಗಗಳನ್ನು ಗದ್ಯಪ್ರಬಂಧಗಳೆಂದು ಭಾವಿಸಿ ವಚನಗಳೆಂದು ಗಣಿಸಬಹುದಾದರೂ ಎಲ್ಲ ವಚನಗಳನ್ನು ಉಗಾಭೋಗಗಳಲ್ಲಿ ಸೇರಿಸುವಂತಿಲ್ಲ ಪರಾಂಬರಿಸಿರಿ—

ಕಲ್ಲದೇವರು ದೇವರಲ್ಲ। ಮಣ್ಣದೇವರು ದೇವರಲ್ಲ।
ಮರದ ದೇವರು ದೇವರಲ್ಲ। ಪಂಚಲೋಹದಲ್ಲಿ ಮಾಡುವ ದೇವರು
ದೇವರಲ್ಲ। ಸೇತು ರಾಮೇಶ್ವರ ಗೋಕರ್ಣ ಕಾಶಿ ಕೇದಾರ ಮೊದಲಾದ
ಅಷ್ಟಾಷಷ್ಟಿಕೋಟಿಪುಣ್ಯತೀರ್ಥಂಗಳು ಪುಣ್ಯಕ್ಷೇತ್ರಂಗಳಲಿ
ಇಹ ದೇವರು ದೇವರಲ್ಲ। ತನ್ನ ತಾನರಿದು ತಾನಾರೆಂದು ತಿಳಿದಡೆ
ತಾನೇ ದೇವ ನೋಡಾ। ಅಪ್ರಮಾಣ ಕೂಡಲಸಂಗಮದೇವಾ॥

—ಇಲ್ಲಿ ಮೂರು ಧಾತುಗಳು ಅಂದರೆ ಉದ್ಗ್ರಾಹ, ಧ್ರುವ, ಆಭೋಗ ಸ್ಪಷ್ಟವಾಗಿವೆ. "ಕಲ್ಲದೇವರು ದೇವರಲ್ಲ"ದಿಂದ "ಪುಣ್ಯಕ್ಷೇತ್ರಂಗಳಲಿ ಇಹ ದೇವರು ದೇವರಲ್ಲ"ವರೆಗಿನ ಪದಸಮೂಹವು ಉದ್ಗ್ರಾಹ, "ತನ್ನ ತಾನರಿದು ತಾನಾರೆಂದು ತಿಳಿದಡೆ ತಾನೇ ದೇವರು ನೋಡಾ" ಧ್ರುವ, "ಅಪ್ರಮಾಣ ಕೂಡಲಸಂಗಮದೇವಾ" ಆಭೋಗ. ವಿಷಯ ನಿರೂಪಣೆ, ಹೇಳುವ ಶೈಲಿ, ಮುಂತಾದ ದೃಷ್ಟಿಯಿಂದ ಇದಕ್ಕೂ ಉಗಾಭೋಗಕ್ಕೂ ಸಾಮ್ಯವಿದ್ದರೂ ಉದ್ಗ್ರಾಹಾದಿ ಮೂರೂ ಧಾತುಗಳು ಸ್ಪಷ್ಟಗೋಚರವಿರುವದರಿಂದ ಮತ್ತು ಉಗಾಭೋಗಗಳಲ್ಲಿ ಉದ್ಗ್ರಾಹ ಆಭೋಗ (ಧ್ರುವಯುಕ್ತ) ಎರಡೆ ಧಾತುಗಳು ಇರಬೇಕಾದುದರಿಂದ ಶಾಸ್ತ್ರದ ಮೇರೆಗೆ ಈ ವಚನವು ಉಗಾಭೋಗವಾಗದು. ಆದರೆ

ವಚನದಲಿ ನಾಮಾಮೃತ ತುಂಬಿ। ನಯನದಲಿ ಮೂರುತಿ ತುಂಬಿ।
ಮನದಲಿ ನಿಮ್ಮ ನೆನಹು ತುಂಬಿ। ಕಿವಿಯಲಿ ನಿಮ್ಮ ಕೀರ್ತಿಯು ತುಂಬಿ।
ಕೂಡಲಸಂಗಮದೇವಾ। ನಿಮ್ಮ ಚರಣಕಮಲದೊಳು ಸೊಗದ
ಬಂಡನುಂಬ ತುಂಬಿಯಾಗಿರ್ಪೆನು॥

ಅಳಿಸಂಕುಳವೆ, ಮಾಮರವೆ, ಬೆಳದಿಂಗಳೆ, ಕೋಗಿಲೆಯೆ,
ನಿಮ್ಮೆಲ್ಲರನು ಒಂದು ಬೇಡುವೆನು। ಎನ್ನೊಡೆಯ ಚೆನ್ನ-
ಮಲ್ಲಿಕಾರ್ಜುನದೇವರ ಕಂಡರೆ ಕರೆದು ತೋರಿರೆ॥

ಇವುಗಳಲ್ಲಿ ಮೊದಲಿನದರಲ್ಲಿ "ವಚನದಲಿ ನಾಮಾಮೃತ ತುಂಬಿ"ಯಿಂದ "ಕೀರ್ತಿಯ ತುಂಬಿ"ವರೆಗೆ, ಎರಡನೆಯದರಲ್ಲಿ "ಅಳಿಸಂಕುಳವೆ"ಯಿಂದ "ಬೇಡು-ವೆನು" ವರೆಗಿನ ಪದಸಮೂಹಗಳು ಉದ್ಗ್ರಾಹ. ಮುಂದಣವು ಆಭೋಗ. ಧ್ರುವವೂ ಹೌದು. ರಚನೆಯಲ್ಲಿ ಇವಕ್ಕೂ ಉಗಾಭೋಗಗಳಿಗೂ ವ್ಯತ್ಯಾಸವಿಲ್ಲ. ಆದರೆ ವಚನಕಾರರು ಇವುಗಳನ್ನು ವಚನಗಳೆಂದೆ ರಚಿಸಿರುವದರಿಂದ ವಚನ-ಗಳೆಂದು ಗದ್ಯಪ್ರಬಂಧಗಳೆಂದು ಗಣಿಸಿ ಆ ರೀತಿ ವರ್ಗೀಕರಿಸಬೇಕಾಗುವದು. ಇಂಥ ಸಂದರ್ಭಗಳಲ್ಲಿ ವರ್ಗೀಕರಣಕ್ಕಾಗಿ ಅನ್ಯಸಾಧನಗಳಿರದ್ದರಿಂದ ಕರ್ತೃವಿನ ಉದ್ದೇಶವೇ ಮಾನದಂಡವಾಗುವದು. ಇದೇ ಮೇರೆಗೆ ದಾಸಸಾಹಿತ್ಯದಲ್ಲಿ ಉಗಾಭೋಗದಂತಿರುವ, ಆದರೆ ಅದರ ವ್ಯಾಖ್ಯೆಗೆ ಹೊಂದಿಕೊಳ್ಳದ ಕೃತಿ-ಗಳನ್ನು ಅಪವಾದಾತ್ಮಕವೆಂದು ಉಗಾಭೋಗಗಳಲ್ಲಿ ಗಣಿಸಬೇಕಾಗುವದು. ವೈದಿಕ ಛಂದಸ್ಸುಗಳಲ್ಲಿ ಈ ಬಗೆಯ ಪ್ರಮೇಯ ಒದಗಿದಾಗ ಮಂತ್ರದಲ್ಲಿ ಸ್ತುತಿಸಲ್ಪಟ್ಟ ದೇವತೆಯು ಯಾವ ಛಂದಸ್ಸಿನ ಅಧಿದೇವತೆ ಇರುವನೋ ಅದೆ ಆ ಮಂತ್ರದ ಛಂದಸ್ಸೆಂದು ಗ್ರಹಿಸುವ ಸಂಪ್ರದಾಯವಿದೆ. ವಚನಗಳು ಯಾವುವೆ ಇರಲಿ ಅವು ಗದ್ಯ. ಉಗಾಭೋಗಗಳು ಯಾವವೆ ಇರಲಿ ಅವು ಪದ್ಯ-ವೆನ್ನುವುದು ಈ ದೃಷ್ಟಿಯಿಂದ. ಉಗಾಭೋಗಗಳನ್ನು ಹಿಂದುಸ್ತಾನಿ ಸಂಗೀತದಲ್ಲಿ ಲೋಕಪ್ರಿಯವಿರುವ ಖಯಾಲ ಪದ್ಧತಿಯಿಂದ ಹಾಡಬಹುದೆಂದು ಸಂಗೀ-ತಜ್ಞರೊಬ್ಬರು ಅಭಿಪ್ರಾಯಪಟ್ಟಿರುವರು. ಇದಕ್ಕೆ ಪೂರಕವೆಂದು ವಚನ-ಗಳನ್ನು ಹೆಚ್ಚಾಗಿ ಈ ರೀತಿ ಹಾಡುತ್ತಿರುವದನ್ನು ಉಲ್ಲೇಖಿಸಿರುವರು. ಇನ್ನೊಬ್ಬರು ಇದನ್ನು ಪ್ರತಿಭಟಿಸಿರುವರು. ವಚನ ಉಗಾಭೋಗಗಳನ್ನು ಅವುಗಳ ಲಿಖಿತ ರೂಪದಲ್ಲಿರುವಂತೆ ಹಾಡಿದರೆ ಪಾಠಾಂತರ ಪಾಠದೋಷ ಮೊದಲಾದವುಗಳ ಮೂಲಕ ಅಡೆತಡೆಯಾಗುವದುಂಟು. ಇಂಥ ಸಂದರ್ಭಗಳಲ್ಲಿ ಅಲ್ಪಸ್ವಲ್ಪ ವ್ಯತ್ಯಾಸಗಳನ್ನು ಮಾಡಿಕೊಳ್ಳುವ ಅವಕಾಶ ಗಾಯಕರಿಗೆ ವೇದ ಕಾಲದಿಂದಲೂ ಇದೆ. ಸಾಮಗಾನಗಳಲ್ಲಿ ಸ್ತೋಭ(ಆ, ಐ, ಈ, ಊ, ಇತ್ಯಾದಿ) ಗಳನ್ನು ಸೇರಿಸಿ ಅವುಗಳನ್ನು ಎಳೆದು, ಪುನರುಚ್ಚರಿಸಿ ಅಕ್ಷರಗಳ ಲೋಪವನ್ನು ತುಂಬಿಕೊಂಡು ಛಂದಸ್ಸಿಗೆ, ಧಾಟಿಗೆ ತೂಗುವಂತೆ ಹೇಳುವರು. ಅಕ್ಷರಗಳು ಹೆಚ್ಚಾಗಿದ್ದರೆ ಯುಕ್ತ ರೀತಿಯಿಂದ ಅವುಗಳನ್ನು ಕಡಿಮೆ ಮಾಡಿಕೊಳ್ಳುವರು. (ಉದಾ : ಅಗ್ನ ಆಯಾಹೀ–ಓಗ್ನಾಹೀ)

ಉಗಾಭೋಗ ವಚನಗಳನ್ನು ಖಯಾಲ ಪದ್ಧತಿಯಲ್ಲಿ ಹಾಡಬಹುದೆಂಬ ಅಭಿಪ್ರಾಯವನ್ನು ಅಲ್ಲಗಳೆಯುವ ಮೊದಲು, ಮಡಿವಂತಿಕೆಯನ್ನು ಬಿಟ್ಟು ಅವುಗಳಿಗೂ ಮೇಲೆ ಉದಾಹರಿಸಿದ ರಾಗ-ತಾಲಯುಕ್ತ ಮಾರ್ಗಗೀತಗಳಿಗೂ ಇರುವ ಸಾಮ್ಯ, ವಚನ ಉಗಾಭೋಗಗಳಲ್ಲಿರುವ ಸಾಮ್ಯ, ವಚನಗಳನ್ನು ಹಿಂದುಸ್ತಾನಿ ಪದ್ಧತಿಯಲ್ಲಿ ಹಾಡುತ್ತಿರುವುದರ ಕಾರಣ, ಅನಿವಾರ್ಯ ಪ್ರಸಂಗ

ಗಳಲ್ಲಿ ಮೂಲಕೃತಿಗಳಲ್ಲಿ ಗಾಯಕರಿಗಿರುವ ಅಲ್ಪಸ್ವಲ್ಪ ಸ್ವಾತಂತ್ರ್ಯಗಳ
ಮಾಡಿಕೊಳ್ಳುವ ಅವಕಾಶ, ಅವುಗಳನ್ನು ಮುಂದಿರಿಸಿಕೊಂಡು, ಪ್ರಯೋ
ಗಳಿಂದ ಮನಗಂಡು, ಯಾವುದೊಂದು ನಿಶ್ಚಿತ ಅಭಿಪ್ರಾಯವನ್ನು ಪ್ರ
ಪಡಿಸುವದು ಹೆಚ್ಚು ಶ್ರೇಯಸ್ಕರ. ಒಂದೊಮ್ಮೆ ಈ ಪ್ರಯೋಗಗಳಿಂದ ಪ
ಉಗಾಭೋಗಗಳನ್ನು ಖಯಾಲ ಪದ್ಧತಿಯಲ್ಲಿ ತೃಪ್ತಿಕರವಾಗಿ ಹಾಡಬ
ದೆಂದು ಕಂಡುಬಂದರೆ, ಇಂದು ಹಿಂದುಸ್ತಾನಿ 'ಚೀಜ'ಗಳನ್ನು ಹಾಡಿ ಅವು
ಗಳಿಂದಲೆ ತೃಪ್ತಿ ಪಡೆಯುತ್ತಿರುವ ಕರ್ನಾಟಕದ ಗಾಯಕರಿಗೂ ಶ್ರೋತೃಗಳಿಗ
ಕನ್ನಡದಲ್ಲಿಯೆ ಇರುವ ಇಂಥ ಕೃತಿಗಳ ಭಾಂಡಾರವನ್ನೆ ತೆರೆದಿರಿಸಿದಂತ
ಗುವದು.

ಖಯಾಲ ಹಾಡುಗಾರಿಕೆಯು ದಕ್ಷಿಣದ ಮೇಲೆ ದಂಡೆತ್ತಿಬಂದ ಮುಸ್ಲಿ
ರಲ್ಲಿ ಮೊದಲಿಗನಾದ ಸುಲ್ತಾನ ಅಲ್ಲಾವುದ್ದೀನ ಖಿಲಜಿಯ (೧೩ ಶ.) ಮಂ
ಅಮೀರ ಖುಸ್ರುವಿನಿಂದ ಪ್ರಚಾರದಲ್ಲಿ ತರಲ್ಪಟ್ಟಿತೆಂಬ ಪ್ರತೀತಿ ಇದೆ. ಇ
ನೊಬ್ಬ ಪ್ರಖ್ಯಾತ ಫಾರ್ಸಿ ಸಂಗೀತಜ್ಞನಿದ್ದನು. ಉತ್ತರಕ್ಕೆ ಮರಳುವಾಗ ತ
ಸಂಗಡ ದಕ್ಷಿಣದ ಸುಪ್ರಸಿದ್ಧ ವಾಗ್ಗೇಯಕಾರ ಗೋಪಾಲ ನಾಯಕನ
ಕರೆದುಕೊಂಡುಹೋದನು. ಉತ್ತರದಲ್ಲಿ ಧ್ರುಪದ ಗೀತಗಳ ಹಾಡುಗಾರಿಕೆಯ
ಈ ಗೋಪಾಲನಾಯಕನಿಂದ ಮತ್ತು ಮುಂದೆ ಗ್ವಾಲೇರದ ರಾಜಾ ಮಾನಸಿ
(೧೬ ಶ.)ನಿಂದ ಪ್ರಚಾರಗೊಳಿಸಲ್ಪಟ್ಟಿತು. ವಿಜಾಪುರದ ಆದಿಲ ಇಬ್ರಾಹಿ
ಆದಿಲಶಹನೂ ಧ್ರುಪದ ಹಾಡುಗಾರಿಕೆಯ ಪ್ರವರ್ತಕರಲ್ಲಿ ಒಬ್ಬನಿದ್ದ
ಸ್ವಾಮಿ ಪ್ರಜ್ಞಾನಂದ, ಜಯದೇವ ಠಾಕೂರ, ಪಂಡಿತ ರತನಜನಕರ
ಸಂಗೀತಜ್ಞರು ಖಯಾಲ ಹಾಡುಗಾರಿಕೆಯ ಉಗಮವನ್ನು, ಮೇಲೆ ಉಲ್ಲೇ
ಸಿದ ಮಾರ್ಗಗೀತಗಳಲ್ಲಿ, ಶಾರ್ಙ್ಗದೇವನು ಬಣ್ಣಿಸಿದ ರೂಪಕ ಪ್ರಬಂ
ಹಾಡುಗಾರಿಕೆಯಲ್ಲಿ ಗುರುತಿಸಿರುವರು. ಹೆಚ್ಚಿನ ವಿವರಗಳಿಗಾಗಿ ಸ್ವಾ
ಪ್ರಜ್ಞಾನಂದರ ಭಾರತೀಯ ಸಂಗೀತದ ಐತಿಹಾಸಿಕ ಅಭ್ಯಾಸವೆಂಬ ಗ್ರ
(ಇಂಗ್ಲಿಷ)ವನ್ನು ನೋಡಬಹುದು.

ಖಯಾಲ ಅಂದರೆ ಕಲ್ಪನೆ. ಕಲ್ಪನಾವಿಲಾಸವೆಂದರೂ ಸಲ್ಲುವ
ಹಾಡುಗಾರಿಕೆಯು ನಿಷ್ಠುರನಿಯಮಗಳಿಂದ ಮುಕ್ತವಿರುವದರಿಂದ ಗಾಯಕ
ತನ್ನ ಕೌಶಲ್ಯವನ್ನು ತೋರಿಸಲು ವಿಶೇಷ ಅವಕಾಶವಿರುವದು. ಖಯಾ
ಹಾಡುಗಾರಿಕೆಗೆ ಕಡಿಮೆ ಅಕ್ಷರಗಳಿರುವ ಚಿಕ್ಕ ಕೃತಿಗಳು ಬೇಕು. ಮ
ಉದಾಹರಿಸಿದ ಕೆಲವು ದಾಸರ ಉಗಾಭೋಗಗಳು ಈ ಬಗೆಯ ಕೃತಿಗ
ವನ್ನು ಇಲ್ಲಿ ನೆನೆಯಬಹುದು. ಉಪಲಬ್ಧವಿರುವ ಎಲ್ಲ ದಾಸರ ಉ
ಭೋಗಗಳು ಈ ಬಗೆಯ ಹಾಡುಗಾರಿಕೆಗೆ ಬಗ್ಗಲಾರವೆಂಬುದು ಸ್ಪಷ್ಟ
ಕೆಲವು ಗಮಕ ಪದ್ಧತಿಯಿಂದ, ಕೆಲವು ಕೇವಲ ಪಾಠ್ಯವೆಂದು, ಕೆ

ಖಯಾಲ ಹಾಡುಗಾರಿಕೆಗೆ ಹೊಂದಿಕೊಳ್ಳುವಂತಿವೆ. ಸಂಶೋಧನ ಪ್ರಯೋಗ-ಗಳು ಈ ಬಗೆಯ ವರ್ಗೀಕರಣದೊಂದಿಗೆ ಸಾಗುವದು ಅಗತ್ಯವಿದೆ. ಖಯಾಲ ಪದ್ಧತಿ ಮತ್ತು ದಕ್ಷಿಣಾದಿ ಪಲ್ಲವಿ ಹಾಡುಗಾರಿಕೆಯಲ್ಲಿ ವ್ಯತ್ಯಾಸವಿಲ್ಲವೆಂಬ ಅಭಿಪ್ರಾಯವಾದರೂ ಈ ಸಂದರ್ಭದಲ್ಲಿ ಗಮನಾರ್ಹವಿದೆ.

ಸುಳಾದಿಗಳು—ಗೀತ, ವಾದ್ಯ, ನೃತ್ಯಗಳಿಂದ ಕೂಡಿದ ಸಂಗೀತವೆ ಜವಾದ ಸಂಗೀತ. ತೌರ್ಯತ್ರಯವೆನ್ನುವುದು ಇದಕ್ಕೇನೆ. ನರ್ತನವು ಭಾವಾಧಿಕ್ಯದ ಪರಮೋಚ್ಚ ಮೆಟ್ಟಿಲು. ಭಕ್ತನಿಗೆ "ಮಲಗಿ ಪರವಾದರದಿ ಾಡಲು ಕುಳಿತು ಕೇಳುವೆ" ಎಂದು ಹೇಳಿದ ಪರಮಾತ್ಮನು "ನಲಿದರೆ ಒಲಿವೆ" ಎಂದಿರುವದರಿಂದ ಭಕ್ತಸಾಹಿತ್ಯದಲ್ಲಿ ನರ್ತನಕ್ಕೆ ಮೇಲ್ಪಟ್ಟದ ಸ್ಥಾನವಿದೆ. ರಾಸ್ತ ಒಂದೇ ಇದ್ದರೂ ಕಚೇರಿಸಂಗೀತಕ್ಕೂ ನರ್ತನಸಂಗೀತಕ್ಕೂ ಅಂತರವಿದೆ. ಕಚೇರಿಸಂಗೀತದಲ್ಲಿ ಹಾಡುಗಾರಿಕೆಯ ನಯ-ನಾಜೂಕುಗಳಿಗೆ ಪ್ರಾಧಾನ್ಯವಿರು-ತ್ತದೆ. ಅಲ್ಲಿ ತಾಲ ನವವಧುವಿನಂತೆ ಗೀತವನ್ನು ಅನುಸರಿಸಿ ಸಾಗುತ್ತದೆ. ನರ್ತನದಲ್ಲಿ ತಾಲಕ್ಕೆ ಪ್ರಾಧಾನ್ಯ. ಗೀತವು ತಾಲಾನುಗವಿರುತ್ತದೆ. ಅಲಂಕಾರ ಆಲಾಪಗಳಿಗೆ ಅವಕಾಶ ಶೀರ ಕಡಿಮೆ. ಸುಳಾದಿ ಗೀತಗಳು ಈ ಬಗೆಯವು.

ಸುಲಭ-ಹಾದಿ ಸುಳಾದಿ ಎಂದು ಸುಳಾದಿಯ ವ್ಯುತ್ಪತ್ತಿಯನ್ನು ಹೇಳುವ ರುಂಟು. ಸೂಡಾಲಿಯ ಕೊನೆಯವೆರಡು ಅಕ್ಷರಗಳ ಸ್ಥಾನಪಲ್ಲಟನೆಯಿಂದ ುಳಾದಿಯಾಗಿದೆಯೆಂಬ ಇನ್ನೊಂದು ಊಹೆ ಇದೆ. ಸುಲಭವಾದ ಹಾದಿಯೆ ುಳಾದಿಯೆಂಬುದು ಕಲ್ಪಕತೆಯ ಕುರುಹಾಗಬಹುದೆ ಹೊರತು ಆ ರೀತಿ ುಳಾದಿಯ ವ್ಯುತ್ಪತ್ತಿಯನ್ನು ಸಾಧಿಸುವದು ಸುಲಭವಲ್ಲ. ಪ್ರಬಂಧಗಳಲ್ಲಿ ಲಿಯೆಂಬ ಜಾತಿ ಇದ್ದಿತಾದ್ದರಿಂದ ಸೂಡಾಲಿಯು ಸೂಡ ಮತ್ತು ಆಲಿಯ ೂಡಿಕೆಯಿಂದಾಗಿರಬಹುದಾಗಿದೆ. ಆದರೆ ಈ ಸೂಡ ಉಳಿ ಮೊದಲಾದ ಎಂಟು ದ್ದು ಪ್ರಬಂಧಗಳಿಗೆ ಸಂಬಂಧಿಸಿದೆ. ಇವುಗಳೊಂದಿಗೆ ಆಲಿಪ್ರಬಂಧಗಳನ್ನು ೇರಿಸಿ ಹಾಡುವ ಸಂಪ್ರದಾಯವಿದ್ದಿತು. ಸುಳಾದಿಗಳು ಸಾಲಗಸೂಡಗಳಿಗೆ ಂಬಂಧಿಸಿರುವದರಿಂದ ಇವುಗಳ ಮತ್ತು ಆಲಿಗಳ ಕೂಡಿಕೆಗೆ ಅವಕಾಶವಿದ್ದಿಲ್ಲ, ುಂದಾದರೂ ಒದಗಲಿಲ್ಲ. ಆಲಿಗೆ ಪಂಕ್ತಿ, ಸಾಲು, ಎಂಬರ್ಥವಿದೆ. ಸುಳಾದಿ ಾಲಗಳು ಕ್ರಮನಿರ್ದಿಷ್ಟವಿರುವದರಿಂದ ಈ ಅರ್ಥದಲ್ಲಿ ಸೂಡ (ಸಾಲಗ) ಲಿಗಳ ಕೂಡಿಕೆ ಅಸಂಭವವಿಲ್ಲ. ಈ ರೀತಿ ಉಂಟಾಗುವ ಸೂಡಾಲಿಯಲ್ಲಿಯ ೊನೆಯವೆರಡು ಅಕ್ಷರಗಳ ಸ್ಥಾನಪಲ್ಲಟನೆಗೆ ವ್ಯಾಕರಣದಲ್ಲಿ ಅವಕಾಶವಿದೆ. ರಲ್–ಅಲರ್, ಹೀಗೆ ಆದರೆ ಸೂಡಾಲಿಯಲ್ಲಿ ಅಕ್ಷರಗಳ ಸ್ಥಾನಪಲ್ಲಟದೊಂದಿಗೆ ವುಗಳ ರೂಪ ಸಹ ಬದಲಿಸುವದು. ಸೂಡಾಲಿ–ಸೂಲಿಡಾ–ಸೂಲಾಡಿ–

ಸುಳಾದಿ, ಹೀಗೆ. ಇದು ದ್ರಾವಿಡಪ್ರಾಣಾಯಮವೆ ಸರಿ. ಸೂಳ್ ಎಂದರೆ ಕ್ರಮ. ಸುಳಾದಿ ತಾಳಗಳಿಗೆ ಕ್ರಮವಿದೆ. ಆದಿಗೆ ತಜ್ಜನ್ಯ, ತತ್ಸಮ, ಮುಂತಾದವು, ಎಂಬರ್ಥಗಳಿವೆ. ಹಿಂದುಸ್ತಾನಿ ದಕ್ಷಿಣಾದಿ ಎನ್ನುವಾಗ ಅದಕ್ಕೆ ರೀತಿ, ಪದ್ಧತಿ, ಎಂಬ ಅರ್ಥ ಬರುತ್ತದೆ. ಸೂಳ್-ಗೆ ಆದಿ ಸೇರಿ ಸುಳಾದಿಯಾಗಿರಬಹುದೇ? ಇದಾದರೂ ಸರಿಯೆನಿಸದು. ಸೂಡಕ್ಕೆ ವಿಶಿಷ್ಟ ಜಾತಿಯ ಪ್ರಬಂಧ ಎಂಬರ್ಥವಿದೆ. ಸೂಳ್-ಗೆ ಈ ಅರ್ಥವಿಲ್ಲ. ತಾಲಸೂಚಕ ಅರ್ಥವೂ ಇಲ್ಲ. ಕ್ರಮ (ಸೂಳ್) ಆದಿ-ಕ್ರಮಾದಿ ಎಂಬುದರ ಅರ್ಥವೇನು?

ಸುಳಾದಿಯು ಸೂಡ (ಸಾಲಗ) ಆದಿಗಳ ಕೂಡಿಕೆಯಿಂದಾಗಿದೆ. ಸೂಡ+ ಆದಿ-ಸೂಡಾದಿ-ಸುಳಾದಿ, ಹೀಗೆ. ಕನ್ನಡದಲ್ಲಿ ಡಕಾರಕ್ಕೆ ಳಕಾರಾದೇಶ-ವಾಗುವದುಂಟು. ಉದಾಹರಣೆಗಾಗಿ ಕಾಡುಕಿಚ್ಚು-ಕಾಳ್ಕಿಚ್ಚು, ಕೋಡುಕಟ್ಟು-ಕೋಳ್ಕಟ್ಟು, ದಾಡಿಮ-ದಾಳಿಂಬ, ಕೂಷ್ಮಾಂಡ-ಕುಂಬಳ, ಝುಗಡೆ-ಝುಗಳೆ ಶಬ್ದಗಳನ್ನು ನೋಡಬಹುದು. ಸೂಡಾದಿಯು ಸುಳಾದಿಯಾಗಿರುವದು ಈ ರೀತಿಯಲ್ಲಿ.

ದಾಸಸಾಹಿತ್ಯದಲ್ಲಿಯ ಸುಳಾದಿಗೀತಗಳಿಗೂ ಸಾಲಗಸೂಡಗೀತಗಳಿಗೂ ಇರುವ ಸಂಬಂಧ ತಾಲಗಳ ಮಟ್ಟಿಗೆ. ತಾಲಗಳಿಗೆ ಇಂತಿಷ್ಟೆ ಎಂಬ ಮಿತಿಯಿಲ್ಲ. ಲಾಕ್ಷಣಿಕರು ಮಾರ್ಗ-ದೇಶಿಯೆಂಬ ಎರಡು ಬಗೆಯ ತಾಲಗಳನ್ನು ಹೇಳಿರುವರು. ಮಾರ್ಗಸಂಗೀತದೊಡನೆ ಮಾರ್ಗತಾಲಗಳು ಲುಪ್ತವಾದವು. ಶಾರ್ಙ್ಗದೇವನು ೧೨೦ ಬಗೆಯ ದೇಶಿ ತಾಲಗಳನ್ನು ಹೇಳಿರುವನು. ಇತರರು ಚಚ್ಚತ್ಪುಟಾದಿ ೫ ಮಾರ್ಗಿತಾಲಗಳನ್ನು ಸೇರಿಸಿ ೧೦೮ ತಾಲಗಳನ್ನು ಹೇಳಿರುವರು. ಶಾರ್ಙ್ಗ-ದೇವಾದಿ ಪ್ರಾಚೀನ ಲಾಕ್ಷಣಿಕರು (ಸಾಲಗ)ಸೂಡಗೀತಗಳಿಗೆ ಹೇಳಿರುವ ತಾಳಗಳು ಇವುಗಳಲ್ಲಿಯವು. ಇವುಗಳ ಸ್ಥಳದಲ್ಲಿ ಹಿಂದಿನಿಂದ ಬಂದ ಮತ್ತು ಸದ್ಯ ಪ್ರಚಾರದಲ್ಲಿರುವ ಧ್ರುವ, ಮಟ್ಟ, ರೂಪಕಾದಿ ಸಪ್ತತಾಲಗಳ ಉಲ್ಲೇಖ ೧೬ನೆಯ ಶತಮಾನದ ಪ್ರಾರಂಭದಲ್ಲಿ ಆಗಿಹೋದ ಪುಂಡರೀಕವಿಠಲನೆಂಬ ಲಾಕ್ಷಣಿಕನ ನರ್ತನನಿರ್ಣಯವೆಂಬ ಗ್ರಂಥದಲ್ಲಿ ಮೊದಲು ಸಲ ಕಂಡು-ಬರುತ್ತದೆ. ಸಾಲಗಸೂಡ (ಸೂಡಾದಿ/ಸುಳಾದಿ) ಗೀತಗಳಿಗೆ ಕಡ್ಡಾಯವಾಗಿ ಬಳಸಬೇಕಾದುದರಿಂದ ಇವುಗಳಿಗೆ ಸುಳಾದಿ ತಾಳಗಳೆಂಬ ಹೆಸರುಂಟಾಯಿತು. ಕಾಲಾಂತರದಲ್ಲಿ ಪ್ರಚಾರದಲ್ಲಿದ್ದ ಇತರ ತಾಳಗಳು ಲುಪ್ತವಾಗಲು ಅವುಗಳಿಂದ ಬೇರ್ಪಡಿಸಿ ಹೇಳುವ ಅವಶ್ಯಕತೆ ಇಲ್ಲದಂತಾಗಿ ಇವುಗಳಿಗೆ ಅಂಟಿಸಿದ ಸುಳಾದಿ ಪೂರ್ವಪದವು ಇಲ್ಲದಂತಾಯಿತು.

ಸುಳಾದಿ ತಾಳಗಳೊಂದಿಗೆ ಮಾರ್ಗಿ ಮತ್ತು ಇತರ ದೇಶಿ ತಾಳಗಳು ೧೭ನೆಯ ಶತಮಾನದಲ್ಲಿ ಸಹ ಬಳಕೆಯಲ್ಲಿದ್ದವೆಂಬುದನ್ನು "ಚಚ್ಚತ್ಪು-ಟಾದ್ಯೈಶ್ಚ....ಹರಿನಂದನನಂದಿನಂದನಾದ್ಯೈರಪಿ ಸೂಲಾದಿರನ್ಯೈಶ್ಚ ತಾಲೈಃ" ಈ

ಅವತರಣಿಕೆಯಲ್ಲಿ ಕಾಣಬಹುದು. ಇದು ರಾಮಭದ್ರಾಂಬೆಯ ರಘುನಾಥಾಭ್ಯುದಯ ಕಾವ್ಯದಲ್ಲಿ ನರ್ತನಪ್ರಸಂಗವನ್ನು ಬಣ್ಣಿಸುವ ಪದ್ಯಗಳಲ್ಲಿಯದು. ಇದು ಸಂಗೀತಸುಧಾಕಾರ ತಂಜಾವರದ ಅರಸು ರಘುನಾಥನಾಯಕನ (೧೬೧೪–೩೮) ಚರಿತ್ರಕಾವ್ಯ. ರಾಮಭದ್ರಾಂಬೆ ಆತನ ಉಪಪತ್ನಿ. ಲೋಕಪ್ರಿಯವಿರುವ ಕೂಚಿಪುಡಿ ನೃತ್ಯದ ಪ್ರವರ್ತಕರಲ್ಲಿ ಇವಳೊಬ್ಬಳು. ಚಚ್ಚತ್ಪುಟಾದಿಗಳು ಮಾರ್ಗತಾಲಗಳು. ಹರಿನಂದನಾದಿಗಳು ದೇಶಿತಾಳಗಳು, ಇವೆರಡರಿಂದ ಬೇರ್ಪಡಿಸಿ ಸುಳಾದಿತಾಳಗಳನ್ನು ಉಲ್ಲೇಖಿಸಿರುವಳು, ಆಕೆ.

ದಾಸಸಾಹಿತ್ಯದಲ್ಲಿಯ ಸುಳಾದಿ ಗೀತಗಳು ಸಾಲಗಸೂಡಗೀತಗಳಿಗೆ ಹೇಳಿದ ಕ್ರಮವಿಶಿಷ್ಟ ತಾಲಗಳನ್ನು ಅನುಸರಿಸಿರುವದರಿಂದ ಅವುಗಳಿಗೆ ಸುಳಾದಿ ತಾಳಗೀತ ಅಥವಾ ಸಂಕ್ಷೇಪವಾಗಿ ಸುಳಾದಿಗಳೆಂಬ ಹೆಸರುಂಟಾಗಿರಲಿಕ್ಕೆ ಸಾಕು. ಸಾಲಗಸೂಡಗೀತಗಳು ಇವೇ ತಾಲಗಳಲ್ಲಿದ್ದರೂ ರಚನೆಯಲ್ಲಿ ಇವು ಬೇರೆ, ಸುಳಾದಿಗೀತಗಳು ಬೇರೆ. ಪ್ರಾರಂಭದಲ್ಲಿ ಧ್ರುವಪದ/ಪಲ್ಲವಿ, ಅಂತರ/ನುಡಿ, ಆಭೋಗ ಮತ್ತು ಧ್ರುವ-ಮಟ್ಟಾದಿ ಸುಳಾದಿ ಸಪ್ತತಾಳಗಳಲ್ಲಿ, ಇವುಗಳಲ್ಲಿಯ ಒಂದೆ ತಾಳದಲ್ಲಿ, ಹಲವು ತಾಳಗಳಲ್ಲಿ ಸಾಲಗಸೂಡಗೀತಗಳ ರಚನೆ ಇರುತ್ತದೆ. ದಾಸಸಾಹಿತ್ಯದಲ್ಲಿಯ ಸುಳಾದಿ ತಾಳಗೀತಗಳಲ್ಲಿ ಒಂದೊಂದು ಖಂಡವು ಒಂದೊಂದು ತಾಳದಲ್ಲಿರುತ್ತದೆ. ಉದ್ಗ್ರಾಹ, ಧ್ರುವ, ಆಭೋಗ ಇಲ್ಲವೆ ಉಗಾಭೋಗಗಳಲ್ಲಿರುವಂತೆ ಉದ್ಗ್ರಾಹ ಆಭೋಗ(ಧ್ರುವಯುಕ್ತ)ಗಳಿಂದ ಕೂಡಿರುತ್ತದೆ. ಮುಕ್ತಕದಂತೆ ಸ್ವತಂತ್ರವಿರುತ್ತದೆ. ಅಂದರೆ ಅರ್ಥಗ್ರಹಣಕ್ಕೆ ಪೂರ್ವಾಪರ ಖಂಡಗಳ ಅವಶ್ಯಕತೆ ಇರುವದಿಲ್ಲ. ಮೊದಲನೆಯ ಖಂಡವು ಧ್ರುವತಾಲದಿಂದ ಪ್ರಾರಂಭವಾಗಿ ಮುಂದಿನ ಖಂಡಗಳು ಕ್ರಮೇಣ ಮಟ್ಟ, ಅಟ, ರೂಪಕ, ಝುಂಪೆ, ಆದಿ, ಏಕತಾಲಗಳಲ್ಲಿರುತ್ತವೆ. ಕೊನೆಗೆ ಎರಡು ಪಾದಗಳ ಜತೆ ಇರುತ್ತದೆ. ಜತೆಗೆ ತಾಲನಿರ್ದೇಶವಿರುವದಿಲ್ಲ. ತಾಲಗಳ ಸಂಖ್ಯೆ ಮತ್ತು ಕ್ರಮದಲ್ಲಿ ಅಲ್ಲಲ್ಲಿ ವ್ಯತ್ಯಾಸಗಳು ಕಂಡುಬರುವದು. ಆದರೆ ಮೊದಲಿನ ವೆರಡು ಖಂಡಗಳು ಧ್ರುವ-ಮಟ್ಟಗಳಲ್ಲಿರುತ್ತವೆ. ಖಂಡಗಳಲ್ಲಿಯ ಪಾದಗಳಿಗೆ ಇಂತಿಷ್ಟೆಯೆಂಬ ಮಿತಿಯಿಲ್ಲ. ಸಾಮಾನ್ಯವಾಗಿ ಒಂದು ಖಂಡದಲ್ಲಿ ೫ ರಿಂದ ೧೦ ವರೆಗೆ ಪಾದಗಳಿರುತ್ತವೆ

ತಾಲ/ನರ್ತನ ಗೀತಗಳು ತಾಲ ಛಂದಸ್ಸು ಅಂದರೆ ತಾಲದ ಆವರ್ತದಲ್ಲಿಯ ಮಾತ್ರೆ ಮತ್ತು ಅವುಗಳ ವಿಭಾಗಗಳನ್ನು ಅನುಸರಿಸುತ್ತವೆ. ಆ ರೀತಿ ನರ್ತಕನ ಹೆಜ್ಜೆಗಳು ಬೀಳಬೇಕು, ಅಂಗಾಂಗಗಳ ವಿನ್ಯಾಸವಾಗಬೇಕು ಮತ್ತು ಗೀತಗಳಲ್ಲಿಯ ಪದಗಳ ಉಚ್ಚಾರಣೆಯಾಗಬೇಕು. ಈ ಬಗೆಯ ಗೀತಗಳಲ್ಲಿ ಕೆಲವು ಕೇವಲ ಪಾಟಾಕ್ಷರ (ಬೋಲ/ಗತ್ತು) ಅಂದರೆ ತಾಲಗಳಲ್ಲಿ ಬಳಸಲಾಗುತ್ತಿದ್ದ ತೈ ಧಿತ್ತಾಂ ತೈ ಧಿತ್ತಾಂ ಮೊದಲಾದ ಅರ್ಥಹೀನ ಶಬ್ದಗಳಿಂದ

ಕೂಡಿರುತ್ತವೆ. ಕೆಲವು ಅರ್ಥಯುಕ್ತ ಮತ್ತು ಇಂಥ ಅರ್ಥಹೀನ ಶಬ್ದಗಳಿಂದ ಕೂಡಿರುತ್ತವೆ. ಇದೊಂದು ಎರಡನೆಯ ಬಗೆಯ ಗೀತದ ಉದಾಹರಣೆ, ಯಕ್ಷಗಾನ ಆಟಗಳಲ್ಲಿ ಬರುತ್ತದೆ—

ತತ್ತೋ ತಕ್‌ಡ್ ಕಡ್ತಧಿಕ್ಧ್ ತಕ । ಅರುದಿನ ಮರುಮಗ
ವಿಘ್ನವಿನಾಯಕ ।
ಎನಕಿಟ ಅರಳುವ ಗಣಪತಿ ಝೋ ಝೋ ಜಿಕ್ಕಿಟ ಉದಕಿರಣಂ... ॥

ಇದಿನ್ನೊಂದು, ಉತ್ತರ ಭಾರತದಲ್ಲಿ ಪ್ರಚಾರದಲ್ಲಿದೆ—

ಯಸ್ತಂ ದೇವಾ ನಮಾಮಿ ಸಿರಸಾ ಹತ ಹತ ಕುಕು ಕುಕು ।
ತಹ ತಹ ಕುಕು ಕುಕು ವಿದ್ಯಾರಂಭೇ ಹರತು ವಿಘ್ನಂ.... ॥

ತಾಲವೈಚಿತ್ರ್ಯ, ಗತಿವೈಚಿತ್ರ್ಯ, ಇದಕ್ಕನುಗುಣವಾದ ಗೀತ, ವಾದ್ಯ, ನರ್ತಕನ ಪಾದವಿನ್ಯಾಸ, ಹಸ್ತವಿನ್ಯಾಸ, ದೃಷ್ಟಿವಿನ್ಯಾಸ, ಇತ್ಯಾದಿಗಳ ಮಧುರ ಮಿಲನವು ಪ್ರೇಕ್ಷಕ ವರ್ಗಕ್ಕೆ ಒಂದು ಬಗೆಯ ಅನಿರ್ವಚನೀಯ ಆನಂದ-ವನ್ನುಂಟುಮಾಡುವುದು. ಸುಳಾದಿಗಳು ಇಂಥವು. ದಾಸರು ಹತ ಹತ ಕುಕು ಕುಕು ಮೊದಲಾದ ಅರ್ಥಹೀನ ಶಬ್ದಗಳನ್ನು ತೆಗೆದುಹಾಕಿ ಅವುಗಳ ಸ್ಥಳದಲ್ಲಿ ಅರ್ಥಯುಕ್ತ ಭಗವಂತನ ಸ್ತೋತ್ರಪರ ಶಬ್ದಗಳನ್ನು ಸೇರಿಸಿರುವರು. ಇದೇ ಅವುಗಳ ವೈಶಿಷ್ಟ್ಯ. ಜತೆ ಪಾದಗಳಿಗೆ ತಾಳವನ್ನು ಹೇಳಿಲ್ಲ. ಅವು ಮುಗಿತಾಯ ಸೂಚಕವಿದ್ದು ಏರಿಕೆಯ ಸ್ವರದಲ್ಲಿ (ಕ್ರಿಸೆಂಡೊ) ಹಾಡಿಕೊಂಡು ಗೀತವನ್ನು ಮತ್ತು ಅದರೊಂದಿಗೆ ನರ್ತನವನ್ನು ಮುಗಿಸುತ್ತಿದ್ದರೆಂದು ತೋರುತ್ತದೆ. ಸುಳಾದಿಗಳ ಇದೊಂದು ಉಹಾಹರಣೆ. ಐದು ತಾಳಗಳಲ್ಲಿದೆ—

ಧ್ರುವತಾಳ

ಎಲೆ ಎಲೆ ಸಿಡಿಲೆ, ಮಿಂಚೆ, ಗರ್ಜಿಸದಿರಿ ನೀವು !
ಎಲೆ ಎಲೆ ಮೇಘರಾಜಾ, ಮಳೆಗರೆಯದಿರು ।
ಎಲೆ ಎಲೆ ಭೂದೇವಿ, ನವರತನುಗಳಿಂದ ।
ನೆಲೆಕಟ್ಟ ಕಟ್ಟಿಕೊಂಡು ಥಳಥಳಿಸುತಲಿರು ।
ಹುಲಿಯುಗುರು ತರಳೆಲೆ ಮಾಗಾಯಿ ಕಂಕಣ ।
ಘಲು ಘಲು ಘಲುಕೆಂಬ ಕಾಲಪೆಂಡೆಯನಿಟ್ಟು ।
ಬಲರಾಮ ಪುರಂದರವಿಠಲ ಗೋಪಾಲಕೃಷ್ಣ ।
ನಲಿಯುತ ಅಂಬೆಗಾಲನಿಕ್ಕುತ ಬರುತಾರೆ ॥ ೧ ॥

ಮುಂದಣ ಮೂರು ಖಂಡಗಳು ಕ್ರಮದಿಂದ ಮಟ್ಟ, ತ್ರಿಪುಟ, ಆದಿ ತಾಳಗಳಲ್ಲಿದ್ದು, ನಂತರ—

ರೂಪಕತಾಳ

ನೀಲಮೇಘಶ್ಯಾಮ ಕೋಮಲನೆ ।
ಹಾಲು ಕುಡಿಯಬಾರೊ ಹಸಿದೆಯ್ಯ ರಂಗಯ್ಯ ।
ಹಾಲು ಮೊಸರು ಬೆಣ್ಣೆ ಹಾವಳಿಗಾರನೊ ।
ಶ್ರೀಲೋಲ ಪುರಂದರವಿಠಲ ಗೋಪಾಲಕೃಷ್ಣ ॥ ೫ ॥

ಜತೆ

ಅನುದಿನ ಬಾಲಗೋಪಾಲಕೃಷ್ಣನೇ ನಿನ್ನ ।
ನೆನೆವಂತೆ ಮಾಡೆನ್ನ ಪುರಂದರವಿಠಲ ॥

ನರ್ತನವು ಸಂಗೀತದ ಒಂದು ಪ್ರಮುಖ ಅಂಗವಿದ್ದುದರಿಂದ ಮತ್ತು ಅದಿಲ್ಲದೆ ಸಂಗೀತಸೇವೆಯು ಪೂರ್ಣವಾಗದೆಂಬ ಭಾವನೆ ಇದ್ದುದರಿಂದ ದಾಸರು ಧ್ರುವ, ಮಟ್ಟ, ರೂಪಕಾದಿ, ಸುಳಾದಿ ಸಪ್ತತಾಳಗಳ ಗಣನೆಗೆ ಒಡಂಬಡುವ ಈ ಗೀತಗಳನ್ನು ರಚಿಸಿ ನರ್ತನಕ್ಕೂ ಒಂದು ಸ್ಥಾನವನ್ನು ಕಲ್ಪಿಸಿಕೊಟ್ಟಿರುವರು. ದಾಮೋದರ ಪ್ರಣೀತ ಸಂಗೀತದರ್ಪಣದಲ್ಲಿ ಸುಳಾದಿ ನರ್ತನದ ವಿವರಗಳಿದ್ದು, ಅದರಲ್ಲಿ ಧ್ರುತಾಲದಿಂದ ಏಕತಾಲದ ಪರ್ಯಂತ ಪ್ರತಿಯೊಂದು ಖಂಡದಲ್ಲಿ ಪ್ರದರ್ಶಿಸಬೇಕಿದ್ದ ಅಂಗಾಂಗಗಳ ವಿನ್ಯಾಸ, ಭಾವಪ್ರಕಟನೆ, ಇತ್ಯಾದಿ ವಿವರಗಳಿವೆ. ಈ ದಾಮೋದರನು ಮೊಗಲ ಬಾದಶಹ ಜಹಾಂಗೀರನ ಆಶ್ರಿತನಿದ್ದನು. ಈತನ ತಂದೆ ಲಕ್ಷ್ಮೀಧರನು ವಿಜಯನಗರದ ಅರಸು ತಿರುಮಲರಾಯನ (೧೫೭೦–೭೩) ಆಸ್ಥಾನಪಂಡಿತ ಮತ್ತು ಸಂಗೀತವಿದ್ವಾಂಸನಿದ್ದನು. ಜಯದೇವನ ಗೀತಗೋವಿಂದಕ್ಕೆ ಟೀಕೆಯನ್ನು ಬರೆದಿರುವನು. ಸ್ವತಃ ದಾಮೋದರನಿಗೆ ಚತುರನೆಂಬ ಬಿರುದಿದ್ದಿತು. ಕವಿಗಳಲ್ಲಿ ಕವಿಚಕ್ರವರ್ತಿ ಹೇಗೊ ಹಾಗೆ ಸಂಗೀತಜ್ಞರಲ್ಲಿ ಚತುರ ಬಿರುದಿದ್ದಿತು. ನರ್ತನಕ್ಷೇತ್ರದಲ್ಲಿ ದಾಮೋದರನ ಅಭಿಪ್ರಾಯಗಳಿಗೆ ಇಂದಿಗೂ ಮನ್ನಣೆಯಿದೆ.

ಶೈವಭಕ್ತಿಸಂಪ್ರದಾಯದಲ್ಲಿ ಸುಳಾದಿಗಳಿದ್ದವೆಂಬುದು ಈ ಕೆಳಗಿನ ಅವತರಣಿಕೆಯಿಂದ ವ್ಯಕ್ತವಾಗುವದು—

ಹರನಾಗ ಪ್ರಭುವ ಕರೆದೀ ಮರ್ತ್ಯಲೋಕದಿ ।
ಕರಪೂರ ಸುಜ್ಞಾನಿ ನಿರಹಂಕಾರರು ನಿನ್ನ ।
ಚರಣಕಮಲಗಳನು ಹಾಡಿಕೊಂಡಿರ್ಪರು ।
ನಿರುತದಿಂದವರ್ಗೆ ಪ್ರಸನ್ನನಾಗುತೆ ನೀನು ।
ದೊರೆಪಟ್ಟಗಳನಾಳಿ ಮುಕ್ತಿಮಾರ್ಗವ ಪೇಳಿ ।
ಶರಣಜಾಲವ ಮಾಡಿ ಮಾಯೆಯನೀಡಾಡಿ ।

—ಇತ್ಯಾದಿಗಳು ಮರಿರಾಚವಟ್ಟೇಶನ (೧೬೫೦) ಪ್ರಭುನಟನ ತಾರಾವಳಿ (೨೭ ಪದ್ಯಗಳಿರುವ ಕೃತಿ)ಯಲ್ಲಿಯವು. ಗ್ರಂಥಕರ್ತನು ಇವುಗಳಿಗೆ "ಪ್ರಭು-ದೇವನು ನಟಿಸಿದ ಶೃಂಗಾರದ ನುಡಿ" ಎಂದಿರುವನು. ಹಾಡಿನ ರೂಪದಲ್ಲಿರುವದರಿಂದ ಮತ್ತು ನರ್ತನಕ್ಕೆ ಸಂಬಂಧಿಸಿರುವದರಿಂದ ಇವಾದರೂ ಸುಳಾದಿಗಳಿಗೆ ಸೇರಿದ ಗೀತಜಾತಿಗಳೆಂದೆ ಹೇಳಬೇಕಾಗುವದು.

ಇದಿಷ್ಟು ವಚನ, ಉಗಾಭೋಗ, ಸುಳಾದಿಗಳ ಮೂಲ ಮತ್ತು ರಚನೆಯ ಹಿನ್ನೆಲೆ. ವಚನ ಉಗಾಭೋಗಗಳನ್ನು ಹಿಂದುಸ್ತಾನಿ ಖಯಾಲ ಪದ್ಧತಿಯಲ್ಲಿ ಹಾಡಬಹುದೆಂಬ ಸೂಚನೆಯು ಸಂಗೀತದಲ್ಲಿ ಪರಿಶ್ರಮವಿರುವ ಸಂಶೋಧಕರಿಗೆ ಒಂದು ಗಮನಾರ್ಹ ವಿಷಯವಿರುವಂತೆ ನರ್ತನದಲ್ಲಿ ಆಸ್ಥೆಯುಳ್ಳವರು ಸುಳಾದಿಗಳನ್ನು ಕುರಿತು ಸಂಶೋಧನ ನಡೆಸಿ ಯುಕ್ತವೆಂದು ಕಂಡುಬಂದವುಗಳನ್ನು ತಮ್ಮ ಕಾರ್ಯಕ್ರಮಗಳಲ್ಲಿ ಸೇರಿಸಿಕೊಳ್ಳಬಹುದಾಗಿದೆ. ಪ್ರತಿಭಾ-ವಂತ ಕವಿಗಳು ಈ ಬಗೆಯ ಕೃತಿಗಳನ್ನು ರಚಿಸಿ ಕನ್ನಡದ ಗೀತಸಂಪತ್ತನ್ನು ಅಭಿವೃದ್ಧಿಗೊಳಿಸಬಹುದಾಗಿದೆ. ವಚನಗಳ ಮಟ್ಟಿಗೆ " ಕರುಳಿನ ವಚನಗಳನ್ನು " ರಚಿಸಿ ನಾಡಕವಿ ಬೇಂದ್ರೆ ಈಗಾಗಲೆ ಈ ದಿಸೆಯಲ್ಲಿ ಶ್ರೀಕಾರವನ್ನು ಹಾಕಿರುವರು. ಕರ್ನಾಟಕದ ನಿಜವಾದ ಮತ್ತು ವೈಶಿಷ್ಟ್ಯಪೂರ್ಣ ಸಂಸ್ಕೃತಿಯ ಏಳ್ಗೆಗೆ ಈ ಬಗೆಯ ಸಂಶೋಧನೆ ಪ್ರಯತ್ನಗಳ ಆಗತ್ಯವಿದೆ.

★ ಭೀಮರಾವ ಚಿಟಗುಪ್ಪಿ

ಸಂದರ್ಭಸಾಹಿತ್ಯ

ಕನ್ನಡ :

೧. ವಚನಶಾಸ್ತ್ರರಹಸ್ಯ—ರಂ. ರಾ. ದಿವಾಕರ, ಅಧ್ಯಾತ್ಮ ಕಾರ್ಯಾಲಯ, ಧಾರವಾಡ, ೧೯೩೬.

೨. ವಚನಧರ್ಮಸಾರ—ಎಂ. ಆರ್. ಶ್ರೀನಿವಾಸಮೂರ್ತಿ, ಮೈಸೂರು ವಿಶ್ವ ವಿದ್ಯಾಲಯ, ೧೯೫೨.

೩. ದಾಸಸಾಹಿತ್ಯ—ಶ್ರೀ ಪುರಂದರದಾಸರ ಕೃತಿಗಳು, ಇತ್ಯಾದಿ.

೪. ಕರ್ನಾಟಕ ಸಂಗೀತವೂ, ದಾಸಕೂಟವೂ—ಹಲಗೂರು ಕೃಷ್ಣಾಚಾರ್ಯ, ಕನ್ನಡ ಸಂಶೋಧನ ಸಂಸ್ಥೆ, ಧಾರವಾಡ, ೧೯೫೧.

೫. ವಚನಸಾಹಿತ್ಯದ ಉಗಮ—ಎಂ. ಚಿದಾನಂದಮೂರ್ತಿ, ಪ್ರಬುದ್ಧ ಕರ್ಣಾಟಕ, ೪೩–೨, ೧೯೬೧.

೬. ಕನ್ನಡ ಸಾಹಿತ್ಯ ಚರಿತ್ರೆ—ರಂ. ಶ್ರೀ. ಮುಗಳಿ.

೭. ಕರ್ನಾಟಕ ಕವಿಚರಿತೆ—ಆರ್. ನರಸಿಂಹಾಚಾರ್.

೮. ಕವಿರಾಜಮಾರ್ಗಂ—ನೃಪತುಂಗ. ಕವಿರಾಜಮಾರ್ಗದ ಕರ್ತೃತ್ವವು ವಾದಗ್ರಸ್ತವಿದೆ. ಇತ್ತೀಚೆಗೆ ನೃಪತುಂಗಸಭಾಸದ ಶ್ರೀವಿಜಯಕೃತವೆಂದು ಸಾಧಿಸುವ ಇದರ ಮೂರನೆಯ ಮುದ್ರಣವು ಪ್ರಕಟವಾಗಿದೆ. ಒಂದೊಮ್ಮೆ ಶ್ರೀವಿಜಯಕೃತವಿದ್ದರೂ ಅರ್ಪಣಭಾವ ಇಲ್ಲವೆ ಯಾವುದೋ ಉದ್ದೇಶದಿಂದ ಆತ ನೃಪತುಂಗನದೆಂದು ಭಾವನೆ ಹುಟ್ಟುವಂತೆ ಇದನ್ನು ರಚಿಸಿರುವದು ಸ್ಪಷ್ಟವಿದೆ. ಶ್ರೀವಿಜಯನಿಗೆ ನ್ಯಾಯ ಕೊಡಿಸುವದರೊಂದಿಗೆ ಆತನ ಕೊರಳಿಗೆ ದತ್ತಾಪಹರಣದ ದೋಷವನ್ನು ಕಟ್ಟುವದಕ್ಕಿಂತ ಸಮಕಾಲೀನವಲ್ಲದಿದ್ದರೂ ಶಬ್ದಾನುಶಾಸನಕಾರ ಭಟ್ಟಾಕಳಂಕನ (೧೬೦೦) ಕಾಲದಿಂದ ನಡೆದುಬಂದ ಪರಂಪರೆಗೆ ಮನ್ನಣೆಯಿತ್ತು ನೃಪತುಂಗಕೃತವೆಂದು ಭಾವಿಸುವಲ್ಲಿಯೇ ಶ್ರೇಯಸ್ಸಿದೆ. ಹೀಗೆ ಭಾವಿಸಲು ಇತರ ಕಾರಣಗಳೂ ಇವೆ. ಹೆಚ್ಚು ಚರ್ಚೆ ಇಲ್ಲಿ ಅಪ್ರಸ್ತುತ.

೯. ಶಬ್ದಮಣಿದರ್ಪಣ—ಕೇಶಿರಾಜ—ಸಂ. ಕಿಟೆಲ್ (ಪಂಜೆ), ೧೯೨೦.

ಸಂಸ್ಕೃತ :

೧೦. ಬೃಹದ್ದೇಶೀ—ಮತಂಗಮುನಿಪ್ರಣೀತ, ಸಂ. ಕೆ. ಸಾಂಬಶಿವಶಾಸ್ತ್ರೀ, ತ್ರಿವಾಂಡ್ರಮ್ ಸಂಸ್ಕೃತ ಗ್ರಂಥಮಾಲೆ, ೧೯೨೮.

೧೧. ಮಾನಸೋಲ್ಲಾಸ/ಅಭಿಲಕ್ಷಿತಾರ್ಥಚಿಂತಾಮಣಿ — ಪಶ್ಚಿಮ ಚಾಲುಕ್ಯ ಭೂಲೋಕಮಲ್ಲ ಸೋಮೇಶ್ವರಕೃತ (ಭಾಗ-೩), ಗಾಯಕವಾಡ ಪ್ರಾಚ್ಯ ಗ್ರಂಥಮಾಲೆ, ಬಡೋದಾ.

೧೨. ಸಂಗೀತಚೂಡಾಮಣಿ—ಪಶ್ಚಿಮಚಾಲುಕ್ಯ ಜಗದೇಕಮಲ್ಲಕೃತ, ಗಾಯಕವಾಡ ಪ್ರಾಚ್ಯಗ್ರಂಥಮಾಲೆ, ಬಡೋದಾ.

೧೩. ಸಂಗೀತರತ್ನಾಕರ—ಶಾರ್ಙ್ಗದೇವ—ಚತುರಕಲ್ಲಿನಾಥ ಸಿಂಹಭೂಪಾಲರ ವ್ಯಾಖ್ಯೆ ಸಹಿತ (ಭಾಗ-೨), ಅಡ್ಯಾರ ಲೈಬ್ರರಿ, ಮದ್ರಾಸ.

೧೪. ಸಂಗೀತದರ್ಪಣ—ದಾಮೋದರ, ಸಂ. ಕೆ. ವಾಸುದೇವಶಾಸ್ತ್ರೀ, ಮದ್ರಾಸ ಸರಕಾರ ಪ್ರಾಚ್ಯಗ್ರಂಥಮಾಲೆ, ೧೯೫೨.

೧೫. ರಘುನಾಥಾಭ್ಯುದಯ—ರಾಮಭದ್ರಾಂಬೆ, ಸಂ. ಟಿ. ಆರ್. ಚಿಂತಾಮಣಿ, ಮದ್ರಾಸ ವಿಶ್ವವಿದ್ಯಾಲಯ, ೧೯೩೪.

ಹಿಂದೀ :

೧೬. ವೈದಿಕಛಂದೋಮೀಮಾಂಸಾ—ಯುಧಿಷ್ಠಿರ ಮೀಮಾಂಸಕ, ರಾಮಜಿ ಕಪೂರ ಟ್ರಸ್ಟ, ೧೯೫೯.

ಮರಾಠಿ :

೧೭. ಲೋಕಸಾಹಿತ್ಯದ ರೂಪರೇಖಾ—ದುರ್ಗಾ ಭಾಗವತ, ಮುಂಬಯಿ ಮರಾಠಿ ಗ್ರಂಥ ಸಂಗ್ರಹಾಲಯ, ೧೯೫೬.

ಇಂಗ್ಲೀಷ :

೧೮. ಉಗಾಭೋಗ ಮತ್ತು ಸುಳಾದಿಗಳು—ಆರ್. ಸತ್ಯನಾರಾಯಣ, ಶ್ರೀ ಪುರಂದರದಾಸರ ಸಾಹಿತ್ಯ-೪-ಕೃಷ್ಣಲೀಲಾ (ಮುನ್ನುಡಿ).

೧೯. ಬಸವಣ್ಣನ ವಚನಗಳ ಸಾಹಿತ್ಯಿಕ ಸ್ವರೂಪ—ಚೆನ್ನವೀರ ಕಣವಿ, ಶ್ರೀ ಬಸವೇಶ್ವರ ಸ್ಮಾರಕ ಗ್ರಂಥ, ಮೈಸೂರು ಸರಕಾರ, ೧೯೬೭.

೨೦. ಭಾರತೀಯ ಸಂಗೀತ—ಭವಾನರಾವ ಪಿಂಗಳೆ, ೧೮೯೮.

೨೧. ಭಾರತೀಯ ಸಂಗೀತದ ಕಥೆ—ಓ. ಗೋಸ್ವಾಮಿ, ಏಶಿಯಾ ಪಬ್ಲಿಶಿಂಗ ಹೌಸ, ಮುಂಬಯಿ, ೧೯೫೭.

೨೨. ಭಾರತೀಯ ಸಂಗೀತದ ಐತಿಹಾಸಿಕ ಅಭಿವೃದ್ಧಿ—ಸ್ವಾಮಿ ಪ್ರಜ್ಞಾನಂದ, ಕಲಕತ್ತಾ, ೧೯೬೦.

೨೩. ಭಾರತೀಯ ಸಂಗೀತದ ಐತಿಹಾಸಿಕ ಅಭ್ಯಾಸ—ಸ್ವಾಮಿ ಪ್ರಜ್ಞಾನಂದ, ರಾಮಕೃಷ್ಣ ವೇದಾಂತ ಮಠ, ಆನಂದಧಾರಾ ಪ್ರಕಾಶನ, ಕಲಕತ್ತಾ, ೧೯೬೫.

೨೪. ದಕ್ಷಿಣಾದಿ ಸಂಗೀತ—ಪಿ. ಸಾಂಬಮೂರ್ತಿ (ಭಾಗ-೪), ಮದ್ರಾಸ, ೧೯೫೪.

೨೫. ದಕ್ಷಿಣಾದಿ ನೃತ್ಯಪರಂಪರೆ—ಕೆ. ವಿ. ರಾಮಚಂದ್ರನ್, ತ್ರಿವೇಣಿ, ಮದ್ರಾಸ, ಸಂ. ೭, ೧೯೩೫.

೨೬. ಖಯಾಲ ಪಲ್ಲವಿಗಳಲ್ಲಿಯ ಏಕರೂಪತೆ—ಎನ್. ಹರಿಹರನ್, ಟೈಮ್ಸ ಆಫ್ ಇಂಡಿಯಾ, ೧೬-೨-೬೯.

ವಿಮರ್ಶೆಯ ವ್ಯಾಪ್ತಿ

"Critics are like horseflies, which prevent the horse from ploughing."

—Tehekov

ಎಂಬಂತಹ ಉದ್ಗಾರಗಳನ್ನವಲೋಕಿಸುವಾಗ ಕಲಾವಿದನ ಕಾರ್ಯರಂಗಕ್ಕೆ ವಿಮರ್ಶಕನಿಂದ ಕಾಲ್ತೊಡಕೇ ಎಂದು ಸರ್ವಸಾಮಾನ್ಯವಾಗಿ ಅವಗತವಾಗುವದುಂಟು. ಆದರೆ ಸ್ವಲ್ಪ ಕೂಲಂಕಷವಾಗಿ ನಿರೀಕ್ಷಿಸಿದರೆ ನೈಜ ವಿಮರ್ಶಕ ಕಲಾಕೃತಿಯ ರಸಾಸ್ವಾದನೆಗೆ ಅಡೆತಡೆ ಉಂಟುಮಾಡುವಲ್ಲಿಯೇ ಸಂತೃಪ್ತ ಎಂಬ ಕಲ್ಪನೆ ವಿದೂರವಾಗುವದುಂಟು. ಶ್ರೀ. ಅ. ನ. ಕೃಷ್ಣರಾಯರು ಹೇಳುವಂತೆ, ಅವ ದೇವಾಗಾರದ ಪೂಜಾರಿ. ಒಳಗಿನ ಮೂರ್ತಿಯನ್ನು ಕಟೆದವ ಕಲಾವಿದ. ಮೂರ್ತಿಯ ಸೌಂದರ್ಯವನ್ನು ತಾತ್ವಿಕ ಹಿನ್ನೆಲೆಯಲ್ಲಿ ಕಲಾತ್ಮಕವಾಗಿ ವಿವರಿಸುವವ ವಿಮರ್ಶಕ. ಆ ವಿಮರ್ಶೆಯಲ್ಲಿ ವ್ಯಕ್ತಿಗತ ನಿರೂಪಣೆ (revelation of personality) ಇದ್ದರೂ ವಿವೇಕಿ ವಿಮರ್ಶಕ ಮೂಲಭೂತ ತತ್ವಗಳನ್ನು ಕರತಲಾಮಲಕವಾಗಿಸಿಕೊಂಡಿರುವ.

ವಿಮರ್ಶಕನ ಸ್ಥಾನಮಾನದ ಬಗೆಗೆ ನಡೆದ ಊಹಾಪೋಹ ರೋಮಾಂಚಕವಾಗಿದೆ. ಒಬ್ಬ ವಿಮರ್ಶಕನ ತತ್ವ ಇನ್ನೊಬ್ಬನಿಂದ ವಿಭಿನ್ನವಾಗಿವೆ ಎನಿಸುವವು–ಹೂವುಗಳ ವರ್ಣ, ಆಕಾರ, ಸುವಾಸನೆಯಂತೆ. ಏನೇ ಆಗಲಿ, ವಿಮರ್ಶನ ಕಲೆಯ ತತ್ವಗಳನ್ನರಗಿಸಿಕೊಳ್ಳಲು ಅನೇಕಾನೇಕ ವಿಮರ್ಶಕರ ಅಭಿಪ್ರಾಯಗಳನ್ನು ಉದಾಹರಿಸಲು, ಒರೆಗೆ ಹಚ್ಚುವದು ಅತ್ಯಾವಶ್ಯಕವಾಗಿದೆ. ಇಂದಿನ ವಿಮರ್ಶಾರೀತಿಯ ಆಗುಹೋಗುಗಳ ಬಗೆಗೆ ಪರ್ಯಾಲೋಚಿಸಲು ನಾವು ಉದ್ಯುಕ್ತರಾದಲ್ಲಿ ಆ ರಂಗದ ಐತಿಹಾಸಿಕಾವಲೋಕನವೂ ಯಾವ ಮಾನದಲ್ಲಿಯೂ ನಿಷ್ಪ್ರಯೋಜಕವಲ್ಲ.

ತೀರ ಇತ್ತೀಚಿನ ಗಣ್ಯ ವಿದ್ವಾಂಸ ಕವಿಗಳಾದ ಟಿ. ಎಸ್. ಈಲಿಯಟ್ಟರು "A critic should discipline personal prejudices and cranks" ಎಂದು ತಮ್ಮ Function of Criticism ಎಂಬ ಹೊತ್ತಿಗೆಯಲ್ಲಿ ವಿವೇಚಿಸಿರುವದು ಮನನೀಯ ಅಂಶ. ಆ ದೃಷ್ಟಿಯಿಂದ ಯೋಚಿಸಿದರೆ, ವಿಮರ್ಶಕನ ಹೊಣೆಗಾರಿಕೆ ತೀರ ಹಿರಿದು, ಹೊಣೆಗಾರಿಕೆಯದೆಂದು ಥಟ್ಟನೆ ಮನವರಿಕೆ ಆಗುವದುಂಟು. ಅಚ್ಚುಕಟ್ಟುತನ, ಸಂಯಮ ಅವನ ಕಾರ್ಯರಂಗದ ಜೀವಾಳ ಎನ್ನುವದು ಸಮಂಜಸ ಮಾತು. ಪೂರ್ವಗ್ರಹದೂಷಣೆಗೂ (Prejudices) ಅವನಿಗೂ ಎಣ್ಣೆ-ಸೀಗೆಯ ಸಂಬಂಧ ಎನ್ನುವದೂ ಯುಕ್ತ ಅಂಶವೇ ಸೈ.

ವಿಮರ್ಶೆ ಎಂದರೇನೆಂಬುದರ ಬಗೆಗೆ ಮ್ಯಾಥ್ಯೂ ಆರ್ನಾಲ್ಡ್ ವಿವರಿಸಿದುದು ನಿಜಕ್ಕೂ ಬೋಧಪ್ರದವಾಗಿದೆ ಮೊಟ್ಟಮೊದಲು ವಿಮರ್ಶಕನೂ ಕಲಾವಿದನಂತೆ ಜನ್ಮಾಪಿ ಒಬ್ಬ ವಿದ್ಯಾರ್ಥಿಯೇ. ಅವನಿಗೂ ಹೆಜ್ಜೆಹೆಜ್ಜೆಗೆ ಕಲಿಸುವದಕ್ಕಿಂತ ಕಲಿಯುವದೇ ವಿಶೇಷವಾಗಿರುವದು. 'ಶ್ರದ್ಧಾವಾನ್ ಲಭತೇ ಜ್ಞಾನಂ' ಎಂಬ ಗೀತೆಯ ಮಹದುಕ್ತಿಯನ್ನು ವಿಮರ್ಶಕ ಕಾಲುಕಸವಾಗಿಸಲಾರ. ಸ್ವಾರ್ಥ ಸಾಧಿಸುವದು ನೈಜ ವಿಮರ್ಶಕನಿಗೆ ಎಂದೂ ಸಲ್ಲದೆಂಬ ಆರ್ನಾಲ್ಡನ ಉದ್ಗಾರ ಬೆಲೆಬಾಳುವಂತಹದು. ವಿಮರ್ಶಕ ಕಲಾಕೃತಿಯ ಬೆಲೆ ಅರಿಯಲು ಮನಮುಟ್ಟ ಯತ್ನಿಸುವಾಗ ಅವ ಅಜ್ಞರನ್ನು ಸರ್ವಥಾ ಕಡೆಗಣಿಸಲಾರ. ಕಲೆಯ ಬೆಲೆಯ ಸಾಮಾನ್ಯ ಪ್ರಚಾರವೇ ಅವನ ಜೀವಿತದ ಪವಿತ್ರ ಧ್ಯೇಯವಲ್ಲವೆ ? ಈ ಸಿದ್ಧಿಗಾಗಿ ಅವನ ಸಾಧನಗಳೂ ಅಪರಿಮಿತ. ತಪಸ್ಸೂ ಹೆಚ್ಚಿನದು. ಯಾಕೆಂದರೆ ಕಲೋಪಾಸಕನ ಅಂತರಂಗ ಅರಿಯಲು ವಿಮರ್ಶಕ ಮೊದಲು ಅವನ ಬೌದ್ಧಿಕ, ಹಾರ್ದಿಕ ಮಟ್ಟ ಮುಟ್ಟಬೇಕು. ಅನಂತರ ತಾನು ಅನುಭವಿಸಿದ ಕಲೆಯ ನೆಲೆಯನ್ನು ಮೋಹಕವಾಗಿ ರೂಪಿಸುವದು ಅವನ ಹೊಣೆಗಾರಿಕೆ. ನಿರೂಪಣೆಯಲ್ಲಿಯೂ ಡೊಂಬರವನಂತೆ ಅವ ತೂಕ ತಪ್ಪಬಾರದು. ತಪ್ಪಿದರೆ ಅಪರಂಪಾರಕ್ಕೆ ಕೊಳ್ಳದ ಅಡಿಗೇ ಅವ ! "ಸತ್ಯಂ ಶಿವಂ ಸುಂದರಂ" ಎಂಬಿವು ವಿಮರ್ಶಕನ ತಾರಕವಾದ ಸೂತ್ರತ್ರಯ. ಬೀಭತ್ಸವನ್ನೇ ಕಂಡೆನೆಂದು ಹೇಳುವದಾದರೆ ವಿಮರ್ಶಕ ಏಕೆ ಬೇಕು ? ಸತ್ಯಾನ್ವೇಷಣೆಯೊಡನೆ ಶಿವ ಇಲ್ಲವೇ ಸೌಂದರ್ಯ, ಲೋಕಕಲ್ಯಾಣ ಅವ ಬಿಟ್ಟುಕೊಡುವಂತಿಲ್ಲ. ಕಲಾವಿದನದು ಇಂತು ಒಂದು ಸರಸ ಸುಂದರ ವಿಶ್ವವಾದರೆ ವಿಮರ್ಶಕನದೂ ಒಂದು ಪ್ರತಿಸೃಷ್ಟಿ (ವಿಶ್ವಾಮಿತ್ರನಂತಹದೆ?). ಆದರೆ ಅಲ್ಲಿ ಶಾಸ್ತ್ರದ ಪ್ರಮಾಣಕ್ಕೆ ವಿಶೇಷ ಮನ್ನಣೆಯುಂಟು. ವಿಮರ್ಶಕನ ತೂಕದ ಕಲ್ಲುಗಳೂ 'ಖೊಟ್ಟಿ'ಯಾದರೆ ನಡೆದೀತೆ? ತೂಕದೊಡನೆ ವಿಮರ್ಶಕ ದೇಶ ಕಾಲ ಪರಿಸ್ಥಿತಿ ಅಲ್ಲಗಳೆಯಲಾರ. ತಂದೆ ಮುತ್ತಜ್ಜರ ಕಾಲದ ತಾತ್ವಿಕ ಪ್ರಣಾಲಿಗಳಿಗೂ ಇಂದೂ ಅಷ್ಟೇ ಮನ್ನಣೆ ಒದಗಲಿ ಎಂದು ಹಟ ಹಿಡಿದರೆ "ತಾತಸ್ಯ ಕೂಪಮಿತಿ ಬ್ರುವಾಣಾ ಕ್ಷಾರಂ ಜಲಂ ಕಾಪುರುಷಾಃ ಪಿಬಂತಿ" ಎಂಬಂತಹ ಅನಿಷ್ಟಕಾರಕ ಗತಿ ವಿಮರ್ಶನರಂಗಕ್ಕೆ ಉಂಟಾದೀತು! ಆ ದೃಷ್ಟಿಯಿಂದ— "Criticism is a disinterested endeavour to learn and propagate the best that is known and thought in the world, and thus establish a current of fresh and true ideas" ಎಂಬ ಆರ್ನಾಲ್ಡನ ಅಭಿಪ್ರಾಯ ಮಾನ್ಯ ಎನಿಸುವಲ್ಲಿ ಸಂದೇಹದ ಸ್ತೋಕಾಂಶವಿಲ್ಲ!

ಬೇರೊಂದು ದೃಷ್ಟಿಯಿಂದ ಲಕ್ಷಿಸುವಾಗ, ವಿಮರ್ಶಕನ ಸ್ಥಾನಮಾನವು ಹದ್ನನ್ನರ ಕಣ್ಣಲ್ಲಿ ವಿಶಿಷ್ಟವಾಗಿಯೇ ಪರಿಣಮಿಸಿತು. ಈ ಮೊದಲೆ ನಿವೇದಿಸಿ

ದಂತೆ, ವಿಮರ್ಶಕನ ಮೇಲೆ ಕಲಾವಿದನ ಪ್ರಭಾವ ಬಿದ್ದಿದ್ದರೂ ಅವ ರಸಿಕ ಜನತೆಯನ್ನು ಬದಿಗಿರಿಸಲಾರ. ಅವರ ಅಭಿಪ್ರಾಯಗಳನ್ನೂ ವಿಮರ್ಶಕ ತಕ್ಕಡಿಗೇರಿಸಲಾರ. ಜನತೆಯು ಆಹ್ವಾನವನ್ನೂ ಎದುರಿಸಿ ಸಮಂಜಸ ಉತ್ತರ ಸಲ್ಲಿಸುವದು ಅವನ ಹಿರಿ ಹೊಣೆ. ಒಮ್ಮೊಮ್ಮೆ ಅಜ್ಞ ಜನಕ್ಕೆ ಅವ ಜ್ಞಾನದೃಷ್ಟಿ ಒದಗಿಸುವ. ಆಗೂ ವಿಮರ್ಶಕ ಸದ್ಗುರುವಿನಂತೆ! ಜನಸಾಮಾನ್ಯರಲ್ಲಿ ಪ್ರರೂಢವಾದ ತಪ್ಪು ಕಲ್ಪನೆಗಳನ್ನು ತನ್ನ ಪ್ರತಿಭೆಯಿಂದ, ಪ್ರಗಲ್ಭ ವಿಚಾರಗಳಿಂದ ಹೊಡೆದೋಡಿಸುವದು ತನ್ನ ಆದ್ಯಕರ್ತವ್ಯವೆಂದು ಅವ ಅರಿಯುವ, ಹಾಗೇ ಬಿಂಬಿಸುವ. ಇಷ್ಟರಿಂದಲೆ ವಿಮರ್ಶಕನೆಂದರೆ ವಂದಿಮಾಗಧ ಎನ್ನಲಾಗದು. ಆರೋಗ್ಯದ ಬಗೆಗೆ ವ್ಯಾಖ್ಯಾನ ಸಲ್ಲಿಸುವದಷ್ಟೆ ಅವನ ಕಾರ್ಯವಾಗದೆ, ಒಂದೊಂದು ಪ್ರಸಂಗದಲ್ಲಿ ಜಾಗ್ರತಿ (provocation) ಉಂಟುಮಾಡುವದೂ ಅವನ ಸ್ಫುಟ ವಿಚಾರ. ಏನಿದ್ದರೂ ವಿಮರ್ಶೆಗೆ ಗೊತ್ತುಗುರಿಯ ಜೊತೆಗೆ ಕಲಾದರ್ಶನದ ಹೊಣೆಗಾರಿಕೆ ಇರುವದು. ಗಾಳಿಯಲ್ಲಿ ಶಾಸ್ತ್ರೀಯ ತತ್ವ ತೂರಿದಷ್ಟು ಅವನ ಕಾರ್ಯ ಸುಗಮವಾಯಿತೆನ್ನಲಾಗದು. ಅವ್ಯವಹಾರ್ಯ ಪ್ರಮಾಣಗಳಿಂದ ಕಲೆಯ ಸಮ್ಯಕ್ ದರ್ಶನವಾಗುವದೆಂತು? ಕಾಲಕಾಲಕ್ಕೆ ಬದಲಾಗುವ ಜನತೆಯ ಅಭಿರುಚಿಗಳ ಮೇಲೆ 'ಕ್ಷ'ಕಿರಣ ಹರಡಿ ಮನಃಸ್ವಾಸ್ಥ್ಯ ನೆಲೆಗೊಳಿಸುವದು ವಿಮರ್ಶಕನ ಗುರಿಗಳಲ್ಲೊಂದು. "Literature is the comprehensive essence of the intellectual life of a nation" ಎಂದು ಉದ್ಗಾರ ತೆಗೆದ ಫ್ರೆಡ್ರಿಕ್ ಸ್ಕ್ಲೆಗಲ್‌ನ ಅಭಿಪ್ರಾಯ ಸಾಹಿತ್ಯಿಕ ವಿಮರ್ಶೆಗೂ ನೇರವಾಗಿ ಅನ್ವಯಿಸುವದೆಂದು ಬೇರೆ ಹೇಳಬೇಕಾಗಿಲ್ಲ. ವಿಮರ್ಶೆಯಾದರೂ ಮಾನವ ಕೋಟಿಯ ಸಾಹಿತ್ಯಿಕ ಜೀವನದ ಸತ್ಯ. ಕಾವ್ಯಕಲೆಗಳ ಸ್ಥಾನ ಮಾನವಜೀವನದಲ್ಲಿ ಅತ್ಯುನ್ನತವಾಗಿದೆ. ಸತ್ಯವನ್ನರಸುವದೆ ಇವುಗಳ ಗುರಿ. ಪ್ಲೆಟೊ ಹೇಳುವಂತೆ, ಕಾವ್ಯೋಪಾಸನೆ ಸ್ವರ್ಗೀಯ ಹುಚ್ಚೇ. ಲಾಂಜಿನಸ್‌ನ ಕಣ್ಣಲ್ಲಿ ಕಾವ್ಯ ಜಾಜ್ವಲ್ಯಮಾನ ಬೆಳಕಾಗಿ (Illumination) ಪರಿಣಮಿಸಿತು.

ವಿಮರ್ಶಕನಾರು? ಅವನ ರಂಗದ ವ್ಯಾಪ್ತಿ ಏನು? ಎಂಬುದರ ಬಗೆಗೆ ಎಂದಿನಿಂದಲೂ ಊಹಾಪೋಹ ನಡೆದಿದೆ. ಶಿಲ್ಪಶಾಸ್ತ್ರದ ವಿಮರ್ಶಕ ಶಿಲ್ಪಿ; ತೋಟಗಾರಿಕೆಯ ವಿಮರ್ಶಕ ತೋಟಿಗ. ಹಾಗೆಯೇ ಕಾವ್ಯದ ವಿಮರ್ಶಕ ಕವಿಯೆ?--ಎಂದು ಕೇಳುವದು ಸಹಜವಾಗಿದೆ.

ಸಾಹಿತ್ಯದ ವಿಷಯವನ್ನೇ ಎತ್ತಿಕೊಂಡಾಗ ಅಲ್ಲಿ ಅನೇಕ ರಂಗಗಳಿದ್ದುದು ಕಂಡುಬರುವದು. ಲೇಖಕ, ಓದುಗ, ವಿಮರ್ಶಕ--ಈ ಮೂವರ ಕಾರ್ಯ ಕ್ಷೇತ್ರ ವಿಭಿನ್ನವಾಗಿದ್ದರೂ ಮೂವರಿಗೂ ತಳಕು ಇದೆ. ಒಂದೇ ವಿಷಯದ ಬಗೆಗೆ ಮೂವರೂ ಸ್ವಾನುಭವ ಅಭಿವ್ಯಕ್ತಗೊಳಿಸುವರು. ತಮ್ಮ ಅನುಭವಗಳನ್ನು ಕ್ರೋಢೀಕರಿಸಿ ಬ್ರಹ್ಮಾನಂದಪಡೆಯುವದು ಮೂವರ ಸೊತ್ತೇ. ಆದರೆ

ಇವರ ರೀತಿಗಳನ್ನು ಅಭ್ಯಸಿಸುವದು ನಿಜಕ್ಕೂ ರಂಜಕ, ರೋಮಾಂಚಕ, ಬೋಧಪ್ರದ. ಲೇಖಕನು ಒಂದು ಮೋಹಕ ಸನ್ನಿವೇಶ ಬಣ್ಣಿಸುವ. ಅವನ ರೀತಿ ಅವನದೆ. ಆದರೆ ಅದನ್ನೇ ಪ್ರತಿಯಾಗಿ ಸೃಷ್ಟಿಸಿ ಕಲೆಯ ದೃಷ್ಟಿಯಿಂದ, ತಾತ್ವಿಕವಾಗಿ, ತಾರ್ಕಿಕವಾಗಿ ಮೂಲ ನಿರ್ಣಯ ಉಸುರುವದು ವಿಮರ್ಶಕನ ಹೊಣೆ. ವಿಮರ್ಶಕನಲ್ಲಿ ಸೂಕ್ಷ್ಮತೆ, ಸೌಕುಮಾರ್ಯ, ಶಾಸ್ತ್ರೀಯತೆಯ ಬಲ ಹೆಚ್ಚಿದ್ದಷ್ಟೂ ಅವನ ಮಾತಿಗೆ ಪ್ರಾಮಾಣ್ಯ ಉಂಟಾಗುವದು. ಏನಿದ್ದರೂ ವಿಮರ್ಶಕನೂ ಒಬ್ಬ ಓದುಗನೆ. ಆದಕ್ಕೂ ಹೆಚ್ಚಾಗಿ ಅವ ರಸಿಕ. ನಿರ್ಣಾಯಕ ಬುದ್ಧಿ ಅವನ ಜೀವಾಳ. ಚಿತ್ರಪಟಗಳ 'Censor Board'ದ ಕರ್ತವ್ಯದಂತೆ ಇವನೂ ತನ್ನ ಪಾಲಿನ ನಿರ್ಣಯದ ಹೊಣೆ ತೀರಿಸಬೇಕು. ಲೇಖಕನಾದವನನ್ನು ಒಬ್ಬ ಸಾಮಾನ್ಯ ಎಂಜಿನಿಯರನಿಗೆ ಸಹಜವಾಗಿ ಹೋಲಿಸಬಹುದು. ಅವನು ಮಾಡಿದ ಕೆಲಸದ ನೆಲೆ ಬೆಲೆ ನಿರ್ಣಯಿಸುವವ ಬೇರೊಬ್ಬ ತಜ್ಞ ಅಧಿಕಾರಿ. ವಿಮರ್ಶಕನ ಕಾರ್ಯವೂ ಅಧಿಕಾರಿಯಂತಹದೆ! ವಿಮರ್ಶಕನಲ್ಲಿ ಹೀಗೆ ಸಮಗ್ರತೆಯ ಕಲ್ಪನೆಯಲ್ಲದೆ, ಸ್ವಾನುಭವ, ಕಲಾಪ್ರಜ್ಞೆ ಧಾರಾಳವಾಗಿ ನೆಲಿಸಿರುವದು ಅತ್ಯಗತ್ಯ. ಸಾಮಾಜಿಕ ಪ್ರಜ್ಞೆಯೂ ಅವನ ಬೆಂಬಲಕ್ಕಿರಬೇಕು. ಕಲೋಪಾಸಕನೊಬ್ಬ ನಿರ್ಮಿಸಿದ ಕಲಾಕೃತಿ ಯಾವ ಮಟ್ಟದಲ್ಲಿ ಹರುಷ ಹುಟ್ಟಿಸುವದೆಂದು ಹೇಳುವದು ವಿಮರ್ಶಕನ ಕಾರ್ಯ. ಕಾವ್ಯದ ಬಗೆಯಲ್ಲಿ ವಿಮರ್ಶಕನ ಸ್ಥಾನ ಉಸಿರಬೇಕಾದರೆ ನಾವು, "To judge of poets is only the faculty of poets" ಎಂದು ಹೇಳಬೇಕಾದೀತು.

ಕಲೆಯ ಒಂದು ರೂಪವಾದ ಕಾವ್ಯದ ವಿಮರ್ಶೆಗೆ ತೊಡಗಿದಾಗ, ನೀತಿಯ (Morality) ಪ್ರಶ್ನೆ ಏಳುವದು. ಇದರಲ್ಲಿ ಭಿನ್ನಾಭಿಪ್ರಾಯಕ್ಕೆ ಎಡೆ ಇದೆ. ಕಾವ್ಯದ ಸ್ವರೂಪವನ್ನೇ ನಾವು ಮೊಟ್ಟಮೊದಲು ನಿರೀಕ್ಷಿಸಿದರೆ, ಇಂಗ್ಲಂಡದ ಪ್ಯುರಿಟನ್ನರು ಅದರ ಬಗೆಗೆ ಸದಭಿಪ್ರಾಯ ತಳೆದಿರಲಿಲ್ಲ. ರಸ್ಕಿನ್ನನು ಕಾವ್ಯದ ಬಗೆಗೆ ಆದರ ಉಳ್ಳವನಾಗಿದ್ದ. "All art that was art was of divine origin; it was the witness of the glory of gods" ಎಂಬ ಕಲ್ಪನೆ ವಿಕ್ಟೋರಿಯನ್ ಕವಿಗಳಿಗಿತ್ತು. ರಸ್ಕಿನ್ನನಿಗಾಗಲಿ ಪ್ಲೆಟೊವಿಗಾಗಲಿ ನೀತಿಯು ಕಾವ್ಯದಿಂದ ವರ್ಜಿತವಾಗಬೇಕೆ, ಬೇಡವೆ ಎಂಬ ಪ್ರಶ್ನೆ ಇತ್ತು.

ವಿಮರ್ಶಕನಿಗೆ ಸಾಹಿತ್ಯದ ಸ್ವರೂಪದ ಪ್ರಜ್ಞೆ ಇರಬೇಕಾದುದವಶ್ಯ, ಡ್ರೈಡನ್ನನು ಸಾಹಿತ್ಯಕ್ಕೆ ಅಪರಿಮಿತ ಅಂತಃಶಕ್ತಿಯುಂಟೆಂದು ನಿರೂಪಿಸಿದ. ಜನಾಂಗದ ಪ್ರಗತಿಗೆ ಅನುಗುಣವಾಗಿ ಅದರ ಬೆಳವಣಿಗೆ ಎಂದು ಸಾಧಿಸಿದ. "Art is dynamic and not a static force" ಎಂಬುದು ಅವನ ವಾದ.

ಇದೇ ಸನ್ನಿವೇಶದಲ್ಲಿ ಜನತೆಗೂ ಕಾವ್ಯಕ್ಕೂ ಏನು ಸಂಬಂಧ ಎಂಬ ಪ್ರಶ್ನೆ ತಲೆದೋರುವದು. (ಡ್ರೈಡನ್ನನ ಕಾಲಕ್ಕೆ ಕಲೆಗಾಗಿ ಕಲೆ ಎಂಬ ವಾದ

ಉದ್ಭವಿಸಿರಲಿಲ್ಲ). ಆ ಸಮಸ್ಯೆಯೇ ಮುಂದೆ ಕಾಲಾಂತರದಲ್ಲಿ ಕಾವ್ಯದ ಉದ್ದೇಶ ಜ್ಞಾನ, ರಂಜನೆ ಎಂಬ ವಾದಕ್ಕೆ ಎಡೆ ಕಲ್ಪಿಸಿತು. ಅದಕ್ಕೆ ಲಾಂಜಿನಸ್ ಭಾವನಿರ್ಭರತೆಯನ್ನೊಂದು ಹೊಂದಿಸಿದ. ಅಂತೂ ' My chief endeavours are to delight the age in which I live" ಎನ್ನುವ ಮಟ್ಟಿಗೆ ಕಾವ್ಯದ ಸ್ವರೂಪ ಮುಟ್ಟಿತು.

ಇಷ್ಟಕ್ಕೆ ಈ ಚರ್ಚೆ ಕೊನೆಗೊಳ್ಳದೆ ಕಲೆಯ ಸ್ವರೂಪದ ವಿವೇಚನೆ ಮುಂದುವರಿಯಿತು. "Art does not aim at mere copying, but at making a beautiful resemblance of the whole" ಎಂಬ ಅಭಿಪ್ರಾಯ ಉದ್ಭೂತವಾದಾಗ ಕಲೆ ಕೇವಲ ಅನುಸರಣೆ ಆಗಲಿಲ್ಲ. ಅಲ್ಲಿ ಸೃಜನಾತ್ಮಕ ಶಕ್ತಿ, ಸೌಂದರ್ಯಮೀಮಾಂಸೆ ಕೂಡ ತಲೆ ಎತ್ತಿದವು.

ಸಾಮಾನ್ಯವಾಗಿ ಕವಿಯನ್ನು ಗಡಿಯಾರನಿರ್ಮಾಪಕ ಇಲ್ಲವೆ ಕಮ್ಮಾರನಿಗೆ ಹೋಲಿಸುವದುಂಟು. ಅವನ ನಿರ್ಮಾಪಕ ಕೌಶಲಕ್ಕೆ ಪೋಷಕವಾದುವು ಕಬ್ಬಿಣ ಬೆಳ್ಳಿ. ತನ್ನ ಪ್ರತಿಭೆಯಿಂದಲೆ ಕವಿ ವಿಡಂಬಿಸುವ; ಅಳಿಸುವ ನಗಿಸುವ. ಜೀವನದ ಸರ್ವಸಾಮಾನ್ಯ ಘಟನೆಗಳೆ ಕವಿಯ ಸ್ಫೂರ್ತಿಗೆ, ರಸಭಾವಗಳಿಗೆ ಕಚ್ಚಾಸರಕು(Raw Products)ಗಳು.

ಕಾವ್ಯದ ವಿಷಯವನ್ನೇ ಮುಂದುವರಿಸಿದರೆ ಶೆಲ್ಲಿಯ ವ್ಯಾಖ್ಯೆ ನಮ್ಮ ಕಣ್ಕಟ್ಟುವದು. "Poetry is the record of the happiest and the best moments of happiest and the best minds" ಎಂಬ ಅವನ ಉದ್ಗಾರ ಅರ್ಧ ಸತ್ಯ ಎನಿಸುವದು. ಅದೇ ಕವಿಯ ವಿಲಾಪಗೀತೆಗಳೆನಿಸಿ ಲೋಕ ವಿಖ್ಯಾತಿಗಳಿಸಿದ " Adonais Alaster " ಕಾವ್ಯಗಳನ್ನು ಆ ರಂಗದಿಂದ ತಳ್ಳಬೇಕೆ? "Our sweetest songs are those that tell of saddest thoughts" ಎಂಬ ಶೆಲ್ಲಿಯ ಹೃದಯಸ್ಪರ್ಶಿ ಪಂಕ್ತಿಗಳಲ್ಲಿ, ಅವನ ಪ್ರಕಾರವೇ ಉನ್ನತ ಮಟ್ಟದ ಕಾವ್ಯಗುಣ ಇಲ್ಲವೊ ಹೇಗೆ? ' Excellent Action ' ಸತ್ಕೃತಿಯನ್ನೆ ಕಾವ್ಯದ ಗುರಿಯಾಗಿರಿಸಿಕೊಂಡರೆ, ಸಾಹಿತ್ಯದಲ್ಲಿ ಅಮೃತತ್ವಪಡೆದ ಇಬ್ಸೆನ್, ವಾಲ್ಟ್ ವ್ಹಿಟ್‌ಮನ್, ಹಾರ್ಡಿ, ತೆಹಖೋವ್, ಫ್ಲೊಬಾ ಇವರ ಗತಿಯೇನು? ಇಂತು ಕಾವ್ಯದ ಪರಿಮಿತಿ ವಿಶ್ವದಂತೆ ಅಪಾರ. ಹಾಗೆಯೇ ವಿಮರ್ಶಕನ ಗತಿ ಕೂಡ. ಕೊನೆಗೆ ನೀತಿಗೂ ಕಲೆಗೂ ವಿಮರ್ಶೆಗೂ ನಿಕಟಸಂಬಂಧವಿದೆಯೆಂದು ಉದಾಹರಿಸಲು ಚೆಸ್ಟರಟನ್‌ರ– " But it is a bad principle if it means that the tree could grow just as well with its roots in the air " ನುಡಿಯನ್ನು ನೆನಪಿಸಿಕೊಳ್ಳಬೇಕು. ಇದೀಗ ಕಲೆ, ವಿಮರ್ಶೆ, ನೀತಿಯ ವ್ಯಾಪ್ತಿ!

★ ಎನ್. ಎಸ್. ಗದಗಕರ

ರೋಗ, ತಾರುಮಾರುಗಳು

ಜೀವವಿಲ್ಲದೆ ರೋಗವಿಲ್ಲ. ಜೀವಿಗಳಿಗೆಲ್ಲ ರೋಗ ಹತ್ತುತ್ತದೆ; ಬಹುಶಃ ಜೀವಿಗಳಿಗೂ ರೋಗ ತಪ್ಪಿದ್ದಲ್ಲ. ಜೀವದ ಪ್ರಪಂಚದಲ್ಲಿ ಇರುವುದರಿಂದ, ಬೇನೆಬೀಳುವುದನ್ನೂ ಜೀವವಿಜ್ಞಾನದ (biology) ಒಂದು ಅಂಗವಾಗಿ ಕಲಿಯ ಬೇಕು. ಅಂದರೆ, ಅದೇ ನಿಟ್ಟು, ಅದೇ ವಿಜ್ಞಾನ, ಅದೇ ಪ್ರಯೋಗ ಮಾಡಿ ನೋಡುವುದು, ಖಚಿತವಾಗಿ ಲೆಕ್ಕ ಹಾಕುವ ಅದೇ ವಿಧಾನ ಇಲ್ಲೂ ಬಳಕೆಗೆ ಬರಬೇಕು. ಈ ಹೊಸ ಭಾವನೆ ಒಪ್ಪಿಗೆಯಾಗಿರುವುದು ಕೇವಲ ಇತ್ತೀಚಿನ ಶತಮಾನಗಳಲ್ಲಿ ಮಾತ್ರ.

ಪುರಾತನ ಕಾಲದಲ್ಲಿ ಬಲ್ಲಿದರು ಎನಿಸಿಕೊಂಡವರು ರೋಗಗಳ ವಿಚಾರ ಮಾಡುವಾಗ, ತಾವು ಕಣ್ಣಿಂದ ಕಂಡಿದ್ದನ್ನು ಬಣ್ಣಿಸುವುದು, ರೋಗಿ ತನಗೆ ಏನಾಗುತ್ತಿದೆ ಎನ್ನುವುದನ್ನು ಗುರುತಿಸಿಟ್ಟುಕೊಳ್ಳುವುದು, ಒಂದು ಪೂರ್ಣ ಕಲ್ಪನೆ ಬರುವಂತೆ ಕೇವಲ ರೋಗಲಕ್ಷಣಗಳನ್ನು ಒಟ್ಟೈಸುವುದು, ಹೀಗೆ ಬಂದ ತಿಳುವಳಿಕೆಯನ್ನು ಒಂದಾಗಿ ಕಂಡು ಹೆಸರಿಡುವುದನ್ನು ಬಿಟ್ಟರೆ ಇನ್ನಾವ ಅನು ಕೂಲವೂ ಅವರ ಕೈಲಾಗುತ್ತಿರಲಿಲ್ಲ.

ಮೈಯ ಅಂಗರಚನೆಯನ್ನು ಹಿಗ್ಗಿದ ಅರ್ಥದಲ್ಲಿ, ಅಂದರೆ ಅಂಗಗಳ ಅಲ್ಲದೆ ಕಣಜಾಲಗಳ (tissues) ರಚನೆಗಳನ್ನೂ ನಿಜಗೆಲಸಗಳನ್ನೂ (functions) ಕಲಿಸಲಿಟ್ಟವರಲ್ಲಿ ಮೊದಲಿಗ ಬಿಷಾಟ್. ಯೂರೋಪಿನಲ್ಲೆಲ್ಲ ಆಗಿನ ಕಾಲದಲ್ಲಿ ಈ ನವಕಲ್ಪನೆಯನ್ನು ವಿಶೇಷ ಉತ್ಸುಕತೆಯಿಂದ ಆದರಿಸಿ ಜಾರಿಗೆ ತಂದರು ರೋಗಲಕ್ಷಣಗಳಿಗೂ ಅಂಗಾಯಗಳಿಗೂ (lesions) ಹೊಂದಾಣಿಸುವುದರ ಸತ್ವ ವನ್ನು ಕಾಣಬಯಸಿದರು. ರೋಗದ ನಿಜಗುಣವನ್ನು ಕಂಡುಕೊಳ್ಳುವುದರಲ್ಲಿ ಲೆನ್ನೆಕ್ ಬಹುವಾಗಿ ಬಳಸಿದ ಇಂತಹ ಕ್ರಮಬದ್ಧ ಹೋಲಿಕೆ ಅಡಿಗಲ್ಲಾ ಯಿತು. ಅಂಗಗಳಿಗೆ ತಗಲುವ ಪೆಟ್ಟು, ಗಾಯ(ಅಂಗಾಯ)ಗಳನ್ನು ಇದು ನೆ ಗೊಳಿಸಿತು. ರೋಗದ ಲಕ್ಷಣಗಳನ್ನು ಅಂಗಾಂಗಗಳಲ್ಲಿ ಹೊರಗಾಣುವ ಮು ತಿಳಿಯುವ ಪರಿಣಾಮಗಳಿಗೆ ಸಂಬಂಧಿಸಲಾಯಿತು. ವಿಪರೀತ ವಿರುದ್ಧವಾ ತೋರುವ ಅನೇಕ ಲಕ್ಷಣಗಳು ಒಂದೇ ಕಾರಣದಿಂದ ಹುಟ್ಟಿರಬಹುದೆಂದು ಪರಿಶೀಲನೆಗಳಿಂದ ಗೊತ್ತಾದುವು. ಇದರ ಚೆನ್ನಾದ ಉದಾಹರಣೆ, ಕ್ಷಯರೋ ಕೆಲವೇಳೆ ಈ ರೋಗಹತ್ತಿದ ಕಣಜಾಲವನ್ನೆಲ್ಲ ಗಡಸುಗಟ್ಟಿಸುವುದು (ಪೆಡಸ sclerosis); ಹಲವೆಡೆಗಳಲ್ಲಿ ಮೆತುಗೊಳಿಸಿ ನೀರಾಗಿಸುವುದು (ತಣ್ಣ ಕು cold abscess); ಇನ್ನು ಹಲವಾರು ಕಿರಿಯ ಅಂಗಗಳಲ್ಲಿ ಉ (inflammation) ಎಬ್ಬಿಸಿ ಮೊದಲಿದ್ದ ಕಣಜಾಲಕ್ಕೆ ಯಾವ ಹೋಲಿಕೆಯ ಉಳಿಯದ ಒಂದು ತೆರನ ಗಿಣ್ಣಿನಂತಹ ವಸ್ತುವಾಗಿ ಮಾರ್ಪಡಿಸುವುದು ಕ ಇವೇ ಕ್ಷಯ.

ಇನ್ನೊಂದು ಕೊರತೆಯಂತೂ ಇನ್ನೂ ಹೆಚ್ಚಿನ ತಲೆನೋವಿಟ್ಟಿತು. ಅನೇಕ ತಾರುಮಾರುಗಳು ಅಂಗರಚನೆಯಲ್ಲಿ ಕಾಣಿಸಿಕೊಳ್ಳಲೇ ಇಲ್ಲ. ಕೆಲವರು ವೈದ್ಯರಂತೂ ಆಗ ರೋಗವೇ ಇಲ್ಲವೆಂದರು. ಇಷ್ಟೇ ಅಲ್ಲ, ಇವೆಲ್ಲ ಕೇವಲ ರೋಗಿಗಳ ಮನಸ್ಸಿನ ಕಲ್ಪನೆ ಎಂದೂ ಹೇಳಿದರು. ಅಂಗರಚನೆಯ ಕಣ್ಣರಿಕೆಯನ್ನು ಜೀವ ಕಣಗಳ ಮಟ್ಟಕ್ಕೂ ಸಾಗಿಸಿದ ಮಿಣಿದರ್ಶಕ(microscope)ವಾಗಲಿ, ಜೀವ-ಕಣಗಳೊಳಗಿನ ಅಣುವಿನ ಮಟ್ಟಕ್ಕೂ ತೆಗೆದುಕೊಂಡುಹೋದ ವಿದ್ಯುದಂಶ ಮಿಣಿದರ್ಶಕ(electron microscope)ವಾಗಲಿ, ಅಂಗರಚನೆಯ ವಿಧಾನದ ತಿಳುವಳಿಕೆಯ ಆಳದುದ್ದದ ಮಿತಿಗಳಿಗೆ ಹೊಯ್ಯಲಿಲ್ಲ. ರಚನೆಯ ವಿಚಾರ ಎಷ್ಟೇ ಆಳದಾಳಕ್ಕಿದ್ದರೂ ಯಾಂತ್ರಿಕತೆ, ನಿಜಗೆಲಸಗಳೇನು ಎಂಬುದರ ಸುಳಿವೇ ನೀಡದು.

ಆರೋಗ್ಯವಂತ ಜೀವಿಸಿರುವ ಕಣಜಾಲವೂ ರೋಗಹತ್ತಿದ ಬದುಕಿರುವ ಕಣಜಾಲವೂ ಬೇರೆಯಲ್ಲ,. ಒಂದೇ ತೆರನಾದವು ಎಂದ ಕ್ಲಾಡ್ ಬರ್ನಾರ್ಡ್, ರೋಗದ ಕಲ್ಪನೆಯಲ್ಲಿ ನಿಶ್ಚಿತವಾದ ಬದಲಾವಣೆ ತಂದನು. ಹೀಗೆನ್ನುವುದರಿಂದ ಅಂಗೆಲಸಶಾಸ್ತ್ರದಲ್ಲಿ (physiology) ಆಗಲೇ ಇರುವ ಪ್ರಯೋಗದ ವಿಧಾನಗಳಿಂದಲೇ ರೋಗಿಯನ್ನೂ ಪರೀಕ್ಷಿಸುವಂತಾಯಿತು. ಇಂತಹ ವಿಧಾನಗಳ ಬಳಕೆಯಿಂದ ಮಾತ್ರವೇ ಮಾನವಯಂತ್ರದ ಕೊನೆಯ ಗುಟ್ಟುಗಳನ್ನು ಕಾಣಬೇಕು. ಮಿಣಿದರ್ಶಕವನ್ನು ಬಳಸುವಂತೆಯೇ ಅಂಗೆಲಸಶಾಸ್ತ್ರವನ್ನೂ ಬಳಸುವುದನ್ನು ವೈದ್ಯ ಕಲಿಯಬೇಕಾಯಿತು.

ಮೊಟ್ಟಮೊದಲಾಗಿ, ರೋಗವನ್ನು ಸರಿಯಾದ ಚೌಕಟ್ಟಿನಲ್ಲಿ, ಅಂದರೆ ಜೀವಿಜ್ಞಾನದಲ್ಲಿ, ಇರಿಸಲಾಯಿತು.

ಕಣಜಾಲಗಳಲ್ಲಿನ, ಪೆಟ್ಟು, ಗಾಯಗಳ ತೋರಿಕೆಯ ಹಿನ್ನೆಲೆಯಾಗಿ, ರೋಗಲಕ್ಷಣಗಳನ್ನು ನಿರ್ಧರಿಸಿದ ಏರುಪೇರುಗಳನ್ನು ಮರುಜೋಡಿಸಿ, ಮೊದಲಿನ ಕಾರಣವನ್ನು ಅಣಗಿಸಿಯೋ, ನಡುವಣ ಹಂತಗಳಿಗೆ ಆಟಂಕಿಸಿಯೋ ಚಿಕಿತ್ಸೆ ಮಾಡುವುದು ಸಾಧ್ಯವಾಯಿತು. ಉಳಿದೆಲ್ಲ ಮೂಲವಿಜ್ಞಾನಶಾಖೆಗಳೂ ಈ ದಿಸೆಯಲ್ಲಿ ನೆರವಾದುವು.

ರೋಗಶಾಸ್ತ್ರದ (Pathology) ತೊಡಕುಗಳ ಬಗೆಹರಿಸುವುದರಲ್ಲಿ ಬಳಸಿದ ಲೆಕ್ಕವಿಲ್ಲದ ಅಂಗೆಲಸಶಾಸ್ತ್ರದ ನೆಲೆಗಾಣ್ಕೆಗಳೇ ಶಸ್ತ್ರವೈದ್ಯ, ಅರಿವಳಿಕೆ ಶಾಸ್ತ್ರ(anaesthesiology)ಗಳಲ್ಲಿನ ಅಗಾಧ ಮುನ್ನಡೆಗೆ ಕಾರಣವಾದುವು. ಇಂದಿನ ವಿಜ್ಞಾನಕ ವೈದ್ಯದಲ್ಲಿ ಎಲ್ಲೆಲ್ಲೂ ಬಳಸುತ್ತಿರುವ, ಅದರಲ್ಲೂ ಒಳಸುರಿಕ (endocrine) ಸುರಿಕೆಗಳಂತಹ ರಸಾಯನಿಕ ಜೈವಿಕ ಸಂಯುಕ್ತಗಳ ಕೃತಕ ತಯಾರಿಕೆ, ಸಾರವಿಳಿಕೆಯಲ್ಲೂ ಅಷ್ಟೇ ಸರಿ.

ಕೆಲವು ಕಾಲ ಪ್ಯಾಶ್ಚರ್ ಮತ್ತವನ ಏಕಾಣುಜೀವಿಜ್ಞಾನದ(bacterio-

logy) ಒಂದಿಗರ ಅಸಾಧಾರಣ ನೆಲೆಗಾಣ್ಕೆಗಳಿಂದ, ತಿಳುವಳಿಕೆ ಪಡೆಯುವ
ಸಾಧನವಾಗಿ ಅಂಗೆಲಸಶಾಸ್ತ್ರ ಹಿಂದೆ ಬಿದ್ದಿತು. ಸೋಂಕಂಟಿಸುವ ಕಾರಕಗಳು,
ಖಕಾಣುಜೀವಿಗಳು, ವಿಷಕಣಗಳನ್ನು ಅವರು ಗುರುತಿಸಿದ್ದು ವೈದ್ಯದಲ್ಲಿ ಕ್ರಾಂತಿ
ಎಬ್ಬಿಸಿತು. ಅಲ್ಲಿಂದೀಚೆಗೆ ಹೆರ ವಸ್ತುವೊಂದು ಮಾನವನಲ್ಲಿ ಒಳಹೊಗುವುದ
ರಿಂದ ರೋಗದ ಲಕ್ಷಣ, ಚಿನ್ನೆಗಳನ್ನು ವಿವರಿಸುತ್ತ, ಸೋಂಕಂಟಿಸುವ ಕಾರಕದಿಂದ
ರೋಗದ ಗುಣ ಗುರುತಾಯಿತು. ಹೀಗೆ ರೋಗವನ್ನು ಹೋಗಲಾಡಿಸಲು,
ಬೇಡದ ಹೆರ ಜೀವಿಯನ್ನು ಅದರ ಸಾಗಣೆ, ಒಳತೂರಿಕೆ, ಇಲ್ಲವೇ ರೋಗಿಯ
ಕಣಜಾಲಗಳು ಜೀವಕಣಗಳಲ್ಲಿನ ಪರಪಿಂಡಿ (parasite) ಜೀವನಕ್ಕೆ ಅಡ್ಡಿಪಡಿ
ಸುವುದರಿಂದ ಆಗುವುದೆಂದಾಯಿತು. ಇಂದು ಈ ಕೆಲಸ ಪೆನಿಸಿಲಿನ್‌ನಂತಹ
ಜೀವಿರೋಧಕ(antibiotic)ಗಳ ಬಳಕೆಯಿಂದ ಆಗುತ್ತಿದೆ.

ಲಸಿಕೆ (vaccine) ಹಾಕುವುದರಿಂದಲೂ ಖಕಾಣುಜೀವಿರೋಧಕ ಚಿಕಿತ್ಸೆ
ಯಿಂದಲೂ ಎದ್ದುಕಂಡಂತೆ ಚಿಕಿತ್ಸೆ ಕೈಗೂಡಿದ್ದರಿಂದ ವಿವಾದಗಳು ಮುರಿದು
ಬಿದ್ದವು. ಎಂದಿನಂತೆ ಅನೇಕ ತಾರುಮಾರುಗಳು (disorders), ಬೇನೆಗಳು
ಹೊರಗಿಂದ ಬಂದವಿಂದ ಆದುವೆಂದು ಕಾಣಲಾಯಿತು. ಹೆರ ಜೀವಿಗಳನ್ನು
ಕಂಡುಬಿಟ್ಟರೆ ಚಿಕಿತ್ಸೆ ಕೈಗೂಡಿದಂತೆ ಆಯಿತು ಎಂದರು ಅನೇಕರು. ಬೇರೆ
ಕಾರಣಗಳಿಂದಾದ ಅನೇಕ ರೋಗಗಳನ್ನೂ, ಹೆರ ಜೀವಿಗಳು ಒಳಹೊಕ್ಕದ್ದ
ರಿಂದಲೇ ಆದವೆಂದು ತಪ್ಪಾಗಿ ಕಂಡರು.

ರೋಗಗಳನ್ನು ತಡೆಗಟ್ಟುವುದರಲ್ಲಿ ಖಕಾಣುಜೀವಿಜ್ಞಾನದ ನೆರವು
ಕ್ರಾಂತಿ ಎಬ್ಬಿಸಿತು. ಪರಿಸರದಲ್ಲಿರುವ ಪರಪಿಂಡಿಗಳು ಮಾನವನನ್ನು
ಮುಸುರುವುದನ್ನು ತಪ್ಪಿಸಿತು. ಆರೋಗ್ಯಗೊಳಿಕ ಏರ್ಪಾಡುಗಳನ್ನು ಪೂರ್ತಿ
ಬದಲಾಯಿಸಿ ಇನ್ನೂ ಬೇರೆ ಅನುಕೂಲಗಳನ್ನೂ ದೊರಕಿಸಿತು. ಆದರೆ ದಿನ
ಗಳು, ವರುಷಗಳು ಉರುಳಿದಂತೆ, ರೋಗದ ಕಲ್ಪನೆಯು ಸೂತ್ರಮಂತ್ರ
ಖಕಾಣುಜೀವಿಜ್ಞಾನದ ತಿಳುವಳಿಕೆಯಿಂದ ಊಹಿಸಿದ್ದಷ್ಟು ಬೇರುಮುಟ್ಟಿ ಬ
ಲಾಗಲಿಲ್ಲ ಎನ್ನುವುದು ಹೊರಬಿದ್ದು ಮನದಟ್ಟಾಯಿತು.

ಸೋಂಕಂಟಿಸುವ ಕಾರಕವೊಂದು ಮೈ ಒಳಹೊಕ್ಕರೂ ಗೊತ್ತಾಗುವಂ
ರೋಗ ಕಾಣಿಸಿಕೊಳ್ಳಲೇಬೇಕಿಲ್ಲವೆಂದು ತೋರಿಸಲಾಯಿತು. ರೋಗ
ಯಾವ ಲಕ್ಷಣಗಳನ್ನೂ ಹೊರದೋರದೆ, ಆರೋಗ್ಯವಾಗಿ ಕಂಡರೂ ಸೋಂಕ
ಟಿರುವವರೇ ರೋಗವನ್ನು ಹರಡಲು ಕಾರಣರೂ ಆಗಬಹುದು. ಜೀವಾ
ಗಳನ್ನು ಹೊತ್ತವರನ್ನೂ, ಹೊರಗಾಣಿಸದ ರೋಗವಿರುವವರನ್ನೂ ಕಂ
ಕೊಂಡಿದ್ದರಿಂದ, ಹೆರಜೀವಿಗಳು ಮೈಯಲ್ಲಿ ಸೇರಿದ್ದರೂ ಜೀವಿಗಳು ತಮ
ಎಂದಿನ ನಿಜಗೆಲಸಗಳಲ್ಲಿ ನಿರತರಾಗಿರಬಲ್ಲವು ಎಂದಾಯಿತು.

ಜೀವಿಯನ್ನು ಕಾಪಿಡಲಿರುವ ವಿಶೇಷಿತ ಅಂಗೆಲಸದ ಮಂಡಲಗಳ ಸ

ತಂಡವೇ ಈ ವಿಟಾಂಶಗಳಿಂದ ಹೊರಬಿದ್ದಿತು. ಇಂದಿಗೂ ಬೆಳೆಯುತ್ತಿರುವ, ರೋಗದೆದುರು ಮರೆಯೀವ, ಮರೆವಣೆಶಾಸ್ತ್ರವೆಂಬ (immunology) ಹೊಸ ಶಾಸ್ತ್ರಕ್ಕೆ ಇದು ಮೂಲವಾಯಿತು.

ಕ್ರಮ, ತಾರುಮಾರುಗಳು :

ಅಂಗಾಯುಗಳು ಕಾಣಿಸಿಕೊಳ್ಳುವ ಮುನ್ನ ನಿಜಗೆಲಸದಲ್ಲಿ ವ್ಯತ್ಯಾಸ ತೋರುತ್ತದೆ. ಇಂತಹ ವ್ಯತ್ಯಾಸಗಳು ಕಿರಿಯ ರಕ್ತನಾಳಗಳಲ್ಲಿ ಕಾಣುತ್ತವೆ. ಆದುದರಿಂದಲೇ ರೋಗವನ್ನು ಸರಿಯಾಗಿ ತಿಳಿಯಬೇಕಾದರೆ, ಅಂಗಾಯುದಿಂದ ದೂರವಾಗಿ ಅಂಗಗಳ ಒಂದೊಂದೇ ನಿಜಗೆಲಸದಾಚೆ ವ್ಯತ್ಯಾಸಗಳು ಕಾಣಿಸುವ ಮುನ್ನ ಆಗುವ ತಾರುಮಾರುಗಳನ್ನು ಮೊದಲು ಗುರುತಿಸಬೇಕು.

ಜೀವಿಯೊಳಗಿನ ಪರಿಸರವನ್ನು ಸಮತೋಲನದಲ್ಲಿ ಇರಿಸುವುದರ ಹೆಚ್ಚಳಿಕೆಯನ್ನು ಪ್ರಪಂಚಕ್ಕೆ ತೋರಿಸಿ ಮೊದಲು ವಿವರಿಸಿ ಹೇಳಿದವನು ಕ್ಲಾಡ್ ಬರ್ನಾರ್ಡ್. ಒಂದೊಂದೆಡೆಯಲ್ಲೂ ಒಂದೊಂದು ಗಳಿಗೆಯಲ್ಲೂ ತಕ್ಕ ಪ್ರಮಾಣಗಳಲ್ಲಿ ಒಂದೊಂದು ಜೀವಕಣದಲ್ಲೂ ಜೀವನಕ್ಕೆ ತಕ್ಕ ಸರಿಸಮನಾದ ಸ್ಥಿತಿಗಳು ಇರಲೇಬೇಕು. ಈ ಪರಿಪೂರ್ಣಸ್ಥಿತಿಗೆ ಬರಲು ಒಳಗಿಂದಲೋ ಹೊರಗಿಂದಲೋ ಎದ್ದುಬರುವ ಎಡೆಬಿಡದ ಏರುಪೇರುಗಳನ್ನು ಕಟ್ಟುನಿಟ್ಟಾಗಿ ಸರಿಹೊಂದಿಸಲೇಬೇಕು.

ಜೀವನಕ್ಕೆ ಬೇಕೇಬೇಕಿರುವ ಪಾಡುಗಳಲ್ಲಿ ಒಂದೊಂದೂ ಕರಾರುವಾಕಾದ ಅಂಕೆಗೆ ಒಳಪಟ್ಟಿರುವುದು. ಮೈಯಲ್ಲಿರುವ ಅನೇಕಾನೇಕ ಅಂಗಗಳು ಇದರಲ್ಲಿ ಪಾತ್ರವಹಿಸುತ್ತವೆ. ಚೋದಿಸುವ, ಕುಂಗಿಸುವ ಎರಡು ಎದುರು ಬಲಗಳ ಅಂತರಾಟದಿಂದ ಸಮತೋಲ ಏರ್ಪಡುತ್ತದೆ. ಮೈಯೊಳಗಿನ ಪರಿಸರ ಸರಿಸಮ ಆಗಿರುವುದರಿಂದ ಹೊರಗಣ ಪರಿಸರವನ್ನು ಜೀವಿ ನೇರವಾಗಿ ನೆಚ್ಚಿಕೊಳ್ಳಬೇಕಿಲ್ಲ.

ಸಾಕಷ್ಟು ಹೆಚ್ಚಾಗಿದ್ದು ಹೊಂದಾಣಿಕೆ ಪರಿಣಾಮಕರ ಆಗದಷ್ಟು ಕಾಲವೂ ಇದ್ದೇ ಇರುವ ಈ ಹೊಂದಿಕೆಗಳಿಗೆ ಎರಗುವ ಯಾವ ಕೆಡುಕಾದರೂ ಸರಿಯೆ, ರೋಗವಾಗಿ ಕಾಣಿಸಿಕೊಳ್ಳುತ್ತದೆ. ಮೊದಮೊದಲೋ ಬೆಳೆವಾಗಲೋ ಹೊಂದಿಕೆಗಳಿಗಾಗುವ ಯಾವುದೇ ತೆರನ ಕೆಡುಕೂ ಆಗದೆ ರೋಗ ಎನ್ನುವುದೇ ಇಲ್ಲ. ಈ ಸಮತೋಲ ಹೊಂದಿಕೆಗಳಲ್ಲಿ ನರದ ಮಂಡಲದ ಪಾತ್ರ ಸಣ್ಣದಲ್ಲ. ಚಾಲಕ ಚಲನೆಗಳು, ಈಡುವಳಿ (sensitivity), ಚಲನೆಗಳ ಹಿಮ್ಮುರಿವ (reflex) ಸಹಕ್ರಮ, ಸಮತೂಕ ಇವಕ್ಕಾಗಿ ನರದ ಮಂಡಲದ ಅಂಗರಚನೆಯಲ್ಲೇ ಸೇರಿಕೊಂಡಿದೆ.

ಒಳಾಂಗಗಳ ನರಗಳ ಹೊಂದಾಣಿಕೆಯ ಮೂಲ ಇನ್ನೂ ಚೆನ್ನಾಗಿ ತಿಳಿವಿಗೆ

ಬಾದಿಲ್ಲ. ರೋಗ ಬರಿಸುವುದರಲ್ಲಿ ಮನಸ್ಸಿನ ಅಂಶಗಳ ಪಾತ್ರ ಈಗೀಗ ಗೊತ್ತಾಗುತ್ತಿದ್ದರೂ, ಇವೂ ಮುಖ್ಯವಾದುವೇ. ಮನೋಭಾವಗಳ ಬದಲಾವಣೆಗಳ ಬಿಸಿ ಅಂಗಗಳಿಗೂ ತಟ್ಟುವುದು. ಆರೋಗ್ಯ ಎನ್ನಬೇಕಾದರೆ ಸರಿಸಮನಾಗಿ ಕೆಲಸ ಮಾಡಬೇಕಿರುವ ಈ ಮನಸ್ಸಿನ ಅಲ್ಲದೆ ಜೀವಿಯ ಅಂಗಗಳ ನಿಯಂತ್ರಣದ ವಿಚಾರವಾಗಿ ನಮಗೆ ಇನ್ನೂ ಏನೇನೂ ಗೊತ್ತಿಲ್ಲ. ಇಷ್ಟಾದರೂ ಇದಕ್ಕಾಗುವ ಅಪಾಯ ಕೆಡಕುಗಳಿಂದಲೇ ಅಂಗಗಳ ರೋಗಗಳಂತೆಯೇ ಇರುವ ತಾರುಮಾರುಗಳು ಹುಟ್ಟಿ, ಮುಂದುವರಿವುದೆಂದು ತಿಳಿದಿದೆ. ಯಾವ ರೋಗದ ಅಂಗಾಯವನ್ನೂ ತೋರಗೊಡದಿರುವ, ಬಹುವಾಗಿ ಮಾನವಜನಾಂಗವನ್ನೇ ಕಾಡುತ್ತಿರುವ ಬೇನೆಗಳ ಕಾರಣ ಇಲ್ಲಿದೆ.

ತಾರುಮಾರುಗಳ ಒಳಕಾರಣಗಳು :

ಗುರುತಿಸಬೇಕಾದವು ಇನ್ನೂ ಹಲವಾರು ರೋಗಗಳಿವೆ. ಈಗಾಗಲೇ ಗೊತ್ತಾಗಿರುವ ಅನೇಕಾನೇಕ ರೋಗಗಳಿಗೆ ಕಾರಣಗಳೇ ತಿಳಿದಿಲ್ಲ. ಕೆಲವಂತೂ ಮಾನವನ ಜೀವನದುದ್ದಕ್ಕೂ ಕಾಡುತ್ತಿರುತ್ತವೆ.

ಬರುಬರುತ್ತ ಹೆಚ್ಚಿಕೊಳ್ಳುವ ಈ ರೋಗಗಳಿಗೂ ಮೈಯೊಳಗಿನ ಯಾಂತ್ರಿಕತೆ ಕೆಡುವುದಕ್ಕೂ ನೇರನೆಂಟು. ಅನುವಳಿವ ಎಲುಕೀಲುರಿತ (degenerative osteoarthritis), ರಕ್ತದ ಒತ್ತಡದೇರಿಕೆ, ಅಂಬಲಿಪೆಡಸಣೆ (athero sclerosis), ಸಿಹಿಮೂತ್ರ, ಕಟ್ಟುವಾರೆ (gout) ಇದರ ಉದಾಹರಣೆಗಳು. ಜೀವಕಣಗಳ ದೂಳಿಗಳು (enzymes) ಒಂದಾಗಿ ಕೆಲಸ ಮಾಡುವ ರೀತಿಯಲ್ಲಿ ಕ್ರಮಗೆಡುವುದರಿಂದ ಈ ಬೇನೆಗಳು ಬರುವುವೆಂದು ಇಂದಿನ ಕಲ್ಪನೆ. ಒಬ್ಬೊಬ್ಬರಲ್ಲಿ ಒಂದೊಂದು ತೆರನಾಗಿ ಇರುವುದರಿಂದ, ದೂರದ ತಲೆಮಾರಿನ ಪ್ರಭಾವ ಕಾರಣ ಆಗಿರಲೂ ಬಹುದು.

ತುಸುಮಟ್ಟಿಗೆ ಕರಾರುವಾಕ್ಕಾಗಿ ಈಗ ಗೊತ್ತಾಗಿರುವ ಒಳಗಿನ ಬೇನೆಗಳೆಂದರೆ, ಹುಟ್ಟಿನಿಂದ ಬರುವ ಜೀವಸ್ತುಕರಣದ (metabolism) ತಪ್ಪುಗಳು. ಕೆಲವು ಗೊತ್ತಾದ ಜನಿಕಗಳು (genes) ಇರುವಾಗಲೋ ಇಲ್ಲದಾಗಲೋ ಈ ಬೇನೆಗಳು ಆಗುತ್ತವೆ. ಜೀವಕಣದ ನಟ್ಟನಡುವೆ ಇರುವ ಸಬ್ಬೀಜ (nucleus)ದೊಳಗಿರುವ ಬಣ್ಣದಂಡಗಳಲ್ಲಿ (chromosomes) ತುಂಬಿರುವ ಪುಟ್ಟ ಡಿಯಾಕ್ಸಿ ರೈಬೋನಬ್ಬೀಜಾಮ್ಲಗಳೇ ಜನಿಕಗಳು. ಈ ಜನಿಕಗಳಲ್ಲಿ ಒಂದಕ್ಕೆ ಅಪಾಯವಾದರೂ, ಮೆಂಡೆಲ್ ವಿವರಿಸಿದ ಸಾಮಾನ್ಯ ಸೂತ್ರಗಳಿಗೆ ಸರಿಯಾಗಿ ತಲೆತಲಾಂತರವಾಗಿ ಅಣುವಿನ ಸರಪಣಿಯ ಮೇಲೆ ಅದೇ ಜಾಗದಲ್ಲಿ ಅಪಾಯ ಕಾಣಿಸಿಕೊಳ್ಳುತ್ತದೆ. ಜನಿಕದ ಅಂಗೆಲಸದ ಪ್ರಭಾವ ಈ ಜೀವಿಯ ಮೇಲೆ ಆಗುವ ರಿಂದ ರೋಗ ಏಳುತ್ತದೆ. ಜೀವಸ್ತುಕರಣದ ಹಲವಾರು ಹಂತಗಳಲ್ಲಿ ಅನೇ

ಕಾನೇಕ ಜನಿಕಗಳು ಪ್ರಭಾವಿಗಳು. ಈ ದಿಸೆಯಲ್ಲಿ ಇನ್ನೂ ಅನೇಕಾನೇಕ ಗುಟ್ಟುಗಳು ಮರೆಯಲ್ಲಿದ್ದರೂ, ಜೀವಿಜ್ಞಾನದ ಪ್ರಯೋಗಗಳು ಮುಂದು ವರಿದಂತೆಲ್ಲ ಮೈಯಲ್ಲಿನ ನಿಯಂತ್ರಣ ಮಂಡಲಗಳೂ ತಮ್ಮ ಗುಟ್ಟುಗಳನ್ನು ಹೊರಗೆಡಹುತ್ತವೆ.

ಹೊರಪರಿಸರದ ಪ್ರಭಾವ :

ಹೊರಗಣ ವಸ್ತುಗಳು ಜೀವಿಯ ಮೈಯೊಳಗೆ ತೂರುವುದರಿಂದ ಅನೇಕ ರೋಗಗಳು ಮೇಲಿಂದಮೇಲೆ ಆಗುತ್ತಲೇ ಇರುತ್ತವೆ. ಏಕಾಣುಜೀವಿಗಳು ವಿಷಕಣ(virus) ಗಳು, ಅಣಿಯಣಬೆಯ ಬೀಜಕಣಗಳು, ಒಂಜೀವಿಕಣದ (unicellular), ಹಲಜೀವಿಕಣದ (multicellular) ಪರಪಿಂಡಿಗಳು ನಮ್ಮ ಸುತ್ತ ಮುತ್ತಲೂ ಮುತ್ತಿದ್ದು, ತೀರ ಗೊತ್ತೇ ಆಗದಂತೆ ನಮ್ಮ ಮೈಯೊಳಗೆ ಸೇರುತ್ತವೆ.

ರೋಗ ಬರಿಸಲು ಆಳಗಾಣದ ಮೂಲ ಗಾಳಿ. ಅದರಲ್ಲೂ ಗಾಳಿಯಲ್ಲಿ ತೇವಗೂಡಿದ್ದರೆ ನಂಜಿನ ಸೊಂಕು ಅಂಟುವುದು ಸುಲಭ. ಕಿರಿತರ ಕಿರು-ತೊಟ್ಟುಗಳು, ಏಕಾಣುಜೀವಿಗಳು, ವಿಷಕಣಗಳನ್ನೂ ಹೀರಿಕೊಳ್ಳುತ್ತವೆ. ಉರಿಶೀತ (influenza), ಪುಪ್ಪುಸುರಿತ (pneumonia), ಸರಕಾಯಿಜೀವಿ (streptococcus) ಸೊಂಕುಗಳಂತಹ ಚಳಿಗಾಲದ ಬೇನೆಗಳೆಲ್ಲ ಹರಡಿಕೊಳ್ಳು-ವುದು ಹೀಗೇ. ಉಸಿರಿನಲ್ಲಿ ಸೆಳೆದುಕೊಂಡ ಅಣಿಯಣಬೆಯ ಬೀಜಕಣಗಳಿಂದ ಸಾಂಕ್ರಾಮಿಕ ರೋಗಗಳು ಹೀಗೇ ಆಗಬಹುದು. ಸಾಸಿರಾರು ಮಂದಿಗೆ ಒಂದೇ ಬಾರಿ ಸೊಂಕು (ಸೊಂಕಿಲು) ಅಂಟುವುದರಿಂದ ಇವು ಸಾಂಕ್ರಾಮಿಕಗಳಂತೆ ಕಾಣುವುದು ಹೆಚ್ಚಲ್ಲ. ಬೀಜಕಣಗಳು ಬಿರುಗಾಳಿಗೆ ಸಿಲುಕಿ ದೂರ ದೇಶಗಳಿಗೆ ಸೊಂಕನ್ನು ಸಾಗಿಸಲೂ ಬಹುದು.

ಜೀವಿಗಳ ಎರಡನೆಯ ಸಹಜ ಧಾತುವಾದ ನೀರು ಕೂಡ ರೋಗವನ್ನು ಸಾಗಿಸಿ ಹರಡುತ್ತದೆ. ಏಕಾಣುಜೀವಿಯಿಂದಾದುವೇ ಹೆಚ್ಚು. ವಿಷಮಜ್ವರ (typhoid), ಕಾಲರ, ಆಮಶಂಕೆ ಚೆನ್ನಾಗಿ ಗೊತ್ತಿರುವ ಉದಾಹರಣೆಗಳು. ಮುಖ್ಯವಾಗಿ, ನರೆಮಜ್ಜೆಯುರಿತ (poliomyelitis), ಕಲಿಜದ ಸುರುಗೂದಲಿ (hepatic spirochaete), ಆಮಶಂಕೆಯ ಚಲ್ಕಣಗಳು (amoebae), ಕಲಿಜದ ಚಟ್ಟೆ ಕ್ರಿಮಿಗಳು (platyhelminths) ಇವೇ ಮುಂತಾದವಿನ ವಿಷಕಣಗಳನ್ನೂ ನೀರು ಸಾಗಿಸುತ್ತದೆ. ಕಾಯಿಪಲ್ಲೆಗಳಿಂದ ಆಗುವಂತೆ, ಸೊಂಕಿನ ಸಾಗಣೆ ನೇರವೋ ಬಳಸಿಯೋ ಆಗಬಹುದು.

ಕೆಲವು ರೋಗಜನಕ ಕಾರಕಗಳು ಚರ್ಮದ ಇಲ್ಲವೇ ಆರೋಗ್ಯದ ಲೋಳ್ಪರೆಯನ್ನು ನೇರವಾಗಿ ಕೊರೆದುಕೊಂಡು ಒಳತೂರಬಹುದು. ಕೊಕ್ಕೆ-ಹುಳುಗಳು, ತಿರುದಾರಕಗಳು (treponemata) ಇದರ ಉದಾಹರಣೆಗಳು.

ಗಾಳಿ ಹೊತ್ತುತರುವ ತೀರ ಜಡವಾದ ಧೂಳಿನ ಕಣಗಳು ತಾಕಿದರೂ ಕಗ್ಗೇಡಾಗಬಹುದು. ಗಣಿಕಾರರೂ ಸುರಂಗಗಾರರೂ ಉಸಿರಿನಲ್ಲಿ ಎಳೆದುಕೊಳ್ಳುವ ಖನಿಜದ ದೂಳು ಕಣಗಳನ್ನು ಉದಾಹರಿಸಬಹುದು. ಇವು ಪುಪ್ಪುಸಗಳಲ್ಲಿ ಸೇರಿಕೊಳ್ಳುತ್ತವೆ. ಇವುಗಳ ಎಡಬಿಡದ ರಸಾಯನಿಕ ಚಟುವಟಿಕೆಯಿಂದ ಉರಿತದ ಕಿಗ್ಗಂಟುಗಳಿಗಾಗಿ (nodules), ಎಂದಿಗೂ ಹಾಗೇ ಉಳಿಸಿಡುತ್ತವೆ. ಧೂಳಿನ ರೋಗಗಳ ಹುಟ್ಟು ಹೀಗೇ. ಎಷ್ಟೋ ವರುಷಗಳ ನಂತರ ರೋಗಲಕ್ಷಣಗಳು ಹೊರಗೆ ಕಾಣಿಸಿಕೊಳ್ಳುವುದರಿಂದ ಅಂತಹ ರೋಗಗಳು ತಂತಾವಾಗಿ ಹುಟ್ಟಿದಂತೆ ತೋರುತ್ತವೆ.

ಗಿಡಮರಗಳಿಂದ ಬರುವ ದೂಳಿನ ಕಣಗಳನ್ನು ಉಸಿರಿನಲ್ಲಿ ಎಳೆದುಕೊಂಡಾಗ, ನೇರವಾದ ರಸಾಯನಿಕ ವರ್ತನೆಯೇ ಅಲ್ಲದೆ ಬೇರೆ ರೀತಿಯಿಂದಲೂ ಕೆಡುಕಾಗಿಸಬಹುದು. ಮೈಯಲ್ಲಿ ಸೇರಿದಮೇಲೆ ವಿಶೇಷಿತ ಜೀವಕಣಗಳು ಹಿಡಿದಿಟ್ಟುಕೊಂಡು, ಎದುರು ವಸ್ತುಗಳು ಎನ್ನಿಸಿಕೊಳ್ಳುವ ವಿರೋಧಿಸುವ ಪದಾರ್ಥಗಳನ್ನೆ ತಯಾರಿಸಲು ಮೊದಲಿಡುತ್ತವೆ. ಪುಪ್ಪುಸಗಳ ಲೋಳ್ಪರೆಯಲ್ಲಿ (mucosa), ಇವು ಹೊರಗಿಂದ ಬರುವ ದೂರು ಕಣಗಳೊಂದಿಗೆ ಮರುವರ್ತಿಸಿ, ಗುರಲಿನ ಲಕ್ಷಣಗಳನ್ನು ಹೊರಗೆಡಹುವ ಹಿಸ್ಟಮೀನ್‌ನಂತಹ ಕೆರಳಿಸುವ ವಸ್ತುಗಳನ್ನು ಹೊರಡಿಸುತ್ತವೆ. ಕಾರ್ಖಾನೆಗಳಲ್ಲಿ ಇರುವಂತೆ, ದಿನವೂ ಲೆಕ್ಕಕ್ಕೆ ಬರದಷ್ಟರ ಪ್ರಮಾಣಗಳನ್ನು ಉಸಿರಿನಲ್ಲಿ ಸೆಳೆದುಕೊಳ್ಳುತ್ತಿದ್ದರೆ, ಈ ಪ್ರಭಾವ ಕೆಲವೇಳೆ ಗಮನಕ್ಕೆ ಬರದೆ ಅಡಗಿರುತ್ತದೆ.

ಎಲ್ಲರಿಗೂ ದಿನವೂ ೨೦–೨೦೦ ಸಾಸಿರದಲ್ಲೊಂದು ಮಿಲಿಗ್ರಾಮಿನಷ್ಟು ಅಯೊಡೀನ್ ಬೇಕು. ಕುಡಿವ ನೀರಲ್ಲಿ ಇದು ಕೊರೆಯಾಗಿದ್ದರೆ, ಸಾಕಾದಷ್ಟು ತೈರಾಕ್ಸಿನ್ನನ್ನು ಗುರಾಣಿಕ (thyroid) ಗ್ರಂಥಿ ಸುರಿಸದು. ಇದರಿಂದ ತಾರುಮಾರುಗಳ ಸರಣಿಯೇ ಕಾಲಿಡುತ್ತದೆ. ಮೈಬೆಳವಿಗೆ ಕುಂಗುತ್ತದೆ; ಎಲುಬಿನ ಬೆಳೆತ ಹಿಂಬೀಳುತ್ತದೆ; ಈ ಗ್ರಂಥಿ ಇನ್ನಷ್ಟು ಸುರಿಸುವಂತೆ ತೆಮಡಿಕ (pituitary) ಗ್ರಂಥಿ ಚೋದಿಸುವುದರಿಂದ ಗುರಾಣಿಕ ಗ್ರಂಥಿ ಊದಿಕೊಂಡು ಗಳಗಂಡ (goitre) ಆಗುತ್ತದೆ.

ತೀರ ಕಿರಿಯ ಪ್ರಮಾಣಗಳಲ್ಲಿ ಸೇವಿಸುವ ಹಲವಾರು ಆಹಾರಗಳಲ್ಲಿನ ಪದಾರ್ಥಗಳ ಕೊರತೆಯಾದರೆ, ಬಹು ಕಟ್ಟುನಿಟ್ಟಿನ ರೋಗಗಳು ಆಗುವವು. ಜೀವಾತುಗಳು (vitamins) ಎನ್ನಿಸಿಕೊಳ್ಳುವ ಇಂತಹವು ಮೂವತ್ತಕ್ಕೂ ಹೆಚ್ಚಾಗಿ ಗೊತ್ತಿವೆ. ಇವು ಜೀವಸ್ತುಕರಣವನ್ನು ಹಲತೆರನಾಗಿ ಕ್ರಮಗೊಳಿಸುತ್ತವೆ. ಇವಿಲ್ಲದಿದ್ದರೆ ಕೆಲವು ಗೊತ್ತಾದ ನಿಜಗೆಲಸಗಳು ನಿಲ್ಲುತ್ತವೆ.

ಮಾನವನಿಂದ ತಯಾರಿಸಲಾಗದ ರಕ್ತ ಗರಣೆಯಾಗಲು ಬೇಕಿರುವ ಕೆ-ಜೀವಾತನ್ನು ಎಲ್ಲರ ಕರುಳುಗಳಲ್ಲೂ ಜೀವಿಸುತ್ತಿರುವ ಕೆಲವು ಗೊತ್ತಾದ

ಏಕಾಣುಜೀವಿಗಳು ತಯಾರಿಸುವುದೇ ಏಕಾಣುಜೀವಿಗಳಿಗೂ ಮಾನವನಿಗೂ ಇರುವ ನಿಕಟ ಸಂಬಂಧದ ಉದಾಹರಣೆ. ಟೆಟ್ರಸೈಕ್ಲೀನುಗಳಂತಹ ಜೀವಿರೋಧಕಗಳಿಂದ ಈ ಏಕಾಣುಜೀವಿಗಳು ಹಾಳಾದರೆ, ಇಲ್ಲದ ಬೇನೆಗಳು ಹುಟ್ಟಿಕೊಳ್ಳುತ್ತವೆ. ಇಂತಹವನ್ನೇ ವೈದ್ಯಜನಿತ (iatrogenic) ರೋಗಗಳು ಎನ್ನುವುದು.

ಪರಿಸರದಲ್ಲಿ ಯಾವ ಬದಲಾವಣೆ ಆದರೂ ಅದು ಮಾನವನನ್ನೂ ತಾಕುವುದರಿಂದ, ಅದನ್ನು ಬಿಟ್ಟು ಮಾನವನನ್ನು ಪರಿಶೀಲಿಸುವುದು ಆಗದು. ಮಾನವನ ಬೆಳವಿಗೆಯ ಮೇಲೆ ಮಾನಸಿಕ ಪರಿಸರದ ಪ್ರಭಾವ ಕೂಡ ಕಡಮೆಯಲ್ಲ. ತನ್ನ ಸುತ್ತಲೂ ಇರುವವರ ಪ್ರಭಾವ ಮಗುವಿನ ಮೇಲೆ ಬೀಳುವುದು. ಹೆತ್ತವರ ಪ್ರಭಾವವಿಲ್ಲದೆ ಮಗುವಿನ ಮನಸ್ಸಿನ ಬೆಳವಿಗೆಯೂ ಅರೆಬರೆ. ತಾನು ಬದುಕಿ ಬಾಳಬೇಕಿರುವ ಮನಸ್ಸಿನ ಪರಿಸರಕ್ಕೆ ಹರೆಯದವ ಹೊಂದಿಕೊಳ್ಳದಿದ್ದರೆ, ವಿಪರೀತ ಮಾನಸಿಕ ಫಲಗಳಿಗೆ ಈಡುಮಾಡುವುದೇ ಅಲ್ಲದೆ, ಮನೋವಿಕಾರದ ಆತಂಕಗಳ ಮೂಲಕ ಒಳಾಂಗದ ತಾರುಮಾರುಗಳಿಗೂ ಈಡಾಗಿಸುವುದು. ಇವನ್ನು ವಿವರಿಸುವ ವೈದ್ಯಶಾಸ್ತ್ರ ಮೈಮನವೈದ್ಯ (psychosomatic medicine) ಎಂದಿದೆ.

ರೋಗ, ಆರೋಗ್ಯ :

ಹೀಗೆ ರೋಗದ ತಿಳುವಳಿಕೆ ಎಂದರೆ ಕೇವಲ ವಿವರಣೆಯಲ್ಲ. ಇದರಲ್ಲಿ ವಿಜ್ಞಾನದ ನಿಟ್ಟು ಇರಬೇಕು. ಅಂಗಾಯಗಳನ್ನೇ ಅಲ್ಲದೆ, ಅವನ್ನು ಇರಗೊಳಿಸುವ ನಿಜಗೆಲಸಗಳಲ್ಲಿನ ಆತಂಕಗಳನ್ನೂ ನೆಲೆಗಾಣಲೇ ಬೇಕು. ಪ್ರಯೋಗ ವಿಜ್ಞಾನದ ಸುಮಾರು ಶತಮಾನಗಳನಂತರ ಅಷ್ಟು ದುಡಿಮೆಯಿಂದ ಬೆಳೆದು ಬಂದ ಈ ಭಾವನೆ ಆರೋಗ್ಯ, ರೋಗಗಳ ಎಂದಿನ ನಿರೂಪಣೆಯಲ್ಲಿ ಈಗಾಗಲೇ ಸೇರಿಬಿಟ್ಟಿರುವುದು ಗಮನೀಯ.

ಆರೋಗ್ಯದ ಹಿನ್ನೆಲೆಯಲ್ಲಿ ಮಾತ್ರ ರೋಗವನ್ನು ತಿಳಿಯಹೇಳಬಹುದು. ಲಿಟ್ರೆ ಹೇಳಿದಂತೆ, ಆರೋಗ್ಯ ಕುಂದಿರುವವನೇ ರೋಗದವ. 'ಆರೋಗ್ಯವಾಗಿರುವವನ ಸ್ಥಿತಿಯೇ ಆರೋಗ್ಯ. ಮೈಯ ಎಲ್ಲ ನಿಜಗೆಲಸಗಳೂ ಎಂದಿಗೂ ಸಾಂಗವಾಗಿ ನಡೆಯುತ್ತಿರುವುದೇ ಆರೋಗ್ಯ.' ಅವುಗಳ ಸಹಜ ಮಿತಿಗಳೊಳಗೆ ಎಲ್ಲ ನಿಜಗೆಲಸಗಳೂ ನಡೆವಂತಿದ್ದು ಒಂದಕ್ಕೊಂದು ಚೆನ್ನಾಗಿ ಹೊಂದಿಕೊಂಡಿದ್ದರೆ, ಅಂತಹವನೇ ಆರೋಗ್ಯವಂತ. ಅವನು ತನ್ನ ಚಹರೆ, ತೋರುವಳಿಕೆ, ಮೈಗುಣಗಳನ್ನೂ ಚಿಂತಿಸಬೇಕಿಲ್ಲ. ಯಾವ ಕಾರಣದಿಂದಲೇ ಆಗಿರಲಿ, ನಿಜಗೆಲಸಗಳಲ್ಲಿ ಹೊಂದಾಣಿಕೆ ಕೆಟ್ಟಿರುವುದೇ ರೋಗ. ಇದನ್ನು ಗುಣಪಡಿಸಲು ಕೆಟ್ಟಿರುವ ಈ ನಿಜಗೆಲಸದ ಹೊಂದಾಣಿಕೆಯನ್ನು ಕಂಡುಕೊಂಡು ಸರಿಪಡಿಸಿ ಇಡೀ ಜೀವಿಯನ್ನು ಸರಿದಾರಿಗೆ ತರಬೇಕು.

★ ಡಾ. ಡಿ. ಎಸ್. ಶಿವಪ್ಪ

ಕರುಣರಸ

ಭಾರತೀಯ ಸಾಹಿತ್ಯದಲ್ಲಿ ರಸಕ್ಕೆ ಮಹತ್ವದ ಸ್ಥಾನವಿದೆ. ಲಾಕ್ಷಣಿಕರೆಲ್ಲ ಕಾವ್ಯಕ್ಕೆ ರಸವು ಪ್ರಧಾನವಾದುದೆಂದೂ ಅದಿಲ್ಲದಿದ್ದರೆ ಅದು ಕಾವ್ಯವಲ್ಲವೆಂದೂ ಹೇಳುವರು. 'ವಾಕ್ಯಂ ರಸಾತ್ಮಕಂ ಕಾವ್ಯಂ' ಎಂದು ಕಾವ್ಯಲಕ್ಷಣವನ್ನು ಹೇಳಿ ರಸವತ್ಕಾವ್ಯವೇ ಉತ್ತಮವಾದುದೆಂದು ಸಾರುವರು. ನಾಟ್ಯ-ಶಾಸ್ತ್ರಕಾರನಾದ ಭರತಮುನಿಯು "ವಿಭಾವಾನುಭಾವವ್ಯಭಿಚಾರಿಸಂಯೋಗಾ-ದ್ರಸನಿಷ್ಪತ್ತಿಃ" ಎಂಬ ಸೂತ್ರದಲ್ಲಿ ರಸದ ಸ್ವರೂಪವನ್ನು ತಿಳಿಸುವನು. ಈ ಸೂತ್ರದ ಅರ್ಥವನ್ನು ಅನೇಕ ಲಾಕ್ಷಣಿಕರು ವಿಸ್ತೃತವಾಗಿ ವಿವರಿಸಿರುವರು. ಸಂಕ್ಷೇಪವಾಗಿ ತಿಳಿದುಕೊಳ್ಳಬೇಕಾದರೆ 'ವಿಭಾವ', 'ಅನುಭಾವ', 'ವ್ಯಭಿಚಾರಿಭಾವ'ಗಳೆಂದರೇನೆಂಬುದನ್ನು ಅರಿಯಬೇಕು. ಕಾವ್ಯವು ಭಾವನಾಪ್ರಧಾನವಾದುದು. ಅಲ್ಲಿ ವಿಚಾರಕ್ಕೂ ತರ್ಕಕ್ಕೂ ಆಸ್ಪದವಿಲ್ಲ. ಮನುಷ್ಯನಲ್ಲಿ ಭಾವನೆಗಳೂ, ಮನೋವಿಕಾರಗಳೂ ಯಾವಾಗಲೂ ಇರುವವು. ಆದರೆ ಅವು ಸ್ಥಗಿತ ಅಥವಾ ಸುಪ್ತಾವಸ್ಥೆಯಲ್ಲಿರುವವು. ಒಮ್ಮೊಮ್ಮೆ ಅವು ಸಮಯೋಚಿತ ಶಬ್ದ, ಸಂಕೇತ ಮೊದಲಾದವುಗಳಿಂದ ಹೊರಬೀಳುವವು. ನಾಟಕದಲ್ಲಿ ಅಭಿನಯವೂ, ಕಾವ್ಯದಲ್ಲಿ ಶಬ್ದಾರ್ಥಜೋಡನೆಯೂ, ಸಂಭಾಷಣೆಯಲ್ಲಿ ಚಾತುರ್ಯಪ್ರಧಾನವಾದ ಉತ್ತರ ಪ್ರತ್ಯುತ್ತರಗಳೂ ಸುಪ್ತವಾದ ಭಾವನೆಗಳನ್ನು ಜಾಗ್ರತಗೊಳಿಸುವವು ಈ ಸುಪ್ತವಾದ ಭಾವನೆಗಳಿಗೆ ಸ್ಥಾಯೀಭಾವವೆಂದು ಕರೆಯುವರು. ಅವು ರತಿ, ಹಾಸ, ಕ್ರೋಧ, ಶೋಕ, ಉತ್ಸಾಹ, ಭಯ, ಜುಗುಪ್ಸಾ, ವಿಸ್ಮಯ ಎಂದು ಕೆಲವರ ಪ್ರಕಾರ ಉಂಟು. ಕೆಲವರ ಪ್ರಕಾರ ಶಮವನ್ನೊಳಗೊಂಡು ಒಂಬತ್ತು ಇರುವವು. 'ರತಿ' ಅಥವಾ 'ಪ್ರೇಮ' ಎಂಬ ಭಾವವು ಸ್ತ್ರೀಪುರುಷರಿಗೆ ಸಂಬಂಧಿಸಿದುದು. ಅದು ಬೆಳೆಯಲು ಚಂದ್ರೋದಯ, ವಸಂತ, ಕುಸುಮ, ಲತಾಮಂಟಪ, ಮೊದಲಾದವು ಕಾರಣವಾಗುವವು. ಇವೆಲ್ಲವುಗಳಿಗೆ ವಿಭಾವವೆಂದು ಕರೆಯುವರು. ಪ್ರೇಮವನ್ನು ಕಣ್ಣು, ಹುಬ್ಬು, ದೃಷ್ಟಿ, ಮೊದಲಾದವುಗಳಿಂದ ಬಹಿರಂಗಪಡಿಸುವದು 'ಅನುಭಾವ'ವು. ನಿರ್ವೇದ, ಗ್ಲಾನಿ ಮೊದಲಾದ ಮಾನಸಿಕ ಸ್ಥಿತಿಯನ್ನು ಪ್ರದರ್ಶಿಸುವ ಭಾವಕ್ಕೆ 'ವ್ಯಭಿಚಾರೀಭಾವ'ವೆನ್ನುವರು. 'ವಿಭಾವ', 'ಅನುಭಾವ', 'ವ್ಯಭಿಚಾರೀಭಾವ'ಗಳ ಸಂಯೋಗದಿಂದ ರಸವು ಹುಟ್ಟುವದೆಂದು ಲಾಕ್ಷಣಿಕರ ಮತ. ರತಿ, ಹಾಸ, ಶೋಕ, ಮೊದಲಾದ ಸ್ಥಾಯೀಭಾವಗಳು 'ವಿಭಾವ', 'ಅನುಭಾವ', 'ವ್ಯಭಿಚಾರೀಭಾವ'ಗಳಿಂದ ಪೋಷಿಸಲ್ಪಟ್ಟು, ಶೃಂಗಾರ, ಹಾಸ್ಯ, ಕರುಣರಸಗಳಾಗಿ ಪರಿಣಮಿಸುವವು. ಶೃಂಗಾರಕ್ಕೆ ರತಿಯೂ ಕರುಣರಸಕ್ಕೆ ಶೋಕವೂ ಕಾರಣ.

ಭಾರತೀಯ ದೃಶ್ಯಸಾಹಿತ್ಯದಲ್ಲಿ ಪಾಶ್ಚಾತ್ಯಸಾಹಿತ್ಯದಲ್ಲಿದ್ದಂತೆ ನಾಟಕಗಳನ್ನು ಆನಂದಪರ್ಯವಸಾಯಿ (Comedy), ಮತ್ತು ಶೋಕಪರ್ಯವಸಾಯಿ (Tragedy) ಎಂದು ವಿಭಾಗಿಸಿಲ್ಲ. ಭಾರತೀಯ ನಾಟ್ಯಶಾಸ್ತ್ರದಲ್ಲಿ ನಾಟಕಗಳ ಅಂತ್ಯ ಸಂತೋಷಪ್ರದವಾಗಿರಬೇಕೆಂದು ವಿಧಿಸಿದೆ. ನಾಟಕದಲ್ಲಿ ಎಲ್ಲ ರಸಗಳೂ ಬರಬೇಕು. ಶೃಂಗಾರರಸವು ಪ್ರಧಾನವಾಗಿರಬೇಕು. ಇದು ಸಾಮಾನ್ಯವಾದ ನಿಯಮ. ಆದರೂ ಅಲ್ಲಲ್ಲಿ ಈ ನಿಯಮಕ್ಕೆ ಅಪವಾದಗಳು ದೊರೆಯುವವು.

ವಿಶ್ವಸಾಹಿತ್ಯದಲ್ಲಿ ಶೋಕರಸಪ್ರಧಾನವಾದ ಕಾವ್ಯಕ್ಕಾಗಲಿ, ನಾಟಕಕ್ಕಾಗಲಿ ಮಹತ್ವದ ಸ್ಥಾನವಿದೆ. ಅದೇಕೆ, ಬಹುಜನರ ಪ್ರಕಾರ ಇಂತಹ ಸಾಹಿತ್ಯಕ್ಕೆ ಅಗ್ರಸ್ಥಾನವಿದೆ. ಕವಿಗಳಲ್ಲಿ ಇಂತಹ ಶೋಕರಸಪ್ರಧಾನವಾದ ಕಾವ್ಯಗಳನ್ನು ರಚಿಸಿದವರು ಅಗ್ರಗಣ್ಯರೂ ಅಮರರೂ ಆಗಿರುವರು ಅಂತಹ ಕವಿಗಳಲ್ಲಿ ಒಬ್ಬಿಬ್ಬರ ಕೃತಿಗಳನ್ನೂ ಅವರು ವಿವರಿಸಿದ ಕರುಣರಸವನ್ನೂ ನಿರೀಕ್ಷಿಸುವದು ಪ್ರಕೃತದ ಉದ್ದೇಶ.

ಹನ್ನೊಂದನೆಯ ಶತಮಾನದ ಕವಿಯಾದ ಸೊಡ್ಡಲನೆಂಬವನು ತನ್ನ ಉದಯಸುಂದರಿ ಕಥೆಯಲ್ಲಿ ಕಾಲಿದಾಸನನ್ನು "ರಸೇಶ್ವರ"ನೆಂದು ಕರೆದಿರುವನು. ಕಾಲಿದಾಸನು ತನ್ನ ಗ್ರಂಥಗಳಲ್ಲಿ ಎಲ್ಲ ರಸಗಳನ್ನೂ ಅತ್ಯುತ್ತಮವಾಗಿ ಒಡಮೂಡಿಸಿರುವನು. ಆತನ ಪ್ರಮುಖ ರಸಗಳ ವರ್ಣನಾನೈಪುಣ್ಯವನ್ನೂ, ಉಳಿದ ರಸಗಳ ಪರಿಪೋಷಣೆಯನ್ನೂ ಅರಿತರೆ ನಿಜವಾಗಿಯೂ ಆತನು "ರಸೇಶ್ವರ"-ನಾಗಿರುವನೆಂಬುದು ಸ್ಪಷ್ಟವಾಗುವದು.

ಕಾಲಿದಾಸನ ಕೃತಿಗಳಲ್ಲಿ ಶೃಂಗಾರರಸವು ಪ್ರಧಾನವಾಗಿದ್ದರೂ ಮಹತ್ವದ ಸ್ಥಾನವನ್ನು ಕರುಣರಸಕ್ಕೆ ಕೊಟ್ಟಿರುವನು. ರಘುವಂಶದಲ್ಲಿ 'ಅಜವಿಲಾಪ', ಕುಮಾರಸಂಭವದಲ್ಲಿ 'ರತಿವಿಲಾಪ', ಮೇಘದೂತದಲ್ಲಿ 'ಯಕ್ಷನ ವಿರಹ' ಮೊದಲಾದವುಗಳಲ್ಲಿ ಕಂಡುಬರುವ ಕರುಣರಸವು ಕವಿಯು ಆ ರಸಕ್ಕೆ ಕೊಟ್ಟ ಸ್ಥಾನವನ್ನು ವಿಶದಪಡಿಸುವದು. ಆತನ ನಾಟಕಗಳಲ್ಲಿಯಂತೂ ಅದು ಹೆಚ್ಚು ಸ್ಪಷ್ಟವಾಗಿ ಕಾಣುವದು. ಆತನ ಕಾವ್ಯಗಳಲ್ಲಿ ಕರುಣರಸವನ್ನು ಸೂಚಿಸುವ ಹಲಕೆಲವು ಭಾಗಗಳನ್ನು ಉದಾಹರಣೆಗಾಗಿ ನಿರೀಕ್ಷಿಸುವಾ.

ಅಜನಿಗೆ ಇಂದುಮತಿಯು ಪಂಚಪ್ರಾಣ. ದಂಪತಿಗಳು ಬೆಳದಿಂಗಳಲ್ಲಿ ಪ್ರಾಸಾದತಲದಲ್ಲಿ ಮಲಗಿದ್ದರು. ಆಗ ನಾರದನು ಆಕಾಶದಲ್ಲಿ ಹೋಗುತ್ತಿದ್ದನು ಆತನ ವೀಣೆಗೆ ಹಾಕಿದ ಪುಷ್ಪಮಾಲೆಯೊಂದು ಕಳಚಿ ಇಂದುಮತಿಯ ಎದೆಯ ಮೇಲೆ ಬೀಳುವದು. ಕೂಡಲೆ ಆಕೆಯ ಪ್ರಾಣವು ಹೋಗುವದು. ಆಗ ಅಜನಿಗಾದ ದುಃಖಕ್ಕೆ ಮಿತಿಯೇ ಇಲ್ಲ.

ಸ್ರಗಿಯಂ ಯದಿ ಜೀವಿತಾಪಹಾ ಹೃದಯೇ ಕಿಂ ನಿಹಿತಾ ನ ಹಂತಿ ಮಾಮ್ ।
ವಿಷಮಪ್ಯಮೃತಂ ಕ್ವಚಿದ್ಭವೇದಮೃತಂ ವಾ ವಿಷಮೀಶ್ವರೇಚ್ಛಯಾ ॥

(ರಘುವಂಶ, ಸರ್ಗ ೮, ಶ್ಲೋಕ ೪೬)

ಗೃಹಿಣೀ ಸಚಿವಃ ಸಖೀ ಮಿಥಃ ಪ್ರಿಯಶಿಷ್ಯಾ ಲಲಿತೇ ಕಲಾವಿಧೌ ।
ಕರುಣಾವಿಮುಖೇನ ಮೃತ್ಯುನಾ ಹರತಾ ತ್ವಾಂ ವದ ಕಿಂ ನ ಮೇ ಹೃತಮ್ ॥

(ರಘು॰, ಸರ್ಗ ೮, ಶ್ಲೋಕ ೬೭)

ಈ ಮಾಲೆಯು ಜೀವವನ್ನು ತೆಗೆದುಕೊಳ್ಳಲು ಸಮರ್ಥವಿದ್ದರೆ ನನ್ನ ಜೀವನವನ್ನು ಏಕೆ ತೆಗೆದುಕೊಳ್ಳಲೊಲ್ಲದು? ಈಶ್ವರೇಚ್ಛೆ ಇದ್ದರೆ ಒಮ್ಮೊಮ್ಮೆ ವಿಷವು ಅಮೃತವಾಗುವದು, ಅಮೃತವು ವಿಷವಾಗುವದು. ಗೃಹಿಣಿ, ಸಚಿವ, ಸಖೀ, ಲಲಿತಕಲೆಗಳಲ್ಲಿ ಪ್ರಿಯಶಿಷ್ಯಳೂ ಆದ ಇಂದುಮತಿಯನ್ನು ತೆಗೆದು-ಕೊಂಡು ಹೋದ ಕಠೋರಹೃದಯದ ಮೃತ್ಯುವು ಎಲ್ಲವನ್ನೂ ತೆಗೆದು-ಕೊಂಡುಹೋಗಿದೆ. ಇಂದುಮತಿಯು ಹೋದಮೇಲೆ ಅಜನಲ್ಲಿ ಏನೂ ಉಳಿದಿಲ್ಲ. ಇಲ್ಲ ಅಜನಲ್ಲಿ ಉಂಟಾದ ಶೋಕದ ಪರಮಾವಧಿ ವಿಚಿತ್ರವಾಗಿದೆ.

ಕುಬೇರನ ಶಾಪದಿಂದ ಸ್ಥಾನಭ್ರಷ್ಟನಾದ ಯಕ್ಷನು ಉತ್ತರ ದಿಕ್ಕಿಗೆ ಹೋಗುವ ಮೇಘಗಳನ್ನು ನೋಡಿ ಆಶಾಭರಿತನಾಗಿ ತನ್ನ ಪ್ರಿಯಳಿಗೆ ಸಂದೇಶವನ್ನು ಕಳಿಸಲು ಯೋಚಿಸುವನು. ಮೋಡಗಳಿಗೆ ಪ್ರಾರ್ಥಿಸಿಕೊಳ್ಳು-ವನು. ಆತನಿಗೆ ಸದಸದ್ವಿವೇಕ ಬುದ್ಧಿ ಅಸ್ತಂಗತವಾಗಿದೆ. ಅಚೇತನವಾದ ಮೋಡವು ಸುದ್ದಿಯನ್ನು ಒಯ್ಯಲಾರದೆಂಬ ಕಲ್ಪನೆಯುವನಲ್ಲಿ ಬರಲಿಲ್ಲ. ಆದುದರಿಂದ ಕವಿ ಆತನ ಸ್ಥಿತಿಯನ್ನು ಕಂಡು "ಅಚೇತನವಾದ ಮೇಘವೆಲ್ಲಿ; ಸುದ್ದಿ ಮುಟ್ಟಿಸಲು ಸಮರ್ಥರಾದ ಚೇತನನಾಯುಕ್ತ ಪ್ರಾಣಿಗಳೆಲ್ಲಿ; ಚೇತನಾ-ಚೇತನ ವಸ್ತುಗಳ ಪರಿವೆಯಿಲ್ಲದ ಈ ಯಕ್ಷನೆಲ್ಲಿ. ನಿಜವಾಗಿ ಕಾಮಿಗಳಿಗೆ ಚೇತನಾಚೇತನ ವಸ್ತುಗಳ ಜ್ಞಾನವಿರುವದಿಲ್ಲ. "ಕಾಮಾರ್ತಾ ಹಿ ಪ್ರಕೃತಿ ಕೃಪಣಾಶ್ಚೇತನಾಚೇತನೇಷು" (ಪೂರ್ವಮೇಘ, ಶ್ಲೋ. ೫) ಎಂದು ಕನಿಕರಪಟ್ಟಿರು ವನು— ಇಂತಹ ಪ್ರಜ್ಞಾಹೀನನಾದ ಯಕ್ಷನು ಆಗ ತನ್ನ ಹೆಂಡತಿಯ ಸ್ಥಿತಿಯು ಹೇಗಿರಬಹುದೆಂಬುದನ್ನು ಕಲ್ಪಿಸಿಕೊಳ್ಳುವನು.

ಸಾ ಸನ್ಯಸ್ತಾಭರಣಮಬಲಾ ಪೇಶಲಂ ಧಾರಯಂತೀ ।
ಶಯ್ಯೋತ್ಸಂಗೇ ನಿಹಿತಮಸಕೃದ್ದುಃಖದುಃಖೇನ ಗಾತ್ರಂ ॥
ತ್ವಾಮಪ್ಯಸ್ರಂ ನವಜಲಮಯಂ ಮೋಚಯಿಷ್ಯತ್ಯವಶ್ಯಂ ।
ಪ್ರಾಯಸ್ಸರ್ವೋ ಭವತಿ ಕರುಣಾವೃತ್ತಿರಾದ್ರಾಂತರಾತ್ಮಾ ॥

(ಮೇ.ದೂ., ಶ್ಲೋ. ೯೭)

ಆಕೆ ಅಬಲೆ, ಆಭರಣಗಳನ್ನು ತೆಗೆದೊಗೆದು ಹೇಗೋ ಕಷ್ಟದಿಂದ ತನ್ನ ಶರೀರವನ್ನು ಹಾಸಿಗೆಯ ಮೇಲೆ ಹಾಕಿ ದುಃಖದಿಂದ ಹೊರಳಾಡುತ್ತಿರುವಳು. ಆಕೆಯ ಸ್ಥಿತಿಯನ್ನು ಕಂಡು ನಿನಗೂ ದುಃಖವು ಒತ್ತರಿಸಿಬರುವದು. ನವಜಲಮಯವಾದ ಕಣ್ಣೀರನ್ನು ನೀನೂ ಸುರಿಸುವಿ. ಸಾಮಾನ್ಯವಾಗಿ ಆರ್ದ್ರ ಅಂತ-ರಾತ್ಮ ಉಳ್ಳವರು ಎಲ್ಲರೂ ಕರುಣಾಳುಗಳು. ಇಲ್ಲಿ ಆರ್ದ್ರ ಶಬ್ದ ಶ್ಲೇಷಾರ್ಥದಿಂದ ತೊಯ್ದು ಮತ್ತು ದಯೆಯುಳ್ಳ ಎಂದಾಗುವದು. ಮೇಘದ ಅಂತರಾತ್ಮದಲ್ಲಿ ನೀರಿರುವದರಿಂದ ಅದು ಆರ್ದ್ರವಾದುದು. ಕರುಣಾಳುಗಳ ಅಂತರಾತ್ಮದಲ್ಲಿ ದಯೆಯು ಮನೆಮಾಡಿಕೊಂಡಿರುವದು. ಕವಿಯು ಪರ್ಯಾಯದಿಂದ ಎಲ್ಲರೂ ಯಕ್ಷನ ಸ್ಥಿತಿಯನ್ನು ಕಂಡು ಕಣ್ಣೀರು ಸುರಿಸುವರೆಂದು ಸೂಚಿಸಿರು-ವನು. ಮೇಘದೂತವನ್ನು ಕುರಿತು ಜರ್ಮನ್ ವಿದ್ವಾಂಸರು ಮುಕ್ತಕಂಠದಿಂದ ಹೊಗಳಿರುವರು.

Goethe says: "The first acquaintance with such a work always makes an epoch in our life." Alexander Von Humboldt praises "The admirable trueness to nature" with which the first advent of the cloud in the beginning of the rainy season is described in the Meghaduta". L. W. Schroeder says, "a treasure of unestimable value." G. Meyer describes it as "the most beautiful bewailing of a yearning lover that one can read."—History of Indian Literature, Vol. III, Part I, P. 120 (Eng. Translation)

ಆತನ ನಾಟಕಗಳಲ್ಲಿ ಒಂದಾದ 'ಮಾಲವಿಕಾಗ್ನಿಮಿತ್ರ'ದಲ್ಲಿ ಕಥಾ-ನಾಯಕಿಯಾದ ಮಾಲವಿಕೆಯ ಅಸಹಾಯಸ್ಥಿತಿ, ಆಕೆ ಅನುಭವಿಸಿದ ಕಷ್ಟ, ಅಗ್ನಿಮಿತ್ರನ ಸ್ತ್ರೀದಾಕ್ಷಿಣ್ಯ ಮೊದಲಾದವು ಆಕೆಯ ಬಗೆಗೆ ಸಹಾನುಭೂತಿಯನ್ನೂ ಕರುಣೆಯನ್ನೂ ಹುಟ್ಟಿಸುವವು. ವಿಕ್ರಮೋರ್ವಸಿ ನಾಟಕದ ನಾಲ್ಕನೆಯ ಅಂಕದಲ್ಲಿ ಚಿತ್ರಿತನಾದ ಪುರೂರವನ ಅವಸ್ಥೆಯನ್ನು ಕಂಡು ಕನಿಕರ ಬರುವದು. ಶೂರನೂ ಧೀರನೂ ಆದ ಪುರೂರವನು ತನ್ನ ಪ್ರಿಯ-ತಮಳಾದ ಊರ್ವಸಿಯು ಅದೃಶ್ಯಳಾದಮೇಲೆ ಹುಚ್ಚನಾಗಿ ಕಂಡಕಂಡಲ್ಲಿ ಊರ್ವಸಿಯ ವೃತ್ತಾಂತವನ್ನು ಹೇಳಲು ಬೇಡಿಕೊಳ್ಳುವನು. ಅದು ದೊರೆಯದಾಗಲು ಹಳಿಯುವನು. ತೀರ ಪ್ರಜ್ಞಾಹೀನನಾಗಿ ಅಲೆದಾಡುವನು. ಕವಿಯು ಕಲ್ಪನಾಚಾತುರ್ಯವನ್ನೂ ಶೋಕರಸವನ್ನೂ ಇಲ್ಲಿ ಚೆನ್ನಾಗಿ ಚಿತ್ರಿಸಿರುವನು.

ಕಾಲಿದಾಸನ ಕೃತಿಗಳಲ್ಲೆಲ್ಲ ಶಾಕುಂತಲ ನಾಟಕವು ಅತ್ಯುತ್ತಮವಾದುದು. ಭಾರತೀಯ ಸಾಹಿತ್ಯದಲ್ಲಿ ಅದಕ್ಕೆ ಅಗ್ರಸ್ಥಾನವಿದೆ. ವಿಶ್ವಸಾಹಿತ್ಯ

ದಲ್ಲಿಯೂ ಕೂಡಾ ಆದಕ್ಕೆ ಅತ್ಯುನ್ನತ ಸ್ಥಾನವಿದೆ. ಜರ್ಮನಿಯ ತತ್ತ
ಜ್ಞಾನಿಯೂ ಮಹಾಕವಿಯೂ ಆದ ಗೇಟೆಯು "ವಸಂತಋತುವಿನಲ್ಲಿ ಪ್ರಫು
ವಾಗಿರುವ ಕುಸುಮದ ಆಹ್ಲಾದಕತ್ವ, ಗ್ರೀಷ್ಮದ ಫಲಗಳ ಪರಿಪಕ್ವ
ಇವುಗಳನ್ನು ಒಂದೇ ಕಾಲಕ್ಕೆ ನೋಡಬೇಕಾದರೆ, ಮನಸ್ಸಿಗೆ ತೃಪ್ತಿಯ
ತನ್ಮಯತೆಯೂ ಉಂಟಾಗಬೇಕಾದರೆ ಶಕುಂತಲೆಯೇ! ನಿನ್ನಲ್ಲಿಯೇ ಎಂ
ನಾನು ಹೇಳುವೆ"* ಎಂದು ಮನಬಿಚ್ಚಿ ಹೊಗಳಿರುವನು. ಶಕುಂತಲೆಯ
ಕರುಣರಸವನ್ನು ಕವಿಯು ಒಳ್ಳೆ ಪರಿಣಾಮಕಾರಿಯಾಗುವಂತೆ ಚಿತ್ರಿಸಿರುವ
ಆತನ ಪದ್ಯಗಳಲ್ಲಿ ಉತ್ತಮವಾದುವೆಂದು ಗ್ರಹೀತವಾದ ಪದ್ಯಗಳೆಲ್ಲ ಕರುಣ
ದಿಂದ ತುಂಬಿ ತುಳುಕುತ್ತವೆ. ಅವುಗಳಲ್ಲಿ ಒಂದಾದ

ಯಾಸ್ಯತ್ಯದ್ಯ ಶಕುಂತಲೇತಿ ಹೃದಯಂ ಸಂಸ್ಪೃಷ್ಟಮುತ್ಕಂಠಯಾ ।
ಕಂಠಃ ಸ್ತಂಭಿತಬಾಷ್ಪವೃತ್ತಿಕಲುಷಶ್ಚಿಂತಾಜಡಂ ದರ್ಶನಂ ॥
ವೈಕ್ಲವ್ಯಂ ಮಮ ತಾವದೀದೃಶಮಿದಂ ಸ್ನೇಹಾದರಣ್ಯೌಕಸಃ ।
ಪೀಡ್ಯಂತೇ ಗೃಹಿಣಃ ಕಥಂ ನು ತನಯಾವಿಶ್ಲೇಷದುಃಖೈರ್ನವೈಃ ॥

(ಅಭಿ. ಶಾಕು., ಅಂಕ ೪ ಪದ್ಯ

---

* Goethe wrote on 1st July, 1791 :

"In case you desire to rejoice in the blossoms of early years
the fruits of the age advanced,
In case you want to have something that charms,
something that is enchanting
In case you want to call both the heaven and earth
by a common name,
I refer you to Śankuntala,
And thus I describe these all."

He wrote to Chezy, the French editor of the Sanskrit text the Śakuntala :—

"When for the first time I became aware of this work of unfathoma depth, I was filled with great enthusiasm and it attracted me in su a manner that even at the time when I had hardly finished its readi it goaded me towards the impossible undertaking of adapting it, e approachingly, for the German theatre........Here the poet seems to at the height of his talents in representation of the natural order, of finest mode of life, of the present moral endeavour, of the most wor sovereign and of the most sober divine meditation; still he remains such a manner the lord and master of his creation."

—History of Indian Literatu
Vol. III, Part I, P. 238
(English Translation by
Sudha Jha)

ಈ ಹೊತ್ತು ಶಕುಂತಲೆಯು ಗಂಡನ ಮನೆಗೆ ಹೋಗುವಳೆಂದು ನನ್ನ ಹೃದಯವು ಉತ್ಕಂಠೆಯಿಂದ ತುಂಬಿದೆ. ಕಂಠವು ಬಿಗಿದುಬಂದಿದೆ. ಕಣ್ಣುಗಳು ನೀರಿನಿಂದ ತುಂಬಿ ಏನೂ ಕಾಣದಂತಾಗಿದೆ. ಚಿಂತೆಯಿಂದ ಮನಸು ಜಡವಾಗಿದೆ. ಎಲ್ಲವನ್ನೂ ತ್ಯಜಿಸಿ ಅರಣ್ಯದಲ್ಲಿರುವ ವಿರಕ್ತನಾದ ನನಗೇ ಈ ಪರಿ ದುಃಖವು ಆಗಿದೆ. ಅಂದಮೇಲೆ ಮಗಳ ಅಗಲುವಿಕೆಯಿಂದ ಉಂಟಾದ ದುಃಖವು ಸಂಸಾರಿಕರನ್ನು ಎಷ್ಟು ಪೀಡಿಸಬಹುದು ?

ಇಲ್ಲಿ ಕವಿಯು ಕಣ್ವರ್ಷಿಗಾದ ಮನೋವೈಕ್ಲವ್ಯವನ್ನೂ ಶಕುಂತಲೆಯಲ್ಲಿರುವ ಆತನ ವಾತ್ಸಲ್ಯವನ್ನೂ ಬಣ್ಣಿಸುವಲ್ಲಿ ಪರ್ಯಾಯದಿಂದ ಸಂಸಾರಿಕರೆಲ್ಲರ ಭಾವವನ್ನು ಪ್ರತಿಬಿಂಬಿಸಿರುವನು.

ಪಾತುಂ ನ ಪ್ರಥಮಂ ವ್ಯವಸ್ಯತಿ ಜಲಂ ಯುಷ್ಮಾಸ್ವಪೀತೇಷು ಯಾ ।
ನಾದತ್ತೇ ಪ್ರಿಯ ಮಂಡನಾಪಿ ಭವತಾಂ ಸ್ನೇಹೇನ ಯಾ ಪಲ್ಲವಂ ॥
ಆದ್ಯೇ ವಃ ಕುಸುಮಪ್ರಸೂತಿಸಮಯೇ ಯಸ್ಯಾ ಭವತ್ಯುತ್ಸವಃ ।
ಸೇಯಂ ಯಾತಿ ಶಕುಂತಲಾ ಪತಿಗೃಹಂ ಸರ್ವೈರನುಜ್ಞಾಯತಾಂ ॥

(ಅಭಿ. ಶಾಕು., ಅಂಕ ೪, ಪದ್ಯ ೯)

"ನಿಮಗೆ ನೀರುಣಿಸದೆ ಯಾರು ನೀರನ್ನು ಕೂಡ ಕುಡಿಯುತ್ತಿದ್ದಿಲ್ಲವೋ, ಹೂವಿನ ಆಭರಣವನ್ನು ಹೆಚ್ಚಾಗಿ ಪ್ರೀತಿಸುತ್ತಿದ್ದರೂ ಯಾರು ನಿಮ್ಮ ಸ್ನೇಹದಿಂದ ನಿಮಗೆ ನೋವಾಗುವದೆಂದೂ ನಿಮ್ಮ ಸೌಂದರ್ಯವು ಕುಂದುವದೆಂದೂ ನಿಮ್ಮ ಎಲೆ ಹೂವುಗಳನ್ನು ಹರಿಯುತ್ತಿದ್ದಿಲ್ಲವೊ, ನೀವು ಹೂಬಿಡುವ ಕಾಲಕ್ಕೆ ಯಾರಿಗೆ ಹೆಚ್ಚಾಗಿ ಮೊದಲು ಉತ್ಸವವಾಗುತ್ತಿತ್ತೋ ಅಂತಹ ಶಕುಂತಲೆಯು ಈಗ ಗಂಡನ ಮನೆಗೆ ಹೋಗುವಳು. ಎಲ್ಲರೂ ಆಕೆಗೆ ಅಪ್ಪಣೆ ಕೊಡಬೇಕು."

ಇಲ್ಲಿ ಕಣ್ವರು ಶಕುಂತಲೆಯ ಪ್ರೇಮಲಸ್ವಭಾವವನ್ನೂ ಆಕೆಯ ಅಗಲುವಿಕೆಯಿಂದ ಆಶ್ರಮದಲ್ಲಿ ಉಂಟಾಗುವ ಕೊರತೆಯನ್ನೂ ಹೃದಯಂಗಮವಾಗಿ ನಿರೂಪಿಸಿರುವರು. ಇಂತಹ ಕರುಣಾಮಯಿಯಾದ ಶಕುಂತಲೆಯು ದುಷ್ಯಂತನಲ್ಲಿಗೆ ಹೋದಮೇಲೆ ಸಂಭವಿಸಿದ ಸಂಗತಿಯು ಎಂತಹ ಕಠೋರಹೃದಯದವರೂ ಕೂಡ ಮರಮರ ಮರಗುವಂತೆ ಮಾಡುವದು. ದೂರ್ವಾಸನ ಶಾಪದಿಂದ ದುಷ್ಯಂತನಿಗೆ ಶಕುಂತಲೆಯನ್ನು ವಿವಾಹವಾದ ಸಂಗತಿಯು ನೆನಪಾಗಲಿಲ್ಲ. ಧರ್ಮಭೀರುವಾದ ಆತನು ಗರ್ಭವತಿಯಾದ ಶಕುಂತಲೆಯನ್ನು ಪರಸ್ತ್ರೀಯೆಂಬ ಭಾವದಿಂದ ಸ್ವೀಕರಿಸಲು ಒಪ್ಪಲಿಲ್ಲ. ಕಣ್ವಾಶ್ರಮದಲ್ಲಿ ಸಂಭವಿಸಿದ ವೃತ್ತಗಳನ್ನು ಆತನ ಸ್ಮರಣೆಗೆ ತರಲು ಪರಿಪರಿಯಿಂದ ಯತ್ನಿಸಿದರೂ ಸಾಧ್ಯವಾಗಲಿಲ್ಲ ಆಕೆಯ ಹೇಳಿಕೆಯು ಅನೃತವೂ ಆತ್ಮಕಾರ್ಯಸಾಧಕವೂ ಎಂದು ದುಷ್ಯಂತನು ಸ್ಪಷ್ಟವಾಗಿ ಹೇಳಿದನು. ಆಶ್ರಮದಲ್ಲಿ ಬೆಳೆದವಳು

ಮೋಸವನ್ನು ಎಂದೂ ಅರಿಯಳೆಂದು ಗೌತಮಿಯು ಹೇಳಲು ಹುಣ್ಣಿನ ಮೇಲೆ ಬರೆಕೊಟ್ಟಂತೆ—

"ಸ್ತ್ರೀಣಾಮಶಿಕ್ಷಿತಪಟುತ್ವಮಮಾನುಷೀಷು ।
ಸಂದೃಶ್ಯತೇ ಕಿಮುತ ಯಾಃ ಪ್ರತಿಬೋಧವತ್ಯಃ ॥
ಪ್ರಾಗಂತರಿಕ್ಷಗಮನಾತ್ ಸ್ವಮಪತ್ಯಜಾತ ।
ಮನ್ಯೈರ್ದ್ವಿಜೈಃ ಪರಭೃತಾಃ ಖಲು ಪೋಷಯಂತಿ ॥"

(ಅಭಿ. ಶಾಕು., ಅಂಕ-೫, ಪದ್ಯ ೨೨)

"ಮೋಸಮಾಡುವದು ಅಥವಾ ವಂಚಿಸುವದು ಸ್ತ್ರೀಯರಿಗೆ ಸ್ವಾಭಾವಿಕ-ವಾಗಿ ಪ್ರಾಪ್ತವಾಗುವದು. ಅದನ್ನು ಯಾರೂ ಅವರಿಗೆ ಕಲಿಸುವ ಕಾರಣವಿಲ್ಲ. ಅದು ಮನುಷ್ಯೇತರರಲ್ಲಿ ಕೂಡ ಕಂಡುಬರುವದು. ಬುದ್ಧಿವಂತರಾದ ಸ್ತ್ರೀಯರಲ್ಲಿ ಅದರ ಬಗ್ಗೆ ಸಂಶಯವೇ ಇಲ್ಲ. ಕೋಗಿಲೆಯು ತನ್ನ ಅಪತ್ಯ-ಜಾತವನ್ನು ಅನ್ಯಪಕ್ಷಿಗಳಿಂದ ಪೋಷಿಸುವದು" ಎಂದು ದುಷ್ಯಂತನು ಅಂದನು. ಈ ಕರ್ಣಕಠೋರ ಮತ್ತು ಎದೆಯೊಡೆಯುವಂತಹ ಶಬ್ದಗಳು ಶಕುಂತಲೆ-ಯನ್ನಷ್ಟೇ ಅಲ್ಲ ಎಲ್ಲರನ್ನೂ ಮುಗ್ಧರನ್ನಾಗಿ ಮಾಡಿದವು. ಈ ಪದ್ಯದಲ್ಲಿ ಬರುವ 'ಅಂತರಿಕ್ಷಗಮನ' ಮತ್ತು 'ದ್ವಿಜ' ಮತ್ತು 'ಪರಭೃತ' ಶಬ್ದ-ಗಳಲ್ಲಿ ಶ್ಲೇಷವಿದೆ. ಅಪ್ಸರ (ಅಮಾನುಷ ಮತ್ತು ಪರಭೃತ—ಅನ್ಯರಿಂದ ಪೋಷಿಸಲ್ಪಟ್ಟ) ಸ್ತ್ರೀಯಾದ ಮೇನಕೆಯು ದ್ವಿಜನಾದ ಕಣ್ವನಿಂದ ತನ್ನ ಅಪತ್ಯವಾದ ಶಕುಂತಲೆಯನ್ನು ಬೆಳೆಸಿದಳೆಂಬ ಭಾವವೂ ಮೂಡಿದೆ. ಕೋಗಿ-ಲೆಯು ಕಾಗೆಯ ಗೂಡಿನಲ್ಲಿ ತನ್ನ ತತ್ತಿಯನ್ನಿಟ್ಟು ಹಾರಿಹೋಗುವದೆಂದೂ, ಕಾಗೆಯು ಅದು ತನ್ನದೆ ಎಂದು ಅದನ್ನು ರಕ್ಷಿಸಿ ಮರಿಮಾಡುವದೆಂದೂ ವದಂತಿ. ಆದುದರಿಂದ ಶಕುಂತಲೆಯೂ ಅಲ್ಲಿದ್ದವರೆಲ್ಲರೂ ಮುಗ್ಧರಾದರು. ದುಷ್ಯಂತನ ಈ ಕಠೋರ ಶಬ್ದಗಳು ಶಕುಂತಲೆಯನ್ನೂ ಆಕೆಯ ತಾಯಿಯಾದ ಮೇನಕೆಯನ್ನೂ ಚೆನ್ನಾಗಿ ಹಳಿದವು. ಇದು ಶಕುಂತಲೆಯ ದುಃಖದ ಪರ-ಮಾವಧಿ. ಕಣ್ವಶಿಷ್ಯರ ವಾದವಿವಾದಗಳಿಂದಾಗಲಿ ಶಕುಂತಲೆಯ ಕೋಪ-ಪೂರಿತ ಪಶ್ಚಾತ್ತಾಪಯುಕ್ತ ಶಬ್ದಗಳಿಂದಾಗಲಿ ದುಷ್ಯಂತನ ಮೇಲೆ ಪರಿಣಾಮ ವಾಗಲಿಲ್ಲ. ಇತ್ತ ದುಷ್ಯಂತ ಆಕೆಯನ್ನು ಪತ್ನಿಯೆಂದು ಗ್ರಹಿಸಲಿಲ್ಲ. ಪಾಪ! ಶಕುಂತಲೆಯ ಸ್ಥಿತಿ ಏನಾಗಬಹುದು? ಇದು ಆಕೆಯ ದುಃಖದ ಪರಮಾವಧಿ. ಕಣ್ವರ ಆಶ್ರಮದಲ್ಲಿ ಅಕ್ಕರೆಯಿಂದ ಬೆಳೆದ ಕೋಮಲೆಯಾದ ತರಳೆಗೆ ಈ ಪರಿ ಅವಸ್ಥೆಯೇ?

ಕವಿಶ್ರೇಷ್ಠನಾದ ಕಾಲಿದಾಸರು ಕರುಣರಸವನ್ನು ಯಶಸ್ವಿಯಾಗಿ ತನ್ನ ಕೃತಿಗಳಲ್ಲಿ ಪ್ರದರ್ಶಿಸಿದ್ದಾನೆ. ಆದರೆ ಭಾರತೀಯ ಸಾಹಿತ್ಯದಲ್ಲಿ ಈ ರಸವನ್ನು

ಕೃತಿಗಿಳಿಸಲು ಹೆಚ್ಚು ಸಮರ್ಥನಾದ ಕವಿಯು ಭವಭೂತಿಯು. ಪೂರ್ವದ ಪಂಡಿತರು "ಉತ್ತರೇ ರಾಮಚರಿತೇ ಭವಭೂತಿರ್ವಿಶಿಷ್ಯತೇ" ಉತ್ತರರಾಮಚರಿತೆಯಲ್ಲಿ ಭವಭೂತಿಯು ಕಾಲಿದಾಸನನ್ನು ಮೀರಿಸುವನು ಎಂದು ಭವಭೂತಿಯನ್ನೇ ಎತ್ತಿಹಿಡಿದಿರುವರು. ಈತನ ಕೃತಿಗಳಲ್ಲಿ ಕರುಣರಸವು ಉನ್ನತಸ್ಥಿತಿಗೆ ಮುಟ್ಟಿದೆ. ಉತ್ತರರಾಮಚರಿತವು ಈತನ ಕೃತಿಗಳಲ್ಲಿ ಅತ್ಯುತ್ತಮವಾದುದು. ಇದರಲ್ಲಿ ರಾಮನು ಸೀತೆಯನ್ನು ಜನಾಪವಾದಕ್ಕಂಜಿ ತ್ಯಜಿಸಿದುದೂ ಆನಂತರ ನಡೆದ ವೃತ್ತವೂ ಬಂದಿದೆ. ಸಂಸ್ಕೃತಸಾಹಿತ್ಯದಲ್ಲಿ ಕರುಣರಸವನ್ನೇ ಪ್ರಧಾನವಾಗಿಟ್ಟುಕೊಂಡು ರಚಿಸಲ್ಪಟ್ಟ ಗ್ರಂಥಗಳಲ್ಲಿ ಉತ್ತರರಾಮಚರಿತವು ಪ್ರಥಮಸ್ಥಾನ ಪಡೆದಿದೆಯೆಂದು ನಿಸ್ಸಂದೇಹವಾಗಿ ಹೇಳಬಹುದು. ಇದರಲ್ಲಿ ಕಥಾವಸ್ತು, ಸಂವಿಧಾನ, ವ್ಯಕ್ತಿಗಳು ಎಲ್ಲವೂ ಉನ್ನತವಾದವು. ಚಿಕ್ಕಮಕ್ಕಳಾದ ಲವಕುಶರ ವರ್ತನವೂ ಕೂಡ ಉದಾತ್ತವಾದುದು. ಕೆಳಮಟ್ಟದ ಪಾತ್ರಗಳಿಗಾಗಲಿ ಸನ್ನಿವೇಶಗಳಿಗಾಗಲಿ ಇಲ್ಲಿ ಆಸ್ಪದವಿಲ್ಲ. ನಾಟಕಕ್ಕೆ ಅಥವಾ ದೃಶ್ಯ-ಕಾವ್ಯಕ್ಕೆ ಅಗತ್ಯವಾಗಿ ಬೇಕಾಗುವ ಶೃಂಗಾರ, ಹಾಸ್ಯ ಮೊದಲಾದ ರಸಗಳು ಮಹತ್ವವಾದುವೆಂಬ ಮಾತನ್ನು ಭವಭೂತಿ ಒಪ್ಪುವದಿಲ್ಲ. ಮುಖ್ಯವಾದುದು ಕರುಣ ಒಂದೇ. ಉಳಿದವು ಕರುಣರಸದ ಅಂಗಗಳು. ಈ ಸಿದ್ಧಾಂತವನ್ನು ಉತ್ತರರಾಮಚರಿತೆಯಲ್ಲಿ ಸ್ಪಷ್ಟವಾಗಿ ಹೇಳಿರುವನು.

ಏಕೋ ರಸಃ ಕರುಣ ಏವ ನಿಮಿತ್ತಭೇದಾ- ।
ದ್ಭಿನ್ನಃ ಪೃಥಕ್‌ಪೃಥಗಿವಾಶ್ರಯತೇ ವಿವರ್ತಾನ್ ॥
ಆವರ್ತಬುದ್ಬುದತರಂಗಮಯಾನ್ವಿಕಾರಾ- ।
ನಂಭೋ ಯಥಾ ಸಲಿಲಮೇವ ಹಿ ತತ್ಸಮಸ್ತಂ ॥

(ಉ.ರಾ.ಚ; ಅಂಕ-೩, ಪದ್ಯ ೪೮)

ಸುಳಿ, ನೀರಗುಳ್ಳೆ, ತೆರೆ ಮೊದಲಾದ ಹೆಸರಿನಿಂದ ನೀರು ಬೇರೆ ಬೇರೆ ರೂಪವನ್ನು ಧರಿಸುವಂತೆ ರಸವು ಒಂದೇ. ಅದು ಕರುಣರಸ. ಆದರಿಂದಲೇ ಉಳಿದ ರಸಗಳು ನಿಮಿತ್ತಭೇದದಿಂದ ಹೆಸರುಹೊಂದಿವೆ. ಈ ಸಿದ್ಧಾಂತವನ್ನೇ ಗುರಿಯಾಗಿಟ್ಟುಕೊಂಡು ಉತ್ತರರಾಮಚರಿತೆಯನ್ನು ಬರೆದಿರುವನು. ಮೊದಲನೆಯ ಅಂಕದ ಹೆಸರು ಚಿತ್ರದರ್ಶನವೆಂಬುದು. ರಾಮಪಟ್ಟಾಭಿಷೇಕಕ್ಕಾಗಿ ಬಂದವರೆಲ್ಲರೂ ತಮ್ಮ ತಮ್ಮ ಸ್ಥಳಗಳಿಗೆ ಹೋಗುವರು. ಜನಕನೂ ವಿದೇಹಕ್ಕೆ ತೆರಳುವನು. ಆದರಿಂದ ಖಿನ್ನಮನಸ್ಕಳಾದ ಸೀತಾದೇವಿಯನ್ನು ಸಮಾಧಾನ ಮಾಡುವದಕ್ಕಾಗಿ ರಾಮನು ವಾಸಗೃಹವನ್ನು ಪ್ರವೇಶಿಸುವನು. ಲಕ್ಷ್ಮಣನು ರಾಮನ ಚರಿತೆಯನ್ನೊಳಗೊಂಡ ಚಿತ್ರಪಟವನ್ನು ತೋರಿಸಲು ತರುವನು. ಚಿತ್ರಪಟಾವಲೋಕನವು ವಿನೋದಕ್ಕಾಗಿ; ಆದರೂ ಕವಿಯು ಈ ಅಂಕದಲ್ಲಿ

ಕರುಣರಸವನ್ನು ವಿಪುಲವಾಗಿ ತುಂಬಿರುವನು. ಸೀತಾದೇವಿಯು ಅಗ್ನಿ ಪರೀಕ್ಷೆಯ ಮಾತು ಬಂದಾಗ ಆತನು ಆಡಿದ ಮಾತುಗಳು ಆಕೆಯ ಪವಿತ್ರತೆಯ ಬಗೆಗೆ ಆತನ ವಿಶ್ವಾಸವನ್ನು ವ್ಯಕ್ತಪಡಿಸುವವು.

ಸೀತಾದೇವಿಯ ಜನನ ಯಜ್ಞದಲ್ಲಿ. ಯಜ್ಞವು ಪವಿತ್ರವಾದುದು. ಪವಿತ್ರ ವಾದ ಯಜ್ಞದಲ್ಲಿ ಜನಿಸಿದವಳು ಯಾವಾಗಲೂ ಪವಿತ್ರಳೇ; ಆಕೆಯನ್ನು ಅಗ್ನಿ ಮೊದಲಾದ ಇತರ ವಸ್ತುಗಳಿಂದ ಶುದ್ಧಮಾಡುವುದೆಂದರೇನು ? ಅದು ತೀರ ತಪ್ಪು.

ಉತ್ಪತ್ತಿಪೂತಾಯಾಃ ಕಿಮಸ್ಯಾಃ ಪಾವನಾಂತರೈಃ ।
ತೀರ್ಥೋದಕಂ ಚ ವಹ್ನಿಶ್ಚ ನಾನ್ಯತಃ ಶುದ್ಧಿಮರ್ಹತಃ ॥

(ಉ.ರಾ.ಚ., ಅಂಕ ೧, ಪದ್ಯ ೧೩)

ತೀರ್ಥೋದಕವೂ ಅಗ್ನಿಯೂ ಯಾವಾಗಲೂ ಶುದ್ಧವಾದುವು. ಅವನ್ನು ಶುದ್ಧಮಾಡಲು ಬೇರೆ ವಸ್ತುಗಳಿಲ್ಲ. ಆದರೂ ಸೀತಾದೇವಿಯ ಅಗ್ನಿಪರೀಕ್ಷೆ ಯಾಯಿತು. ಅದು ರಾಮನ ಸಮಕ್ಷಮದಲ್ಲಿ ಬಹುದೂರ ಪ್ರದೇಶವಾದ ಲಂಕೆಯಲ್ಲಿ ಜನ್ಮತಃ ಶುದ್ಧಳಾದ ಸೀತಾದೇವಿಯ ಬಗೆಗೆ ಜನರು ಸಂಶಯ ತೆಗೆದುಕೊಳ್ಳಬಾರದು. ಆದರೆ ನಿಜಸ್ಥಿತಿಯು ಬೇರೆಯದೆಯಲ್ಲಾ, ದೇವಿಯ ಜೀವನದಲ್ಲಿ ಈ ಅಪವಾದವು ಉಳಿಯುವದಲ್ಲಾ ಎಂದು ರಾಮನು ಮರಗು ವನು. "ದೇವಿ! ದೇವಯಜನಸಂಭವೇ!! ಪ್ರಸೀದ ಏಷ ತೇ ಜೀವಿತಾವಧಿ ಪ್ರವಾದಃ" ಎಂದು ಚಡಪಡಿಸುವನು. ದೇವಿಯ ಪಾವಿತ್ರ್ಯದ ಬಗ್ಗೆ ಆತನಲ್ಲಿ ಲವಲೇಶವೂ ಸಂಶಯವಿಲ್ಲ. ಆದರೆ ಇದೇ ರಾಮನು ದುರ್ಮುಖನು ತಂದ ಜನಾಪವಾದವನ್ನು ಕೇಳಿ ಅತಿಪವಿತ್ರಳಾದ, ತುಂಬುಗರ್ಭಿಣಿಯಾದ ಪತ್ನಿ ಯನ್ನು ತ್ಯಜಿಸಲು ಸಿದ್ಧನಾಗುವನು. ಆಗ ಆದ ರಾಮನ ಸ್ಥಿತಿಯನ್ನು ಕವಿಯು ಚೆನ್ನಾಗಿ ಚಿತ್ರಿಸಿರುವನು.

ರಾಮ : ಅಹಹ. ಅತಿ ತೀವ್ರೋಯಂ ವಾಗ್ವಜ್ರಃ
(ಮೂರ್ಛತಿ) (ಆಶ್ವಸ್ಯ)

ಹಾ ಹಾ ಧಿಕ್ ಪರಗೃಹವಾಸದೂಷಣಂ ಯದ್ವೈದೇಹ್ಯಾಃ ಪ್ರಶಮಿತಮದ್ಭು ತೈರುಪಾಯೈಃ । ಏತತ್ ಪುನರಪಿ ದೈವದುರ್ವಿಪಾಕಾದಾಲಾರ್ಕಂ ವಿಷಮಿ ಸರ್ವತಃ ಪ್ರಸೃಪ್ತಂ ॥

(ಉ.ರಾ.ಚ., ಅಂಕ ೧, ಪದ್ಯ ೪೦

ತತ್ಕಿಂ ಮಂದಭಾಗ್ಯಃ ಕರೋಮಿ ? ಹಾ ದೇವಿ ! ದೇವಯಜನ ಸಂಭವೇ । ಹಾ ಜನ್ಮಾನುಗ್ರಹಪವಿತ್ರಿತ ವಸುಂಧರೇ ! ಹಾ ಮುನಿಜನ ನಂದಿನಿ ! ಹಾ ಪಾವಕವಸಿಷ್ಠಾರುಂಧತಿಪ್ರಶಸ್ತಶೀಲಶಾಲಿನಿ ! ಹಾ ರಾಮ

ಮಯಿ ಜೀವಿತೇ! ಹಾ ಮಹಾರಣ್ಯವಾಸ ಪ್ರಿಯ ಸಖಿ! ಹಾ ತಾತಪ್ರಿಯೇ! ಹಾಶೋಕ್ತವಾದಿನಿ! ಕಥಮೇವಂ ವಿಧಾಯಾಃ ತವ ಈದೃಶಃ ಪರಿಣಾಮಃ!!

ತ್ವಯಾ ಜಗಂತಿ ಪುಣ್ಯಾನಿ ತ್ವಯ್ಯ ಪುಣ್ಯಾ ಜನೋಕ್ತಯಃ।
ನಾಥದಂತಸ್ತ್ವಯಾ ಲೋಕಸ್ತ್ವಮನಾಥಾ ವಿಪತ್ಸ್ಯಸೇ ।।

(ಉ.ರಾ.ಚ., ಅಂಕ ೧, ಪ. ೪೩
ಮತ್ತು ಆದರ ಹಿಂದಿನ ಭಾಗ)

ರಾಮನ ದುಃಖಕ್ಕೆ ಮಿತಿಯಿಲ್ಲ. ತನ್ನನ್ನೇ ತಾನು ಮನಸಾ ಹಳಿಯುವನು. ಈ ವಜ್ರರೂಪವಾದ ವಾಕ್ಯವು ಅತಿ ತೀಕ್ಷ್ಣವಾದುದು. (ಮೂರ್ಛೆಹೊಂದುವನು) ಎಚ್ಚತ್ತು—

ಹಾಹಾ ಪರರ ಮನೆಯಲ್ಲಿರುವುದಕ್ಕೆ ಧಿಕ್ಕಾರ. ಈ ಅಪವಾದವನ್ನು ಅದ್ಭುತವಾದ ಉಪಾಯದಿಂದ ಶಾಂತಮಾಡಿದರೂ ಪುನಃ ಹುಚ್ಚುನಾಯಿಯ ವಿಷದಂತೆ ಎಲ್ಲ ಕಡೆಗೂ ಹಬ್ಬಿರುವದು. ಮಂದಭಾಗ್ಯನಾದ ನಾನು ಏನು ಮಾಡಲಿ! ಹಾ ದೇವಿ!! ದೇವಯಜ್ಞದಲ್ಲಿ ಹುಟ್ಟಿದವಳೆ!! ನಿನ್ನ ಜನ್ಮದಿಂದ ಭೂಮಿಯನ್ನೇ ಪವಿತ್ರವಾಗಿ ಮಾಡಿದವಳೆ! ರಾಜರ್ಷಿ ಜನಕನ ಮಗಳೆ!! ಅಗ್ನಿ ವಶಿಷ್ಠ ಅರುಂಧತಿ ಇವರಿಂದ ಹೊಗಳಿಸಿಕೊಂಡ ಪ್ರಶಸ್ತಿಶೀಲವುಳ್ಳವಳೆ! ರಾಮನನ್ನೇ ನಿನ್ನ ಜೀವನವಾಗಿಟ್ಟುಕೊಂಡವಳೆ! ಮಹಾರಣ್ಯದಲ್ಲಿ ನನ್ನ ಸಂಗಡ ವಾಸವಾಗಿದ್ದ ಪ್ರಿಯ ಸಖಿ! ನನ್ನ ತಾತನಿಗೆ ಪ್ರಿಯವಾದವಳೆ! ಸ್ವಲ್ಪ ಮಾತನಾಡುವವಳೆ! ಇಂತಹಳಿಗೆ ಈ ಪರಿ ದುರ್ದಶೆ ಬರಬೇಕೆ?! ನಿನ್ನಿಂದ ಜಗತ್ತು ಪುಣ್ಯಮಯವಾಗಿದೆ. ಜನರು ನಿನ್ನ ಬಗೆಗೆ ಕೆಟ್ಟ ಮಾತನ್ನಾಡುವರು. ನಿನ್ನಿಂದ ಲೋಕವು ರಕ್ಷಕನನ್ನು ಪಡೆದಿದೆ. ನೀನು ಅನಾಥಳಾಗಿ ವಿಪತ್ತಿಗೆ ತುತ್ತಾಗಿರುವಿ.

ಅಪೂರ್ವಕರ್ಮ-ಚಾಂಡಾಲಮಯಿ ಮುಗ್ಧೇ ವಿಮುಂಚ ಮಾಮ್ ।
ಶ್ರಿತಾಸಿ ಚಂದನಭ್ರಾಂತ್ಯಾ ದುರ್ವಿಪಾಕಂ ವಿಷದ್ರುಮಂ ।।

(ಉ.ರಾ.ಚ., ಅಂಕ ೧, ಪ. ೪೬)

ಎಂದೂ ಯಾರೂ ಮಾಡದಂತಹ ಕರ್ಮವನ್ನು ಮಾಡಲುದ್ಯುಕ್ತನಾದ ಈ ಚಾಂಡಾಲನನ್ನು ಮುಗ್ಧೇ, ಬಿಡು. ಚಂದನ ಗಿಡವೆಂದು ಭ್ರಾಂತಿಯಿಂದ ಕೆಟ್ಟ ಪರಿಣಾಮವನ್ನು ಮಾಡುವ ವಿಷದ ಗಿಡವನ್ನಾಶ್ರಯಿಸಿರುವಿ ಎಂದು ಶೋಕಿಸುವನು. ಆದರೂ ಸೀತೆಯನ್ನು ತ್ಯಜಿಸಲು ನಿಶ್ಚಯಿಸುವನು. ರಾಮನಿಗೆ ತಾನು ಕೈಕೊಂಡ ನಿರ್ಣಯವು ಸರಿಯಾದದ್ದಲ್ಲೆಂಬುದು ಗೊತ್ತಿದೆ ಆದರೂ ರಾಜಧರ್ಮಕ್ಕನುಸರಿಸಿ ಲೋಕಾರಾಧನೆಯನ್ನು ಮಾಡುವದು ತನ್ನ ಕರ್ತವ್ಯವೆಂದು ಭಾವಿಸಿದನು. ಆತನಿಗಾದ ವ್ಯಥೆಯು ಅಪಾರವಾಗಿತ್ತೆಂಬುದನ್ನು ಕವಿಯು,

ದುಃಖಸಂವೇದನಾಯೈವ ರಾಮೇ ಚೈತನ್ಯಮಾಗತಂ ।
(ಉ.ರಾ.ಚ., ಅಂಕ ೧, ಪ…

ವಿಶ್ರಂಭಾದುರಸಿ ನಿಪತ್ಯ ಜಾತನಿದ್ರಾಮುನ್ಮುಚ್ಯ ಪ್ರಿಯಾಂ ಗೃಹಿಣೀಂ ಗೃಹ…
ಲಕ್ಷ್ಮೀಂ । ಆತಂಕಸ್ಫುರಿತ ಕಠೋರ ಗರ್ಭ ಗುರ್ವೀಂ ಕ್ರವ್ಯಾದ್ಭ್ಯೋ ಬಲಿ…
ದಾರುಣಃ ಕ್ಷಿಪಾಮಿ ॥
(ಉ ರಾ.ಚ., ಅಂಕ. ೧, ಪ. …

ಈ ರಾಮನಲ್ಲಿ ಚೈತನ್ಯವು ದುಃಖವನ್ನನುಭವಿಸುವದಕ್ಕಾಗಿಯೆ … ವಿಶ್ವಾಸದಿಂದ ಎದೆಯ ಮೇಲೆ ಮಲಗಿ ನಿದ್ರಿಸುವ, ಗೃಹಲಕ್ಷ್ಮಿಯ… ಹೆಂಡತಿಯನ್ನು, ಪೂರ್ಣ ಗರ್ಭಿಣಿಯನ್ನು ಹದ್ದು ಕಾಗೆ ನಾಯಿಗಳಿಗೆ ಬ… ಕೊಡುವಂತೆ ನಿಷ್ಕರುಣಿಯಾದ ನಾನು ತ್ಯಜಿಸುತ್ತಿರುವೆನು ಎಂದು … ಪದ್ಯಗಳಲ್ಲಿ ಸ್ಪಷ್ಟಪಡಿಸಿರುವನು. ರಾಮನು ಲೋಕೋತ್ತರಪುರುಷ… ಆದುದರಿಂದ—

ವಜ್ರಾದಪಿ ಕಠೋರಾಣಿ ಮೃದೂನಿ ಕುಸುಮಾದಪಿ ।
ಲೋಕೋತ್ತರಾಣಾಂ ಚೇತಾಂಸಿ ಕೋಹಿ ವಿಜ್ಞಾತುಮರ್ಹತಿ ॥
(ಉ.ರಾ.ಚ., ಅಂಕ ೨, ಪ.…

ವಜ್ರಕ್ಕಿಂತಲೂ ಬಿರುಸಾದುದು ಕುಸುಮಕ್ಕಿಂತಲೂ ಮೃದುವಾದ… ಮಹಾಪುರುಷರ ಹೃದಯವು. ಇದನ್ನರಿಯಲು ಸಾಧ್ಯ ಯಾರಿಗೆ ?

ಎರಡನೆಯ ಅಂಕದಲ್ಲಿ ರಾಮನು ಶಂಬೂಕನ ವಧೆಗಾಗಿ ದಂಡಕಾರ… ಪುಷ್ಪಕ ವಿಮಾನಾರೂಢನಾಗಿ ಬರುವನು. ದಂಡಕಾರಣ್ಯದಲ್ಲಿರುವ ಪಂಚ… ಯನ್ನು ಆತನು ಸಂದರ್ಶಿಸಬಹುದೆಂದೂ, ಆಗ ಚಿರಪರಿಚಿತವಾದ ಸ್ಥಳಗ… ನೋಡಿ ಸೀತಾದೇವಿಯ ತ್ಯಾಗದಿಂದುಂಟಾದ ದುಃಖವು ಒತ್ತರಿಸಿ ಬರಬ… ವೆಂದೂ ದೇವತೆಗಳು ಸರಿಯಾದ ವ್ಯವಸ್ಥೆ ಮಾಡಿಟ್ಟಿರುವರು. ಪಂಚವ… ದರ್ಶನದಿಂದ ರಾಮನಿಗಾದ ವ್ಯಥೆಯನ್ನು ಕವಿಯು ರಾಮನ ಮುಖದಿ… ತಿಳಿಸುವನು.

ಚಿರಾದ್ವೇಗಾರಂಭೀ ಪ್ರಸೃತ ಇವ ತೀವ್ರೋ ವಿಷರಸಃ ।
ಕುತಶ್ಚಿತ್ ಸಂವೇಗಾಚ್ಚಲಿತ ಇವ ಶಲ್ಯಸ್ಯ ಶಕಲಃ ॥
ವ್ರಣೋ ರೂಢಗ್ರಂಥಿಃ ಸ್ಫುಟಿತ ಇವ ಹೃನ್ಮರ್ಮಣಿ ।
ಪುನರ್ಘನೀಭೂತಃ ಶೋಕೋ ವಿಕಲಯತಿ ಮಾಮ್ ನೂತನ ಇವ ।
(ಉ.ರಾ.ಚ., ಅಂಕ ೨, ಪದ್ಯ…

ಈ ತೀವ್ರವಾದ ವಿಷರಸವು ಜೋರಾಗಿ ಹಬ್ಬುತ್ತಲಿರುವದು ಎಲ್ಲಿ… ಶಲ್ಯದ ಶಕಲವು ಸರಿದಾಡುತ್ತಿರುವದು. ಹೃದಯದ ಮರ್ಮಸ್ಥಾ…

ಗಂಟುಗಟ್ಟಿದ ಹುಣ್ಣು ಒಡೆದು ಅಸಹ್ಯ ವೇದನೆಯನ್ನುಂಟುಮಾಡಿದೆ. ಗಟ್ಟಿ-ಗೊಂಡ ಶೋಕವು ಹೊಸದಾಗಿ ನನ್ನನ್ನು ನೋಯಿಸುತ್ತಿರುವದು.

ರಾಮನು ಪಂಚವಟಿಯಲ್ಲಿದ್ದಾಗಲೇ ಮೂರನೆಯ ಅಂಕವು ಪ್ರಾರಂಭವಾಗುವದು. ಈ ಅಂಕಕ್ಕೆ ಛಾಯಾ ಎಂದು ಹೆಸರು. ಸೀತಾದೇವಿಯು ಭಾಗೀರಥಿಯ ಪ್ರಸಾದದಿಂದ ಅದೃಶ್ಯಳಾಗಿ ಸಂಚರಿಸುವಳು. ಆದುದರಿಂದ ಆಕೆಯು ಛಾಯಾರೂಪದಿಂದಿರುವಳು. ರಾಮನಿಗಾಗುವ ಅಪಾರ ಮತ್ತು ಅಸಹ್ಯ ದುಃಖವನ್ನು ಪ್ರತ್ಯಕ್ಷ ಕಾಣುವ ಪ್ರಸಂಗವನ್ನು ಕವಿಯು ಆಕೆಗೆ ತಂದು ಕೊಟ್ಟಿರುವನು. ರಾಮನ ಬಗೆಗೆ ಆಕೆಗೆ ಸಹಾನುಭೂತಿಯೆನಿಸಿ ತನಗಾದ ಅನ್ಯಾಯವನ್ನು ಮರೆತುಬಿಡುವಳು.

“ ಅಹಂ ಏತಸ್ಯ ಹೃದಯಂ ಜಾನಾಮಿ ಮಮೈಷ ಇತಿ ”

ಎಂದು ಒಪ್ಪಿಕೊಳ್ಳುವಳು. ಸೀತಾದೇವಿಯು ಆದರ್ಶ ಗೃಹಿಣಿ. ರಾಮನಿಂದಾದ ಅನ್ಯಾಯವನ್ನು ಮರೆತುಬಿಡುವಳು. ಆತನು ಪಡುವ ದುಃಖವನ್ನು ಕಂಡು ಮರುಗುವಳು.

ಅನಿರ್ಭಿನ್ನಗಭೀರತ್ವಾದಂತರ್ಗೂಢಘನವ್ಯಥಃ ।
ಪುಟಪಾಕಪ್ರತೀಕಾಶೋ ರಾಮಸ್ಯ ಕರುಣೋ ರಸಃ ॥

(ಉ.ರಾ.ಚ., ಅಂಕ ೩, ಪ. ೧)

ರಾಮನ ಕರುಣರಸವು ಆತನ ಗಾಂಭೀರ್ಯಕ್ಕಾಗಿ ಒಳಗೊಳಗೆ ಪುಟ-ಕ್ಕಿಟ್ಟಂತೆ ಕುದಿಯುತ್ತಿರುವದು ಎಂಬ ಪದ್ಯದಲ್ಲಿ ಮುರಲಾನದಿಯು ರಾಮನ ಸ್ಥಿತಿಯನ್ನು ಬಲು ಚೆನ್ನಾಗಿ ಚಿತ್ರಿಸಿರುವಳು. ಸೀತಾದೇವಿಯ ಚಿತ್ರವು—

ಪರಿಪಾಂಡುದುರ್ಬಲಕಪೋಲಸುಂದರಂ ।
ದಧತೀ ವಿಲೋಲಕಬರೀಕಮಾನನಂ ॥
ಕಾರುಣ್ಯಸ್ಯ ಮೂರ್ತಿರಥವಾ ಶರೀರಿಣೀ ।
ವಿರಹವ್ಯಥೇವ ವನಮೇತಿ ಜಾನಕೀ ॥

(ಉ.ರಾ.ಚ., ಅಂಕ ೩, ಪ. ೧)

ಬಾಡಿದ ಆದರೂ ಸುಂದರವಾದ ಮುಖವುಳ್ಳ ಸೀತಾದೇವಿ ಕರುಣರಸದ ಮೂರ್ತಿ ಅಥವಾ ವಿರಹವ್ಯಥದ ಶರೀರಿಣಿಯಾಗಿ ವನವನ್ನು (ಪ್ರವೇಶಿಸಿದಳು) ಎಂಬ ಪದ್ಯದಲ್ಲಿ ಮೂಡಿರುವದು.

ವನದೇವತೆಯಾದ ವಾಸಂತಿ ಮತ್ತು ರಾಮಚಂದ್ರ ಇವರ ಸಂಭಾಷಣೆಯಲ್ಲಿ ಶೋಕರಸವು ಒಳ್ಳೆಯ ಉನ್ನತಸ್ಥಿತಿಗೇರಿದೆ. ವಾಸಂತಿಯು—

ತ್ವಂ ಜೀವಿತಂ ತ್ವಮಸಿ ಮೇ ಹೃದಯಂ ದ್ವಿತೀಯಂ ।
ತ್ವಂ ಕೌಮುದೀ ನಯನಯೋರಮೃತಂ ತ್ವಮಂಗೇ ॥
ಇತ್ಯಾದಿಭಿಃ ಪ್ರಿಯಶತೈರನುರುಧ್ಯ ಮುಗ್ಧಾಂ ।
ತಾಮೇವ ಶಾಂತಮಥವಾ ಕಿಮತಃ ಪರೇಣ ॥

(ಉ.ರಾ.ಚ., ಅಂಕ ೩, ಪ. ೨೬)

ನೀನೇ ನನ್ನ ಜೀವನಸರ್ವಸ್ವ, ನೀನೇ ನನ್ನ ದ್ವಿತೀಯ ಹೃದಯ, ನೀನೇ ನನ್ನ ಕಣ್ಣುಗಳಿಗೆ ಕೌಮುದಿ, ನನ್ನ ಶರೀರಕ್ಕೆ ಅಮೃತ, ಹೀಗೆ ನೂರಾರು ಪ್ರಿಯಕರವಾದ ಶಬ್ದಗಳಿಂದ ಮುಗ್ಧೆಯಾದ ಅವಳನ್ನು .... ಹೆಚ್ಚಿಗೇನಿದೆ. ಶಾಂತಂ. ಈ ಮಾತುಗಳಲ್ಲಿ ವಾಸಂತಿಯ ಕೋಪ ಪರಮಾವಧಿಸ್ಥಿತಿಗೆ ಮುಟ್ಟಿದೆ. ಈ ವಾಕ್ಯಗಳನ್ನಾಡಿ ವಾಸಂತಿಗೆ ಮೂರ್ಛೆಬರುವದು. ರಾಮನಿಂದ ಸಮಾಶ್ವಾಸಿತಳಾಗಿ

ತತ್ಕಿಮಿದಮಕಾರ್ಯಮನುಷ್ಠಿತಂ ದೇವೇನ ॥

(ಉ.ರಾ.ಚ., ಅಂಕ ೩, ಪದ್ಯ ೨೬ರ ನಂತರ
ವಾಸಂತೀ ಆಡಿದ ಮಾತುಗಳು)

ಈ ಕಾರ್ಯವು ನಿಮ್ಮಿಂದ ಆದುದು ಏಕೆ ? ಎಂದು ಕೇಳುವಳು. ರಾಮನು ಹೇಳಿದ—

ಲೋಕೋ ನ ಮೃಷ್ಯತೀತಿ ॥

ಜನರು ಒಪ್ಪಲಿಲ್ಲವೆಂದು. ತಮಸಾದೇವಿಯೂ ಕೂಡ ವಾಸಂತಿಯು ರಾಮನನ್ನು ಚೆನ್ನಾಗಿ ಹಳಿದಳೆಂದು ಭಾವಿಸಿದಳು, ಸೀತಾದೇವಿಯೂ ರಾಮನ ಪಕ್ಷವನ್ನೇ ವಹಿಸಿ ಆತನಿಗೆ ವಾಸಂತಿಯು ಹೆಚ್ಚು ವೇದನೆಯನ್ನುಂಟುಮಾಡುವ ಳೆಂದು ಅಂದಳು. ಇಷ್ಟರಿಂದಲೇ ವಾಸಂತಿಗೆ ಸಮಾಧಾನವಾಗಲಿಲ್ಲ. ಆಕೆ ಪುನಃ—

ಅಯಿ ಕಠೋರಯಶಃ ಕಿಲ ತೇ ಪ್ರಿಯಂ । ಕಿಮಯಶೋನನು ಘೋರಮತಃ ಪರಂ । ಕಿಮಭವದ್ವಿಪಿನೇ ಹರಿಣೀದೃಶಃ ಕಥಯ ನಾಥ ಕಥಂ ಬತ ಮನ್ಯಸೇ ॥

(ಉ.ರಾ.ಚ., ಅಂಕ ೩, ಪ. ೨೮)

ಅಯಿ ಕ್ರೂರ, ನಿನಗೆ ಕೀರ್ತಿಯೇ ಪ್ರಿಯವಾದುದು. ನಿನ್ನ ಈ ಕೃತಿಗಿಂತ ಘೋರವಾದುದುಂಟೇ? ಅರಣ್ಯದಲ್ಲಿ ಆ ಪ್ರಾಣಿಯ ಗತಿಯೇನಾಗಿರಬಹುದು? ನಾಥ! ಹೇಳು? ಎಂದು ಕೇಳುವಳು.

ರಾಮನಿಗಾದ ದುಃಖ ಅಪಾರವಾದುದು. ರಾಮನು ಮುಕ್ತಕಂಠದಿಂದ ಅಳುವನು. ಆದರಿಂದ ರಾಮನ ದುಃಖದ ಆವೇಗವು ಕಡಿಮೆಯಾಗುವದೆಂದು ತಮಸಾದೇವಿಯ ಅಭಿಪ್ರಾಯ.

ಪೂರೋತ್ಪೀಡೇ ತಡಾಗಸ್ಯ ಪರೀವಾಹಃ ಪ್ರತಿಕ್ರಿಯಾ ।
ಶೋಕಕ್ಷೋಭೇ ಚ ಹೃದಯಂ ಪ್ರಲಾಪೈರವಧಾರ್ಯತೇ ॥

(ಉ.ರಾ.ಚ., ಅಂಕ ೩, ಪ. ೩೦)

ತುಂಬ ತುಂಬಿದ ಕೆರೆಗೆ ಕೋಡಿಯೇ ಸಹಾಯಕವು. ಶೋಕ ಕ್ಷೋಭದಿಂದ ಹೃದಯವು ಬಿಗಿದಾಗ ಅತ್ತರೇನೇ ಉಳಿವು. ವಿಶೇಷವಾಗಿ ರಾಮಭದ್ರನಿಗೆ ಅನೇಕ ಪ್ರಕಾರ ಕಷ್ಟಗಳಿವೆ. ರಾಜ್ಯವನ್ನು ಸರಿಯಾಗಿ ನಡೆಸಿಕೊಂಡು ಹೋಗಬೇಕು. ಬಿಸಿಲಿನಲ್ಲಿ ಹೂ ಕಮರುವಂತೆ ಸೀತೆಯು ದುಃಖದಲ್ಲಿ ತಳಮಳಿಸುವನು. ತಾನೇ ಆಕೆಯನ್ನು ತ್ಯಾಗವಮಾಡಿದುದರಿಂದ ಬಹಿರಂಗವಾಗಿ ಅಳುವದೂ ಕೂಡ ಸುಲಭವಲ್ಲ. ಆದುದರಿಂದ ಪಂಚವಟಿಯಲ್ಲಿ ಆತನು ರೋದನ ಮಾಡುವದು ಅನುಕೂಲ. ಆದರಿಂದ ಒಂದು ರೀತಿಯಿಂದ ಲಾಭವೇ. ರಾಮನಿಗೆ ಜೀವನವು ಸಾಕುಸಾಕಾಗಿ ಹೋಗಿದೆ.

ದಲತಿ ಹೃದಯಂ ಗಾಢೋದ್ವೇಗಂ ದ್ವಿಧಾತು ನ ಭಿದ್ಯತೇ ।
ವಹತಿ ವಿಕಲಃ ಕಾಯೋ ಮೋಹಂ ನ ಮುಂಚತಿ ಚೇತನಾಂ ॥
ಜ್ವಲಯತಿ ತನೂಮಂತರ್ದಾಹಃ ಕರೋತಿ ನ ಭಸ್ಮಸಾತ್ ।
ಪ್ರಹರತಿ ವಿಧಿರ್ಮರ್ಮಚ್ಛೇದೀ ನ ಕೃಂತತಿ ಜೀವಿತಂ ॥

(ಉ.ರಾ.ಚ., ಅಂಕ ೩, ಪ. ೩೧)

ಹೃದಯವು ಉದ್ವೇಗದಿಂದ ತುಂಬಿದೆ; ಇಬ್ಭಾಗವಾಗಲೊಲ್ಲದು. ವಿಕಲವಾದ ಶರೀರಕ್ಕೆ ಮೋಹವುಂಟಾಗಿದೆ; ಚೈತನ್ಯ ಹೋಗಲೊಲ್ಲದು. ಒಳಗಿಂದೊಳಗೆ ಬೆಂಕಿಯು ಪ್ರಜ್ವಲಿಸುತ್ತಿರುವದು; ಶರೀರವು ಬೂದಿಯಾಗಲೊಲ್ಲದು. ವಿಧಿಯು ಮರ್ಮವನ್ನು ಭೇದಿಸುತ್ತಿರುವದು; ಜೀವಿತವನ್ನು ಕಡಿದೊಗೆಯಲೊಲ್ಲದು.

ಕವಿಯು ರಾಮನನ್ನು ಬುದ್ಧಿಪೂರ್ವಕವಾಗಿ ಪಂಚವಟಿಗೆ ಕರೆದುಕೊಂಡು ಬಂದು ಚಿರಪರಿಚಿತವಾದ ಸ್ಥಳಗಳನ್ನು ತೋರಿಸಿ ಆತನ ಸಂತಾಪವನ್ನು ಕೆರಳಿಸುವನು. ಅಯೋಧ್ಯೆಯಲ್ಲಿದ್ದರೆ ಆತನಿಗೆ ಅಳುವದೂ ಕೂಡಾ ಸಾಧ್ಯವಿದ್ದಿಲ್ಲ. ಇಲ್ಲಿ ಅರಣ್ಯದಲ್ಲಿ ಆತನು ಯಥೇಚ್ಛವಾಗಿ ಅತ್ತು ದುಃಖಾವೇಗವನ್ನು ಕಡಿಮೆ ಮಾಡಿಕೊಳ್ಳಬಹುದು. ಏಕಾಕಿಯಾದ ರಾಮನಿಗೆ ವಿಪರೀತವಾದ ದುಃಖದಿಂದ ಅಪಾಯವಾಗದಂತೆ ನೋಡಿಕೊಳ್ಳಲಾಗಿದೆ. ಸೀತಾದೇವಿಯನ್ನು ಛಾಯಾ-

ರೂಪದಿಂದ ಅಲ್ಲಿಗೆ ಕರೆದುಕೊಂಡು ಬಂದು ದೇವತೆಗಳು ರಾಮನ ಸಮೀಪ
ದಲ್ಲಿಯೇ ಅದೃಶ್ಯವಾಗಿ ಇದ್ದಾರೆ. ವನದೇವತೆ ವಾಸಂತಿಯು ಹಿಂದಿನ ದೃಶ್ಯ
ಗಳನ್ನು ರಾಮನಿಗೆ ತೋರಿಸುತ್ತಿದ್ದಾಳೆ. ಈ ಎಲ್ಲ ಸನ್ನಿವೇಶಗಳಿಂದ ರಾಮನ
ಉದ್ವೇಗವು ವಿಪರೀತವಾಗಿ ಕೆರಳಿ ಆತನಿಗೆ ಮೂರ್ಛೆ ಬರುವದು. ಛಾಯಾ-
ರೂಪಿಣಿ ಸೀತಾದೇವಿ ಉಪಚಾರಮಾಡಿ ಸಂಜ್ಞೆಯನ್ನುಂಟುಮಾಡುವಳು.

ಮುಂದಿನ ಅಂಕದಲ್ಲಿ ಜನಕ, ಕೌಸಲ್ಯ, ಅರುಂಧತಿ ಮೊದಲಾದ ಹಿರಿಯರಿ
ಗಾದ ದುಃಖವನ್ನು ಚಿತ್ರಿಸಿರುವನು. ಋಷ್ಯಶೃಂಗನ ಯಜ್ಞಕ್ಕಾಗಿ ಹೋದ
ವಸಿಷ್ಠ, ಅರುಂಧತಿ, ಕೌಸಲ್ಯೆ ಮೊದಲಾದ ಹಿರಿಯರು ಯಜ್ಞ ಮುಗಿದಮೇಲೆ
ಅಯೋಧ್ಯೆಗೆ ಹೋಗದೆ ವಾಲ್ಮೀಕಿಯ ಆಶ್ರಮಕ್ಕೆ ಬರುವರು. ಜನಕನೂ
ಬಹುಕಾಲದ ಮಿತ್ರನಾದ ಪ್ರಾಚೇತಸನನ್ನು ಕಾಣಲು ಅಲ್ಲಿಗೇ ಬರುವನು.
ಯಾವಾಗಲೂ ಹೃದಯದಲ್ಲಿ ಮನೆಮಾಡಿಕೊಂಡಿರುವ ಸೀತೆಯ ದುಃಖದಿಂದ
ತಪಿಸುವ ಜನಕನನ್ನು ಒಳಗಿಂದೊಳಗೇ ಬೆಂಕಿಯಿಂದ ಕುದಿಯುತ್ತಿರುವ ಹಳೆ
ವನಸ್ಪತಿಗೆ ಕವಿಯು ಹೋಲಿಸಿರುವನು. ಜನಕನ ದುಃಖ ಸಹಿಸಲಸಾಧ್ಯ
ವಾದುದು. ಮುಪ್ಪಿನಿಂದ, ಕಟುತರವಾದ ದುಃಖದಿಂದ, ಪರಾಕ ಸಾಂತಪನಾದಿ
ವ್ರತಗಳಿಂದ ಸಣ್ಣಿಸಿದ ಜನಕನ ಶರೀರವು ಇನ್ನೂ ಬದುಕಿ ಉಳಿದುದು
ಆಶ್ಚರ್ಯ. ಆತ್ಮಹತ್ಯ ಮಾಡಿಕೊಳ್ಳಲೂ ಕೂಡ ಆತನಿಗೆ ಅಸಾಧ್ಯ.

"ಅಂಧ ತಮಿಸ್ರಾ ಹ್ಯ ಸೂರ್ಯ ನಾಮತೇ ಲೋಕಾಃ । ತೇಭ್ಯಃ ಪ್ರತಿ
ವಿಧೀಯಂತ ಯ ಆತ್ಮ ಘಾತಿನ ಇತ್ಯೇವಮೃಷಯೋ ಮನ್ಯಂತೇ ॥

(ಉ.ರಾ.ಚ., ಅಂಕ ೪, ಪದ್ಯ
ಮತ್ತು ೪ ಇವುಗಳ ಮಧ್ಯದಲ್ಲಿರುವ ಜನಕನ ವಾಕ್ಯಗಳು.

ಸೂರ್ಯನಿಲ್ಲದ, ಕತ್ತಲೆಯಿಂದ ತುಂಬಿದ ಲೋಕದಲ್ಲಿ ಆತ್ಮಘಾತ ಮಾಡಿ
ಕೊಳ್ಳುವವರು ಕೊಳೆಯುವರೆಂದು ಋಷಿಗಳು ಸಾರುವರು. ಸಾಮಾನ್ಯವಾ
ದಿವಸಗಳು ಕಳೆದಂತೆ ದುಃಖದ ಆವೇಗವು ಕಡಿಮೆಯಾಗಬೇಕು! ಆದರೆ ಜನ
ನಿಗೆ ಅನೇಕ ಸಂವತ್ಸರಗಳು ಗತಿಸಿದರೂ ಕೂಡ ಕ್ಷಣಕ್ಷಣಕ್ಕೂ ದುಃಖವು ಹೊ
ದಾಗಿ ಒತ್ತರಿಸಿಬರುವುದು. ಪಾಪ! ಜನಕ ವೃದ್ಧಾಪ್ಯದಲ್ಲಿ ಹೇಗೆ ತಡೆದುಕೊ
ಬೇಕು? ಇಂತಹ ಸಂದರ್ಭದಲ್ಲಿ ರಾಮನ ತಾಯಿಯಾದ ಕೌಸಲ್ಯೆಯ ದರ್ಶನ
ಜನಕನಿಗಾದ ದುಃಖವನ್ನು ಕಲ್ಪಿಸುವುದೂ ಕೂಡ ಕಷ್ಟ. ಪಾಪ! ಕೌಸ
ಗಾದರೂ ಅದೇ ಕಷ್ಟ. ಅರುಂಧತಿಯ ಮಧ್ಯಸ್ಥಿಕೆಯಿಂದ ಜನಕ-ಕೌಸಲ್ಯೆಯ
ದರ್ಶನ ಸರಳವಾಗಿ ಆಗುವದು. ಕವಿಯು ಯಜ್ಞಾಶ್ವದ ನಿಮಿತ್ತವಾಗಿ ರಾ
ನನ್ನೂ ಕೂಡ ವಾಲ್ಮೀಕಿಯ ಆಶ್ರಮಕ್ಕೆ ತರುವನು. ಅಲ್ಲಿ ಲವ-ಕುಶ
ಪರಿಚಯ ಮಾಡಿಕೊಡುವನು. ರಾಮ ಮೊದಲಾದ ಹಿರಿಯರೆಲ್ಲರ ಸಾನ್ನಿ

ದಿಂದ ವಾಲ್ಮೀಕಿ ಆಶ್ರಮವು ತುಂಬಿ ಹೋಗುವದು. ಇದೇ ಸಂದರ್ಭದಲ್ಲಿ ವಾಲ್ಮೀಕಿ ರಚಿಸಿದ ರಾಮಾಯಣ ನಾಟಕವು ಪ್ರದರ್ಶಿಸಲ್ಪಡುವದು. ನಾಟಕವು ವಿಶೇಷವಾಗಿ ಸೀತಾದೇವಿಯ ಕಷ್ಟವನ್ನು ಪ್ರದರ್ಶಿಸುವದು. ಇದನ್ನು ನೋಡಿ ರಾಮನಿಗೆ ಮೂರ್ಛೆ ಬರುವದು. ಅರುಂಧತಿಯು, ಆಮಂತ್ರಿಸಲ್ಪಟ್ಟ ಪ್ರಜೆಗಳು, ದೇವತೆಗಳು, ಋಷಿಗಳು ಎಲ್ಲರ ಅನುಮತಿಯಿಂದ ಸೀತಾದೇವಿಯನ್ನು ರಾಮನಿಗೆ ಒಪ್ಪಿಸುವಳು.

ಉತ್ತರರಾಮಚರಿತದ ಭಾಷೆ, ವಸ್ತು, ರಸ, ಎಲ್ಲವೂ ಗಂಭೀರವಾದುವು. ಇದರಲ್ಲಿದ್ದ ಕರುಣರಸವು ಎಂತಹ ಕಲ್ಲೆದೆಯವನನ್ನೂ ಕರಗಿಸುವಂತಹದು. ಕವಿಗೆ ಈ ವಿಷಯ ಗೊತ್ತು. ಅಂತೇ ಅವನು ನಿರ್ಜೀವ ವಸ್ತುಗಳಾದ ಕಲ್ಲುಗಳೂ ಕೂಡ ರಾಮನ ಸ್ಥಿತಿಯನ್ನು ಕಂಡು ಕಣ್ಣೀರು ಸುರಿಸುತ್ತವೆ, ಅತಿ ಬಿರುಸಾದ ವಜ್ರವೂ ಕೂಡ ಕರಗುತ್ತದೆ, ಎಂದು ಉದ್ಗಾರ ತೆಗೆದಿರುವನು. ಇಂತಹ ದುಃಖಪೂರಿತವಾದ ಕಥೆಯನ್ನು ಯಶಸ್ವಿಯಾಗಿ ಬರೆಯಲು ಭವಭೂತಿಯು ಸಮರ್ಥನಾದುದರಿಂದ ಪೂರ್ವದ ಕವಿಗಳೆಲ್ಲ ಆತನನ್ನು "ಉತ್ತರೇ ರಾಮಚರಿತೇ ಭವಭೂತಿರ್ವಿಶಿಷ್ಯತೇ" ಎಂದು ಹೊಗಳಿರುವರು.

★ ಡಾ. ಶಿ. ಚೆ. ನಂದಿಮಠ

ಮಿತ್ರಾಯ ನಮಃ*

ನಮಗೆ ಸಂಪತ್ಕಾಲದಲ್ಲಿ ಮತ್ತು ವಿಪತ್ಕಾಲದಲ್ಲಿ ಕೂಡಿಯೇ ಆಗು-ವವನನ್ನು ಮಿತ್ರನೆಂದು ಕರೆಯುವುದುಂಟು. ಮಾನವ ಜನಾಂಗದ ನಿಜವಾದ ಮಿತ್ರನೂ ಹಾಗು ಮಿತ್ರನೆಂಬ ಅಂಕಿತನಾಮವುಳ್ಳವನೂ ಆದ ಇವನ ಗುಣ-ಕಥನವೇ ಈ ಲೇಖದ ಉದ್ದೇಶವು.

ಪ್ರಾಸ್ತಾವಿಕ :

ಸೌರಯುಗದ ಅಂಗವಾದ ಶಿಲಾಯುಗದಿಂದ ಪೃಥ್ವಿಯ ಮೇಲೆ ತನ್ನ ಜೀವನವನ್ನು ಪ್ರಾರಂಭಿಸಿದ ಮಾನವನು, ಜೀವನಾಧಾರನಾದ ಸೂರ್ಯನು ಕೋಟ್ಯಾಂತರ ವರುಷಗಳಿಂದ ಪೃಥ್ವಿಯಲ್ಲಿ ಭಿನ್ನಭಿನ್ನ ರೂಪಗಳಲ್ಲಿ ಸಂಚಯಿಸಿ ಇರಿಸಿದ ಶಕ್ತಿಯ ಪ್ರಯೋಜನವನ್ನು ಪಡೆದು, ಅನೇಕ ಸುಖಸೌಕರ್ಯಗಳನ್ನು ನಿರ್ಮಿಸಿಕೊಂಡು ಮುಂದುವರಿಯುತ್ತಿದ್ದಾನೆ. ಶಿಲಾಯುಗದಿಂದ ಪ್ರಾರಂಭಿಸಿ ಕ್ರಮೇಣ ಪ್ರಗತಿಹೊಂದುತ್ತ, ಎಂದರೆ ಈ ಸಂಚಯಿಸಲ್ಪಟ್ಟ ಶಕ್ತಿಯನ್ನು ತನ್ನ ಸೌಕರ್ಯಗಳನ್ನು ಹೆಚ್ಚಿಸಿಕೊಳ್ಳುವ ಉಪಕರಣಗಳನ್ನು ಉಪಯೋಗಿಸಿ ಆ ಆ ಕಾಲಗಳಲ್ಲಿಯ ಉಪಕರಣಗಳ ಪ್ರಾಧಾನ್ಯತೆಯನ್ನನುಸರಿಸಿ, ಉಗಿಯುಗ, ವಿದ್ಯುತ್-ಯುಗ ಈ ರೀತಿಯಾಗಿ ಮುಂದುವರಿಯುತ್ತ ಇಂದು ಅಂತರಿಕ್ಷಯುಗದಲ್ಲಿ ಕಾಲಿರಿಸತೊಡಗಿದ್ದಾನೆ. ಇದರ ಹೊರತಾಗಿ ಪರಮಾಣು-ಶಕ್ತಿಯಿಂದಲೂ ಪ್ರಯೋಜನವನ್ನು ಪಡೆಯಬೇಕೆಂದು ಇಂದು ಅವನು ಹವಣಿಸುತ್ತಿರುವನು. ಸೂರ್ಯನು ನಮ್ಮ ಹಿತಕ್ಕೆಂದು ಸಂಚಯಿಸಿದ ಶಕ್ತಿ ಯನ್ನು ಈಗ ನಾವು ದುಂದುಗಾರರಂತೆ ಉಪಯೋಗಿಸುತ್ತಿರುವೆವಾದ್ದರಿಂದ ಮತ್ತು ಇಂತಹ ಶಕ್ತಿಯನ್ನು ಉಪಯೋಗಿಸುವವರ ಸಂಖ್ಯೆಯು ಹೆಚ್ಚುತ್ತಿ-ರುವುದಾದ್ದರಿಂದ, ಶಕ್ತಿಯ ಅಭಾವದಿಂದಾಗಿ ಇನ್ನು ಹಲವೇ ಶತಮಾನಗಳಲ್ಲಿ ಮಾನವಜನಾಂಗವು ಪೂರ್ವಸ್ಥಿತಿಗೆ ತಿರುಗುವ ಪರಿಸ್ಥಿತಿಯು ಉದ್ಭೂತವಾಗು-ವುದೆಂಬ ಭಯವು ಮೂಡತೊಡಗಿದೆ. ಇಂತಹ ಪರಿಸ್ಥಿತಿಯು ಉಂಟಾಗ-ಬಾರದು ಮತ್ತು ಪೃಥ್ವಿಯ ಮೇಲಿನ ಜೀವರಾಶಿಗಳಲ್ಲಿ ಅತ್ಯಂತ ಬುದ್ಧಿ-ಜೀವಿಯಾದ ಮಾನವನು ತನ್ನ ಸಂತತಿಯು ಪೃಥ್ವಿಯ ಮೇಲೆ ಮುಂದು-ವರಿಯಬೇಕು ಎಂಬ ಇಚ್ಛೆಯಿದ್ದರೆ, ಅವನು ಮುಂದೆ ವಿವರಿಸಿದ ಮೂರ

* ಈ ಲೇಖವನ್ನು ಬರೆಯುವಲ್ಲಿ 'The Coming Age of Solar Energy—By D S. Halacy, Jr.' ಎಂಬ ಪುಸ್ತಕದಲ್ಲಿಯ ಅನೇಕ ವಿಚಾರಗಳನ್ನು ಉಪ ಯೋಗಿಸಿದ್ದೇನೆ. —

ದಿಸೆಗಳಲ್ಲಿ ಈಗಿನಿಂದಲೇ ಪರಿಶ್ರಮಪೂರ್ವಕವಾಗಿ ಕಾರ್ಯಮಾಡಬೇಕಾಗುವದು; ಇಲ್ಲವಾದರೆ ಮಾನವ ಜನಾಂಗದ ಅಸ್ತಿತ್ವವೇ ನಿರ್ಮೂಲವಾಗುವುದರಲ್ಲಿ ಸಂದೇಹವಿಲ್ಲ.

(೧) ನಿಸರ್ಗವು ಸಂಚಯಿಸಿ ಇರಿಸಿದ ಶಕ್ತಿಯನ್ನು ಹಿತಮಿತವಾಗಿ ಬಳಸುವದು,

(೨) ಜನಸಂಖ್ಯೆಯ ನಿಯಂತ್ರಣ,

(೩) ಸೌರಶಕ್ತಿಯನ್ನು ನೇರವಾಗಿ ಉಪಯೋಗಿಸುವದು.

ಈಗ ಮೇಲೆ ವಿವರಿಸಿದ ಮೂರು ಪರಿಹಾರಗಳಲ್ಲಿಯ ಮೊದಲಿನ ಎರಡರಲ್ಲಿ ನಾವು ಯಾವ ಬುದ್ಧಿವಂತರೂ ವರ್ತಿಸದ ರೀತಿಯಲ್ಲಿ ನಡೆಯುತ್ತಿರುವೆವಾದ್ದರಿಂದ ಮತ್ತು ಈ ಕಾರಣಗಳಿಂದಾಗಿ ಮೂರನೆಯ ವರ್ಗಕ್ಕೆ ಮೊರೆಹೊಗುವ ಕಾಲವು ಸನ್ನಿಹಿತವಾಗಿದ್ದರಿಂದ—ಮೊದಲಿನ ಎರಡರಲ್ಲಿ ನಮ್ಮನ್ನು ಸುಧಾರಿಸಿಕೊಂಡು ಮುಂದುವರಿಯುವದು ಹಾಗು ನಮ್ಮ ಎಲ್ಲ ಬುದ್ಧಿಸಾಮರ್ಥ್ಯವನ್ನು ಉಪಯೋಗಿಸಿ ಮೂರನೆಯ ವಿಷಯದಲ್ಲಿ ಯುದ್ಧಕಾಲದ ಅಗತ್ಯತೆಯಷ್ಟು ಆಸ್ಥೆಯಿಂದ ಸಂಶೋಧನೆಗಳನ್ನು ಜರುಗಿಸಿ ನಮ್ಮ ಕಲ್ಯಾಣವನ್ನು ಸಾಧಿಸಿಕೊಳ್ಳುವುದು, ಇವುಗಳೇ ನಮಗೆ ತಾರಕವಾಗಬಹುದು. ಈ ವಿಷಯಗಳನ್ನು ಸೂಕ್ಷ್ಮವಾಗಿ ವಿವೇಚಿಸುವುದೆಂದರೆ ಮಿತ್ರನ ಗುಣಕಥನವನ್ನು ಮಾಡಿದಂತೆಯೇ.

(೧) ನಿಸರ್ಗವು ಸಂಚಯಿಸಿದ ಶಕ್ತಿಯನ್ನು ಹಿತಮಿತವಾಗಿ ಬಳಸುವದು :

ಹಲವೇ ಶತಮಾನಗಳ ಹಿಂದೆ ಮನುಷ್ಯನು ತನಗೆ ಅಗತ್ಯವಿದ್ದ ಶಕ್ತಿಯನ್ನು ತನ್ನ ಸ್ನಾಯುಗಳ, ಎತ್ತು, ಕುದುರೆ ಮುಂತಾದ ಸಾಧುಪ್ರಾಣಿಗಳ ಅಥವಾ ಸೇವಕರ ಸಹಾಯದಿಂದ ಪೂರೈಸಿಕೊಳ್ಳುತ್ತಿದ್ದನು. ಹೆಚ್ಚು ಶಕ್ತಿಯ ಅವಶ್ಯಕತೆಯನ್ನು ಕಟ್ಟಿಗೆ, ಗಾಳಿ, ನೀರು ಮುಂತಾದವುಗಳ ಸಹಾಯದಿಂದ ಪಡೆಯುತ್ತಿದ್ದನು. ಕಟ್ಟಿಗೆಗಾಗಿ ನೈಸರ್ಗಿಕವಾಗಿ ಬೆಳೆದ ಅಡವಿಯೇ ಅವನ ಸಂಪತ್ತಾಗಿತ್ತು. ಕಾಲಾಂತರದಲ್ಲಿ ಅವನು ನಿಸರ್ಗದಿಂದ ಹೆಚ್ಚು ಹೆಚ್ಚು ಶಕ್ತಿಯನ್ನು ಪಡೆಯತೊಡಗಿ ಪ್ರಾರಂಭದಲ್ಲಿ ಬಡ್ಡಿಯ ಮೇಲೆ ಉಪಜೀವಿಸುವವನಾಗಿದ್ದ ಇವನು ಮೂಲಧನವನ್ನೇ ಉಪಯೋಗಿಸಲು ಪ್ರಾರಂಭಿಸಿದನು. ಇಲ್ಲಿಯ ಮೂಲಧನವೆಂದರೆ, ಸೂರ್ಯನು ಪ್ರಾರಂಭದಿಂದ ಪೃಥ್ವಿಯ ಅಂತರಾಳದಲ್ಲಿ ಕಲ್ಲಿದ್ದಲು, ಪೆಟ್ರೋಲ್ ಇತ್ಯಾದಿ ರೂಪಗಳಲ್ಲಿ ಸಂಚಯಿಸಿ ಇರಿಸಿದ ಇಂಧನಗಳು. ಇವುಗಳನ್ನು ಅವನು ಕೇವಲ ತನ್ನ ಅಗತ್ಯತೆಗಾಗಿ ಅಲ್ಲ, ಸುಖಸೌಕರ್ಯಗಳಿಗೆ ಉಪಯೋಗಿಸತೊಡಗಿದನು. ಇಲ್ಲಿ ಈ ಇಂಧನಗಳನ್ನು

ಉಪಯೋಗಿಸಿ ಕಾರ್ಯಮಾಡುವ ಉಪಕರಣಗಳನ್ನು ರಕ್ತಮಾಂಸಗಳಿಲ್ಲದ ಸೇವಕರಿಗೆ ತುಲನೆ ಮಾಡಬಹುದು. ಯಾಂತ್ರಿಕ ಸಲಕರಣೆಗಳ ಹಿನ್ನೆಲೆಯಲ್ಲಿ ವಿವೇಚಿಸಿದಾಗ, ತಲಾ ಹೆಚ್ಚು ಯಾಂತ್ರಿಕ ಶಕ್ತಿಯನ್ನು ಉಪಯೋಗಿಸುವ ರಾಷ್ಟ್ರಗಳು ಮುಂದುವರಿದವುಗಳೆಂದೂ ಮತ್ತು ತದ್ವಿರುದ್ಧವಾಗಿ ತಲಾ ಕಡಿಮೆ ಯಾಂತ್ರಿಕ ಶಕ್ತಿಯನ್ನು ಉಪಯೋಗಿಸುವ ರಾಷ್ಟ್ರಗಳು ಹಿಂದುಳಿದವುಗಳೆಂದೂ ಹೇಳಬಹುದು. ಈ ಮಾತನ್ನು ಜಗತ್ತಿನಲ್ಲಿಯ ಭಿನ್ನ ಭಿನ್ನ ರಾಷ್ಟ್ರಗಳಲ್ಲಿಯ ಪ್ರತಿಯೊಬ್ಬನೂ ಉಪಯೋಗಿಸುವ ಸರಾಸರಿ ಶಕ್ತಿಯಿಂದ ಕಂಡುಕೊಳ್ಳಬಹುದು. ನಾವು ಸಾಮಾನ್ಯವಾಗಿ ಉಪಯೋಗಿಸುವ ಮತ್ತು ಒಂದು ಯುನಿಟ್ ವಿದ್ಯುತ್‌ಶಕ್ತಿಯೆಂದು ಕರೆಯುವುದನ್ನು ನಮ್ಮ ಅಳತೆಯ ಏಕಮಾನವೆಂದು ತಿಳಿದಲ್ಲಿ, ಅಮೇರಿಕೆಯಲ್ಲಿ ವರ್ಷಕ್ಕೆ ತಲಾ ೧೬೦೦೦, ಕ್ಯಾನಡಾದಲ್ಲಿ ತಲಾ ೧೧೦೦೦, ಇಂಗ್ಲಂಡದಲ್ಲಿ ತಲಾ ೯೫೦೦ ಯುನಿಟುಗಳಷ್ಟು ಶಕ್ತಿಯನ್ನು ಉಪಯೋಗಿಸುವರು. ಆದರೆ ಏಸಿಯಾ ಖಂಡದಲ್ಲಿಯ ಹಲವು ಭಾಗಗಳಲ್ಲಿ ತಲಾ ಕೇವಲ ೨೦೦ ಯುನಿಟುಗಳಷ್ಟು ಶಕ್ತಿಯನ್ನು ಉಪಯೋಗಿಸುವರು. ಇದೇ ಪ್ರಮಾಣದಲ್ಲಿ ಆ ಆ ರಾಷ್ಟ್ರಗಳ ಸಾಂಪತ್ತಿಕ ಸ್ಥಿತಿಯೂ ಇರುವುದೆಂಬುದನ್ನು ಪ್ರತ್ಯೇಕವಾಗಿ ಹೇಳುವ ಅಗತ್ಯವೇ ಇಲ್ಲ. ಎಂದರೆ ಈಗ ಎಲ್ಲ ಹಿಂದುಳಿದ ರಾಷ್ಟ್ರಗಳು ಮುಂದುವರಿಯುವದರ ಅರ್ಥವೆಂದರೆ, ಈ ಹಿಂದುಳಿದ ರಾಷ್ಟ್ರಗಳು ಉಪಯೋಗಿಸುವ ತಲಾ ಶಕ್ತಿಯು ಮೇಲೇರುವುದು ಎಂದಂತಾಯಿತು. ಇದು ಹೀಗಾಗಲು ಯಾಂತ್ರಿಕ ಮುನ್ನಡೆಯು ಸಾಧಿಸಬಹುದಾದ ಔದ್ಯೋಗೀಕರಣವೇ ಕಾರಣವಾಗುವದು. ಇದನ್ನು ಸಾಧಿಸಲು ಈ ರಾಷ್ಟ್ರಗಳೂ ಕೂಡ ನಿಸರ್ಗವು ಸೂರ್ಯನಿಂದ ಸಂಚಯಿಸಿದ ಇಂಧನರೂಪೀ ಶಕ್ತಿಯನ್ನು ತಾವೂ ಉಪಯೋಗಿಸಬೇಕಾಗುವದು.

ಇಂದು ಜನತೆಗೆ ಹೆಚ್ಚು ಶಕ್ತಿಯು ಉಪಯೋಗಕ್ಕೆ ಬೇಕಿದ್ದರೆ, ನೈಸರ್ಗಿಕವಾಗಿ ದೊರೆಯುವ ಇಂಧನಗಳ ರೂಪದಲ್ಲಿಯ ಶಕ್ತಿಯನ್ನು ಹೆಚ್ಚಾಗಿ ಉಪಯೋಗಿಸುವುದೇ ಈ ಸಮಸ್ಯೆಯ ಪರಿಹಾರವೆಂದು ಯಾರಾದರೂ ಹೇಳಬಹುದು. ಆದರೆ ದುರ್ದೈವದಿಂದ ಪರಿಹಾರವು ಇಷ್ಟು ಸುಲಭದ್ದಿಲ್ಲ. ಸೂರ್ಯನು ಕೋಟ್ಯಾನುಕೋಟಿ ವರ್ಷಗಳಿಂದ ಸಂಚಯಿಸಿದ ಈ ಶಕ್ತಿಯನ್ನು ಮೂಲಧನವೆಂದು ತಿಳಿದಲ್ಲಿ—ನಾವು ಈ ಮೂಲಧನವನ್ನು ಉಪಯೋಗಿಸುವದರ ಗತಿಯು ಅದು ಉತ್ಪಾದಿಸಲ್ಪಡುವದರ ಗತಿಯನ್ನು ಅತಿಯಾಗಿ ಮಿಕ್ಕಿದೆಯಲ್ಲದೆ, ಈಗಾಗಲೇ ಮೂಲಧನದ ಅಂತ್ಯವೂ ಗೋಚರಿಸತೊಡಗಿದೆ. ಪರಿಸ್ಥಿತಿಯು ಇದೇ ರೀತಿಯಲ್ಲಿ ಮುಂದುವರಿದಲ್ಲಿ, ಹಲವೇ ಶತಮಾನಗಳ ನಂತರ ಮಾನವ ಜನಾಂಗದ ಭವಿತವ್ಯವು ಏನಾಗಬಹುದು ಎಂಬುದನ್ನು ಊಹಿಸುವುದು ಕೂಡ ಸಾಹಸದ ಮಾತಾಗಬಹುದು.

ನಮಗೆ ಇಂದು ಮೂಲಧನವೆಂದು ಲಭ್ಯವಿದ್ದ ಶಕ್ತಿಯ ವಿವರವನ್ನು ಹಾಗು ಈಗ ಅಲ್ಲಿ ಎಷ್ಟು ಉಳಿದಿವೆ ಎಂಬುದನ್ನು ಸ್ಥೂಲವಾಗಿ ತಿಳಿಯುವಾ. ೩೦ ಲಕ್ಷ ಕೋಟಿ ಟನ್ನುಗಳಷ್ಟು ಇದ್ದಲನ್ನು ಉರಿಸುವುದರಿಂದ ದೊರೆಯುವ ಶಕ್ತಿಯನ್ನು ಇಲ್ಲಿ Q ಎಂಬ ಸಂಜ್ಞೆಯಿಂದ ಗುರುತಿಸುವರು. ೧೮೫೦ರ ವರೆಗೆ ಮನುಷ್ಯನು ೯Q ಶಕ್ತಿಯನ್ನು ಮೂಲಧನದಿಂದ ಬಳಿಸಿದ್ದನು. ಮುಂದಿನ ಶತಮಾನದಲ್ಲಿ ಮತ್ತೆ ೪Q ಶಕ್ತಿಯು ಬಳಸಲ್ಪಟ್ಟಿತು. ಆದರೆ ಇಂದು ನಮ್ಮ ಸುಖಸೌಕರ್ಯಗಳು ಹೆಚ್ಚಿದ್ದರಿಂದ, ಈ ಅಳತೆಯು ಇಂದಿನ ಶತಮಾನದಲ್ಲಿ ೧೦Qಗೆ ಏರಬಹುದೆಂದು ಅಂದಾಜು ಮಾಡಲಾಗಿದೆ. ತಲಾ ಶಕ್ತಿಯ ಹೆಚ್ಚು ಉಪಯೋಗ ಹಾಗು ಏರುತ್ತಿರುವ ಜನಸಂಖ್ಯೆ ಇವೆರಡೂ ವಿರುದ್ಧ ದಿಕ್ಕಿನಲ್ಲಿ ಕಾರ್ಯಮಾಡತೊಡಗಿರುವದೇ ನಮ್ಮ ಸಮಸ್ಯೆಯ ಮೂಲವು. ಯಾವ ನಿಸರ್ಗನಿಯಮಗಳು ಇಂದಿನ ಸಮಸ್ಯೆಗೆ ಕಾರಣವಾಗಿರುವವೊ ಎಂದರೆ ಯಾವ ಶಕ್ತಿಯನ್ನು ಉಪಯೋಗಿಸಿ ಅತಿಯಾದ ಸೌಕರ್ಯಗಳನ್ನು ಕಲ್ಪಿಸಿಕೊಂಡಿರುವುದಲ್ಲದೆ ಜಗತ್ತಿನ ಜನಸಂಖ್ಯೆಯ ಹೆಚ್ಚಳಕ್ಕೆ ಕಾರಣವಾಗಿರುವವೋ, ಅವೇ ನಿಸರ್ಗನಿಯಮಗಳು—ನಾವು ಕ್ಷಿಪ್ರದಲ್ಲಿಯೇ ಜಾಗ್ರತರಾಗಿ ಕಾರ್ಯೋನ್ಮುಖರಾಗದಿದ್ದಲ್ಲಿ, ಶಕ್ತಿಯ ಅಭಾವದಿಂದಾಗಿ ನಮ್ಮ ನಾಶಕ್ಕೇ ಕಾರಣವಾಗುವವು ಮತ್ತು ಇದರಿಂದಾಗಿ ನಾವು ತಿರುಗಿ ಶಿಲಾಯುಗಕ್ಕೇ ಕಾಲಿರಿಸುವಂತಾಗುವದು. ಇಂತಹ ಸ್ಥಿತಿಯು ಬರಬಾರದು ಎಂದು ನಾವೆಲ್ಲರೂ ಇಚ್ಛಿಸುತ್ತಿದ್ದರೆ, ಇದರ ಪರಿಹಾರದ ಮಾರ್ಗವನ್ನು ಈಗಿನಿಂದಲೇ ವಿವೇಚಿಸಿ ಮುಂದುವರಿಯುವುದು ವಿಹಿತವೆನಿಸುವುದು.

ನಮ್ಮ ಶಕ್ತಿ-ಬ್ಯಾಂಕಿನಲ್ಲಿ ಉಳಿದ ಶಕ್ತಿ ಎಷ್ಟು ?

ಹಲವು ವಿಜ್ಞಾನಿಗಳ ಅಭಿಪ್ರಾಯದಂತೆ ೨೭Qದಷ್ಟು ಉಳಿದಿದೆ; ಎಂದರೆ ಜನಸಂಖ್ಯೆಯ ಹೆಚ್ಚಳ, ಇಂದು ನಾವು ತಲಾ ಉಪಯೋಗಿಸುವ ಸರಾಸರಿ ಶಕ್ತಿ ಮತ್ತು ಹಿಂದುಳಿದ ರಾಷ್ಟ್ರಗಳ ಮುದುವರಿಯುವಿಕೆ ಈ ಎಲ್ಲವುಗಳನ್ನು ಗಮನದಲ್ಲಿರಿಸಿ ವಿಚಾರ ಮಾಡಿದಾಗ, ಮುಂಬರುವ ಮೂರು ಶತಮಾನಗಳಿಗೆ ಶಕ್ತಿಯ ಯಾವುದೇ ಕೊರತೆಯೆನಿಸಲಿಕ್ಕಿಲ್ಲ. ಆದರೆ ಈಗಾಗಲೇ ಕಲ್ಲಿದ್ದಲಿಯ ಗಣಿ ಮತ್ತು ಎಣ್ಣೆಯ ಸಂಗ್ರಹಗಳ ತಳಗಳು ಕಾಣತೊಡಗಿವೆ ಎಂಬದನ್ನು ನಾವು ಮರೆಯುವಂತಿಲ್ಲ. ಗಣಿಗಳ ತಳದಿಂದ ಒಂದು ಟನ್ನಿನಷ್ಟು ಇದ್ದಲನ್ನು ಹೊರತೆಗೆಯಲು ಎಷ್ಟು ಶಕ್ತಿಯನ್ನು ವ್ಯಯಿಸಬೇಕಾಗುವುದೋ ಅಷ್ಟು ಶಕ್ತಿಯನ್ನು ಹೊರಗೆ ತೆಗೆದ ಇದ್ದಲು ಕೊಡಲು ಸಮರ್ಥವಾಗದು ಎಂಬ ಪರಿಸ್ಥಿತಿಯೆಡೆಗೆ ನಾವು ಧಾವಿಸುತ್ತಿರುವೆವು ಎಂಬುದನ್ನು ನಾವು ಇಲ್ಲಿ ಮರೆಯುವಂತಿಲ್ಲ.

ನಮ್ಮ ಇಂದಿನ ದುಂದುಗಾರಿಕೆಯ ಜೀವನವನ್ನು ಇದೇ ರೀತಿಯಾಗಿ ಮುಂದುವರಿಸಲು ಪರಮಾಣು ಶಕ್ತಿಯು ಸಾಧಾರಣವಾಗಿ ೫೦ ರಿಂದ ೧೭೫ ವರ್ಷಗಳ ವರೆಗೆ ಸಹಾಯ ಮಾಡಬಹುದು. ಸೂರ್ಯನಲ್ಲಿ ಅನಾದಿಕಾಲ ದಿಂದ ಉತ್ಪನ್ನವಾಗುತ್ತಿರುವ ಶಕ್ತಿಯ ರೀತಿಯ ಪ್ರತಿರೂಪವನ್ನು ಪೃಥ್ವಿಯ ಮೇಲೆ ನಿರ್ಮಿಸುವುದು ಅಲ್ಪಪ್ರಮಾಣದಲ್ಲಿ ಸಾಧ್ಯವಾದರೂ, ಇದನ್ನು ನಿಯಂ ತ್ರಿಸಿ ಹಿತಮಿತವಾಗಿ ಉಪಯೋಗಿಸುವುದು ಸಾಧ್ಯವಾಗಬಹುದೇ ಎಂಬುದು ಇಂದು ಇನ್ನೂ ಪ್ರಶ್ನೆಯಾಗಿಯೇ ಉಳಿದಿದೆ. ಮೇಲಾಗಿ ಈ ಕಾರ್ಯಕ್ಕಾಗಿ ಬೇಕಾಗುವ ಡ್ಯುಟೇರಿಯಮ್‌ದ ಸಂಗ್ರಹವು ಸಹ ಮಿತವಾಗಿರುವುದೆಂದೂ ಇದು ಸಹ ೫೦೦ ವರ್ಷಗಳವರೆಗೆ ಸಾಕಾಗಬಹುದೆಂದೂ ತಜ್ಞರು ಅಭಿಪ್ರಾಯಪಡುತ್ತಾರೆ. ಆದರೂ ಸಹ ಈ ರೀತಿಯಾಗಿ ಶಕ್ತಿಯನ್ನು ಪಡೆಯುವುದರಲ್ಲಿಯ ಅಡಚಣಿಗಳನ್ನು ನಾವು ಈ ಸಂದರ್ಭದಲ್ಲಿ ತಿಳಿಯುವುದರಲ್ಲಿಯೇ ನಮ್ಮ ಕಲ್ಯಾಣವು ಅಡಗಿದೆ ಎಂಬುದು, ಮುಂದಿನ ವಿವೇಚನೆಯಿಂದ ಕಂಡು ಬರುವುದು.

ಪರಮಾಣು ಹಾಗು ಬೀಜಾಣು ಶಕ್ತಿ

ಈ ದಿಸೆಯಲ್ಲಿಯ ಪ್ರಗತಿಗೆಂದು ಅನೇಕಾನೇಕ ಲಕ್ಷಕೋಟಿಗಳಷ್ಟು ಹಣವನ್ನು ಇಂದು ವ್ಯಯಿಸಲಾಗುತ್ತದೆ. ಔದ್ಯೋಗೀಕರಣಕ್ಕೆಂದು ಬೇಕಿರುವ ಶಕ್ತಿಯನ್ನು ಈ ರೀತಿಯಾಗಿ ಉತ್ಪಾದಿಸಲಾಗುತ್ತಿದ್ದರೂ ಸಹ ಇಲ್ಲಿಯ ಉತ್ಪಾದನೆಯ ವೆಚ್ಚವು, ಈ ರೀತಿಯು ಲಾಭದಾಯಕವೆನಿಸುವಷ್ಟು ಕಡಿಮೆ ಯಾಗಿಲ್ಲ. ಮೇಲಾಗಿ ಈ ವಿಧಾನದಿಂದ ವ್ಯಾವಹಾರಿಕವಾಗಿ ಶಕ್ತಿಯನ್ನು ಪಡೆಯಲು ಇನ್ನೂ ೨೫ ವರ್ಷಗಳ ಸಂಶೋಧನೆಯು ಅಗತ್ಯವೆಂದು ಅಭಿ ಪ್ರಾಯಪಡಲಾಗುತ್ತದೆ.

ಅಂತರಿಕ್ಷಪ್ರಯಾಣ, ಪರಮಾಣುಯುದ್ಧ, ನಮಗೆ ಈ ವರೆಗೆ ಪರಿ ಚಿತವಿದ್ದ ರೀತಿಯ ಯುದ್ಧ ಇವೆಲ್ಲವು ನಮ್ಮ ಶಕ್ತಿಸಂಗ್ರಹವನ್ನು ಬಹು ಬೇಗನೇ ತೀದುಹಾಕುವ ರೀತಿಗಳು ಮತ್ತು ಹೀಗೆ ವ್ಯಯಿಸಲ್ಪಟ್ಟ ಶಕ್ತಿಯನ್ನು ನಮಗೆ ತಿರುಗಿ ತುಂಬಿಕೊಳ್ಳಲು ಸಹ ಸಾಧ್ಯವಿಲ್ಲ. ಇದರ ಹೊರತಾಗಿ ನಾವು ಇಲ್ಲಿ ಬೇರೆ ಹಲವು ಕಂಟಕಗಳನ್ನೂ ಎದುರಿಸಬೇಕಾಗುವದು.

ಔದ್ಯೋಗೀಕರಣಕ್ಕೆಂದು ಉಪಯೋಗಿಸಲ್ಪಡುವ ಯಂತ್ರಗಳು ಸಾಮಾ ನ್ಯವಾಗಿ ತಮ್ಮ ಸುತ್ತಲಿನ ಪ್ರದೇಶದ ವಾತಾವರಣವನ್ನು ಕಲುಷಿತಗೊಳಿ ಸುವವು. ಮೇಲಾಗಿ ಈಗ ಪ್ರಚಲಿತವಿದ್ದ ಯಂತ್ರಗಳು ಉಪಯೋಗಿಸು ಇಂಧನಗಳು ಬಿಟ್ಟುಕೊಡುವ ಉಪಯುಕ್ತವಲ್ಲದ ಚರಟವನ್ನು ಸಾಗಿಸುವು

ಹಾಗು ಈ ಯಂತ್ರಗಳು ಆಕಸ್ಮಿಕವಾಗಿ ಸುಟ್ಟುಹೋಗುವ ಸಂದರ್ಭಗಳು ಸಹ ವಿಮಂಚನೆಗೆ ಕಾರಣವಾಗುವವು. ಇವೇ ಮಾತುಗಳನ್ನು ಪರಮಾಣುಶಕ್ತಿಯುನ್ನು ಉತ್ಪಾದಿಸಬಲ್ಲ ವಿಕಿರಣಶೀಲ ವಸ್ತುಗಳಿಗೆ ಅನ್ವಯಿಸಿದಾಗ ಪರಿಸ್ಥಿತಿಯು ಗಂಭೀರವೆನಿಸುವಷ್ಟು ಕಠಿಣವಾಗುವದು. ಇಂತಹ ಶಕ್ತಿಯಿಂದ ಚಾಲಿತ ಯಂತ್ರಗಳ ಸಮೀಪದಲ್ಲಿದ್ದುಕೊಂಡು ಕಾರ್ಯಮಾಡುವುದೂ ಸಹ ಅತೀ ಅಪಾಯಕಾರಿಯಾದುದು. ಇಷ್ಟೇ ಅಪಾಯಕಾರಿಯಾದ ಇಲ್ಲಿಯ ಇನ್ನೊಂದು ಸಮಸ್ಯೆಯು, ಇಂದು ಇನ್ನೂ ಸಮಸ್ಯೆಯಾಗಿಯೇ ಉಳಿದಿದೆ. ವಿಕಿರಣ ಶೀಲ ವಸ್ತುಗಳ ಕ್ರಿಯೆಯಿಂದ ದೊರೆತ ನಿರ್ವೀರ್ಯವಾದ ಕಸರನ್ನು ಯಾವ ರೀತಿಯಲ್ಲಿ ಮತ್ತು ಎಲ್ಲಿಗೆ ಸಾಗಿಸುವುದು ಎಂಬುದು ಇಲ್ಲಿಯ ಸಮಸ್ಯೆಯು. ಈ ಕಸರನ್ನು ಅಂತರಿಕ್ಷದಲ್ಲಿ ಹಾರಿಸಿಬಿಡುವುದಾಗಲಿ ಅಥವಾ ಸಮುದ್ರ ತಳದಲ್ಲಿ ಹುಗಿದುಬಿಡುವುದಾಗಲಿ ಈ ಸಮಸ್ಯೆಗೆ ಸೂಚಿಸಲ್ಪಟ್ಟ ಪರಿಹಾರ ಗಳಿರುವುದಾದರೂ, ಇವು ನಿಜವಾದ ಪರಿಹಾರಗಳಲ್ಲ. ಏಕೆಂದರೆ ಮೇಲೆ ತೂರಲ್ಪಟ್ಟ ಕಸರು ಅಲ್ಲಿಯೇ ಕೃತಕಚಂದ್ರರಂತೆ ತನ್ನ ಕಕ್ಷೆಯಲ್ಲಿ ತಿರುಗಿದರೂ ಕೂಡ, ಕೆಳಗೆ ಬೀಳುವ ಭೀತಿಯೂ ಇಲ್ಲದಿಲ್ಲ. ಅದೇ ಪ್ರಕಾರವಾಗಿ ಸಮುದ್ರದಲ್ಲಿ ಹುಗಿದ ಕಸರಿನಿಂದಾಗಿ, ಸಮುದ್ರದಲ್ಲಿ ವಾಸಿಸುವ ಪ್ರಾಣಿಜೀವನ ಹಾಗು ಅಲ್ಲಿ ಬೆಳೆಯುವ ಸಸ್ಯಗಳು ಇವೆರಡನ್ನೂ ನಾವು ಗಂಡಾಂತರ ದಲ್ಲಿ ನೂಕಿದಂತೆ ಆಗುವದು. ಎಂದರೆ ಮೇಲಿನ ವಾತಾವರಣ ಹಾಗು ಪೃಥ್ವಿಗೆ ಹೊಂದಿರುವ ಸಮುದ್ರ–ಮಹಾಸಾಗರಗಳು ಕಲುಷಿತವಾಗುವವು ಮತ್ತು ಇವುಗಳಿಂದಾಗಿ ಇಂದು ನಾವು ಕೈಕೊಳ್ಳಬೇಕೆಂದಿರುವ ಅಂತರಿಕ್ಷ ಪ್ರವಾಸವು, ಈಗ ತಾನು ಎದುರಿಸುತ್ತಿರುವ ಗಂಡಾಂತರಗಳನ್ನು ಹೊರತುಪಡಿಸಿ ಈ ಎರಡು ಹೆಚ್ಚಿನ ಹಾಗು ಪ್ರಾಣಾಪಾಯಕಾರಕ ಗಂಡಾಂತರಗಳನ್ನು ಎದುರಿಸ ಬೇಕಾಗುವದು. ಮೇಲಾಗಿ ಇಂತಹ ಇಂಧನಗಳನ್ನು ಕಾರ್ಯಮಾಡಿಸಲು ಬಹಳೇ ವೆಚ್ಚದಿಂದ ತಯಾರಿಸಿದ ಬಹು ದೊಡ್ಡ ಯಾಂತ್ರಿಕ ಸಲಕರಣೆಗಳನ್ನು ಅಳ ವಡಿಸಬೇಕಾಗುವದು.

ಮೇಲೆ ವಿವರಿಸಿದ ಎಲ್ಲ ಮಾತುಗಳನ್ನು ಕ್ರೋಢೀಕರಿಸಿ, ಪರಮಾಣು ಶಕ್ತಿಯನ್ನು ಇಂಧನವೆಂದು ಉಪಯೋಗಿಸುವ ಸಂಬಂಧದಲ್ಲಿ ಈ ರೀತಿಯಾಗಿ ಹೇಳಬಹುದು. ಇವುಗಳು ಗಂಡಾಂತರಕಾರಿಯಾಗಿರುವಂತೆ ಬಹಳೇ ಬೆಲೆ ಬಾಳುವಂತಹಗಳಿವೆ ಮತ್ತು ಈ ಇಂಧನಸಂಪತ್ತಾದರೂ ತೀರುವಂತಹದು. ಪರಿಸ್ಥಿತಿಯು ಇಂತಹ ವಿಷಮ ಮಟ್ಟವನ್ನು ಮುಟ್ಟುವಂತಹದಿದ್ದರೆ, ಭಾವೀ ಪೀಳಿಗೆಯ ಗತಿಯೇನು ಎಂಬ ಪ್ರಶ್ನೆಯನ್ನು ನಾವು ಗಂಭೀರವಾಗಿ ವಿಚಾರಿಸಬೇಕಾಗುವದು.

(೨) ಜನಸಂಖ್ಯೆಯ ನಿಯಂತ್ರಣ :

ಸಾಮಾನ್ಯವಾಗಿ ಜಗತ್ತಿನ ಜನಸಂಖ್ಯೆಯು ಈಗ ಏರುತ್ತಿರುವ ಪ್ರಮಾಣ-ದಲ್ಲಿಯೇ ಮುಂದುವರಿದಲ್ಲಿ, ಸಾಧಾರಣವಾಗಿ ೩೦೦ ವರ್ಷಗಳಲ್ಲಿ ನಮಗೆ ಇರಲು ಸ್ಥಳದ ಕೊರತೆ, ಕುಡಿಯಲು ನೀರಿನ ಕೊರತೆ ಮತ್ತು ಬಾಳಿ-ಬದುಕಲು ಶಕ್ತಿಯ ಕೊರತೆ ಈ ರೀತಿಯಾಗಿ ಕೊರತೆಯೇ ಪ್ರಾಮುಖ್ಯ-ವಾಗಿರುವ ಜೀವನವು ನಮ್ಮದಾಗುವದು. ಮೇಲಾಗಿ ಹಿಂದುಳಿದ ರಾಷ್ಟ್ರಗಳೂ ಮುಂದುವರಿಯತೊಡಗಿದಂತೆ, ಎಲ್ಲರೂ ಉಪಯೋಗಿಸುವ ತಲಾ ಶಕ್ತಿಯು ಹೆಚ್ಚುತ್ತ ಹೋಗುವುದು ಅನಿವಾರ್ಯ ಮತ್ತು ಪೃಥ್ವಿಯು ತನ್ನ ಶಕ್ತಿ-ಸಂಚಯದ ಕೊನೆಯ ಹಂತವನ್ನು ಮುಟ್ಟುವುದೂ ಸಹ ಅಷ್ಟೇ ನಿಶ್ಚಿತವೆಂದು ಹೇಳಬಹುದು. ಇಂತಹ ಪರಿಸ್ಥಿತಿಯನ್ನು ಮನುಷ್ಯನು ಯುದ್ಧಗಳಿಂದ ನಿಯಂತ್ರಿಸಲು ಪ್ರಯತ್ನಿಸಿದರೆ, ನಿಸರ್ಗವು ತನ್ನ ರೀತಿಯಲ್ಲಿ ನಿಯಂತ್ರಣವನ್ನು ಹೇರುವದು. ನಮ್ಮ ದುಂದುಗಾರಿಕೆಯ ದುಷ್ಪರಿಣಾಮಗಳನ್ನು ಪ್ರತ್ಯಕ್ಷವಾಗಿ ಕಾಣಲು ನಾವು ಬದುಕಿ ಇರುವುದಿಲ್ಲವಾದರೂ, ಯಾವ ಪ್ರವಾದಿಯೂ ಹೇಳುವ ಅಗತ್ಯವಿಲ್ಲದ ಭವಿಷ್ಯವನ್ನು ಊಹಿಸಬಹುದು. ಜನಸಂಖ್ಯೆಯ ನಿಯಂತ್ರಣಪೂರ್ವಕವಾದ ಮತ್ತು ಶಕ್ತಿಯ ಮಿತವಾದ ಹಾಗು ಯೋಗ್ಯವಾದ ಉಪಯೋಗದಿಂದ ಕೂಡಿದ ಜೀವನವನ್ನು ನಾವು ಈಗಿನಿಂದಲೇ ನಡೆಯಿಸುವ ನಿರ್ಧಾರದಿಂದ ಮುಂದುವರಿಯದಿದ್ದಲ್ಲಿ, ನಮ್ಮ ಸಂಸ್ಕೃತಿ, ನಾಗರಿಕತೆ ಇವು ಕನಿಷ್ಠ ಸ್ಥಿತಿಗೆ ಮುಟ್ಟುವುವಲ್ಲದೆ ನಾವು ತಿರುಗಿ ಶಿಲಾಯುಗವನ್ನು ನಿರ್ಮಿ-ಸುವಂತಾಗಬಹುದು.

ಸಮಸ್ಯೆಗೆ ಪರಿಹಾರ :

ಮೇಲೆ ವಿವರಿಸಿದ ಪರಿಸ್ಥಿತಿಯ ಪರಿಣಾಮವು ನಿಶ್ಚಿತವೇ ಅಥವಾ ಇದಕ್ಕೆ ಯಾವುದಾದರೂ ಪರಿಹಾರವಿದೆಯೇ ಎಂಬುದೇ ನಮ್ಮ ಮುಂದಿರುವ ಮಹತ್ವದ ಪ್ರಶ್ನೆಯು. ಇಲ್ಲಿಯ ಪರಿಹಾರಗಳು ಮೂರು ವಿಧವಾಗಿವೆ. ಇವುಗಳಲ್ಲಿಯ ಎರಡರ ಜವಾಬುದಾರಿಯು ನಮ್ಮದಾದರೆ, ಮೂರನೆಯದರ ಜವಾಬುದಾರಿಯನ್ನು ಈ ವರೆಗೆ ನಮ್ಮನ್ನು ಅತ್ಯಂತ ದಕ್ಷತೆಯಿಂದ ನೋಡಿ-ಕೊಂಡ ನಿಸರ್ಗವು ವಹಿಸುವದು.

ಮೊದಲನೆಯ ಪರಿಹಾರವೆಂದು ಜನಸಂಖ್ಯೆಯ ನಿಯಂತ್ರಣವನ್ನು ಉಲ್ಲೇಖಿಸಬಹುದು. ಸಮತೋಲಸ್ಥಿತಿಯಲ್ಲಿರುವುದು ನಿಸರ್ಗವು ಅನುಸರಿಸುವ ನಿಯಮವೆಂಬಂತೆ ತೋರುವುದು. ಉದಾಹರಣೆಗೆಂದರೆ—ಹೆಚ್ಚು ಒತ್ತಡದ ಪ್ರದೇಶದಿಂದ ಕಡಿಮೆ ಒತ್ತಡದ ಪ್ರದೇಶದೆಡೆಗೆ ಗಾಳಿಯ ಸಂಚಾರ, ಅಥವಾ ಹೆಚ್ಚು ಶಾಖಮಾನವನ್ನು ಹೊಂದಿದ ಯಾವುದೊಂದು ಪ್ರದೇಶದಿಂದ ಶಾಖ

ಮಾನವು ಕಡಿಮೆ ಶಾಖಮಾನದ ಪ್ರದೇಶಕ್ಕೆ ಹರಿಯುವುದು ಇವುಗಳನ್ನು ನೋಡಿದಾಗ, ಇದೇ ರೀತಿಯ ಸಮತೂಕ ಸ್ಥಿತಿಯ ನಿಯಮವು ಶಕ್ತಿಯ ಉಪಯೋಗದ ಸಮಸ್ಯೆಗೂ ಅನ್ವಯಿಸುವಂತೆ ತೋರುವುದು. ಪ್ರಾಕೃತಿಕವಾಗಿ ಜಗತ್ತಿನ ಆಕಾರಮಾನವು ಅಷ್ಟೇ ಆಗಿ ಉಳಿದಿದ್ದರೂ, ಜಾಗತಿಕ ವ್ಯಾಪಾರ, ಜಾಗತಿಕ ಸಂಪರ್ಕ, ಸಾಮಾಜಿಕ ಹಾಗು ಸಾಂಸ್ಕೃತಿಕ ಮಿಲನ ಮುಂತಾದ ಅನುಕೂಲತೆಗಳಿಂದಾಗಿ, ನಮ್ಮ ಜಗತ್ತು ವ್ಯಾವಹಾರಿಕವಾಗಿ ಚಿಕ್ಕದಾಗಿದೆಯಲ್ಲದೆ, ಅನೇಕ ವಿಷಯಗಳಲ್ಲಿ ಒಬ್ಬರನ್ನೊಬ್ಬರು ಅವಲಂಬಿಸುವಂತೆಯೂ ಆಗಿದೆ. ಇಂತಹ ಜಗತ್ತಿನ ಜನಸಂಖ್ಯೆಯು ಇಂದು ಸಾಮಾನ್ಯವಾಗಿ ಪ್ರತಿ ಶತಮಾನಕ್ಕೆ ನಾಲ್ಕರಷ್ಟು ಹೆಚ್ಚತೊಡಗಿದೆ. ಅದೇ ಪ್ರಕಾರವಾಗಿ ನಿಸರ್ಗವು ಒದಗಿಸಿದ ಶಕ್ತಿಯನ್ನು ಸೌಕರ್ಯಗಳ ರೂಪದಲ್ಲಿ ಉಪಯೋಗಿಸುವವರ ಸಂಖ್ಯೆಯು ವರ್ಷವರ್ಷವೂ ಹೆಚ್ಚತೊಡಗಿದೆ. ಇಂದು ಹಿಂದುಳಿದವುಗಳೆಂದು ಗಣಿಸಲ್ಪಟ್ಟ ರಾಷ್ಟ್ರಗಳು ತಾವೂ ಸಹ ಎಲ್ಲ ಅರ್ವಾಚೀನ ಅನುಕೂಲತೆಗಳನ್ನು ಪಡೆದು ಮುಂದುವರಿಯುವ ಸನ್ನಾಹದಲ್ಲಿವೆ. ಇಂದಿನ ಪರಿಸ್ಥಿತಿಯನ್ನು ಒಂದು ಉದಾಹರಣೆಯಿಂದ ತಿಳಿಯಬಹುದು. ಗತಿಸಿಹೋದ ಒಬ್ಬ ಕೋಟ್ಯಾಧೀಶನಲ್ಲಿ ೧೦ ಕೋಟಿ ರೂಪಾಯಿಗಳಿವೆ ಎಂದು ತಿಳಿಯುವಾ ; ಮತ್ತು ಈ ಹಣದಿಂದ ಯಾವುದೇ ಬಡ್ಡಿಯೂ ಬರುವಂತಿಲ್ಲ. ಇವನ ಮನೆತನದ ಜನರಾದರೂ ಯಾವುದೇ ರೀತಿಯಲ್ಲಿ ಗಳಿಸಲು ಸಮರ್ಥರಿಲ್ಲ. ಎಲ್ಲರೂ ಕೂತು ಉಣ್ಣುವವರೇ. ಇವರ ಮನೆತನದಲ್ಲಿಯ ಜನರ ಪ್ರಮಾಣ ಮತ್ತು ಇವರು ತಲಾ ವ್ಯಯಿಸುವ ಹಣ ಇವೆರಡೂ ಕ್ರಮೇಣ ಹೆಚ್ಚತೊಡಗಿವೆ. ಒಬ್ಬನು ಹೆಚ್ಚು ಖರ್ಚುಮಾಡಿದರೆ ಬೇರೆಯವರು ನಾವೇಕೆ ಕಡಿಮೆ ಖರ್ಚುಮಾಡಬೇಕು, ನಮ್ಮ ಸುಖಸೌಕರ್ಯಗಳಿಗೆ ನಾವೇಕೆ ಹೆಚ್ಚು ಹಣವನ್ನು ವ್ಯಯಿಸಬಾರದು ಎಂದು ಕೇಳುವುದಲ್ಲದೆ ತಾವೂ ಹಾಗೆಯೇ ಮಾಡತೊಡಗಿದರೆ, ಮನೆತನಕ್ಕೆ ಮೀಸಲಾಗಿರಿಸಿದ ಹಣವು ಬೇಗನೇ ತೀರುವುದಲ್ಲದೆ ಮುಂದೆ ಈ ಕೋಟ್ಯಾಧೀಶನ ಮನೆತನವು ಒಂದೊಂದೇ ಸೌಕರ್ಯಗಳನ್ನು ಕಳೆದುಕೊಳ್ಳುತ್ತ ಕೊನೆಗೆ ಉಪವಾಸದಿಂದಾಗಿ ನಿರ್ನಾಮವಾಗುವ ಪ್ರಸಂಗವು ಬರುವದು. ಇದು ತಪ್ಪಬೇಕು ಮತ್ತು ಆದಷ್ಟು ತೀವ್ರವಾಗಿ ಇಂತಹ ಪರಿಸ್ಥಿತಿಯು ಬರಬಾರದು ಎಂಬ ಸದಿಚ್ಛೆಯಿದ್ದರೆ—ಮನೆತನದಲ್ಲಿಯ ಜನರ ಸಂಖ್ಯೆ ಮತ್ತು ಅವರು ತಲಾ ಉಪಯೋಗಿಸುವ ಹಣದ ಪ್ರಮಾಣ ಇವುಗಳು ಕಡಿಮೆಯಾಗುವುದು ಅನಿವಾರ್ಯವಾಗುವುದಲ್ಲದೆ ಈ ಮನೆತನದ ಜನರು ತಾವಾದರೂ ಗಳಿಸುವವರಾಗಬೇಕು. ಈ ಉದಾಹರಣೆಯು ನಮ್ಮ ಜಗತ್ತಿನ ಇಂದಿನ ಪರಿಸ್ಥಿತಿಯನ್ನು ತದ್ರೂಪವಾಗಿ ವಿವರಿಸುವದು. ಇಲ್ಲಿ ವಿವರಿತವಾದ ನೇರವಾಗಿ ಗಳಿಸುವವರಾಗಬೇಕು ಎಂಬುದರ ಅರ್ಥವನ್ನು ಮುಂದೆ ವಿಶದೀಕರಿಸಿದೆ. ಮುಖ್ಯವಾಗಿ

ನಾವು ಬುದ್ಧಿವಂತರಾಗಿ ಜನಸಂಖ್ಯೆಯನ್ನು ಪ್ರಮಾಣಮೀರಿ ಬೆಳೆಯದಂತೆ ನಿಯಂತ್ರಿಸದಿದ್ದಲ್ಲಿ, ಈ ನಿಯಂತ್ರಣ ಕಾರ್ಯವನ್ನು ನಿಸರ್ಗವೇ ಅನಿವಾರ್ಯವಾಗಿ ಮಾಡುವದು. ಇದು ಮೊದಲನೆಯ ಪರಿಹಾರವು.

ಶಕ್ತಿಯ ಮಿತವಾದ ಬಳಿಕೆ :

ಇಂದು ಹಿಂದುಳಿದ ಪ್ರದೇಶದಲ್ಲಿಯ ಜನರು ತಲಾ ಕಡಿಮೆ ಶಕ್ತಿಯ ಉಪಯೋಗದಿಂದ ತಮ್ಮ ಜೀವನವನ್ನು ಸಾಗಿಸುತ್ತಿಲ್ಲವೇ ? ಆದರೆ ಮುಂದುವರಿದ ರಾಷ್ಟ್ರಗಳಿಗೆ ಇವೇ ಮಾತುಗಳನ್ನು ಅನ್ವಯಿಸಿದಾಗ, ಅವರು ಸಾಮಾನ್ಯವಾಗಿ ತಮ್ಮ ದೈನಂದಿಕ ಎಲ್ಲ ಕಾರ್ಯಗಳಿಗೂ ನಿಸರ್ಗವು ಯಾವುದೊಂದು ರೂಪದಲ್ಲಿ ಒದಗಿಸಿದ ಶಕ್ತಿಯನ್ನು ಉಪಯೋಗಿಸಿ ತಮ್ಮ ಸೌಕರ್ಯಗಳನ್ನು—ಅವುಗಳ ಆಗತ್ಯವು ಇರಲಿ ಇಲ್ಲವೆ ಬಿಡಲಿ, ಹೆಚ್ಚಿಸಿ ಕೊಂಡಿರುವರು. ತಮ್ಮದೇ ಮೋಟಾರು, ಮನೆ ಬಳಿಕೆಗೆ, ಅಡಿಗೆಗೆ, ಪಾತ್ರೆಗಳನ್ನು ತೊಳೆಯಲು, ಅರಿವೆಗಳನ್ನು ಒಗೆಯಲು, ರೇಡಿಯೋ ಟೆಲಿವಿಜನ್‌ಗಳಿಗೆ, ಸಾರಿಗೆ ಸಂಪರ್ಕಗಳಿಗೆ ಇತ್ಯಾದಿ ಇನ್ನೂ ಅನೇಕಾನೇಕ ರೀತಿಗಳಲ್ಲಿ ನಿಸರ್ಗವು ಒದಗಿಸಿದ ಶಕ್ತಿಯನ್ನು ದುಂದುಗಾರರಂತೆ ಉಪಯೋಗಿಸುತ್ತಿರುವರು. ಈ ಮೊದಲೇ ವಿವರಿಸಿದ ಯುದ್ಧ ಮತ್ತು ಅಂತರಿಕ್ಷ ಪ್ರವಾಸಗಳು ಉಪಯೋಗಿಸುವ ಶಕ್ತಿಯನ್ನು, ಮಹಾಪೂರದ ವೇಳೆಯಲ್ಲಿ ಹರಿದು ಹೋಗುವ ನೀರಿಗೆ ತುಲನೆ ಮಾಡಬಹುದು. ಈ ಸಂದರ್ಭದಲ್ಲಿ ಮುಂದುವರಿದ ರಾಷ್ಟ್ರಗಳು ಹಿಂದುಳಿದ ರಾಷ್ಟ್ರಗಳಿಗೆ ನಿಜವಾಗಿಯೂ ಸಹಾಯವನ್ನು ಸಲ್ಲಿಸಬೇಕಿದ್ದಲ್ಲಿ, ಅವು ತಾವು ಉಪಯೋಗಿಸುವ ತಲಾ ಶಕ್ತಿಯನ್ನು ಕಡಿಮೆಮಾಡಿಕೊಂಡು, ಈ ರೀತಿಯಾಗಿ ಉಳಿದುದನ್ನು ಹಿಂದುಳಿದ ರಾಷ್ಟ್ರಗಳು ತಲಾ ಉಪಯೋಗಿಸುವ ಶಕ್ತಿಯು ಕನಿಷ್ಠಮಟ್ಟವನ್ನಾದರೂ ಮುಟ್ಟುವ ರೀತಿಯಲ್ಲಿ ಮಾಡುವುದು ಎರಡನೆಯ ಪರಿಹಾರದ ಮಾರ್ಗವು. ಹೀಗಾದಲ್ಲಿ ಮನುಷ್ಯನು ತನ್ನ ಪೂರ್ವಜರಂತೆ ಬಲಿಷ್ಠನೂ ಆಗುವನಲ್ಲದೆ, ದ್ವೇಷಾಸೂಯೆಗಳೂ ಕಡಿಮೆಯಾಗಿ ನಿಸರ್ಗದಲ್ಲಿ ದೊರೆಯುವ ಶಕ್ತಿಸಂಪತ್ತು ಎಲ್ಲರಿಗೂ ಹೆಚ್ಚು ಕಾಲದವರೆಗೆ ಸಾಕಾಗಬಹುದು.

(೩) ಸೌರಶಕ್ತಿಯನ್ನು ನೇರವಾಗಿ ಉಪಯೋಗಿಸುವುದು :

ಇದು ಮೂರನೆಯ ಪರಿಹಾರವು. ಈ ಪರಿಹಾರದ ಮಾರ್ಗವು ನಮಗೆ ಇಂದಿನ ಸಂಕ್ರಮಣಕಾಲದಲ್ಲಿ ಹೇಗೆ ತಾರಕವಾಗಬಹುದು ಎಂಬುದನ್ನು ಈಗ ಸ್ಥೂಲವಾಗಿ ತಿಳಿಯುವಾ.

ಈ ಸಮಸ್ಯೆಯ ಪರಿಹಾರವನ್ನು ಗ್ರಹಿಸಲು ಸೌರಶಕ್ತಿಯು ಪ್ರಮಾಣದಲ್ಲಿ ಎಷ್ಟಾಗಬಹುದು ಎಂಬುದರ ಕಲ್ಪನೆಯು ನಮಗೆ ಇರುವುದು ಅನಿವಾರ್ಯ

ಒಂದು ಸುಸಜ್ಜಿತವಾದ ಮನೆಯಲ್ಲಿ ನಾವು ವಿದ್ಯುತ್ ತಂತಿಗಳ ಸಹಾಯದಿಂದ ಪಡೆಯುವ ಶಕ್ತಿಯ ನೂರು ಮಡಿಯಷ್ಟು ಸೌರಶಕ್ತಿಯು ನಮ್ಮ ಮನೆಯ ಮಾಳಿಗೆಯ ಮೇಲೆ ಬಿದ್ದು ವ್ಯಯಿಸಿಹೋಗುವುದು ಎಂದು ಹೇಳಿದಲ್ಲಿ, ನಮಗೆ ಸೂರ್ಯನು ಹೊಂದಿದ ಶಕ್ತಿಸಂಚಯದ ಕಲ್ಪನೆಯು ಕಿಂಚಿತ್ತಾದರೂ ಬರ ಬಹುದಾಗಿದೆ. ಅದೇ ಪ್ರಕಾರವಾಗಿ ಮಾನವಶಕ್ತಿ ಹಾಗು ಸಾಕುಪ್ರಾಣಿಗಳಿಂದ ದೊರೆತ ಶಕ್ತಿಯನ್ನು ಹೊರತುಪಡಿಸಿ ನಾವು ಪ್ರತಿವರುಷವೂ ೧೦ ಸಾವಿರ ಪದ್ಮಗಳಷ್ಟು (೧೦ರ ಮುಂದೆ ೧೮ ಪೂಜಿಗಳನ್ನು ಇಟ್ಟರೆ ಬರುವ ಸಂಖ್ಯೆ ಯಷ್ಟು) ಅಶ್ವಶಕ್ತಿ-ತಾಸು ಶಕ್ತಿಯನ್ನು ಉಪಭೋಗಿಸುವೆವು. ಆದರೆ ಇಷ್ಟೇ ಅವಧಿಯಲ್ಲಿ ಸೂರ್ಯನು ನಾವು ಉಪಯೋಗಿಸುವ ಒಂದು ಲಕ್ಷ ಮಡಿಯಷ್ಟು ಶಕ್ತಿಯನ್ನು ಪೃಥ್ವಿಗೆ ಕಳುಹಿಸುವನು.

ಇವೇ ಮಾತುಗಳನ್ನು ಬೇರೆ ರೀತಿಯಾಗಿಯೂ ಹೇಳಬಹುದು. ಬೇಸಿಗೆ ಕಾಲದಲ್ಲಿ ಸೂರ್ಯನು ಕಳುಹಿಸುವ ಉಷ್ಣತೆ ಹಾಗು ಬೆಳಕನ್ನು ಸಹಿಸಲಾಗದೆ ಯಾವನನ್ನು ನಾವು ಒಂದು ಬೇಡವಾದ ವಸ್ತುವೆಂದು ಕಾಣುತ್ತಿರುವೆವೋ ಅಂತಹ ಸೂರ್ಯನು ನಮಗೆ ಜೀವನಾಧಾರನು. ಅವನಿಂದಾಗಿಯೇ ನಾವು ಇಷ್ಟು ಹೆಮ್ಮೆಯಿಂದ ಮೆರೆಯುತ್ತಿರುವದು. ಪೃಥ್ವಿಯ ಮೇಲಿನ ಮಳೆಗಾಳಿಗಳು, ಸಸ್ಯಜೀವನ, ಕಟ್ಟಿಗೆ ಮುಂತಾದ ಇಂಧನರೂಪೀ ಶಕ್ತಿ, ಜಲವಿದ್ಯುತ್‌ಶಕ್ತಿ ಮುಂತಾದವುಗಳಿಗೆ ನೇರವಾಗಿ ಮತ್ತು ಪೃಥ್ವಿಯಲ್ಲಿ ದೊರೆಯುವ ಇಂಧನ ಗಳಿಗೆ ಪರ್ಯಾಯವಾಗಿ ಇವನೇ ಕಾರಣನು. ಪರ್ಯಾಯವಾಗಿ ದೊರೆಯುವ ಇಂಧನಗಳು ತಯಾರಾಗಲು ಕೋಟ್ಯಾವಧಿ ವರುಷಗಳ ಅವಕಾಶವು ಹತ್ತುವ ಕಾರಣದಿಂದಾಗಿ ಮತ್ತು ಈ ರೀತಿಯಾಗಿ ಇಲ್ಲಿಯವರೆಗೆ ಸಂಚಿತವಾದ ಶಕ್ತಿಯು ಈಗ ತೀರುವ ಹಂತವನ್ನು ಮುಟ್ಟಿರುವದರಿಂದ, ಈ ಮೊದಲೇ ವಿವರಿಸಿದ ನೇರವಾದ ಮಾರ್ಗದಿಂದ ಶಕ್ತಿಯ ಸಮಸ್ಯೆಗೆ ಕಿಂಚಿತ್ತಾದರೂ ಪರಿಹಾರವು ದೊರೆಯಬಹುದೇ ಎಂಬುದನ್ನು ಈಗ ಪರಿಶೀಲಿಸೋಣ.

ಸೂರ್ಯನಿಂದ ದೊರೆಯುವ ಶಕ್ತಿಗೆ ಕೊರತೆಯೇನಿಲ್ಲ. ಇದು ಎಲ್ಲೆಡೆಗೂ ಅದರಲ್ಲಿಯೂ ಹೆಚ್ಚಾಗಿ ಈಗ ಹಿಂದುಳಿದವುಗಳೆಂದು ಗಣಿಸಲ್ಪಟ್ಟಿರುವ ರಾಷ್ಟ್ರ ಗಳಲ್ಲಿ ಹೇರಳವಾಗಿ ಹಾಗೂ ಪುಕ್ಕಟೆಯಾಗಿ ಮತ್ತು ಸರಕಾರದಿಂದ ಯಾವುದೇ ಕರಭಾರವೂ ಕೂಡ ಇಲ್ಲದೆ ದೊರೆಯುವಂತಹದು. ಇದು ಒಂದು ಕಡೆಯಿಂದ ಬೇರೆಡೆಗೆ ಸ್ಥಳಾಂತರಿಸುವಂತಹದಲ್ಲ ಅಥವಾ ಈ ಶಕ್ತಿಯು ನಮಗೆ ಸದಾ ಕಾಲವೂ ದೊರೆಯುವಂತೆ ಮಾಡಲು, ನಮಗೆ ಯಾವ ಶ್ರಮವನ್ನಾಗಲಿ ಮಾಡುವ ಇಲ್ಲವೆ ಪೂರ್ವಭಾವಿಯಾಗಿ ಶಕ್ತಿಯನ್ನು ಒದಗಿಸುವ ಅಗತ್ಯವಿಲ್ಲ ನಿಸರ್ಗವು ಸಿರಿವಂತರಿಗೆ ಹಾಗು ಬಡವರಿಗೆ ಸಮಾನವಾಗಿಯೇ ಕೊಡುತ್ತಿರುವ ವರವೆಂದು ಇದನ್ನು ವರ್ಣಿಸಬಹುದು. ಸೂರ್ಯನು ಪೃಥ್ವಿಯ ಮುಖಾಂತರ

ವಾಗಿ ಕೊಡಮಾಡುವ ಇಂಧನವನ್ನು ಉಪಯೋಗಿಸಲು ಬೇಕಿರುವ ಅವಧಿ ಯಷ್ಟು ದೀರ್ಘಾಯುಷಿಗಳು ನಾವು ಇಲ್ಲವಾದ್ದರಿಂದ, ಈ ನೇರವಾದ ಹಾಗು ಹೆಚ್ಚಾಗಿ ಉಪಯೋಗವಿಲ್ಲದೆ ವ್ಯಯಿಸಿ ಹೋಗಲಿರುವ ಸೌರಶಕ್ತಿಯನ್ನು ನಮ್ಮ ಬಳಕೆಗೆ ಉಪಯುಕ್ತವಾಗುವ ರೀತಿಯಲ್ಲಿ ಪರಿವರ್ತಿಸುವ ವಿಧಾನ ಗಳನ್ನು ಕಂಡುಹಿಡಿದು ಉಪಯೋಗಿಸುವುದು ಇಂದಿನ ಶಕ್ತಿಸಮಸ್ಯೆಗೆ ಅಲ್ಪ ಪ್ರಮಾಣದಲ್ಲಿಯಾದರೂ ಪರಿಹಾರವೆನಿಸಬಹುದಾಗಿದೆ. ಇದನ್ನು ಯಾವ ರೀತಿ ಯಲ್ಲಿ ವಿಜ್ಞಾನಿಗಳು ಸಾಧಿಸಬೇಕೆಂದಿರುವರು, ಇದರ ಸ್ಥೂಲವಾದ ರೂಪ-ರೇಷೆಗಳನ್ನು ತಿಳಿಯುವಾ.

ಮೊದಲನೆಯದಾಗಿ ಮತ್ತು ಅತ್ಯಂತ ಮಹತ್ವದ್ದಾಗಿರುವ ವಿಷಯು ವೆಂದರೆ, ಈ ಕಾರ್ಯಕ್ಕೆ ಬೇಕಿರುವ ಕಚ್ಚಾ ಸರಕು (Raw-Material) ಹೆಚ್ಚಾಗಿ ಇಂದಿನ ಹಿಂದುಳಿದ ರಾಷ್ಟ್ರಗಳಲ್ಲಿ—ಪ್ರಮಾಣದಲ್ಲಿ, ತೀವ್ರತೆಯಲ್ಲಿ, ದಿನದ ೨೪ ಗಂಟೆಗಳ ಹೆಚ್ಚಿನ ಅವಧಿಯಲ್ಲಿ ದೊರೆಯುವದು. ಈ ಹಿಂದುಳಿದ ರಾಷ್ಟ್ರಗಳು ಮುಂಬರುವ ಗಂಡಾಂತರವನ್ನು ಈಗಿನಿಂದಲೇ ಊಹಿಸಿ ಇದರ ಪರಿಹಾರಕ್ಕೆ ಅನುಕೂಲವಾಗುವ ಸೌರಶಕ್ತಿಯನ್ನು ನೇರವಾಗಿ ಹಿಡಿದು ಉಪ ಯೋಗಿಸುವ ಉಪಕರಣಗಳನ್ನು ಯೋಜಿಸಿದಲ್ಲಿ, ಈ ಕಾರ್ಯವು ಮಾನವ ಜನಾಂಗಕ್ಕೇ ವರವಾಗಿ ಪರಿಣಮಿಸುವದು. ಅದೇ ರೀತಿಯಲ್ಲಿ ಇಂದು ಮುಂದು ವರಿದವುಗಳೆಂದು ತಿಳಿಯಲ್ಪಟ್ಟ ರಾಷ್ಟ್ರಗಳಿಗೆ ಭವಿಷ್ಯತ್ಕಾಲದಲ್ಲಿ ಈ ಕಾರ್ಯಕ್ಕೆ ಬೇಕಿರುವ ಕಚ್ಚಾಸರಕಿನ ಪೂರೈಕೆಯು ಎಲ್ಲ ದೃಷ್ಟಿಯಿಂದಲೂ ಕಡಿಮೆ ಪ್ರಮಾಣದಲ್ಲಿದೆ ಮತ್ತು ಅವುಗಳಿಗೆ ಇಂದಿನ ಕಾಲದ ಯಾಂತ್ರೀಕರಣಕ್ಕೆ ಬೇಕಿರುವ ಕಚ್ಚಾಸರಕನ್ನು ಬೇರೆಡೆಯಿಂದ ಆಮದುಮಾಡಿಕೊಳ್ಳುವಂತೆ ಈ ಸಂದರ್ಭದಲ್ಲಿ ಮಾಡಲು ಸಾಧ್ಯವಿಲ್ಲವೆಂಬುದನ್ನು ನಾವು ಮುಖ್ಯವಾಗಿ ಗಮನಿಸ ಬೇಕು. ಈ ಕಾರಣದಿಂದಾಗಿ ಮುಂಬರುವ ಸೌರಯುಗದಲ್ಲಿ ಇಂದಿನ ಮುಂದು ವರಿದ ರಾಷ್ಟ್ರಗಳಲ್ಲಿಯ ಜನತೆಯು, ಸೌರಶಕ್ತಿಯು ವಿಪುಲ ಪ್ರಮಾಣದಲ್ಲಿ ದೊರೆಯುವ ಪ್ರದೇಶಗಳಿಗೆ ವಲಸೆಹೋಗುವ ಸಾಧ್ಯತೆಯು ಇಲ್ಲದಿಲ್ಲ.

ಇಂದು ಅನೇಕ ರಾಷ್ಟ್ರಗಳಲ್ಲಿ ಸೌರಶಕ್ತಿಯನ್ನು ವ್ಯಾವಹಾರಿಕವಾಗಿ ಉಪ ಯೋಗಿಸುವ ಸಂಶೋಧನೆಗಳು ಭರದಿಂದ ಸಾಗಿವೆ. ಸೌರಶಕ್ತಿಯಿಂದ ಕಾರ್ಯ ಮಾಡುವ ಕುಕರ್, ಕುಲುಮೆಗಳು, ರೇಡಿಯೋ, ನೀರು ಕಾಯಿಸುವ ಉಪ-ಕರಣಗಳು, ಶೀತಲೀಕರಿಸುವ ಉಪಕರಣಗಳು, ಸಮುದ್ರದ ಉಪ್ಪುನೀರನ್ನು ಕುಡಿಯುವ ನೀರನ್ನಾಗಿಸುವ ಉಪಕರಣಗಳು, ಸಣ್ಣ ಸಣ್ಣ ದೋಣಿಗಳು, ಪಂಪುಗಳು ಮುಂತಾದ ಅನೇಕ ಸಲಕರಣೆಗಳು ಬಳಕೆಯಲ್ಲಿವೆ. ಕೋಟ್ಯಾವಧಿ ರೂಪಾಯಿಗಳ ವೆಚ್ಚದಿಂದ ಇಂದು ಮುಂದುವರಿಯುತ್ತಿರುವ ಅಂತರಿಕ್ಷ ವಿಜ್ಞಾ-ನವು ಅನೇಕರ ಟೀಕೆಗೆ ಗುರಿಯಾಗಿದ್ದರೂ ಮತ್ತು ಅಂತರಿಕ್ಷ ಕ್ಷೇಪಣಿಗಳ ಪ್ರ

ಹಾರಾಟದಲ್ಲಿ ಪ್ರಚಂಡ ಶಕ್ತಿಸಂಚಯವನ್ನು ವ್ಯಯಿಸುತ್ತಿದ್ದರೂ ಮತ್ತು ಈ ಹಾರಾಟಗಳ ಫಲವಾಗಿ ಅವು ಚಂದ್ರನ ಮೇಲೆ ಇಳಿಯುವಂತಾಗಲಿ ಇಲ್ಲವೆ ಬಿಡಲಿ, ಅಥವಾ ಉಳಿದ ಗ್ರಹಗಳೆಡೆಗೆ ಹೋಗುವ ಅವುಗಳ ಪ್ರಯತ್ನವು ಸಫಲವಾಗಲಿ ಇಲ್ಲವೆ ವಿಫಲವಾಗಲಿ—ಇಲ್ಲಿಯ ಸಂಶೋಧನೆಗಳು, ಅದರಲ್ಲೂ ಸೌರಶಕ್ತಿಯನ್ನು ನೇರವಾಗಿ ವಿದ್ಯುತ್‌ಶಕ್ತಿಯಲ್ಲಿ ಪರಿವರ್ತಿಸುವಲ್ಲಿ ಅತ್ಯಂತ ಜಯಪ್ರದವೆನಿಸುವ ರೀತಿಯಲ್ಲಿ ಮುಂದುವರಿಯುತ್ತಿದ್ದು, ಇವು ಭವಿಷ್ಯತ್-ಕಾಲದಲ್ಲಿ ಮಾನವನಿಗೆ ತಾರಕವೆನಿಸಬಹುದಾಗಿವೆ. ಸೌರಶಕ್ತಿಯು ದಿನದ ಎಲ್ಲ ಅವಧಿಯಲ್ಲಿಯೂ ದೊರೆಯದಿರುವ ಕಾರಣ, ರಾತ್ರಿಕಾಲದಲ್ಲಿ ಇದರ ಉಪ-ಯೋಗವು ಆಗುವಂತೆ ಈ ಶಕ್ತಿಯನ್ನು ಹಗಲಿನಲ್ಲಿ ಶೇಖರಿಸಿ ರಾತ್ರಿಕಾಲದಲ್ಲಿ ಉಪಯೋಗಿಸುವ ಸಲಕರಣೆಗಳನ್ನು ಉತ್ಪಾದಿಸುವ ದಿಶೆಯಲ್ಲಿ ಸಂಶೋಧನೆಗಳು ಮುಂದುವರಿಯುತ್ತಿವೆ. ಮುಖ್ಯವಾಗಿ ಪೌರ್ವಾತ್ಯ ಹಾಗು ಪಾಶ್ಚಿಮಾತ್ಯ ಪ್ರಮುಖ ರಾಷ್ಟ್ರಗಳಲ್ಲಿಯ ವಿಜ್ಞಾನಿಗಳು, ಸೌರಶಕ್ತಿಯನ್ನು ಉಪಯೋಗಿಸುವ ಭಿನ್ನ ಭಿನ್ನ ಉಪಕರಣಗಳನ್ನು ಉತ್ಪಾದಿಸುವಲ್ಲಿ ಈಗಾಗಲೇ ಕಾರ್ಯನಿರತರಾಗಿದ್ದಾರೆ. ಭಾರತದಲ್ಲಿಯೂ ಸಹ ಸೌರಶಕ್ತಿ ವಿಷಯದಲ್ಲಿ ಸಂಶೋಧನೆಗಳು ಮುಂದುವರಿಯುತ್ತಿದ್ದು, ಈಗ ಜಗತ್ತಿನಲ್ಲಿಯ ಎಲ್ಲ ವಿಜ್ಞಾನಿಗಳು ಪರಮಾಣು ಶಕ್ತಿಯಲ್ಲಿಯ ಸಂಶೋಧನೆಗಳಿಗಿಂತಲೂ ಸೌರಶಕ್ತಿವಿಷಯದಲ್ಲಿ ಹೆಚ್ಚು ಆಸ್ಥೆಯಿಂದ ಸಂಶೋಧನೆಗಳನ್ನು ಮುಂದುವರಿಸುವ ಕಾಲವು ಸನ್ನಿಹಿತವಾಗಿದೆ.

ಕೊನೆಯದಾಗಿ :

ಹ್ಯಾಲಸೀ ಅವರು ಹೇಳುವಂತೆ 'ಇಂದು ಜಗತ್ತಿನಲ್ಲಿ ಎಲ್ಲರಲ್ಲಿಯೂ ಶಕ್ತಿಯ ಮೂಲಗಳಾದ ಕಲ್ಲಿದ್ದಲು, ಎಣ್ಣೆ ಅಥವಾ ಪರಮಾಣುಶಕ್ತಿ ಇವುಗಳಾಗಲಿ ಇಲ್ಲವೆ ಫಲವತ್ತಾದ ಭೂಮಿ ಹಾಗು ಹಸನಾದ ನೀರು ಇವು ಲಭ್ಯವಿರಲಿಕ್ಕಿಲ್ಲ; ಆದರೆ ಪೃಥ್ವಿಯ ಅತ್ಯಲ್ಪ ಭಾಗವನ್ನು ಹೊರತುಪಡಿಸಿ ಸೂರ್ಯನು ನಿತ್ಯವೂ ತನ್ನ ಶಕ್ತಿಯನ್ನು ಯಾವುದೇ ಪಕ್ಷಪಾತವಿಲ್ಲದೆ, ತನ್ನ ನಿಯಮಗಳನ್ನು ಅನುಸರಿಸಿ ಬೀರುತ್ತಿರುವನು. ಈ ಸೌರಶಕ್ತಿಯು ನಮ್ಮ ಭವಿಷ್ಯವನ್ನು ನಿರ್ಧರಿಸುವ ಪರಮಾಪ್ತನಂತಿದೆ. ಸೌರಶಕ್ತಿಯನ್ನು ಹೊರತುಪಡಿಸಿ ಜಗತ್ತಿನಲ್ಲಿಯ ಯಾವ ವಸ್ತುವನ್ನಾಗಲಿ ಅಥವಾ ವಸ್ತುಗಳನ್ನಾಗಲಿ—ಯಾರಿಂದಲಾದರೂ ಬೇಡಿಕೊಂಡು ಇಲ್ಲವೆ ಎರವಲಾಗಿ ಅಥವಾ ಕೊನೆಯ ಪಕ್ಷದಲ್ಲಿ ಕದ್ದಾದರೂ ತರಬಹುದು. ಮಾನವನ ಇಂದಿನ ದುಂದುಗಾರಿಕೆಯ ಇತಿಹಾಸದಲ್ಲಿ ಉಳ್ಳವರು ಹಾಗು ಇಲ್ಲದವರು ಎಂದು ನಿರ್ಮಿತವಾದ ಎರಡು ವರ್ಗಗಳಲ್ಲಿಯ ಅಂತರವನ್ನು ಕಡಿಮೆ ಮಾಡುವಲ್ಲಿ ಭವಿಷ್ಯತ್ಕಾಲದಲ್ಲಿ ಸೂರ್ಯನೇ ಮಹತ್ವದ ಪಾತ್ರವನ್ನು ವಹಿಸಲಿರುವನು.

ಅಕ್ಕ ಮಹಾದೇವಿಯವರು 'ಲೋಕದ ಚೇಷ್ಟೆಗೆ ರವಿ ಬೀಜ ಎಂದು ಹೇಳಿದುದಾಗಲಿ ಅಥವಾ ಭಾರತೀಯರು 'ರವಿ'ಗೆ ಕೊಟ್ಟ ವಾಗಲಿ ಎಷ್ಟು ಸತ್ಯಪೂರ್ಣವಾದುದು ಹಾಗು ಯಥಾರ್ಥವ ಎಂಬುದು ನಮ್ಮಲ್ಲಿಯ ತತ್ವವೇತ್ತರ ಹಿರಿಮೆಯನ್ನು ಎತ್ತಿತೋರಿ ಪ್ರಯೋಗಗಳಿಂದ ಹಾಗು ಸತತ ಪರಿಶ್ರಮದಿಂದ ವಿಜ್ಞಾನಿಗಳು ಕಂಡ ಸತ್ಯವನ್ನು ಇವರು ಹೇಗೆ ತಿಳಿದರೋ ಎಂಬುದು ಮಾತ್ರ ಆಶ್ಚರ್ಯಕರ

★ ಕೆ. ಎಸ್. ನವ

ಕರುಣೆ

ಹಸಿಯದ ಬಳ್ಳಿಯೋ? ಹಗ್ಗವೋ? ತಂತಿಯೋ?
ಹಬ್ಬಿಸಿ ಹೊಸೆಯಲಿಕೆ
ಮಾರುವ, ಕೊಳ್ಳುವ, ಸಂತೆಯದೆಲ್ಲಿಯೋ?
ಹೇರಲು ಬಂಡಿಯು ಸಾಕೆ ?
ಬೆಳೆಯುವರಾರು ? ಹೇಗೆ ? ಏಕೆ ?
ಕಣ್ಣಿಗೆ, ಮೂಗಿಗೆ, ಬಾಯಿಗೆ ಬಂದಿದೆ
ಮೊಲೆಯುಣ್ಣಿಸಿದೊಲು ಜಣ-ಜಣಕೆ
ಅಗ್ಗದ ಅಮೃತಪಾನ
ಗಾಳಿ, ಬೆಳಕು, ಮಳೆ, ಚರ-ಚಿರದಾನ
ಎಷ್ಟಿದೆ ಅಂತಃಕರಣ !
ಕಾಣದೆ ಕರುಣೆಯು ತಾಣ ?

★ ಕೆ. ವಿರೂಪಾಕ್ಷ ಗೌಡ

ಕನ್ನಡ ಭಾಷೆಯಲ್ಲಿ ಬಿಂದು

ಕನ್ನಡ ವರ್ಣಮಾಲೆಯಲ್ಲಿ ಸ್ಪಷ್ಟವಾಗಿ ಬಳಕೆಯಲ್ಲಿ ಇರುವ ಬಿಂದು ವೈಶಿಷ್ಟ್ಯಪೂರ್ಣವಾಗಿದೆ. ಕನ್ನಡ ವೈಯಾಕರಣಿಗಳೆಲ್ಲರೂ ಈ ಬಿಂದುವಿ ಬಗೆಗೆ ಚರ್ಚಿಸಿದ್ದಾರೆ. ಸಂಸ್ಕೃತದಲ್ಲಿ ಬಿಂದುವು (ಅಂದರೆ ಅನುಸ್ವಾರವು ಸಹಜವಾಗಿ ಬಳಕೆಯಲ್ಲಿದೆ. ಕನ್ನಡದಲ್ಲಿ ಈ ಬಿಂದು ಪ್ರವೇಶಪಡೆದಿರುವು ಸಂಸ್ಕೃತದಿಂದಲೇ. ದ್ರಾವಿಡ ಭಾಷೆಗಳಲ್ಲಿ ಕನ್ನಡ, ತೆಲಗು ಭಾಷೆಗಳನ್ನು ಬಿಟ್ಟ ಇನ್ನಿತರ ಭಾಷೆಗಳಲ್ಲಿ ಬಿಂದುವು ವರ್ಣಮಾಲೆಯಲ್ಲಿ ಸ್ಥಾನ ಪಡೆದಿದೆ. ನವ ವೈಯಾಕರಣಿಗಳನಂತರ ಆಧುನಿಕ ಭಾಷಾಪ್ರಪಂಚದಲ್ಲಿ ಹೊಸ ವಿಚಾರ ಹಿನ್ನೆಲೆಯಲ್ಲಿ ಬಿಂದುವನ್ನು ಕುರಿತು ವಿಚಾರ ನಡೆದಿದೆ.[೧] ಆದರೂ ಅ ನಿಜವಾದ ಸ್ವರೂಪ ವಿವೇಚನೆ ಸ್ಪಷ್ಟವಾಗಿಲ್ಲ. ಆದಕ್ಕಾಗಿ, ಈ ಲೇಖನ ಕನ್ನಡ ವೈಯಾಕರಣಿಗಳ ಪ್ರಕಾರ ಬಿಂದುವಿನ ಬಳಕೆ, ಸಂಸ್ಕೃತದಲ್ಲಿ ಅ ಸ್ವರೂಪ, ಆಧುನಿಕ ಭಾಷಾಶಾಸ್ತ್ರಕ್ಕನುಸರಿಸಿ ಆದರ ಸ್ವರೂಪ—ಇವುಗಳ ಕುರಿತು ವಿವೇಚಿಸಲಾಗಿದೆ.

ಕೇಶಿರಾಜನು 'ಕೆಲವು ನಿಜಬಿಂದುಗಳ್ ಕೆಲಕೆಲವು ವಿಕಲ್ಪ ಬಿಂದುಗಳ್' (ಶ.ದ. ೩೬) ಎಂದು ಕನ್ನಡದಲ್ಲಿ ಬಿಂದುವಿನ ಬಳಕೆಯ ಪ್ರತಿಷ್ಠಾಪಿಸಿ, ಆದರ ವ್ಯಾಖ್ಯೆಯನ್ನು ಹೇಳುತ್ತಾನೆ :

> ಬಿಂದುವನುಸ್ವಾರಂ ತಾ
> ನೆಂದಕ್ಕುಂ ಸೊನ್ನೆ... (ಶ.ದ. ೧೧)

ಎಂದು ಹೇಳಿ, ಮುಂದುವರೆದು, ಆದರ ಆಕಾರವನ್ನು ವಿವರಿಸುತ್ತಾನೆ. ಸ ಆದರ ಸ್ವರೂಪವನ್ನು ವಿವರಿಸುತ್ತಾನೆ :

---

೧ Comparative Grammar of Dravidian Languages—Caldwell, P. 143.
ಕನ್ನಡ ಭಾಷೆಯ ಚರಿತ್ರೆ —ಪ್ರ. ಗೋ. ಕುಲಕರಣಿ.
ಕನ್ನಡ ನುಡಿಯ ಬೆಳವಣಿಗೆ —ಎಚ್. ಜಿ. ಲೋಕೂರ.
ದ್ರಾವಿಡಭಾಷಾವಿಜ್ಞಾನ —ಹಂಪನಾ.
ಫೋನೀಂ ಸಾನುರೂಪಗಳು —ಎಂ. ಜಿ. ವೆಂಕಟೇಶಯ್ಯ, ಕನ್ನಡ ನುಡಿ, ಜೂನ್–ಜುಲೈ–೬೯
ಉದ್ಧಾತ್ತಕ್ಷರ —ಎಂ. ಜಿ. ವೆಂಕಟೇಶಯ್ಯ, ಕನ್ನಡ ನುಡಿ, ಅಕ್ಟೋಬರ-೬೪
Nasal Phonemes in Kannada —H. S. Biligiri, Indian Linguistics, Vol
ಕನ್ನಡ ಕೈಪಿಡಿ—ಭಾಗ ೧.

ಸ್ವರಪರದೊಳಿರ್ಪ ತೆರದಿಂ—
ದುರುಮುಚ್ಚೋಚ್ಚಾರಣಕ್ಕೆ ಬಾರದ ಕತದಿಂ
ಪರಿಕಿಸೆ ಬಿಂದು ವಿಸರ್ಗಂ
ಸ್ವರಾಂಗಮುಂ ವ್ಯಂಜನಾಂಗಮುಂ ತಾಮೆಂಬರ್ (ಶ.ದ. ೧೨)

ಬಿಂದುವು ಸ್ವರಾಂಗವೂ ಅಹುದು, ವ್ಯಂಜನಾಂಗವೂ ಅಹುದು. ಅದಕ್ಕೆ ಕಾರಣ, ಅದು ಸ್ವರದನಂತರ ಬರುತ್ತದೆ, ಹಾಗು ಅದಕ್ಕೆ ಸ್ವತಂತ್ರ ಉಚ್ಚಾರವಿಲ್ಲ.

ಹಾಗೆಯೇ ಅನುಸ್ವಾರ ಬರುವ ಪರಿಸರವನ್ನು ವಿವರಿಸುತ್ತ,

ಮನಕಾರದ ಪರದೊಳ್ ವ್ಯಂ—
ಜನಮಿರ್ದೊಡಮಿಲ್ಲದೊಡಮನುಸ್ವಾರಂ ಸಂ—
ಜನಿಯಿಪುದು ವರ್ಗಮಿದಿರಿರೆ
ತನಗೆ ವಿಕಲ್ಪದೆ ತದೀಯ ಪಂಚಮನುಮಕ್ಕುಂ (ಶ.ದ. ೧೭೨)

ಮನಕಾರದ ಮುಂದೆ ವ್ಯಂಜನವಿದ್ದರೂ, ಇಲ್ಲದಿದ್ದರೂ ಅನುಸ್ವಾರ ಹುಟ್ಟು ತ್ತದೆ. (ಇದರ ಆಶಯ ಅಷ್ಟು ಸ್ಪಷ್ಟವಾಗಿಲ್ಲ). ಆದು ವಿಕಲ್ಪದಿಂದ ವರ್ಗೀಯ ವ್ಯಂಜನದ ಹಿಂದೆ ಬರುತ್ತದೆ, ಎಂದು ಹೇಳುವಾಗ ಆತ ಸಂಸ್ಕೃತದಲ್ಲಿ ಬಳಕೆ ಯಲ್ಲಿರುವ ಅನುಸ್ವಾರದ ಕಲ್ಪನೆಯಿಂದ ದೂರ ಸರಿದಿದ್ದು ಸ್ಪಷ್ಟವಾಗುತ್ತದೆ.

ಕರ್ನಾಟಕ ಶಬ್ದಾನುಶಾಸನಕಾರನಾದ ಭಟ್ಟಾಕಳಂಕನು ಅನುಸ್ವಾರ ಅಥವಾ ಬಿಂದುವಿನ ಬಗೆಗೆ ವಿಚಾರ ಮಾಡುತ್ತ, ಅನುಸ್ವಾರವು ಯೋಗವಾಹ ಗಳಲ್ಲಿ ಒಂದೆಂದೂ ಹೇಳುತ್ತಾನೆ. ಯೋಗವಾಹಗಳೆಂದರೆ ಯೋಗೇನ (ಇತರ ಸಂಬಂಧೇನ) ವಾಹಯಂತಿ (ಪ್ರಯೋಗಾನ್ನಿರ್ವಾಹಯಂತಿ) ಇತಿ ಯೋಗ ವಾಹಾಃ. ಅಂದರೆ ಸ್ವತಂತ್ರವಾಗಿ ಉಚ್ಚರಿಸಲು ಬಾರದೆ ಸ್ವರದೊಡನೆ ಸೇರಿ, ಪ್ರಯೋಗಗಳನ್ನು ನಿರ್ವಹಿಸಲು ಕಾರಣವಾಗುವಂತಹವು (ಶ.ಶಾ. ಪು. ೧೩). ಪಾಣಿನಿಯು ಇವಕ್ಕೆ ಅಯೋಗವಾಹಗಳೆಂದು ಕರೆದಿದ್ದಾನೆ. ಅಯೋಗವಾಹ ಗಳೆಂದರೆ ಯಾವ ವರ್ಣದಲ್ಲಿಯೂ ಅಂತರ್ಭಾವವನ್ನು ಹೊಂದದೆ, ಪ್ರಯೋಗ ಮಾತ್ರದಲ್ಲಿದ್ದು ಶಬ್ದಗಳ ಸಾಧುತ್ವವನ್ನು ಬೋಧಿಸುವಂತಹವು.

ಕನ್ನಡದಲ್ಲಿ ನಡೆದಿರುವ ಈ ಎಲ್ಲ ವಿಚಾರಗಳಿಗೆ ಹಿನ್ನೆಲೆಯಾಗಿರುವ ಸಂಸ್ಕೃತದ ಅನುಸ್ವಾರದ ಕಲ್ಪನೆಯೇನೆಂಬುದನ್ನೀಗ ನೋಡಬಹುದು.

(ಮುಖವಿವರದೊಡನೆ) ನಾಸಿಕವಿವರವೂ ತೆರೆಯಲ್ಪಟ್ಟು ಉಚ್ಚರಿತವಾದ ಧ್ವನಿಗಳೇ ನಾಸಿಕಧ್ವನಿಗಳು.[1] ಸ್ಥಾನಾದಿಗಳು ಮುಖವಿವರದಲ್ಲಿ ಇರುವಂತೆಯೇ

1. (a) ನಾಸಿಕವಿವರಣಾತ್ ಅನುನಾಸಿಕಮ್. —ತೈತ್ತಿರೀಯ ಪ್ರಾತಿಶಾಖ್ಯ.
(b) ಅನುನಾಸಿಕಂ ಮುಖನಾಸಿಕಮ್ —ಅಥರ್ವಣ ಪ್ರಾತಿಶಾಖ್ಯ.

ಇರುತ್ತವೆ.[೩] ಇಂತಹ ನಾಸಿಕಧ್ವನಿಗಳು ಒಟ್ಟು ಆಯ್ದು. ಅವು ಮ್, ನ್, ಣ್, ಞ್, ಙ್.

ನಾಸಿಕ್ಯವನ್ನು ಹೊಂದಿದ ಇನ್ನೊಂದು ರೀತಿಯೆಂದರೆ ನಾಸಿಕ್ಯಸ್ವರಗಳು. ಇಂತಹ ಸ್ವರಗಳಲ್ಲಿ ಅನುನಾಸಿಕತೆಯೂ ಸೇರಿರುತ್ತದೆ. ಆದರೆ ಈ ಅನುನಾಸಿಕ ಸ್ವರಗಳು ಬಹಳ ಪ್ರಾಚುರ್ಯವನ್ನು ಪಡೆದಿಲ್ಲ.

ಇನ್ನು, ನಾಸಿಕ್ಯದಲ್ಲಿ ಮೂರನೆಯ ರೀತಿ. ಅದೇ ಅನುಸ್ವಾರ. (ಮೇಲಿನ ಎರಡು ಪ್ರಭೇದಗಳಂತೆ ಅನುಸ್ವಾರವು ವಿವಾದಬಾಹಿರವಾಗಿಲ್ಲ.) ಅನು- ಸ್ವಾರವನ್ನು ಅನುಕೂಲತೆಗಾಗಿ ನಾವು ಮ್ ಎಂದು ಸಂಕೇತಿಸಬಹುದು. ಈ ಅನುಸ್ವಾರ ಬರುವ ಪರಿಸರವೆಂದರೆ ಸ್ವರಗಳನಂತರ ಮತ್ತು ಊಷ್ಮಧ್ವನಿಗಳ ಹಿಂದೆ. ಆ ಊಷ್ಮಧ್ವನಿಗಳೆಂದರೆ ಶ್, ಷ್, ಸ್ (ಮತ್ತು ಹ್). ಉದಾಹರಣೆಗೆ ಅಂಶ, ಹಂಸ, ಸಿಂಹ ಇತ್ಯಾದಿ. ಅಂದರೆ ಊಷ್ಮಧ್ವನಿಗಳ ಹಿಂದೆ ಬರುವ ಅನುನಾಸಿಕಕ್ಕೆ ಸಂಸ್ಕೃತದಲ್ಲಿ ಅನುಸ್ವಾರವೆಂದು ವಿಶಿಷ್ಟ ಅಭಿಧಾನ. ಸಂಸ್ಕೃತ- ದಲ್ಲಿಯೂ ಅನುಸ್ವಾರದ ಬೆಳವಣಿಗೆಯಲ್ಲಿ ಇದು ಪ್ರಥಮ ಘಟ್ಟ. ಮುಂದೆ ಈ ಪರಿಸರ ವಿಶಾಲವಾಗತೊಡಗಿತು. ರ್, ವ್, ಯ್ ಗಳ ಹಿಂದೆಯೂ ಅನುಸ್ವಾರ ಬರುವ ಘಟನೆ ಸಂಸ್ಕೃತದಲ್ಲಿ ಸ್ವಲ್ಪ ತಡವಾಗಿಯಾದರೂ ಮನ್ನಣೆ ಪಡೆಯಿತು.

ಈಗ, ಅನುಸ್ವಾರದ ಸ್ವರೂಪದ ಬಗೆಗಿನ ವಿವಾದಗಳನ್ನು ಮೂರು ಅಂಶಗಳಲ್ಲಿ[೪] ಕ್ರೋಢೀಕರಿಸಬಹುದು

(೧) ಅನುಸ್ವಾರವು ಅನುನಾಸಿಕ ಸ್ವರ. ಇದು ಸಿದ್ಧಾಂತಕೌಮುದಿ- ಕಾರನ ಅಭಿಪ್ರಾಯ. ಅವನ ಪ್ರಕಾರ ನ್ ಅಥವಾ ಮ್ ಗಳ ಲೋಪವಾಗಿ ಅವುಗಳ ಹಿಂದಿನ ಸ್ವರ ಅನುನಾಸಿಕಯುಕ್ತವಾಗುವುದೇ ಅನುಸ್ವಾರ. ಕೇಶಿ- ರಾಜನಲ್ಲಿಯೂ ಈ ರೀತಿಯ ಅಭಿಪ್ರಾಯ ಒಂದು ಸೂತ್ರದಲ್ಲಿ (ಮ್, ನ್ ಕಾರದ ಪರದೊಳ್) ಕಂಡುಬರುತ್ತದೆ.

(೨) ಅನುಸ್ವಾರದಲ್ಲಿ ಸ್ವರ ಅಥವಾ ವ್ಯಂಜನದ ಅಂಶವಿರಬಹುದು (ಋಕ್ ಪ್ರಾತಿಶಾಖ್ಯ) ಇಲ್ಲವೆ ಅನುಸ್ವಾರಸ್ವರ ಅಥವಾ ವ್ಯಂಜನ. 'ಗಣಾನಾಂ ಗಣಪತಿಂ ವಂದೇ' ದಲ್ಲಿ ಗಣಪತಿಗ್ ಎಂದು ಉಚ್ಚರಿಸುವುದನ್ನು ಸ್ಮರಿಸಬಹುದು. ಕೇಶಿರಾಜನ ಸೂತ್ರ 'ಸ್ವರ ಪರದೊಳಿರ್ಪ ತೆರದಿಂ........ಬಿಂದು ಸ್ವರಾಂಗಮುಂ ವ್ಯಂಜನಾಂಗಮುಂ ತಾಮೆಂಬರ್' ಈ ಅಭಿಪ್ರಾಯವನ್ನು ಅನುಸರಿಸಿದೆ.

---

೩. ಮುಖನಾಸಿಕಾಕರಣೋಽನುನಾಸಿಕಮ್. —ಅಥರ್ವಣ ಪ್ರಾತಿಶಾಖ್ಯ

೪. Critical Studies in the Phonetic Observations of Indian Grammar —Siddheswar Varma.

(೩) ಅನುಸ್ವಾರವೆಂದರೆ ವ್ಯಂಜನ (ಸರ್ವಸಮ್ಮತ ಶಿಕ್ಷ) ಅದರ ಉಚ್ಚಾರ ಅರ್ಧ ಗಕಾರ (ವಂಶಜಸ್ಯ, ಪ್ರಾಂಶುಃ).

ಈ ರೀತಿ ಮೂರು ಅಭಿಪ್ರಾಯಗಳಿಗೆ ಕಾರಣ ಏನಿರಬಹುದು? ಪ್ರಾದೇಶಿಕ ವೈವಿಧ್ಯವೇ? ಸಂಸ್ಕೃತ ಭಾಷೆಯನ್ನು ಕುರಿತ ಈಗಿನ ಸ್ಥಿತಿಯಲ್ಲಿ ಯಾವುದೇ ಖಚಿತ ಅಭಿಪ್ರಾಯಕ್ಕೆ ಬರುವುದು ಕಷ್ಟಸಾಧ್ಯವಾಗುತ್ತದೆ.

ದ್ರಾವಿಡ ಭಾಷೆಗಳಲ್ಲಿ ಅನುಸ್ವಾರವಿಲ್ಲವೆಂದು ಕೆಲ ಪಂಡಿತರ ಮತ.[೫] ಡಾ. ಕಾಲ್ಡ್ವೆಲ್ಲರ ಪ್ರಕಾರ, ದ್ರಾವಿಡ ಭಾಷೆಗಳಲ್ಲಿ ಅನುಸ್ವಾರವಿಲ್ಲ. ಸಂಸ್ಕೃತದ ಅನುಸ್ವಾರಕ್ಕೆ ಸಮೀಪವರ್ತಿಯಾದ ಒಂದೇ ಉದಾಹರಣೆಯೆಂದರೆ ತೆಲುಗು ಭಾಷೆಯಲ್ಲಿರುವ ಅರ್ಧಾನುಸ್ವಾರ. ಕನ್ನಡ ಮತ್ತು ತೆಲುಗು ಭಾಷೆಗಳು ಸಂಸ್ಕೃತದ ಅನುಸ್ವಾರ ನಾಮನಿರ್ದೇಶವನ್ನು ಮಾತ್ರ ತೆಗೆದುಕೊಂಡು, ಅದನ್ನು ವರ್ಗೀಯ ವ್ಯಂಜನಗಳ ಹಿಂದಿನ ಅನುನಾಸಿಕಕ್ಕೆ ಅನ್ವಯಿಸಿವೆ.

ಪ್ರ. ಗೋ. ಕುಲಕರ್ಣಿಯವರು ಅನುಸ್ವಾರದ ಬಗೆಗಿನ ಡಾ. ಕಾಲ್ಡ್ವೆಲ್ಲರ ಅಭಿಪ್ರಾಯವನ್ನು ಖಂಡಿಸಿ, ಅವರ ಅಭಿಪ್ರಾಯವು ಸಂಸ್ಕೃತ ವೈಯಾಕರಣಿಗಳು ಹೇಳುವುದಕ್ಕೆ ಹೊಂದಿಕೆಯಾಗಿಲ್ಲವೆನ್ನುತ್ತಾರೆ.[೬] ಅದಕ್ಕಾಗಿ ಹರಿಮ್ + ವಂದೇ = ಹರಿಂ ವಂದೇ ಉದಾಹರಣೆಯನ್ನು ಕೊಟ್ಟು, ಇಲ್ಲಿ ಅನುಸ್ವಾರಾದೇಶವಾಗುತ್ತದೆ ಎಂದು ಹೇಳುತ್ತಾರೆ. ಇಲ್ಲಿಯ ಹರಿಂ ವಂದೇ ಮತ್ತು ಹಂಸ ಶಬ್ದಗಳಲ್ಲಿಯ ಉಚ್ಚಾರಣೆ ಭಿನ್ನವಾಗಿದೆಯೆಂಬುದು ಸ್ಪಷ್ಟ. ಕುಲಕರ್ಣಿಯವರ ಈ ಅಭಿಪ್ರಾಯಕ್ಕೆ ಅನುಸ್ವಾರದ ಉಚ್ಚಾರವನ್ನು ಕಡೆಗಣಿಸಿ, ವರ್ಣಮಾಲೆಯಲ್ಲಿಯ ಅದರ ಸ್ವರೂಪವನ್ನು ಮಾತ್ರ ತೆಗೆದು-ಕೊಂಡದ್ದೇ ಕಾರಣವಾಗಿದೆ. ಯಾಕೆಂದರೆ ಅವರ್ಗೀಯ ವ್ಯಂಜನಗಳಲ್ಲಿ ಬರುವ ಅನುಸ್ವಾರದ ಉಚ್ಚಾರವು, ವರ್ಗೀಯ ವ್ಯಂಜನಗಳಲ್ಲಿ ಬರುವ ಅನುನಾಸಿಕದ ಉಚ್ಚಾರಕ್ಕಿಂತ ಸಾಕಷ್ಟು ಭಿನ್ನವಾಗಿದೆ. ಹಂಸ, ಅಂಶ, ಸಿಂಹ ಮುಂತಾದ ಶಬ್ದಗಳಲ್ಲಿ ಅನುಸ್ವಾರದ ಉಚ್ಚಾರವನ್ನು ಅರ್ಧೋಷ್ಠ್ಯವೆಂದು ಕರೆಯ-ಬಹುದು. ವರ್ಗೀಯ ವ್ಯಂಜನಗಳ ಹಿಂದೆ ಬರುವ ಅನುನಾಸಿಕ ಉಭಯೋಷ್ಠಗಳ ಸಂಪರ್ಕದಿಂದ ಉಂಟಾದರೆ, ಅನುಸ್ವಾರದಲ್ಲಿ ಆ ರೀತಿಯ ಸಂಪರ್ಕವಿಲ್ಲ. ಅದೇ ರೀತಿ ಸಂಯಮ ಶಬ್ದದಲ್ಲಿಯ ನ್ ವು ತಂದೆ ಶಬ್ದದಲ್ಲಿ ಬರುವಂತೆ ಸ್ಥಾನ ಮತ್ತು ಕರಣಗಳ ಸಂಪೂರ್ಣ ಸಂಪರ್ಕದಿಂದ ಉಂಟಾಗುವದಿಲ್ಲ. ಅದಕ್ಕಾಗಿ ಅನುಸ್ವಾರ(ಂ)ವು ಪ್ರತಿನಿಧಿಸುವ ಧ್ವನಿಗಳನ್ನು ಮ್, ಮತ್ತು ನ್‌ಗಳೆಂದು ಸಂಕೇತಿಸಿ, ಅವುಗಳನ್ನು ವರ್ಗೀಯ ವ್ಯಂಜನಗಳ ಹಿಂದೆ ಬರುವ ಅನುನಾಸಿಕ-ಗಳಾದ ಮ್, ನ್ ಗಳಿಂದ ಭಿನ್ನವೆಂದು ಗುರುತಿಸಲು ಅನುವು ಮಾಡಬಹುದು.

---

೫. Comparative Grammar of Dravidian Languages—Dr. Caldwell.

೬. ಕನ್ನಡ ಭಾಷೆಯ ಚರಿತ್ರೆ—ಪು. ೧೪೬.

ಇದೇ ರೀತಿ ಹಂಪನಾ ಅವರು 'ದ್ರಾವಿಡಭಾಷಾ ವಿಜ್ಞಾನ'[೭]ದಲ್ಲಿ ಕನ್ನಡದಲ್ಲಿ ಆರು ಅನುನಾಸಿಕಧ್ವನಿಗಳಿವೆಯೆಂದು ಹೇಳಿ, ಅವು ಮ್, ನ್, ಣ್, ಙ್, ಞ್ ಮತ್ತು ಂ ಗಳೆಂದು ಹೇಳುತ್ತಾರೆ; ಮತ್ತು ಬಿಂದುವಿನ ಉಚ್ಚಾರ ಫಲಕ ವರ್ತ್ಸ್ಯವೆಂದು ಹೇಳಿ, ಅದು /ನ್/ ಧ್ವನಿಮಾದ ಭಿನ್ನಧ್ವನಿಮಾ ಎಂದು ಹೇಳುತ್ತಾರೆ. ಇವರ ಅಭಿಪ್ರಾಯಕ್ಕೆ ಆಕ್ಷೇಪಣೆಗಳೆಂದರೆ, ಒಂದು : ಧ್ವನಿಮಾಕ್ಕೆ ಇನ್ನೊಂದು ಭಿನ್ನ ಧ್ವನಿಮಾ ಎಂದರೆ ಏನು ಎಂಬುದು. ಎರಡು : ಹಂಸ, ಅಂಶದಲ್ಲಿಯ ಉಚ್ಚಾರ ನ್ ದಂತಿದೆಯೇ ? ಎಂಬುದು. ಹೀಗಾಗಿ, ಅವರ ವಿವೇಚನೆಯಿಂದ ನಾವು ಎಲ್ಲಿಗೂ ಮುಟ್ಟುವದಿಲ್ಲ.

ಆಮೇಲೆ ಡಾ. ಎಚ್. ಎಸ್. ಬಿಳಿಗಿರಿಯವರು[೮] 'ಅನುಸ್ವಾರವು ಸ್ಪರ್ಶ ಮತ್ತು ಈಷತ್ ಸ್ಪರ್ಶಗಳ ಹಿಂದೆ ತದ್ ವರ್ಗೀಯ ಅನುನಾಸಿಕದಂತೆಯೂ ಮತ್ತು ಉಳಿದ ವ್ಯಂಜನಗಳ ಹಿಂದೆ ಮ್‌ದಂತೆಯೂ ಉಚ್ಚರಿತವಾಗುವುದರಿಂದ ಆ ಅಯ್ದು ಅನುನಾಸಿಕಗಳಲ್ಲಿ ಅದನ್ನು ಸೇರಿಸಿಬಿಡಬಹುದೆಂದು ಹೇಳುತ್ತಾರೆ. ಸಂದರ್ಭಕ್ಕನುಸಾರವಾಗಿ ಬಿಂದುವು ಆಯಾ ಅನುನಾಸಿಕದ ಉಚ್ಚಾರ ಪಡೆಯುವುದರಿಂದ ಅದಕ್ಕಾಗಿ ಬೇರೆಯಾಗಿ, ವಿವೇಚನೆ ಮಾಡುವ ಅವಶ್ಯಕತೆ ಅವರಿಗೆ ತೋರಿಲ್ಲ.

ಮೇಲಿನ ವಿವೇಚನೆಯಿಂದ ಅನುಸ್ವಾರ, ಅನುನಾಸಿಕಗಳು ತಾತ್ವಿಕವಾಗಿ ಸ್ವಲ್ಪ (ಒಂದು ವಿಶಿಷ್ಟ ಪರಿಸರದಲ್ಲಿ ಬಂದ ಅನುನಾಸಿಕವೇ ಅನುಸ್ವಾರ) ಭಿನ್ನವಾದರೂ ಅವೆರಡು ಮುಂದೆ ಸಮಾನವಾಗಿ ವ್ಯವಹರಿಸ್ಪಡುವುದ ಕಾರಣವೇನು? ಹಿಂದಿನವರು ಸಜಾತೀಯ ಅನುನಾಸಿಕದ ಬಳಕೆಯನ್ನು ವಿಧಿಸಿದ ಕೆಲ ಸಂದರ್ಭಗಳಲ್ಲಿ, ಪಾಣಿನಿಯೇ ವಿಕಲ್ಪವಾಗಿ ಅನುಸ್ವಾರವನ್ನು (ಮ್) ಬಳಸಲು ಅನುಮತಿಸುತ್ತಾನೆ. ಇದು ಕೇವಲ ಬರೆಹದ ಅನುಕೂಲಕ್ಕಾಗಿ ಎಂದು ಕೆಲವರ ಮತ. ಮುಂದೆ ಈ ಪದ್ಧತಿ ಬೆಳೆದು, ಶಬ್ದಮಧ್ಯದಲ್ಲಿಯೂ ಸಜಾತಿಯ ಅನುನಾಸಿಕಗಳನ್ನು ಸರಿಸಿ, ಅನುಸ್ವಾರದ ಬಳಕೆಯಾಗುವುದನು ಗಮನಿಸುತ್ತೇವೆ. ಹಾಗಾದರೆ ಈ ರೀತಿಯ ಬಳಕೆಗೆ ಕಾರಣವೇನು ?

ಸಂಸ್ಕೃತದಲ್ಲಿ ಅನುಸ್ವಾರಕ್ಕೆ ಸ್ವರದ ಮೇಲೆ ಂ ಚಿಹ್ನೆಯನ್ನು ಬಳಸುತ್ತಿದ್ದರು. ಸಂಸ್ಕೃತದಲ್ಲಿ ಶ್, ಷ್, ಸ್, ಹ್ ಗಳ ಹಿಂದೆ ಅಂದರೆ ಅನುಸ್ವಾ ಬರುವ ಪರಿಸರದಲ್ಲಿ ಂ ಚಿಹ್ನೆಯನ್ನೂ, ಇತರ ಪರಿಸರಗಳಲ್ಲಿ ಆಯಾ ಅನುನಾಸಿಕಗಳನ್ನೂ ಬಳಸುತ್ತಿದ್ದರು.

ಉದಾ :– अंश, सिंह, हंस; शङ्का, शम्भु, वन्दे.

---

೭. ದ್ರಾವಿಡಭಾಷಾವಿಜ್ಞಾನ—ಹಂಪನಾ, ಪು. ೧೦೫.

೮. Indian Linguistics—Vol. 16, Nasal Phonemes in Kannada (pp. 306)

ಅನುಸ್ವಾರ ಚಿಹ್ನೆಯನ್ನು ಬಳಸುವ ಈ ಕ್ರಮ ಮುಂದೆ ಬರವಣಿಗೆಯ ಸೌಲಭ್ಯಕ್ಕಾಗಿ ಇತರ ಪರಿಸರಗಳಲ್ಲಿಯೂ ಬಳಕೆಯಾಗಹತ್ತಿತು.

ಮೇಲೆಹೇಳಿದ ಘಟ್ಟದ ಮುಂದಿನ ಪ್ರಯೋಗವೇ ಕನ್ನಡದಲ್ಲಿ ಕಂಡುಬರುತ್ತದೆ. ಬಿಂದು ಕನ್ನಡದಲ್ಲಿ ಪ್ರಯೋಗವಾಗ ಹತ್ತಿದ ಮೇಲೆ, ಅದು ತನ್ನ ಮೂಲ ಸ್ವರೂಪವನ್ನು ಕಳೆದುಕೊಂಡು, ಒಟ್ಟು ಅನುನಾಸಿಕ ಧ್ವನಿಗಳ ಪ್ರತಿನಿಧಿಯಾಗಿ ವ್ಯವಹರಿಸಹತ್ತಿತು. ಅಂದರೆ ಅನುಸ್ವಾರ ಬಳಕೆಯಾಗುವ ಶ್, ಷ್, ಸ್, ಹ್ ಗಳ ಹಿಂದೆಯೂ (ಕನ್ನಡದಲ್ಲಿ ಇಂತಹ ಶಬ್ದಗಳೂ ಸಂಸ್ಕೃತದಿಂದಲೇ ಬಂದಂಥವುಗಳು), ಮತ್ತು ಅನುನಾಸಿಕ ಧ್ವನಿ ಬರುವ ಇನ್ನಿತರ ಪರಿಸರಗಳಲ್ಲಿಯೂ ಅದು ಬಳಕೆಯಾಗಹತ್ತಿತು. ಸಂಸಾರ, ಸಿಂಹ, ಅಂಶ ಶಬ್ದಗಳಲ್ಲಿ ಬಿಂದು ಬರುವುದಂತೂ ಸರಿಯೇ ಆದರೆ ಅಂಗಣ, ಸಂಜೆ, ಚೆಂಡು, ತಂದೆ, ಹಂಬಲ ಮುಂತಾದ ಸ್ಪರ್ಶ ವ್ಯಂಜನಗಳ ಪರಿಸರದಲ್ಲಿಯೂ ಅನುನಾಸಿಕದ ಬದಲು ಬಿಂದು ಬಳಕೆಯಾಗಹತ್ತಿತು.[೯] ಈಗ ಬಿಂದುವಿನ ಬಳಕೆ ಮಿತಿಮೀರಿದುದನ್ನು ಚಂಚೆ (ಚವ್‌ಚೆ < ಚವುಚೆ) ಮುಂತಾದ ಪ್ರಯೋಗಗಳಲ್ಲಿ ಕಾಣುತ್ತೇವೆ. ಕಂಗೆ (< ಕಣ್‌ಗೆ < ಕಣ್ಣಿಗೆ).

ಇನ್ನು, ನಮ್ಮ ಕನ್ನಡ ವೈಯಾಕರಣಿಗಳ ಪ್ರಕಾರ ಮ್, ನ್, ಣ್, ಙ, ಞ ಈ ಅಯ್ದು ಅನುನಾಸಿಕ ವರ್ಣಗಳು. ಆದರೆ ಆಧುನಿಕ ಭಾಷಾಶಾಸ್ತ್ರಕ್ಕನುಸಾರವಾಗಿ ಮ್, ನ್, ಣ್ ಈ ಮೂರು ಧ್ವನಿಗಳು. ಮ್, ನ್, ಣ್‌ಗಳು ಅಮ್ಮ, ಅನ್ನ, ಅಣ್ಣ ಈ ಕನಿಷ್ಠ ಯುಗ್ಮಗಳಲ್ಲಿ ಬರುವುದರಿಂದ ಅವು ಸ್ವತಂತ್ರ ಧ್ವನಿಮಾಗಳು. ಙ್ ಞ್‌ಗಳು ಕೇವಲ ಸಜಾತಿಯ ವ್ಯಂಜನಗಳ ಹಿಂದೆ ಮಾತ್ರ ಬಂದು, ಒಂದು ನಿಶ್ಚಿತ ಪರಿಸರ ಹೊಂದಿರುವುದರಿಂದ ಅವಕ್ಕೆ ಬೇರೆ ಸಂಕೇತ ಕೊಡಬೇಕಾಗಿಲ್ಲ. ಅವನ್ನು ಈಗಾಗಲೇ ನಿರ್ಧರಿಸಿದ ಒಂದು ಧ್ವನಿಮಾದ ಉಪಾಂಗಗಳಾಗಿ ಗ್ರಹಿಸಬಹುದು. ಆದುದರಿಂದ [ಙ್], [ಞ್]ಗಳನ್ನು ಧ್ವನಿಸಾಮ್ಯವುಳ್ಳ /ನ್/ದೊಡನೆ ಸೇರಿಸಿ, /ನ್/ ಧ್ವನಿಮಾ ವರ್ಗದ ಉಪಾಂಗಗಳನ್ನಾಗಿ ಮಾಡಬಹುದು. ಇದನ್ನೇ ಕೆಳಗಿನಂತೆ ವ್ಯಕ್ತಪಡಿಸಬಹುದು :

/ನ್/ ←
- [ಙ್]–ಸಜಾತಿಯ ವ್ಯಂಜನಗಳ ಹಿಂದೆ : ಅಙ್‌ಚೆ
- [ಞ್]– ,, ,, ,, : ಅಞ್‌ಕ
- [ನ್]– ಇತರೆಡೆಗಳಲ್ಲಿ

೯. This extension was purely graphic and based on the convenience of the simple symbol to represent nasality.—Phonetics in Ancient India—W. S. Allen (pp. 44).

ಅಂದರೆ ವೈಯಾಕರಣಿಗಳ ಪ್ರಕಾರ ಅಯ್ದು ವರ್ಣಗಳೇ ಇರಲಿ, ಆಧು-
ನಿಕ ಭಾಷಾಶಾಸ್ತ್ರಜ್ಞರ ಪ್ರಕಾರ ಮೂರು ಧ್ವನಿಮಾಗಳೇ ಇರಲಿ, ಬಿಂದು
ಮಾತ್ರ ಇವುಗಳ ಸಂಕೇತ. ಈಗಾಗಲೇ ನಾವು ನಮ್ಮ ವರ್ಣಮಾಲೆಯಲ್ಲಿ
ಅಯ್ದು ಅನುನಾಸಿಕ ಸಂಕೇತಗಳನ್ನು ಕೊಟ್ಟಿದ್ದೇವೆ. ವರ್ಣಮಾಲೆಯಲ್ಲಿಯ
ಈ ಅಯ್ದು ಅನುನಾಸಿಕ ವರ್ಣಗಳ ಬಳಕೆಯ ಮಿತವ್ಯಯಕ್ಕಾಗಿ, ಅವೆಲ್ಲಕ್ಕೂ
ಕೂಡಿ, ಒಂದು ಸೌಲಭ್ಯ ಸಂಕೇತವನ್ನು ಬಳಸಲಾಗಿದೆ. ಅದೇ ಂ. ಅಂದರೆ
ಬಿಂದುವು ಪ್ರತಿನಿಧಿಸುವುದು ಒಂದೇ ಧ್ವನಿಮಾದ ಅಥವಾ ವರ್ಣದ ಸಂಕೇತ
ವನ್ನಲ್ಲ. ಅನೇಕ ಧ್ವನಿಮಾ ಸಂಕೇತಗಳನ್ನು ಪ್ರತಿನಿಧಿಸುವ ಬರೆಹ ಸಾಧನ
ಅದು. ಅಷ್ಟೇ ಅಲ್ಲ, ತಾನು ಪ್ರತಿನಿಧಿಸುವ ಧ್ವನಿಗಳನ್ನು ಬಿಂದುವು ಸಂಪೂರ್ಣ
ವಾಗಿ ಪ್ರತಿನಿಧಿಸುವುದಿಲ್ಲ. ಕೆಲವೊಂದು ಧ್ವನಿಗಳ ಒಂದು ವಿಶಿಷ್ಟ ಪರಿಸರದಲ್ಲಿ
ಮಾತ್ರ ಈ ಬಿಂದುವು ಅನುನಾಸಿಕ ಸಂಕೇತಗಳನ್ನು ಸರಿಸಿ, ಬಳಕೆಯಾಗು
ತ್ತದೆ. ಯಾಕಂದರೆ ಯಾವ ವ್ಯಂಜನವಿದೆಯೋ ಅದರ ಹಿಂದೆ ಬರುವ ಅನು
ನಾಸಿಕ ಆ ಸ್ಥಾನದ ಉಚ್ಚಾರವನ್ನೇ ಪಡೆಯುತ್ತದೆ.[೧೦] ಒಮ್ಮೆ ಆಯಾ ಪರಿ
ಸರದಲ್ಲಿಯ ಉಚ್ಚಾರ ನಿಶ್ಚಿತವಾದಮೇಲೆ ಅದಕ್ಕೆ ಯಾವ ಸಂಕೇತ ಕೊಟ್ಟರೂ
ಆ ಸಂಕೇತ ಒಂದು ರೇಖೆ (|)ಯೇ ಇರಲಿ, ಅಥವಾ ಈಗ ಬಳಸುತ್ತಿರುವಂ
ಬಿಂದುವೇ ಇರಲಿ, ಅದರ ಉಚ್ಚಾರ ನಿಶ್ಚಿತ. ಈ ಬಿಂದುವಿನಲ್ಲಿ ಇನ್ನೂ ಒಂದ
ಅಂಶವಿದೆ. ಸ್ವತಂತ್ರವಾಗಿ (ಮನೆ, ನಾಡು, ಇತ್ಯಾದಿ) ಆ ಅನುನಾಸಿಕ ಬರುವಾ
ಅದರ ಬದಲಾಗಿ ಬಿಂದು ಬಳಕೆಯಾಗುವುದಿಲ್ಲ. ಕೇವಲ ಒಂದೇ ಒಂದು (ಸಜಾ
ತಿಯ ವ್ಯಂಜನಗಳ ಹಿಂದಿನ ಅನುನಾಸಿಕ) ಪರಿಸರದಲ್ಲಿ ಮಾತ್ರ ಅದು ಪ್ರಯೋ
ವಾಗುತ್ತದೆ. ಮತ್ತು ಬಿಂದುವು ಅದನ್ನು ಭಾಗಶಃ ಪ್ರತಿನಿಧಿಸುತ್ತದೆ. ಅದು
ರಿಂದ ಬಿಂದುವು ಅನುನಾಸಿಕಗಳ ಸಂಪೂರ್ಣ ಪ್ರತಿನಿಧಿಯೂ ಅಲ್ಲ; ಅಷ್ಟೇ ಅ
ಬಿಂದುವು ಧ್ವನಿಪ್ರಪಂಚದಲ್ಲಿ ಅನುನಾಸಿಕಗಳ ಪ್ರತಿನಿಧಿಯಾಗಿದೆ, ವರ್ಣಮಾ
ಯಲ್ಲಿ ಕೆಲವು ಸಂಕೇತಗಳ ಒಟ್ಟು ಪ್ರತಿನಿಧಿಯಾಗಿ ಬರುತ್ತದೆ. ಅಂದರೆ ಬಿಂದು
ಬರೆಹದ ಸಂಕೇತಗಳ ಸಂಕೇತ.

★ ಜೆ. ಎಸ್. ಕುಳ್ಳಿ

---

೧೦. ಅನುಸ್ವಾರಕ್ಕೆ ಕನ್ನಡದಲ್ಲಿ ಒಂದು ನಿಯತವಾದ ಉಚ್ಚಾರವಿಲ್ಲ. ಪದಾಂತ್ಯದಲ್ಲಿ ಇ
ಉಚ್ಚಾರವು ಮ್. ಪದಮಧ್ಯದಲ್ಲಿ ಬರೆಹದ ಸೌಲಭ್ಯಕ್ಕಾಗಿ ಅನುಸ್ವಾರವನ್ನು ಬರೆ
ಅದರ ನಿಜವಾದ ಉಚ್ಚಾರಣೆ ತನ್ನ ಮುಂದಿರುವ ವ್ಯಂಜನ ವರ್ಗಕ್ಕೆ ಸೇರಿದ ಅ
ನಾಸಿಕದ್ದು."—ಕನ್ನಡ ಕೈಪಿಡಿ, ಪುಟ ೫.

ಶಾಸನದ ಕುಶಲ ಲಿಪಿಕಾರರು

'ಬಳಸಿ ಬರೆಯಲು ಕಂಠಪತ್ರದ ಉಲುಹುಗೆಡದಗ್ಗಳಿಕೆ' ಎಂಬುದು ಕವಿಕುಮಾರವ್ಯಾಸನು ವೀರನಾರಾಣಯನ 'ಲಿಪಿಕಾರ'ನಾಗಿ ಹೇಳಿದ ಒಂದು ಅರ್ಥವತ್ತಾದ ಮಾತು. ಕೆಲವು ಶಾಸನ ಲಿಪಿಕಾರರಿಂದಲೂ ಉದ್ಘೋಷಿಸಲ್ಪಟ್ಟ ಇಂತಹ ಉತ್ಕಟ ಅಗ್ಗಳಿಕೆಗಳನ್ನು ಗಮನಿಸಿ, ಅವರ ರೋಚಕ ಹಸ್ತಕೌಶಲ, ರೋಮಾಂಚಕ ಹಸ್ತಸಾಮರ್ಥ್ಯಗಳನ್ನು ಅರಿಯಲು ಮಾಡಿದ ಪ್ರಯತ್ನ ಈ ಲೇಖನ.

ಆನೆಕೆರೆ ಶಾಸನದ ಕೊನೆಯ "ಜನ್ನಯ್ಯನ ಕವಿತೆ, ದಾವಣ್ಣನ ಬರಪ, ಮಲ್ಲೋಜನ ಕಂಡರಣೆ"[೧] ಎಂಬ ಮಾತಿನಿಂದ ಒಂದು ತಾಮ್ರಫಲಕ ಇಲ್ಲವೆ ಶಿಲಾಫಲಕ ಶಾಸನವಾಗುವಲ್ಲಿ ಸಾಮಾನ್ಯವಾಗಿ ಕವಿ, ಲಿಪಿಕಾರ, ರೂವಾರಿಗಳು ಅವಶ್ಯವೆಂದು ತಿಳಿದುಬರುತ್ತದೆ, "ಪತ್ರಶಾಸನವ ನೋಡ ಬರದ ಆಚಾರಿ ಮನಸೋಜ"[೨]. "ಮೃದುರೇಖಾವಿಳಾಸ ಚಾವರಾಜ ಬಳಹದಲ್ಬರೆದುದ........ ಗಂಗಚರಿ ಕಂಡರಿಸಿದಂ"[೩] ಎಂಬ ಮಾತುಗಳಿಂದ ಎಲೆಯ ಮೇಲೆ ಬರೆದು ತಂದ ವಿಷಯವನ್ನು ಲಿಪಿಕಾರ ಬಳಪದಿಂದ ಶಿಲೆಯ ಮೇಲೆ ತೀಡಿದ ತರುವಾಯ ರೂವಾರಿ ಅದನ್ನು ಕಂಡರಿಸುತ್ತಿದ್ದುದು ಸಾಮಾನ್ಯ ಪದ್ಧತಿಯೆಂದು ಗೊತ್ತಾ-ಗುತ್ತದೆ. ಆದರೆ "ಕುಬ್ಜಂ ಸ್ವಕಾಮ್ಯವಿದಶ್ಮತಲೇ ಲಿಲೇಖ"[೪], "ಹುಲಿಗೆಜೆಯ ಬಮ್ಮೋಜ ತಾನೆ ಬರೆದು ತಾನೆ ಕಂಡರಿಸಿದ"[೫] ಎಂಬಲ್ಲಿ ಕವಿ ಕುಬ್ಜ ಮತ್ತು ರೂವಾರಿ ಬಮ್ಮೋಜರು ಲಿಪಿಕಾರನ ಕಾರ್ಯವನ್ನೂ ಮಾಡಿದ್ದಾರೆ. ಆದರೆ ಮೂರು ಕಾರ್ಯವನ್ನು ಒಬ್ಬನೇ ಮಾಡಿದ, ಕವಿಯೇ ಕಂಡರಿಸಿದ ಉಲ್ಲೇಖ ಮಾತ್ರ ಇನ್ನೂ ಗೊತ್ತಾಗಿಲ್ಲ.

ಶಾಸನಗಳಲ್ಲಿ 'ಬರೆದಂ', 'ಲಿಖಿಸಿದಂ' ಎಂಬ ಪದಗಳ ಬಳಕೆ ಕಟ್ಟುನಿಟ್ಟು ಇಲ್ಲದೆ ಒಮ್ಮೊಮ್ಮೆ ಕವಿ, ಲಿಪಿಕಾರ ಮತ್ತು ರೂವಾರಿಗಳಿಗೂ ಆರೋಪಿತ-ವಾಗಿದೆ. ಹೀಗಾಗಿ ಶಾಸನಗಳಿಂದ ಲಿಪಿಕಾರನನ್ನು ಬೆರಳಿಟ್ಟು ಗುರುತಿಸುವುದು ಕಷ್ಟದ ಕಾರ್ಯ. ಅಂತಹ ಪ್ರಮಾದವಾಗದಂತೆ ಇಲ್ಲಿ ಎಚ್ಚರವಹಿಸಲಾಗಿದೆ.

೧. E.C. V-II, ಚನ್ನರಾಯಪಟ್ಟಣ-೧೭೯-ಆನೇಕೆರೆ.
೨. E.C. III, ಮಂಡ್ಯ-೭೦-ಬೂದನೂರ (ಪೊಲದ ಸೀಮೆಯೆಲ್ಲಮಂ ಬ[ಓ]ಲಿಯೊಳ್ಬ-ರೆಂದು xxಸ್ತು ಕಲ್ಲಶಾಸನಮಾಗೆ ಬರೆದುಕೊಂಡೆನು" E C.III, ನಂಜನಗೂಡ-೧೩೯. ಎಂಬ ವಾಕ್ಯವನ್ನೂ ಗಮನಿಸಬೇಕು).
೩. E.C. II, No. 127-ಶ್ರವಣಬೆಳ್ಗೊಳ.
೪. Ep.In. VIII, 24-ತಾಳಗುಂದ.
೫. S.I.I. XX. P. 95-ಬಾಳಂಬೀಡ (ಹಾನಗಲ್ಲ ತಾಲೂಕ).

“ಶ್ರೀಜಿಡೆಯು ಸಂಕರದೇವರ ಮಲ್ಲಯ್ಯ ಬರದ”[೬], “ಹೆಗ್ಗಡೆ ಬಮ್ಮದೇವ ಅಳಿಯಂ ನಾಗದೇವನ ಬರಹ”[೭], “ಜಕ್ಕಿಮಯ್ಯನ ಮರ್ಮಂ ಮಹಾದೇವಯ್ಯ ಬರಪ”[೮], “ಬರೆದಂ ಬೊಂಮಣ ಪಂಡಿತರ ವರತನಯಂ”[೯], “ಸಕಲ ಜನ್ದ ಪಣ್ಡಿತದೇವರ ಗುಡ್ಡ ಮಲ್ಲಣಂ ಬರೆದಂ”[೧೦], “ಕೊಳೂರ ಬಾಚಣ್ಣ ಬರೆದಂ”[೧೧], “ಬರವರಾಚಾರ್ಯ ಸೂರ್ಯ್ಯಣ್ಣಂಗಳ ಶಿಷ್ಯ ಬಾಚಯ್ಯ ಬರಪ”[೧೨]— ಎಂದು ಲಿಪಿಕಾರರು ತಮ್ಮ ಹೆಸರಿನೊಂದಿಗೆ ಆರಾಧ್ಯದೇವತೆ ಧರ್ಮಗುರು, ಲಿಪಿವಿದ್ಯಾಗುರು, ತಂದೆ, ಅಜ್ಜ, ಮಾವ, ಊರು ಇತ್ಯಾದಿ ಸಂಬಂಧಗಳನ್ನೂ ಹೇಳುತ್ತಾರೆ. ಇವರಲ್ಲಿ ಸಂಧಿವಿಗ್ರಹಿ, ಪಟ್ಟಣಸ್ವಾಮಿಗಳಂತರ ಪ್ರತಿಷ್ಠಿತರು; ಕುಳಕರಣಿ, ಸೇನಬೋವ, ಶ್ರೀಕರಣ, ಕಾಯುಸ್ಥ, ಗಾವುಂಡ ಗಣಕರಂತಹ ಅಧಿಕಾರಿಗಳು ಮಿಕ್ಕ ಸಾಮಾನ್ಯ ಪ್ರಜೆಗಳು—ಎಂಬ ಅಕ್ಷರಜ್ಞರೆ ಕಂಡುಬರುತ್ತಾರೆ. ಆದರೆ ಲಿಪಿಕಾರ್ತಿಯರ ಉಲ್ಲೇಖ ಮಾತ್ರ ಎಲ್ಲಿಯೂ ಕಂಡುಬರುವುದಿಲ್ಲ. ಈ ಪ್ರಸಂಗದಲ್ಲಿ “ಕಱಿವಯ ಕಾಳಿಸೆಟ್ಟಿ....ಳಿಯ ಹದಿ ಸೆಟ್ಟಿಯಕವ್ವೆಯ ಬರಪ”[೧೩] ಎಂಬುದು ಗಮನಾರ್ಹ ಉಲ್ಲೇಖ. ಇದ ಅಪಪಾಠವಿರದ ಪಕ್ಷದಲ್ಲಿ ಈಗ ತಿಳಿದಮಟ್ಟಿಗೆ ‘ಹದಿಸೆಟ್ಟಿಯಕವ್ವೆ’ ಕಲ್ಲಮೇ ಅಕ್ಷರ ತೀಡಿದ ಏಕೈಕ ಮಹಿಳೆಯೆನ್ನಬೇಕಾಗುತ್ತದೆ.

> ಪರಹಿತರಿನ್ನೂರ್ವರ ಪದ। ಸರಸಿರುಹಾಮೋದ ಮಧುಕರ ಶಿವಭಕ್ತರಂ।
> ಕರವತಿಶಯವಾಗಿರೆ ವಿ। ಸ್ತರದಿಂ ಕುಳಕರಣಿ ಮಾಬಲಾರ್ಯ್ಯಂ ಬರೆದಂ।[೧೪]

> “ಆದಿಮಧ್ಯಾವಸಾನಂಬರಂ ನಿರ್ವ್ವಿಘ್ನದಿಂದಂ ಬರೆದಂ...ನರಸಿಂಗದೇವ”[೧೫]

> “ಶ್ರೀಮತ್ಪಣ್ಡರಂಗೇಸ್ವರದೇವರ್ಗ್ಗೆ ಮಹಾಭಕ್ತಿಯಿಂ ಶಾಸನಂ ಬರೆದಂ ಸೇನ ಬೋವ ಅಪ್ಪಣಂ”[೧೬]

---

೬. E.C. III, ಮಂಡ್ಯ-೮೩-ಮರಡಿಪುರ.

೭. E.C. III, ತಿರುಮಕೂಡ್ಲ-೧೦೬-ಕುಂಬಲಗ್ರಾಮ.

೮. B.K. I, I.-i. P. 79-ಹೊಂಬಳ (ಗದಗ ತಾಲೂಕ).

೯. E.C. IV-ii-ಎಳಂದೂರ-೧-ಎಳಂದೂರ.

೧೦. E.C. VIII, ನಗರ-೫೮-ಹುಮ್ಮಚ.

೧೧. S.I.I. IX-i, No. 298-ನಾಗೇನಹಳ್ಳಿ.

೧೨. E.C. VI, ತರೀಕೆರೆ-೨೦-ಬಾಣಾವರ.

೧೩. K.I. IV. No. 39-ನೂಲಗೇರಿ (ಧಾರವಾಡ ಜಿಲ್ಲೆ).

೧೪. S.I.I. XI-ii No. 127, 133, 134-ಕುರ್ತಕೋಟಿ.

೧೫. K.I. II. No. 16-ಅಕ್ಕಲಕೋಟ.

೧೬. K.I. IV. No. 32-ಬಾಳಂಬೀಡ (ಹಿರೇಕೆರೂರ ತಾಲೂಕ).



ಬರೆಯುತ್ತಿರುವ ಶಿಲಾಬಾಲಿಕೆ
(ಜಲಸಂಗವಿ–ಬೀದರ)

ಕೃಪೆ : ಕೆ. ಆರ್. ಆಯ್.

"ನ್ಯೂನಾಕ್ಷರಮಧಿಕಾಕ್ಷರಂ ವಾ ತತ್ಸರ್ವಂ ಪ್ರಮಾಣಮಿತಿ"[೧೬]

"ಪಂಡಿತರು ಗುಣದೋಷಂಗಳು ಕ್ಷಮಿಸುವುದು..."[೧೬A]

ಎಂಬ ಮಾತುಗಳು ನಮ್ಮ ಲಿಪಿಕಾರರ ಭಕ್ತಿಭಾವ, ಪ್ರಾಮಾಣಿಕಪ್ರವೃತ್ತಿ, ನಮ್ರಮನಸ್ಸುಗಳನ್ನು ವ್ಯಕ್ತಪಡಿಸುತ್ತವೆ. ಇಂತಹ ಮನೋಭಾವದಿಂದ ನಮ್ಮ ನಾಡಿನ ಸುಮಾರು ೩೫೦೦೦ ಶಾಸನಗಳನ್ನು ಬರೆದ ಲಿಪಿಕಾರರಲ್ಲಿ ದೈವದತ್ತವಾದ ಲಿಪಿಸೌಂದರ್ಯಸೌಭಾಗ್ಯವನ್ನು ಪಡೆದವರು ಕೆಲವರೇ. ಈ ಸೌಂದರ್ಯವನ್ನು ಸಾಧಿಸಬೇಕಾದರೆ ಕನ್ನಡ ಅಕ್ಷರಗಳ ಅವಯವಜ್ಞಾನ, ಅವಯವ ಪ್ರಮಾಣಜ್ಞಾನ ಅತ್ಯವಶ್ಯ.

ಪೊಕ್ಕಳು ತಲೆಕಟ್ಟುಮನಂ । ನ್ತರದವಯವಮನರಿದು ಖಂಡರಿಸಲುಕೆ ।
ಇಕ್ಕ್ಯದನೆ ಬಲ್ಲನಖಿಳಂ । ಮಿಕ್ಕವರೆನಿತ್ತೊಡೆಯುಂ ಧರಣಿ ಬಣ್ಣಿಸುತಿರ್ಕ್ಕುಂ ॥[೧೭]

ಕನ್ನಡ ಅಕ್ಷರಗಳ ಅಂಗತ್ರಯವನ್ನು ಪೊಕ್ಕಳು (= ಅಕ್ಷರದ ಮುಖ್ಯಭಾಗ), ತಲೆಕಟ್ಟು ಮತ್ತು ಅನಂತರದ ಅವಯವ ಎಂದು ಶಾಸ್ತ್ರೀಯವಾಗಿ ಬಿಡಿಸಿ ಹೇಳುತ್ತದೆ ಈ ಪದ್ಯ. ಕನ್ನಡ ಅಕ್ಷರಗಳ ಶರೀರರಚನೆಯನ್ನು ಕುರಿತ ಈ ಬಗೆಯ ಶಾಸ್ತ್ರೀಯ ಹೇಳಿಕೆ ಮತ್ತೆಲ್ಲಿಯೂ ಕಂಡುಬರುವುದಿಲ್ಲ. ಇದು ಲಿಪಿಕಾರ ಅರಿಯಬೇಕಾದ ಮೊದಲ ತತ್ತ್ವ.

ಬಹುರೇಖೆಯಾಗಿ ಬಾರದೆ । ಯತಿನಿಬಿಡಂ ನೋರ್ಪ(ನೇರ್ಪ)ಡೆಲ್ಲರುಂ ಹೊಗಳಲುಕೆ ।
ವಸ್ಮತಿ (= ವಸುಮತಿ)ಯೊಳು ಕಣ್ಗೊಳಿಸಲು । ಕತಿಬಲ್ಲಂ ದಾಸೋ-
ಜನಗ್ರಹಸಯಮ್ಮಸಣಂ ॥[೧೮]

ಬಹುರೇಖೆಯಾಗಿ ಬಾರದೆ ಅಂದರೆ ರೇಖೆ ಬಳಸಿಬರುವಂತೆ, ಯತಿನಿಬಿಡಂ ನೇರ್ಪಡೆ ಅಂದರೆ ಮಧ್ಯ ಮಧ್ಯ ಯೋಗ್ಯ ಸ್ಥಳವಿರುವಂತೆ ಅಕ್ಷರಗಳನ್ನು ಬರೆಯಬೇಕು—ಎಂಬ ಈ ಮಾತು ಕನ್ನಡ ಅಕ್ಷರಗಳ ಆಕಾರಜ್ಞಾನ, ವಿನ್ಯಾಸ-ವಿಧಾನಗಳನ್ನು ತಿಳಿಸಿಕೊಡುತ್ತದೆ. ಈ ಸಾಮಾನ್ಯ ತತ್ತ್ವಗಳಿಗೆ ಹೆಚ್ಚಿನದಾಗಿ ತಮ್ಮ ವ್ಯಕ್ತಿ ವಿಶಿಷ್ಟಸೌಂದರ್ಯಪ್ರಜ್ಞೆಯನ್ನೂ ಪೂರೈಸಿ

---

೧೬. K.I. IV. P. 102-ಮುಡಲೂರ (ಹಿರೇಕೆರೂರ ತಾಲೂಕ).

೧೬A. Ap. Govt. Ar. Series 13, P. 107-ಅಲಂಪೂರ.

೧೭. E.C. IX, ದಾವಣಗೆರೆ-೧೪೯-ಕೊಡಗನೂರ.

೧೮. E.C. I-ii, ಅರಸಿಕೇರಿ-೧೨೭-ತಳಲೂರ. (ಈ ಇಕ್ಕ್ಯದ (ಇಕ್ಕ್ಯದಾಚಾರಿ) ಮತ್ತು ಮಸಣರು ಲಿಪಿಕಾರರಲ್ಲ, ರೂವಾರಿಗಳು. ಅಕ್ಷರದ ಶರೀರ ರಚನೆಯನ್ನು ಹೇಳಿದ ಕಾರಣ ಈ ಪದ್ಯಗಳನ್ನು ಸ್ವೀಕರಿಸಲಾಗಿದೆ.)

"ಬಿಂದುವಿನೊಂದು ಶೋಭೆ, ತಲೆಕಟ್ಟಿನ ಪೊಕ್ಕುರ್ಗೆ ಚೆಲ್ವು, ಮಾತ್ರೆಯೊಳ್ ।
ನಿಂದ ಬೆಡಂಗು, ಬಳ್ಳಿಯೊಳೊಡಂಬಡುತಿರ್ಪ ಸಮಂ, ವಿಸರ್ಗದೊ ।
ಳ್ಪೊಂದಿರಲ್......॥[೨೦]

ನವಿಲ್ಗುಂದದ ವಾದಿರಾಜನಂತೆ ಅಕ್ಷರಗಳನ್ನು ಅಂದಗೊಳಿಸಬೇಕು. ಇಷ
ಹಿನ್ನೆಲೆಯಲ್ಲಿ ಈಗ ಕುಶಲ ಶಾಸನಲಿಪಿಕಾರರನ್ನು ಅಭ್ಯಸಿಸಬಹುದು.

'ಅಕ್ಷರದ ಗೋಪಣನ ಬರಹ'[೨೧], ಎಂಬಲ್ಲಿ 'ಅಕ್ಷರ' ಗೋಪಣ್ಣನಿ
ಅಡ್ಡಹೆಸರಿನಂತೆ ಶೋಭಿಸಿದೆ. ಅಕ್ಷರಜ್ಞನೆಂಬ ಸಾಮಾನ್ಯ ಅರ್ಥವಿ
ಸುಂದರ ಅಕ್ಷರಜ್ಞ ಎಂಬ ಅರ್ಥದಲ್ಲಿ ಈ ಹೆಸರು ಬಂದಿರಬೇಕು. "ಶಿಲಾಶಾಸನವ
ಬರದಂ....ಶಾಸನವಾಚಕಚಕ್ರವರ್ತಿ ಪುಣ್ಯಸಮ್ಮ"[೨೨] ಎಂಬ ಮಾತು ರಾಜಾ
ಜ್ಞೆಯನ್ನೋದುವವನೆಂದೂ ಶಾಸನವನ್ನೋದುವವನೆಂದೂ ಅರ್ಥಕೊಡು
ತ್ತದೆ. ಅದೇನೇ ಇದ್ದರೂ ಈ ಲಿಪಿಕಾರನೊಬ್ಬ 'ವಾಚಕಚಕ್ರವರ್ತಿ' ಎಂ
ಹೇಳಬಹುದು.

"ಘಂಟೆಯಂಮನ ಸುಹಸ್ತದ ಬರಹ"[೨೩]

"ಶಾನಭೋಗ ಲಕ್ಷ್ಮಪತ್ತಿ (= ಲಕ್ಷ್ಮೀಪತಿ) ಸುಹಸ್ತಬರಹವು"[೨೪]

"ಸ್ವಸ್ತಿಶ್ರೀಭರತಯ್ಯನ ದಿವ್ಯಲಿಖಿತ"[೨೫]

ಎಂಬ ಮಾತುಗಳು ಪವಿತ್ರಹಸ್ತದ ಬರಹವೆಂಬ ಅರ್ಥವನ್ನೂ ಸುಲಕ್ಷ
ಬರೆಹವೆಂಬ ಅರ್ಥವನ್ನೂ ಕೊಡುತ್ತವೆ. ಇಂತಹ ಲಿಪಿಕಾರರಲ್ಲಿ "ಶ್ರೀಮ
ಲ್ಲಿನಾಥಂ ಬಿರುದ ಲೇಖಕ ಮದನಮಹೇಶ್ವರಂ ಬರದಂ"[೨೬], "ಕೊಮ್ಮರಾ
ಬರೆವರಬದಗಂ ಭಾರತೀ ಕರ್ಣಪೂರಂ"[೨೭] ಎಂದು ಹೇಳಿಕೊಂಡ ಮಲ್ಲಿನಾ
ಮತ್ತು ಕೊಮ್ಮರಾಜರ ಬಿರುದುಗಳು ಇವರ ಲಿಪಿಸೌಂದರ್ಯಸಿದ್ಧಿಯು
ಸಾರುತ್ತವೆ. ಇಂತಹ ಇನ್ನೊಬ್ಬ ವ್ಯಕ್ತಿ ಸೂರ್ಯಣ. ಜಕ್ಕೇನಹಳ್ಳಿ, ಬೇಲೂ
ವೀರದೇವನಹಳ್ಳಿ, ಶಾಸನಗಳಿಗೆ ಲಿಪಿ ಒದಗಿಸಿದ ಈತನು

೨೦. ಕ. ಕ. ಚರಿತೆ, ಪು. ೪೬೨ (ಸಾ. ಪ. ಆವೃತ್ತಿ).
೨೧. E.C. IV-ii, ಚಾಮರಾಜನಗರ-64-ಹೊನ್ನುಗ್ರಾಮ.
೨೨. E.C. IV-ii, P. 83 ಮತ್ತು E.C. IX, P. 54-ಕೋಲದೇವನಹಳ್ಳಿ.
೨೩. E.C. VIII-ii, ತೀರ್ಥಹಳ್ಳಿ-೯೮-ಕವಲೇದುರ್ಗ.
೨೪. E.C. XI, ಮೊಳಕಾಲ್ಮೂರು-೨೫-ಸಂತೇಗೋವಿಗ್ರಾಮ.
೨೫. E.C. VIII-ii, ಸೊರಬ-೨೧೬-ಕೆರೆಹಳ್ಳಿ.
೨೬. E.C. VI, ಮೂಡಗೆರೆ-೨೨-ಹಂತೂರ.
೨೭. E.C. VII, P. 342.

"ಬರವರಾಚಯ್ರ್ಯ ಸೂಯ್ರ್ಯಣಂ ಬರದ"[೨೮]

"ಸೂಯ್ರ್ಯಣಂ ಬಿರುದ ಲೇಖಕ ಮದನಮಹೇಶ್ವರ"[೨೯]

"ಬರವರಾಚಾರ್ಯ್ಯಂ ಸೂರ್ಯಣಂ ಬಿರುದಲೇಖಕ ಮದನ ಮಹೇಶ್ವರಂ"[೩೦]

ಎಂದು ಹೇಳಿಕೊಂಡಿದ್ದಾನೆ. 'ಬರವರಾಚಾರ್ಯ್ಯ', 'ಬಿರುದಲೇಖಕಂ', 'ಮದನ-ಮಹೇಶ್ವರಂ' ಎಂಬಿವು ಈತನ ಅರ್ಥಪೂರ್ಣ ಬಿರುದುಗಳು. ಇವನ ಶಿಷ್ಯ ಬಾಚಯನು "ಬರವರಾಚಾರ್ಯ್ಯ ಸೂರ್ಯ್ಯಣ್ಣಗಳ ಶಿಷ್ಯ ಬಾಚಯನ ಬರಪ"[೩೧] ಎಂದು ನುಡಿಯುತ್ತ ಗುರು ಸೂರ್ಯಣನನ್ನು ಅಭಿಮಾನದಿಂದ ಸ್ಮರಿಸಿದ್ದಾನೆ.

ಮದವದರಿಬಿರುದಲೇಖಕ। ಮದಗಜಬಿದುವಿದಳನ ಸಿಂಹನ ತನಯಾ ವಿನಯಾ ॥
ಸ್ಪದ ಲಿಖಿತಜನಸುಮಿತ್ರಂ। ಮೃದುಲಲಿತವಿಚಿತ್ರ ಲಿಖಿತಲೇಖಂ ಸುಬ್ಬಂ॥[೩೨]

ಇಲ್ಲಿ ತಂದೆ "ಮದವದರಿ ಬಿರುದ ಲೇಖಕ ಮದಗಜ ಬಿದುವಿದಳನ ಸಿಂಹಂ" ಎಂದೂ, ಮಗ ಸುಬ್ಬ "ಲಿಖಿತಜನ ಸುಮಿತ್ರಂ ಮೃದುಲಲಿತವಿಚಿತ್ರ ಲಿಖಿತಂ" ಎಂದೂ ಕೀರ್ತಿತರಾಗಿದ್ದಾರೆ.

ಸುಲಲಿತಕೆಯಿನಲು ವಾ। ಗ್ಲಲಸೆಯು ಹಾರದವ್ರೊಲೊಪ್ಪಿ ಬರೆದಂ ಭೂದೇ।
ವಲಲಾನುಂ ಕಿಸುವಾಯುರ। ಕುಳತಿಳಕಂ ರೂಪರ್ಭುಷಕಪತಾಕಂ ತೀಕಂ ॥[೩೩]

ಈ ತೀಕನ ಮಗನಾಗಿರಬಹುದಾದ ರುದ್ರದೇವನು, "ಬರಿವರಮಿತ್ರ ತಿ[ೀ]ಕನ ...ಪುತ (ತ್ರ) ರುದ್ರದೇವನ ಬರಹ"[೩೪] ಎಂದು ಸುಂದರ ಲಿಪಿಜ್ಞನಾದ ತನ್ನ ತಂದೆಯ ಹೆಸರನ್ನು ಹೆಮ್ಮೆಯಿಂದ ಹೇಳಿಕೊಂಡಿದ್ದಾನೆ. ಹೀಗೆ ಗುರುವಿನಿಂದ ಶಿಷ್ಯ, ತಂದೆಯಿಂದ ಮಗ ಅಕ್ಷರಸೌಂದರ್ಯಕಲೆಯನ್ನು ಕಾಪಾಡಿಕೊಂಡು ಬಂದುದು ಗಮನಾರ್ಹವಾಗಿದೆ.

ಮೇಲೆ ಹೇಳಿದ 'ಮೃದುಲಲಿತವಿಚಿತ್ರಲಿಖಿತ"ನಾದ ಸುಬ್ಬ "ಮೃದು-ಲೇಖಾವಿಳಾಸ"ನಾದ ಚಾವರಾಜನೊಂದಿಗೆ "ಲಿಖಿತಂ ರುಚಿರಾಕ್ಷರಂ"[೩೫] ಎಂದು ಹೇಳಿಕೊಂಡ ಇನ್ನೊಬ್ಬ ಅನಾಮಧೇಯ ಲಿಪಿಕಾರ,

೨೮. E.C. V-ii, ಬೇಲೂರ-೭೨-ಬೇಲೂರ.
೨೯. E.C. VI, ಕಡೂರ ೧೪೯-ಆಸಂದಿ.
೩೦. E.C. V-ii, ಬೇಲೂರ-೧೭೫-ವೀರದೇವನಹಳ್ಳಿ.
೩೧. E.C. VI, ತರೀಕೆರೆ-೨೦-ಬಾಣಾವರ.
೩೨. ಕ. ಕ. ಚರಿತೆ-ಅನುಬಂಧ-I-ಪು-೨೨ (ಸಾ. ಪ. ಆವೃತ್ತಿ)
೩೩. K.I. V, No. 26-ನರಗುಂದ
೩೪. E.C. VI, ಕಡೂರ-೪-ಕುಪ್ಪೆಹಾಳ
೩೫. M.A.R. 1925, No. ೩೪.

ಸಮವೃತ್ತಶ್ಲೋತಂಗಳು । ಸಮಸ್ತ ಸಂಪತ್ಕರಂಗಳತಿ ನಿಬಿಡಂಗಳು ।
ಕಮನೀಯ ಮೃದುಸುರೇಖಾ । ರಮಣಂಗಳು ಸೆಗಟ್ಟಿ ಬಸವರಾಜನ ಬರಪಂ ॥ ೩೬

ಎಂದು ಹೆಸರಾದ ಬಸವರಾಜ,

ಒಸೆದೊರ್ದಂ ಪೊಟ್ಟಿರ್ಜ ಕರಂ । ಮರ್ದಂ ಸಂಚ್ಛನ್ನವೆನಿಸಿ ಬರೆಯದೆ ಪಲಗರ್ಂ ॥
ಸನ್ದೇಹಮಲ್ಲದನ್ತಿರೆ । ಜಿನಭಕ್ತ ಮುದ್ದಿಗಾಂಕಂ ಬರೆಗುಂ ॥ ೩೭

ಎಂದು ಹೇಳಿಕೊಂಡ ಮುದ್ದಿಗಾಂಕ,

ಮುನ್ನೀರ್ಬಳಸಿರೆ ಧರಣಿಯೊ । ಳಿ[ನ್ನುಂ] ಮಾಧುರ್ಯ ಸುಕರ ಚಾತುರ್ಯ್ಯಗುಣ ॥
ಪ್ರೋನ್ನತರಿಲ್ಲೆನೆ ಸಾಸನ । ಮನ್ನಿದೆ ಚೆಲ್ವಾಗೆ ಸಾಮಿಯಣ್ಣಂ ಬರೆದೊಂ ॥ ೩೮
ಬರೆಪದ ಬಲ್ಮೆಗ (ಗೆ) ಪಾದ್ಯದ । ಪರಿಣತಿಕೆಗೆ ಕವಿತೆಗಿವನೊಳೀ x x x
x x ಯೆನಿಪ ಸಾಮಿಯಣ್ಣಂ । ಬರೆದೋಂ ಶಾಸನಮನೆಸೆವ ಜಸಸಾಸನಮಂ ॥ ೩೯

ಎಂಬ ಅಗ್ಗಳಿಕೆಯ ಸಾಮಿಯಣ್ಣ—

ಅನುಪಮತರಾಕ್ಷರಂ ಬುಧ । ಜನಮಂ ಜೀಯೆನಿಸೆ ಸಕಳ ವಿದ್ಯಾನಿಳಯ[ಂ] ॥
ಮನುಮುನಿ ಚಾರಿತ್ರನೀ ಸಾ । ಸನಮಂ ಮನ್ನೆಯರ ಬಸವಣಯ್ಯಂ ಬರೆದಂ ॥ ೪೦

ಎಂದು ಕೀರ್ತಿಪಡೆದ ಬಸವಣಯ್ಯ,

"ಬಮ್ಮಿಕನ ಬರಪಮುಮದೇನಪೂರ್ವಮೋ ಜಗದಲು" ೪೧

ಎಂದು ಹೆಸರಾದ ಬಮ್ಮಿಕ ಮೊದಲಾದವರನ್ನು ನೆನೆದರೆ ಅವರ ಬರವಣಿಗೆಯ
ಲಿಪಿಸೂಕ್ಷ್ಮತೆ, ಲಿಪಿಸೌಂದರ್ಯ, ಚರಣವಿನ್ಯಾಸಗಳು ವೇದ್ಯವಾಗದಿರವು
ಇಂಥವರಿಂದಾಗಿ ಶಾಸನದಲ್ಲಿ ಅಕ್ಷರ ಮುತ್ತುಗಳು ಬಿತ್ತಿ ಬೆಳೆಯಲ್ಪಟ್ಟವೆ.

"ಬರೆದ... ಮುತ್ತಿನ ಸರಮಂ ಸಮದನ್ತೆ ಶಾನ್ತನೊ[ಳ್ದ]ಕ್ಕರಮಂ" ೪೨

---

೩೬. E.C. IV-ii, ಅರಸಿಕೆರೆ-೭೧-ಅರಸಿಕೆರೆ.

೩೭. E.C. XI, ದಾವಣಗೆರೆ-೧೪೯-ಕೊಡಗನೂರ.

೩೮. S.I.I. XI-i, No. 41-ಸಾಗಾವಿ
೩೯. S.I.I. XV, No. 3೨2-ಮುಳಗುಂದ
{ ಈತನು ಕವಿಯೆಂದು 'ಕನ್ನಡ ನಾ ಕೆಲವು ಶಾಸನ ಕವಿಗಳು' ಎಂಬ ಗ್ರ ದಲ್ಲಿ ಹೇಳಲಾಗಿದೆ. ಈತನು ಲಿಪಿಕಾರನ ಹೌದು ಎಂದು ನಮ್ಮ ಭಾವನೆ.

೪೦. S.I.I. XI-i, ಪು. 94-ಮುಳಗುಂದ ('ಕನ್ನಡ ನಾಡಿನ ಕೆಲವು ಶಾಸನ ಕವಿಗಳ ಗ್ರಂಥದಲ್ಲಿ ಕವಿಯೆಂದು ಹೇಳಿದೆ. ಈತ ಲಿಪಿಕಾರ.)

೪೧. E.C. XII, ತಿಪಟೂರ-೧೦೫-ಬೆಳಗೆರೆ.

೪೨. K.I. V, No. 38-ಚಿಕ್ಕಹಂದಿಗೋಳ (ಧಾರವಾಡ ಜಿಲ್ಲೆ).

ಸರಸತರವಾದುವೆಸ್ದ । ಕ್ಕರಿಗಬ್ಬರ್ಣ್ಣಿಪಿನವಿೀ ಶಿಳಾಶಾಸನವುಂ... ।
...ಮುತ್ತಿನ । ಸರಿಗೆಯುನನುಕರಿಸೆ ಕನ್ನಪಯ್ಯಂ ಬರೆದಂ ॥[೪೩]
"...ಸಿಗಿತ್ತ ಪೊಸಮುತ್ತುಗಳೊಂ...ಮುಸ...ಪರಿಣತೆಯಿಂ ದೇಪ ಬರೆದ
ಪೊಸಲಕಿ..."[೪೪]

ಎಂಬ ಮಾತುಗಳಲ್ಲಿ ಹೇಳಲಾದ ಮುತ್ತಿನ ಸರ, ಮುತ್ತಿನಸರಿಗೆ ಪೊಸಮುತ್ತು ಎಂಬ ಉಪಮೆಗಳು ಮುತ್ತಿನಂತಹ ಕನ್ನಡ ಅಕ್ಷರಗಳಿಗೆ ತುಂಬ ಒಪ್ಪುತ್ತವೆ. ಇನ್ನೂ ಕೆಲವರು—

"ಸರಸತಿಯು ಕೊರಳ ಮುತ್ತುವೊ । ಲಿರೆ ವೃತ್ತಂ ಕೋಮಲಂ ಸುಭದ್ರಂ..."[೪೫]

"ಸುಲಲಿತಕೆಂಪಿನಲು ವಾ । ಗ್ಲಲನೆಯ ಹಾರದವೊಲೊಪ್ಪಿ ಬರೆದಂ ಭೂದೇ ॥
ವಲಲಾಮಂ ಕಿಸುವಾಯುರ । ಕುಳತಿಳಕಂ ರೂಪರ್ಝುಷಕಪಲಾಕಂ ತೀಕಂ ॥"[೪೬]

ಶರನಿಧಿಯೊಳ್ನೆಲೆ[ಸಿ]ದ[ದು?]ವು । ಸರಸಿಜಭವನಾಯ್ದು ಕೊಣ್ದು ವಾಗ್ದೇವಿಗೆ ಬಿ ॥
ತ್ತರದಿಂದೆ ಸಮೆದ ಮುತ್ತಿನ । ಸರಿಗೆಯನನುಕರಿಪುವಲ್ತೆ ಬಲ್ಲಿಯ ಲಿಖಿತಂ ॥[೪೭]

ಓರಣವಾಗಿ ಬರೆದ ತಮ್ಮ ಅಕ್ಷರಗಳಿಗೆ ಇವರು ಹೇಳಿದ ಸರಸ್ವತಿಯ ಕೊರಳ ತೋರಮುತ್ತು, ವಾಗ್ಲಲನೆಯ ಹಾರ, ವಾಗ್ದೇವಿಯ ಮುತ್ತಿನ ಸರಿಗೆ, ಎಂಬ ಉಪಮೆಗಳು ಅನುಪಮವಾಗಿವೆ. ಈ ಲಿಪಿಕಲಾಸಿದ್ಧಿ ಇನ್ನೂ ಮುಂದುವರಿದು ಕನ್ನಡ ಅಕ್ಷರಗಳು ಸುಳುವು ಹಿಡಿದು ಸುಳಿದಿವೆ.

ಆನೆಯ ಸಿಂಘದ ಗಿಳಿಗಳ । ನಾನಾರೂಪುಗಳನಕ್ಕರಂಗಳೊಳಿಸೆಯಲು ॥
ತಾನಳವಡಿಸುವನೆಂದಡದೇನೆ...ಮರುಳೆ ತೊಡರ್ದಪ್ಪೆರೂವಣನೊಳ್ ॥[೪೮]

ದಿ...ಳ್ ಹಸ್ತಿಸಿಂಗಂ ಹರಿಣೆಯ ರೂಹಗೆಯುಕ್ಕರಾವಳಿಯಿಂದಂ ।
ಬರೆಯು...ದಡೆ ಪುರುದಿ[ಡಿ]ಸ ವೆ[ೀ]ಡೆಲಿವೊ ರೇವಣಾಯ್ಯರ್ನೊಳೆಂದುಂ ॥

ದೆಂಟಿಣೆ...ನೆಲೆ...ತಕ್ಡ ನಿನ್ನಳವೊ ಚಿತ್ರದ ಕರದೊಳ್ಪಂ ।
ಕಂಟ್ಕೆದೊಳ್ ಬರೆವ ರೇವನ ಕಂಟ್ಕೆಳೆ...ಣಸಿ ನೋಪ್ಪೊರ್ಡೆಂದೇಕೈಕಂ ॥[೪೯]

ಎಂಬ ಮಾತುಗಳಲ್ಲಿ ರೂವಣ ಮತ್ತು ರೇವಣರ ಹಸ್ತ ಕೌಶಲದ ಸಿದ್ಧಿ ವ್ಯಕ್ತಗೊಂಡಿದೆ. ಹೀಗೆ ಕೆಲವರಿಗೆ ಪ್ರಾಣಿಪಕ್ಷಿಗಳನ್ನು ಅಳವಡಿಸಿ ಸಾಲಂಕೃತ ಅಕ್ಷರ

---

೪೩. S.I.I. XI-i, No. 111-ಸೊರಟೂರ ('ಕನ್ನಡ ನಾಡಿನ ಕೆಲವು ಶಾಸನ ಕವಿಗಳು' ಎಂಬ ಗ್ರಂಥದಲ್ಲಿ ಹೇಳಿದಂತೆ ಈತನು ಕವಿಯಲ್ಲ.)
೪೪. E.C. XI, ಹೊಳಲಕೆರೆ-೧೨೪-ಚಿಕ್ಕಯುಗಟಿ.
೪೫. E.C. V-ii, ಅರಸಿಕೆರೆ-೧೨೩-ಹಾರನಹಳ್ಳಿ.
೪೬. K.I. V, No. 26-ನರಗುಂದ.
೪೭. K.I. V, No. 8-ತಿಳಿವಳ್ಳಿ (ಹಾನಗಲ್ಲ ತಾಲೂಕ).
೪೮. E.C. XI, ಚಿತ್ರದುರ್ಗ-೪೭-ಭೀಮಸಮುದ್ರ.
೪೯. S.I.I. IX-i, ನಂ. ೧೩೨-ಬಾಗಳಿ (ಬಳ್ಳಾರಿ ತಾಲೂಕ).

ಗಳನ್ನು ಬರೆಯುವುದು ಹೆಮ್ಮೆಯೆನಿಸಿದರೆ ಇನ್ನೂ ಕೆಲವರಿಗೆ ತ್ವರಿತಲೇಖನವ
ಒಂದು ಹೆಮ್ಮೆಯೆನಿಸಿದೆ :

"ಬಹುವೆಳ್ಳಂಘನ ಶೀಘ್ರಲಿಖಿತ"[೪೯A]

"ಸುಜನಮಿತ್ರಪವಿತ್ರಂ ರೇಚಣನ ಶೀಘ್ರಲಿಖಿತಂ"[೫೦]

"ಶ್ರೀರಂಗದೇವನ ಶೀಘ್ರಲಿಖಿತ"[೫೧]

"ನಾಗನಾಯ್ಕರನ ಶೀಘ್ರಲಿಖಿತಂ"[೫೨]

"ಬ್ರಹ್ಮೇಸ್ವರಜೀಯರ ಸೀಘ್ರಲಿಕಿತ"[೫೩]

"ಕಾವನ ಸೀಘ್ರಲಿಕಿತಂ"[೫೪]

ಹೀಗೆ ಅವಸರದ ಬರವಣಿಗೆಯೂ ನಮ್ಮ ಪ್ರಾಚೀನರ ದೃಷ್ಟಿಯಲ್ಲಿ ಒಂದ ಸಿದ್ಧಿಯೆನಿಸಿತ್ತು. ಈ ಹಸ್ತವೇಗದ ಲಿಪಿಕಾರರನ್ನು ನೆನೆದಾಗ ಈಗಣ ಶೀಘ್ರ ಲಿಪಿಕಾರರ (Steno) ನೆನಪಾಗುತ್ತದೆ. ಬಹುಲಿಪಿ ಬರಹ ನಮ್ಮವರ ಇನ್ನೊಂದ ಹೆಮ್ಮೆ.

....ಪದ್ಮಗ ।
ಭಾರ್ಗಸುಮೇಂ ಬಲ್ಲನೆ ಪೇಳಿಮಿನ್ನು ಬರೆಯಲ್ಕೆಂಬನ್ನೆಗಂ ತಾನೆ ನೆ ।
ಟ್ಟನೆ ಬಲ್ಲ ಬರೆಯಲ್ಕನೇಕ ಲಿಪಿಯಂ ಶ್ರೀವಿಪ್ರವಿದ್ಯಾಧರಂ ॥[೫೫]

"ಛಪ(ಂ)ನ್ನದೇಶ ಚಿತ್ರಲಿಪಿರೇಖಕೋವಿದಂ...ರಾಯಸ್ತಕೊಂಡಮರಸಯ್ಯ"[೫೬]

ನಿಜಾಂಕಮಾಲೆಯಂ..।
ಮಾನವ ಮನ್ಮಥಂ ಬರೆದನಾದರದಿಂ ವಿಟಚಕ್ರವರ್ತಿಧಾ ।
ತ್ರೀಸುತನಾಗಿ ತಿಲುತಿಪ್ರಳ ಕನ್ನಡ ನಾಗರದಕ್ಕರಂಗಳಂ ॥[೫೭]

"ಚತುರ್ಬ್ಭಾಷಾಲಿಖಿತ್ತಕವಿದ್ಯಾಧರಂ । ಸನ್ನಿವಿಗ್ರಹಿಶ್ರೀಮನ್ನಕಂಳಾಯ್ಯರಂಬರದಂ

ಎಂಬ ಮಾತುಗಳು ನಮ್ಮ ಲಿಪಿಕಾರರ ಬಹುಲಿಪಿ ಜ್ಞಾನಕ್ಕೆ ಸಾಕ್ಷಿಯಾಗಿ ಇಲ್ಲಿ ಒಬ್ಬ ಅನೇಕ ಲಿಪಿಕೋವಿದ, ಇನ್ನೊಬ್ಬ ಛಪನ್ನದೇಶ ಚಿತ್ರಲಿಪಿಕೋವಿ

೪೯A. E.C. III. ನಂಜನಗೂಡ-೧೮೩-ದೊಡ್ಡಹೊಮ್ಮ.
೫೦. E.C. V-ii, ಬೇಲೂರ-೨೦೦-ದಬ್ಬೆಗ್ರಾಮ.
೫೧. E.C. V-ii, ಅರಸಿಕೆರೆ-೧೩೦-ತಳಲೂರ.
೫೨. S.I.I. XI-i, No.42-ಸವಡಿ (ರೋಣ ತಾಲೂಕ).
೫೩. S.I.I. IX-i, P.89. ನಂದಿಬೇವೂರ (ಹರಪನಹಳ್ಳಿ ತಾಲೂಕ).
೫೪. E.C. VII, ಶಿಕಾರಿಪುರ-೧೧-ಗಾಮಗ್ರಾಮ.
೫೫. Ep.In. XII, ಪು-೨೭೮-ಏವೂರ (ಗುಲ್ಬರ್ಗಾ ಜಿಲ್ಲೆ).
೫೬. S.I.I. IX-ii, No. 507-ಚೋಳಸಮುದ್ರ (ಅನಂತಪುರ ಜಿಲ್ಲೆ).
೫೭. S.I.I. IX-i, P. 96-ಹಿರೇಹಡಗಲಿ.
೫೮. E.C. V.-ii, ಅರಕಲಗೂಡ-೯೯-ಸೋಮನಾರಗ್ರಾಮ.

ುತ್ತೊಬ್ಬ ತಿಲ್ (= ತೆಲುಗು), ತಮಿಳು, ಕನ್ನಡ, ಸಂಸ್ಕೃತ ಭಾಷೆಗಳ
ಕ್ಷರ ಬಲ್ಲಿದ; ಕೊನೆಯಾತ ಚತುರ್ಭಾಷಾಲಿಪಿಸಿಪ್ಪಣ. ಇವು ಇವರ ಬಹು
ಾಷಾವ್ಯಾಮೋಹವನ್ನು ವ್ಯಕ್ತಗೊಳಿಸುತ್ತವೆ. ಇವರಿಗಿಂತಲೂ ವಿಲಕ್ಷಣ
್ಕೃತ್ವದ ಹಲವು ಲಿಪಿಕಾರರು ಶಾಸನಗಳಲ್ಲಿ ದೃಷ್ಟಿಗೆ ಬಂದು ನಮ್ಮನ್ನು
ಗ್ಭ್ರಮೆಗೊಳಿಸುತ್ತಾರೆ.

"ಉಭಯಹಸ್ತಲೇಖನ ಕುಶಲವಧಾನ ಚಕ್ರವರ್ತಿ ಶ್ರೀಕರಣದ ವಿಶ್ವನಾಥ
ವದ"[೫೯] ಎಂಬ ಮಾತು ಕೇವಲ ಆಶ್ಚರ್ಯಗೊಳಿಸುತ್ತದೆ. ಒಂದು ಕೈ
ೋತಾಗ ಇನ್ನೊಂದು ಕೈಯನ್ನು ದುಡಿಸಿಕೊಳ್ಳುವ ಅನುಕೂಲಹಸ್ತವುಳ್ಳ
ವನ ಶಕ್ತಿ ನಿಜಕ್ಕೂ ದೊಡ್ಡದು ಇವನಿಗಿಂತಲೂ ದೊಡ್ಡ ಶಕ್ತಿಯ ವ್ಯಕ್ತಿ
ುಲ್ಲಿದೇವ

ಪರಿಕಿಸೆ ಮಲ್ಲಿದೇವ ವಿಭುಗಾರ್ಸನು ನಿರ್ಬರುವಿಕರ್ಣಲಂಗಳೊಳ್ ।
ಬರೆದುದನಂತ್ಯದಿಂ ಬರೆವ........ಮತಿ ಪ್ರಭಾವದೊಳ್ ॥[೬೦]

ುಭಯಹಸ್ತಗಳನ್ನು ಏಕಕಾಲಕ್ಕೆ ದುಡಿಸಿಕೊಳ್ಳುತ್ತ, ಅದೂ ಬಲದಿಂದ
ಡಕ್ಕೆ ಬರೆಯುತ್ತ, ಅದರಲ್ಲಿಯೂ ಬುಡದಿಂದ ಮೇಲಕ್ಕೆ ಬರವಣಿಗೆಯನ್ನು
ುನ್ನಡೆಸುತ್ತ, ಒಂದೇ ಪಟ್ಟಿಗೆ ಎರಡು ಪ್ರತಿಗಳನ್ನು ಸಿದ್ಧಮಾಡಿಕೊಡುವ
ತನ ವಿಪರೀತ ಸಾಮರ್ಥ್ಯ ನಿಜಕ್ಕೂ ಧೈರ್ಯಗೆಡಿಸುತ್ತದೆ. ಈತನು ಹೀಗೆ
ರೆಯುತ್ತಿರುವುದು, ಆ ಕಾಲದ ನೆರೆಹೊರೆಯ ಪ್ರದೇಶದವರಿಗೆ ಒಂದು
್ರದರ್ಶನವೆನಿಸಿರಬೇಕು.

ಮೇಲಣ ಶಾಸನಗಳಲ್ಲದೆ ಲಿಪಿಕಾರರ ಹೆಸರು ಇಲ್ಲದ ಇನ್ನೂ ಅನೇಕ
ುನಮನೋಹರ ಶಾಸನಗಳು ಲಭಿಸುತ್ತವೆ. ಕುರುಗೋಡ[೬೧] ಶಾಸನದಲ್ಲಿ
ನುಸ್ವಾರಗಳಿಗೆ ಬದಲು ನಕ್ಷತ್ರಗಳನ್ನು, ಮಿಕ್ಕೆಡೆಗಳಲ್ಲಿ ಅಲಂಕಾರಗಳನ್ನು
ಡಿಸಲಾಗಿದೆ. ಬೇಲೂರು ಶಾಸನದಲ್ಲಿ ಹೂಗಳನ್ನು ಬಿಡಿಸಲಾಗಿದೆ. ಹೀಗೆ
ಕ್ಷರಗಳೊಂದಿಗೆ ಪ್ರಾಣಿಲೋಕ, ಪಕ್ಷಿಲೋಕ, ಪುಷ್ಪರಾಶಿ, ನಕ್ಷತ್ರರಾಶಿಗಳು
ಾಸನಗಳಲ್ಲಿ ನೆಲೆನಿಂತಿವೆ.

ಇಂತಹ ಶಾಸನ ಫೋಟೋಗಳನ್ನು ಒಂದೆಡೆ ಪುಸ್ತಕರೂಪದಲ್ಲಿ ತಂದರೆ,
ಮ್ಮ ಪ್ರಾಚೀನರ ಸುಂದರ ಮತ್ತು ಸಾಲಂಕೃತ ಲಿಪಿಗಳ ಮಾದರಿಯನ್ನು
ಂಗ್ರಹಿಸಿದಂತಾಗುತ್ತದೆ. ಶಾಸನಕ್ಷೇತ್ರದಲ್ಲಿ ಮಾಡಬೇಕಾದ ಅನೇಕ ಕಾರ್ಯ
ಳಲ್ಲಿ ಇದೂ ಒಂದು ಎಂದು ಹೇಳಬಯಸುತ್ತೇನೆ.

★ ಎಂ. ಎಂ. ಕಲಬುರ್ಗಿ

. E.C. V-ii ಅರಸಿಕೆರೆ ೧೨೩. ಹಾರನಹಳ್ಳಿ.
. ಕ.ಕ.ಚ.ಪು., ೧೩೫.
. Ind. Ant. XV. P.364.

ಧಾರವಾಡದ ಹರಿಜನರು

(ಕಳೆದ ಸಂಚಿಕೆಯಿಂದ)

೨. ಹರಿಜನರ ಧರ್ಮ

ಹರಿಜನರ ಧರ್ಮವನ್ನು ಅವಲೋಕಿಸಬೇಕಾದ ನಾವು ಮೊಟ್ಟಮೊದಲು ಅವರಲ್ಲಿರುವ ಸಾಮಾಜಿಕ, ಧಾರ್ಮಿಕ ವಿಧಿಗಳ ಬಗ್ಗೆ ಆಲೋಚಿಸುವದು ಅವಶ್ಯ.

ಸಾಮಾಜಿಕ–ಧಾರ್ಮಿಕ ವಿಧಿಗಳು :

ಪ್ರತಿಯೊಂದು ಧರ್ಮದಲ್ಲಿ ಪ್ರತಿಯೊಬ್ಬ ಮನುಷ್ಯನಿಗಾಗಿ ಅವರ ಹುಟ್ಟನಿಂದ ಹಿಡಿದು ಸಾವಿನವರೆಗೆ ಕೆಲವೊಂದು ವಿಧಿಗಳನ್ನು ಆಚರಿಸುತ್ತಾರೆ. ಈ ಕೆಳಗೆ ವಿವರಿಸುವ ಹರಿಜನರ ಸಾಮಾಜಿಕ–ಧಾರ್ಮಿಕ ವಿಧಿಗಳು ಉಳಿದ ಹಿಂದುಗಳಂತೆಯೇ ಇದ್ದರೂ ಅದರಲ್ಲಿಯೇ ಅವರು ಯಾವ ಜಾತಿಯವರ ಅನುಕರಣವನ್ನು ಹೆಚ್ಚಾಗಿ ಮಾಡುತ್ತಾರೆಂಬುದನ್ನು ತಿಳಿಯುವದು ಅವಶ್ಯ. ಹುಟ್ಟನಿಂದ ಸಾವಿನವರೆಗೆ ಪ್ರತಿಯೊಬ್ಬನ ಜೀವನದಲ್ಲಿ ಆಚರಿಸುವ ಧಾರ್ಮಿಕ ವಿಧಿಗಳಿಗೆ ಮಾನವ ಶಾಸ್ತ್ರಜ್ಞರು "Rites of Passage" — 'ಜೀವನ ಪರ್ಯಂತದ ವಿಧಿಗಳು'—ಎಂದು ಕರೆದಿದ್ದಾರೆ. ಈ ವಿಧಿಗಳು ಮಗು ತಾಯಿಯ ಗರ್ಭದಲ್ಲಿದ್ದಾಗಿನಿಂದ ಪ್ರಾರಂಭವಾಗಿ ಸಾವಿನವರೆಗೆ ಮತ್ತು ಸತ್ತ-ನಂತರ ವಿಧಿಗಳವರೆಗೆ ಆಚರಿಸಲ್ಪಡುತ್ತವೆ.

೧. ಬಾಲ್ಯದ ವಿಧಿಗಳು :

ಮಗುವು ತಾಯಿಯ ಗರ್ಭದಲ್ಲಿದ್ದಾಗ ಸೀರೆ ಮಾಡುವ ವಿಧಿಯನ್ನು ಆಚರಿಸುತ್ತಾರೆ. ಈ ವಿಧಿಯು ತಾಯಿ ಮತ್ತು ಮಗುವಿಗೆ ಸಂಬಂಧಿಸಿದ್ದು-ದಾಗಿದೆ. ಇದರಲ್ಲಿ ಮುಖ್ಯವಾಗಿ ಹರಿಜನರು ವಿರಶೈವರ ಅನುಕರಣ ಮಾಡು-ತ್ತಾರೆ. ಮಗುವು ಹುಟ್ಟಿದ ನಂತರ ನಾಮಕರಣ ವಿಧಿಯನ್ನು ಕೆಲವು ಹರಿಜನರು ಬ್ರಾಹ್ಮಣರ ಭಟ್ಟರನ್ನು ಮತ್ತು ಕೆಲವು ಜಾತಿಯ ಹರಿಜನರು ವೀರಶೈವರ ಜಂಗಮನನ್ನು ಕರೆದು ನೆರವೇರಿಸುತ್ತಾರೆ. ವೀರಶೈವ ಧರ್ಮ-ವನ್ನು ಅನುಕರಣ ಮಾಡುವ ಹರಿಜನರು ವೀರಶೈವ ಜಂಗಮನನ್ನೇ ಆಮಂತ್ರಿ-ಸುತ್ತಾರೆ. ಕೊಳಲುಪೂಜೆ ಎಂಬುದು ಹರಿಜನರಿಗೆ ವಿಶಿಷ್ಟವಾದ ವಿಧಿ. ಈ ಕೊಳಲು ಪೂಜೆಯಲ್ಲಿ ಮನೆಯ ಹೊರಗೆ ಬಚ್ಚಲನ್ನು ತಯಾರಿಸಿ ಅಲ್ಲಿ ಗಡಿಗೆ-

ಗಳನ್ನಿಟ್ಟು ಬಾಣಂತಿಗೆ ಮತ್ತು ಮಗುವಿಗೆ ಜಳಕ ಮಾಡಿಸಿ ಆ ಬಚ್ಚಲನ್ನು ಪೂಜಿಸುವದಕ್ಕೆ ಅವರು ಕೋಳಲುಪೂಜೆ ಎಂದು ಕರೆಯುತ್ತಾರೆ. ಎಷ್ಟೋ ಹರಿಜನರು ಹಡೆದ ಮಗುವಿಗೆ ಲಿಂಗಧಾರಣ ವಿಧಿಯನ್ನು ನೆರವೇರಿಸುತ್ತಾರೆ. ಶೆಟ್ಟಿಕಾದೇವಿಯ ಪೂಜೆಯನ್ನು ಮಾಡುತ್ತಾರೆ. ಈ ಶೆಟ್ಟಿಕಾದೇವಿಯು ಮಕ್ಕಳ ಹಣೆಯಬರಹವನ್ನು ಬರೆಯುತ್ತಾಳೆಂಬ ನಂಬಿಕೆಯೇ ಇದಕ್ಕೆ ಕಾರಣ.

ಮಕ್ಕಳಿಗೆ ಕಿವಿ, ಮೂಗುಗಳನ್ನು ಚುಚ್ಚಿಸುವದು ಹರಿಜನರಲ್ಲಿಯೂ ಇದೆ. ಹೀಗೆ ಕಿವಿ, ಮೂಗುಗಳನ್ನು ಚುಚ್ಚದವರಿಗೆ ಮೂಳರೆಂದು ಕರೆಯುತ್ತಾರೆ. ಚುಚ್ಚಿಸಿಕೊಂಡವರು ಶುದ್ಧರೆಂದು ಕರೆಯಲ್ಪಡುತ್ತಾರೆ. ಹೆಣ್ಣುಮಕ್ಕಳು ಕೈ, ಹಣೆಗಳ ಮೇಲೆ ಹಚ್ಚೆ ಚುಚ್ಚಿಸಿಕೊಳ್ಳುತ್ತಾರೆ. ಆದರೆ ಈ ಪದ್ಧತಿಯು ಶಹರ ಜೀವನದ ಪ್ರಭಾವದಿಂದ ಈಗ ಬಹಳ ಕಡಿಮೆಯಾಗಿದೆ. ಹೆಣ್ಣುಮಕ್ಕಳು ವಯಸ್ಕರಾಗುವದಕ್ಕೆ ಮೈನೆರೆಯುವ ದಿನವೇ ಮುಖ್ಯವೆಂದು ತಿಳಿಯುತ್ತಾರೆ. ಮೈನೆರೆಯುವ ಮುನ್ನ ಶರೀರದಲ್ಲಿ ಕಾಣುವ ವಯಸ್ಕರಾಗುವ ಲಕ್ಷಣಗಳು ಕಂಡುಬರುತ್ತಲೇ ಹೆಣ್ಣುಮಕ್ಕಳು ಮದುವೆಗೆ ಸಮೀಪಿಸಿದರೆಂದು ಭಾವಿಸುತ್ತಾರೆ. ಹರಿಜನರಲ್ಲಿ ಈಗ ಎರಡು ದಶಕಗಳ ಹಿಂದೆ ಬಾಲವಿವಾಹ ಪ್ರಚಲಿತವಿದ್ದಿತು. ಮೈನೆರೆದ ಮೇಲೆ ಹೆಣ್ಣುಮಕ್ಕಳ ಮದುವೆಯಾಗುವದೇ ದುಸ್ತರವಾಗುತ್ತಿತ್ತು. ಆದರೆ ಈಗ ಪರಿಸ್ಥಿತಿ ಬದಲಾಗಿದೆ. ಶಹರಜೀವನದ ಪ್ರಭಾವ, ವಿದ್ಯಾಪ್ರಸಾರ, ಮುಂದುವರಿದವರ ಅನುಕರಣದಿಂದ ಸುಶಿಕ್ಷಿತ ಹರಿಜನರು ವಯಸ್ಕರ ವಿವಾಹಗಳನ್ನು ಮೆಚ್ಚುತ್ತಾರೆ. ಆದರೆ ಋತುಮತಿಯಾಗುವ ದಿನವು ಮಾತ್ರ ಮಹತ್ವವಾದುದೆಂದು ಅಂದಿನಿಂದ ೫-೯ ದಿನಗಳವರೆಗೆ ಹೊರಗೆ ಕೂಡಿಸಿ, ಜಳಕ ಮಾಡಿಸಿ, ಅರಿಷಿಣ ಹಚ್ಚಿ, ಹೂ ಮುಡಿಸಿ, ಆರತಿ ಮಾಡಿ ಅಲಂಕರಿಸುವ ವಿಧಿಯನ್ನು ಆಚರಿಸುತ್ತಾರೆ.

೨. ಮದುವೆ :

ಮದುವೆಯ ಸಮಾರಂಭವು ಹರಿಜನರಲ್ಲಿ ಇತರ ಹಿಂದುಗಳಂತೆ ಅನೇಕ ವಿಧಿಗಳನ್ನು ಒಳಗೊಂಡಿರುತ್ತದೆ. ಈ ವಿಧಿಗಳಲ್ಲಿ ಕೆಲವು ಬಹಳ ಮಹತ್ವದವುಗಳಾಗಿದ್ದು ಅವುಗಳನ್ನು ಆಚರಿಸಲೇಬೇಕು. ಆದರೆ ಈ ವಿಧಿಗಳನ್ನು ಅತಿ ಕಡಿಮೆ ಅತಿ ವಿಸ್ತಾರವಾಗಿ ಆಚರಿಸಲಿಕ್ಕೆ ಶಕ್ಯವಿದೆ. ಬಡವರು ವಿಧಿಗಳನ್ನು ಕಡಿಮೆ ಮಾಡಿ ಹಣವನ್ನು ಉಳಿತಾಯ ಮಾಡುತ್ತಾರೆ. ಸಿರಿವಂತರು ಹೆಚ್ಚು ಹಣ ವ್ಯಯಮಾಡಿ ಬಹಳ ವಿಧಿಗಳನ್ನು ವಿಸ್ತಾರವಾಗಿ ಆಚರಿಸುತ್ತಾರೆ. ಹರಿಜನರಲ್ಲಿ ಹೆಣ್ಣು ನಿಶ್ಚಯ ಮಾಡುವಾಗ ಹೆಣ್ಣನ್ನು ನೋಡಲಿಕ್ಕೆ ಗಂಡಿನ ಕಡೆಯವರು ಹೋಗುತ್ತಾರೆ. ನಂತರ ಹೆಣ್ಣಿನ ಮನೆಯವರು ಗಂಡನ ಮನೆಯನ್ನು ನೋಡಲಿಕ್ಕೆ ಹೋಗುತ್ತಾರೆ. ಇಬ್ಬರಿಗೂ ಸರಿಹೊಂದಿದಲ್ಲಿ

ಮದುವೆಯ ನಿಶ್ಚಯವನ್ನು ಮಾಡುತ್ತಾರೆ. ನಿಶ್ಚಯದ ದ್ಯೋತಕವಾಗಿ ಕನ್ಯೆಗೆ ವರನ ಮನೆಯವರು ಸೀರೆ ಮತ್ತು ದಾಗೀನುಗಳನ್ನು ಕೊಡುತ್ತಾರೆ.

ನಿಶ್ಚಯವಾದನಂತರ ಮುಹೂರ್ತವನ್ನು ನೋಡಿಕೊಂಡು ಮದುವೆಯ ದಿನವನ್ನು ನಿಶ್ಚಯಿಸುತ್ತಾರೆ. ಮದುವೆಗಿಂತ ಮೊದಲು 'ವೀಳ್ಯೆಕಾರಣ'ವನ್ನು ಆಚರಿಸುತ್ತಾರೆ. 'ವೀಳ್ಯೆಕಾರಣ'ದಲ್ಲಿ ವೀಳ್ಯದ ಎಲೆಗಳನ್ನು ಜನರಿಗೆ ಹಂಚುವದು ಮತ್ತು ಕನ್ಯೆ–ವರರನ್ನು ಜೋಡಿಗೆ ಕೂಡಿಸಿ ಆರತಿ ಮಾಡುವದು ಇವೇ ಮುಖ್ಯ ಕಾರ್ಯಗಳಾಗಿವೆ. ಬಾಬು, ಖುಷಿ ಮುಂತಾದವುಗಳನ್ನು ಹಿರಿಯರಿಗೆ, ಪಂಚರಿಗೆ ಮತ್ತು ಇನ್ನುಳಿದ ಸಾಮಾಜಿಕ ವ್ಯಕ್ತಿಗಳಿಗೆ ಸಲ್ಲಿಸುತ್ತಾರೆ. 'ವೀಳ್ಯೆಯ ಕಾರಣ' ವನ್ನು ಎರಡು ಸಲ ಮಾಡಬಹುದಾಗಿದೆ. ಒಂದಕ್ಕೆ 'ಸಣ್ಣ ವೀಳ್ಯೆಯ ಕಾರಣ'-ವೆಂದೂ ಇನ್ನೊಂದಕ್ಕೆ 'ದೊಡ್ಡ ವೀಳ್ಯೆಯ ಕಾರಣ'ವೆಂದೂ ಕರೆಯುತ್ತಾರೆ. ಮದುವೆಯ ಮುಂಚಿನ ಈ ಎರಡು ವಿಧಿಗಳಿಂದ ವರ ಮತ್ತು ಕನ್ಯೆಯ ಸಂಬಂಧಿಕರನ್ನು ಹೆಚ್ಚು ಒಟ್ಟಿಗೆ ತರುವದೇ ಆಗಿದೆ. (Betrothal Ceremonies).

ಈ ಕಾರಣಗಳು ಮುಗಿದನಂತರ ಸುಮುಹೂರ್ತದಲ್ಲಿ ನಿಜವಾದ ಮದುವೆಯ ಏರ್ಪಾಡಾಗುತ್ತದೆ. ಮದುವೆಯು ಹೆಚ್ಚಾಗಿ ಗಂಡಿನ ಮನೆಯ ಮುಂದೆಯೇ ನಡೆಯುತ್ತದೆ. ಈಗೀಗ ಗುಡಿಗಳ ಮುಂದೆ ಮದುವೆಯಾಗುವದನ್ನು ಹರಿಜನರು ಬಹಳ ಮೆಚ್ಚುತ್ತಾರೆ. ಮದುವೆ ಪ್ರಾರಂಭವಾಗುವ ಮುನ್ನಾದಿನ ಗಂಡಿನ ಮನೆಯವರು ದೇವತಾಕಾರ್ಯವನ್ನು ಏರ್ಪಡಿಸಿ ತಮ್ಮ ಎಲ್ಲ ದೇವರನ್ನೂ ಪೂಜಿಸುತ್ತಾರೆ. ತಮ್ಮ ಸಂಬಂಧಿಕರಿಗೆ ಊಟಕ್ಕೆ ಹಾಕುತ್ತಾರೆ. ಮದುವೆಯ ದಿವಸ ಮುಂಜಾನೆ ಅರಿಷಣವನ್ನು ವರ ಮತ್ತು ಕನ್ಯೆಗೆ ಬಳಿದು, ಕಂಕಣ ಕಟ್ಟಿ, ಸಾರ್ವಜನಿಕ ಜಳಕವನ್ನು ಮಾಡಿಸಿ, ಒಟ್ಟಿಗೆ ಕೂಡಿಸಿ ಆರತಿ ಮಾಡುತ್ತಾರೆ.

ಸುಮುಹೂರ್ತದಲ್ಲಿ ಅಂದೇ ಅಕ್ಷತಾರೋಪಣ ಅಥವಾ ತಾಳಿ ಕಟ್ಟುವ ಸಮಾರಂಭವು ನಡೆಯುತ್ತದೆ. ಈ ವಿಧಿ ಮುಗಿದ ಮೇಲೆ ಮದುವೆಯು ಆಯಿತೆಂದು ತಿಳಿಯುತ್ತಾರೆ. ಇದಕ್ಕೂ ಮುಂಚೆ ಪಂಚಕಳಸವನ್ನು ಹೂಡಿ ಅದರ ಸುತ್ತಲೂ ವರ–ಕನ್ಯೆಯರನ್ನು ತಿರುಗಿಸುತ್ತಾರೆ. ಈ ಪಂಚಕಳಸ ವಿಧಿಯನ್ನು ಲಿಂಗಾಯತ ಧರ್ಮವನ್ನು ಪಾಲಿಸುವ ಹರಿಜನರು ಮಾತ್ರ ಆಚರಿಸುತ್ತಾರೆ. ಬ್ರಾಹ್ಮಣ ಪೂಜಾರಿಯನ್ನು ಕರೆಯುವ ಹರಿಜನರು ಅಗ್ನಿ ಪ್ರದಕ್ಷಿಣೆಯನ್ನು ಹಾಕುತ್ತಾರೆ. ಅಕ್ಷತಾರೋಪಣ ಅಥವಾ ಅಕ್ಕಿಕಾಳು ಹಾಕಿದ ನಂತರ ಮದುವೆ ಮುಗಿಯಿತೆಂದೂ ಅವರೀರ್ವರೂ ಗಂಡ–ಹೆಂಡತಿಯರಾದರೆಂದೂ ತಿಳಿಯುತ್ತಾರೆ. ಅಂದು ಸಂಜೆ ಕೆಲವರು ಮೆರವಣಿಗೆಯನ್ನು ಹೊರಡಿಸುತ್ತಾರೆ.

ನಂತರ ಕೆಲವರು ಇನ್ನೂ ಕೆಲವು ವಿಧಿಗಳನ್ನು ಆಚರಿಸುತ್ತಾರೆ.

ಇವುಗಳಲ್ಲಿ ಮನೆದೇವರ ಕಾರ್ಯ, ನಾಗೋಲಿ ಭೂಮ ಮತ್ತು ಆಷಾಢ ಕಾರ್ಯಗಳು ಮುಖ್ಯವಾದವುಗಳು. ಮನೆದೇವರ ಕಾರ್ಯದಲ್ಲಿ ಮದುವೆಯಾದ ನಂತರ ಮನೆದೇವರ ಪೂಜೆಮಾಡಿ ಜನರಿಗೆ ಊಟಕ್ಕೆ ಹಾಕುತ್ತಾರೆ. ನಾಗೋಲಿ ಭೂಮದಲ್ಲಿ ವರನ ಕಡೆಯುವರು ಮತ್ತು ಕನ್ಯೆಯ ಕಡೆಯುವರು ಕೂಡಿ ಎಣ್ಣೆಯ ದೀಪದಿಂದ ದೇವರ ಪೂಜೆ ಮಾಡುತ್ತಾರೆ. ಅದಕ್ಕೆ 'ನಯನ ಏರಿಸುವ ದೆಂ'ದೂ ಅಥವಾ 'ಸಣ್ಣ ನಾಗೋಲಿ ಭೂಮ'ವೆಂದೂ ಕರೆಯುತ್ತಾರೆ. ಮತ್ತು 'ದೊಡ್ಡ ನಾಗೋಲಿ ಭೂಮ'ದಲ್ಲಿ 'ನಯನ ಇಳಿಸುವದೆಂ'ದು ಕರೆಯುತ್ತಾರೆ. ಈ ವಿಧಿಯಲ್ಲಿ ಕೆಲವು ಖಾದ್ಯಪದಾರ್ಥಗಳನ್ನು ಮುಚ್ಚಿಟ್ಟು ಎರಡೂ ಬಳಗ ದವರು ಸೇರಿ ತಿನ್ನುತ್ತಾರೆ. ಆಷಾಢಕಾರ್ಯವು ಕನ್ಯೆಯನ್ನು ವರನ ಮನೆಗೆ ಶಾವಿಗೆ ಊಟಕ್ಕಾಗಿ ಕರೆದೊಯ್ಯುವಾಗ ಆಚರಿಸುತ್ತಾರೆ.

ಇನ್ನು ಎರಡನೆಯ ಮದುವೆಯನ್ನು ಮಾಡಿಕೊಳ್ಳುವವರಿಗೆ ಉಡಿಕೆ ಎಂದು ಹೆಸರು. ಈ ವಿವಾಹದಲ್ಲಿ ಕನ್ಯೆಗೆ ಕೇವಲ ಸೀರೆ ಕೊಟ್ಟು ಮದುವೆ ಮಾಡಿಕೊಳ್ಳಬಹುದು. ಈ ಮದುವೆಗೆ ಮೊದಲಿನ ಮದುವೆಯ ಸ್ಥಾನಮಾನ ಸಮಾಜದಲ್ಲಿ ಸಿಗಲಾರದು. ಹರಿಜನರಲ್ಲಿ ಉಡಿಕೆಯ ಮದುವೆಗಳು ಹೆಚ್ಚಾಗಿ ಕಂಡುಬರುತ್ತವೆ

೩. ಮರಣದಲ್ಲಿಯ ಮತ್ತು ಅನಂತರದ ವಿಧಿಗಳು :

ಇತರ ವಿಧಿಗಳಂತೆ ಒಬ್ಬ ವ್ಯಕ್ತಿಯು ತೀರಿಕೊಂಡರೆ ಅಂತ್ಯವಿಧಿಯನ್ನು ಹಿಂದುಧರ್ಮದ ಸಂಸ್ಕಾರವಿಧಿಗಳಂತೆ ನೇರವೇರಿಸುತ್ತಾರೆ. ಸತ್ತವರನ್ನು ಹೂಳುವದಾಗಲೀ ಇಲ್ಲವೆ ದಹನಮಾಡುವದಾಗಲೀ ಹರಿಜನರಲ್ಲಿಯ ಯಾವದೇ ಜಾತಿಗೆ ಯಾವದಾದರೊಂದನ್ನು ಮಾಡಬೇಕೆಂಬ ನಿರ್ಬಂಧವಿಲ್ಲ. ಹಣ ವೆಚ್ಚ ಮಾಡಬಲ್ಲ ಹರಿಜನರು ಅಗ್ನಿಸಂಸ್ಕಾರಕ್ಕೆ ಹಣವನ್ನು ವೆಚ್ಚ ಮಾಡುತ್ತಾರೆ. ಲಿಂಗಾಯತ ಧರ್ಮವನ್ನು ಅನುಸರಿಸುವ ಹರಿಜನರು ಹೆಚ್ಚಾಗಿ ಶವಗಳನ್ನು ಹೂಳುತ್ತಾರೆ.

ಮರಣದನಂತರದ ವಿಧಿಗಳಲ್ಲಿ ಮುಖ್ಯವಾಗಿ 'ಹೊತ್ತವರ ಹೊರೆ ಇಳಿಸುವದು', 'ಒಳಗೆ ಕರಕೊಳ್ಳುವದು', 'ಮೂರು ದೆಶೆ', 'ದೇವರಲ್ಲಿ ಕೂಡಿಸುವದು', 'ಹಾಲು ಹಾಕುವದು', 'ವಿಷಬಾಯಿ ತೊಳೆಸುವದು', 'ದಿನಕರ್ಮ' ಮುಂತಾದ ಶ್ರಾದ್ಧ ಸಂಸ್ಕಾರಗಳನ್ನು ಮಾಡುತ್ತಾರೆ.

ಈ ಜೀವನಪರ್ಯಂತದ ವಿಧಿಗಳಲ್ಲದೆ ಉಪವಾಸ, ಒಂದೊತ್ತು ಉಪವಾಸ, ಸ್ನಾನ, ಸಾರ್ವಜನಿಕ ಊಟ, ಹಬ್ಬಗಳು, ದೇವತಾಪೂಜೆ ಮುಂತಾದ ವಿಧಿಗಳನ್ನು ಆಚರಿಸುತ್ತಾರೆ. ಇವುಗಳಲ್ಲಿ ಮುಖ್ಯವಾದ ಹಬ್ಬಗಳು ಮತ್ತು ದೇವತಾಪೂಜೆಯ ಬಗ್ಗೆ ಈ ಮುಂದೆ ವಿವರವಾಗಿ ಚರ್ಚಿಸಲಾಗುವದು. ಇವು

ಅಲ್ಲದೆ ಕೆಲವು ಮಡಿ, ಮೈಲಿಗೆಯ ಕಲ್ಪನೆಗಳೂ ಮತ್ತು ಪಾಪ-ಪುಣ್ಯದ ಕ
ನೆಗಳೂ ಮತ್ತು ಪಾಪಮೈಲಿಗೆಗಳನ್ನು ಹೋಗಲಾಡಿಸುವ ವಿಧಿಗಳೂ ಹ
ರಲ್ಲಿ ಯಥೇಚ್ಛವಾಗಿ ಕಂಡುಬರುತ್ತವೆ. ಧರ್ಮವು ಪವಿತ್ರವಾದದ್ದು; ಮಾಂತ್ರಿ
ಕತೆಯು ಅಪವಿತ್ರವಾದದ್ದು. ಧರ್ಮಾಚರಣೆಯಲ್ಲಿ ಕೆಲವೊಂದು ಮಾಂತ್ರಿ
ಕತೆಯ ವಿಧಿಗಳು ಕಂಡುಬರುತ್ತಿದ್ದರೂ, ಧರ್ಮವು ಪಾವಿತ್ರ್ಯವನ್ನು ಕಾಪಾ
ಕೊಳ್ಳುತ್ತದೆ. ಮಾಂತ್ರಿಕನು ವಿಧಿಗಳನ್ನು ಆಚರಿಸುತ್ತಿದ್ದರೂ ಅವನು ಕೆ
ವೊಂದು ಸಲ ತನ್ನ ಧ್ಯೇಯಸಾಧನೆಗಾಗಿ ಅಪವಿತ್ರತೆಯನ್ನೂ, ದುಷ್ಟ ಮಾ
ಗಳನ್ನೂ ಪ್ರತ್ಯೇಕತೆ(Privacy)ಯನ್ನೂ ಆಚರಿಸುತ್ತಾನೆ. ಇವುಗಳನ್ನೆಲ್ಲ
ವಿವರಿಸಲಾಗಿಲ್ಲ. ಕೇವಲ ಹರಿಜನರಲ್ಲಿರುವ ಧಾರ್ಮಿಕ ವಿಧಿಗಳನ್ನು ಮಾ
ಚರ್ಚಿಸಲಾಗುವದು.

ಹಬ್ಬಹುಣ್ಣಿಮೆಗಳು :

ಹರಿಜನರು ಆಚರಿಸುವ ಇಡೀ ವರ್ಷದ ಹಬ್ಬಗಳಲ್ಲಿ ಹಿಂದುಗಳನ್ನೇ ಅ
ಸರಿಸುತ್ತಾರೆ. ಚೈತ್ರಮಾಸದಿಂದ ಫಾಲ್ಗುಣಮಾಸದವರೆಗೆ—ಯುಗಾದಿ ಪ
ದಿಂದ ಹೋಳಿ ಹಬ್ಬದವರೆಗೆ—ಅವರ ಹಬ್ಬಗಳನ್ನು ಹೇಳಬಹುದು. ಇವ
ಒಂದು ವಿಶಿಷ್ಟತೆಯೆಂದರೆ ಮುಖ್ಯವಾದ ಹಬ್ಬ-ಹುಣ್ಣಿಮೆಗಳಲ್ಲಿ ದೇವ
ಕುರಿ, ಕೋಳಿಗಳ ಆಹುತಿಯನ್ನು ಕೊಡುವದು. ಈ ಮೊದಲು ದೇವತೆಗ
ಸಾರ್ವಜನಿಕವಾಗಿ ಕೊಡುತ್ತಿದ್ದ ಕೋಣನ ಬಲಿಯು ಮತ್ತು ಅದರ 'ಚ
ವಿಧಿ'ಯು ನಿಂತುಹೋಗಿದೆ. ಚರಗಾ ವಿಧಿಯೆಂದರೆ ಹರಿಜನರು ಕೋಣನ
ಕೊಟ್ಟು, ಅದರ ರಕ್ತ, ಮಾಂಸಗಳನ್ನು ತಮ್ಮ ಊರಿನ ಸುತ್ತಲಿನ ಭೂಮಿಯ
ವಿಧಿವತ್ತಾಗಿ ಸಿಂಪಡಿಸುವದು. ಸರಕಾರವು ಪ್ರಾಣಿವಧೆಯನ್ನು ಸಾರ್ವಜ
ಸ್ಥಳಗಳಲ್ಲಿ ತಡೆಗಟ್ಟಿರುವದೇ ಇದಕ್ಕೆ ಕಾರಣವಾಗಿದೆ. ಹರಿಜನರು ಮುಖ್ಯ
ದೇವತಾ ಆರಾಧಕರಾದುದರಿಂದ ಅವರು ಬಲಿಯನ್ನು ಕೊಡುತ್ತಾರೆ.
ದೇವತೆಗೆ ಇಷ್ಟವಾದುದೆಂದು ಆಗಮಗಳಲ್ಲಿ ವಿವರಿಸಲಾಗಿದೆ. ಆಗಮ
ಹೇಳಿದ ಪಂಚವಿಧಿಗಳಲ್ಲಿಯ ನೈವೇದ್ಯಗಳೆಂದರೆ– (೧) ಮದ್ಯ, (೨) ಮೈ
(೩) ಮತ್ಸ್ಯ, (೪) ಮುದ್ರಾ, ಮತ್ತು (೫) ಮಾಂಸ.

ಹರಿಜನರ ಇಡೀ ವರ್ಷದ ಹಬ್ಬಹುಣ್ಣಿಮೆಗಳ, ತಿಂಗಳು ತಿ
ಪಂಚಾಂಗವು ಹಿಂದುಗಳದೇ ಆಗಿದೆ. ಅವರ ಹಬ್ಬಹುಣ್ಣಿಮೆಗಳ ಮೇಲೆ
ಉದ್ಯೋಗಗಳ ಪರಿಣಾಮವೂ ಸಾಕಷ್ಟು ಆಗಿದೆ. ಒಕ್ಕಲುತನ ಮಾಡುತ್ತಿ
ಹರಿಜನರು ಒಕ್ಕಲುತನಕ್ಕೆ ಸಂಬಂಧಿಸಿದ—ಎತ್ತುಗಳಿಗೆ ಸಂಬಂಧಿಸಿದ,
ಗಳಿಗೆ ಸಂಬಂಧಿಸಿದ—ಹಬ್ಬಹುಣ್ಣಿಮೆಗಳನ್ನು ಒಳ್ಳೇ ವಿಜೃಂಭಣೆಯಿ
ಆಚರಿಸುತ್ತಾರೆ. ಪಾದರಕ್ಷೆಗಳ ಅಂಗಡಿಗಳನ್ನು ಇಟ್ಟವರು ಲಕ್ಷ್ಮೀಪೂಜೆಯ

ಉಳಿದವರು ಮಹಾನವಮಿಯಲ್ಲಿ ತಮ್ಮ ಉದ್ಯೋಗದ ಆಯುಧಪೂಜೆಗಳನ್ನೂ ಆಚರಿಸುತ್ತಾರೆ.

ಹರಿಜನರು ಆಚರಿಸುತ್ತಿರುವ ಹಬ್ಬಹುಣ್ಣಿಮೆಗಳ ಮೇಲೆ ಅವರಲ್ಲಿಯ ಮತಗಳ ಭಿನ್ನತೆಯೂ ಕಾಣಬರುತ್ತದೆ. ವಿಷ್ಣುಪೂಜಕರಾದ ಹರಿಜನರು ಗೋಕುಲಾಷ್ಟಮಿ, ರಾಮನವಮಿ, ವಿಠೋಬಾಯಾತ್ರೆಗಳನ್ನು ಆಚರಿಸುತ್ತಾರೆ. ಶಿವಭಕ್ತರಾದ ಹರಿಜನರು ಶಿವರಾತ್ರಿ, ಶ್ರಾವಣ ಸೋಮವಾರ, ಮುಕ್ತಿನ ಅಮಾವಾಸ್ಯೆ, ಕಾರಹುಣ್ಣಿಮೆಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ಜೋಕುಮಾರನ ಹಬ್ಬ ಮತ್ತು ಹೋಳಿಹುಣ್ಣಿಮೆಗಳು ಹರಿಜನರನ್ನು ಮತ್ತು ಹಿಂದುಗಳನ್ನು ಜೋಡಿಸುತ್ತವೆ. ಯಾಕೆಂದರೆ ಇವೆರಡು ಹಬ್ಬಗಳನ್ನು ಉಚ್ಚ ಜಾತಿಯ ಹಿಂದುಗಳು ಹರಿಜನರನ್ನು ಬಿಟ್ಟು ಆಚರಿಸಲಿಕ್ಕೆ ಬರುವದಿಲ್ಲ. ಜೋಕುಮಾರನು ಹುಟ್ಟುವದು ಪಟೇಲರ ಮನೆಯಲ್ಲಿ. ಸಾಯುವದು ಹರಿಜನರ ಕೇರಿಯಲ್ಲಿ. ಇದಕ್ಕೊಂದು ಕಥೆಯನ್ನೇ ಹರಿಜನರು ಹೇಳುತ್ತಾರೆ. ಜೋಕುಮಾರನು ಉಚ್ಚ ಜಾತಿಯಲ್ಲಿ ಹುಟ್ಟಿ ಹರಿಜನರ ವಧುವನ್ನು ಮೋಹಿಸಿ, ಹರಿಜನರಕೇರಿಯಲ್ಲಿ ಅವರಿಂದ ಕೊಲ್ಲಲ್ಪಟ್ಟನೆಂದು ಅವರು ಹೇಳುತ್ತಾರೆ. ಅಂತೆಯೇ ಇಂದಿಗೂ ಅವನು ಸಾಯುವದು ಹರಿಜನರ ಕೇರಿಯಲ್ಲಿ. ಇನ್ನು ಹೋಳಿಹುಣ್ಣಿಮೆಯಲ್ಲಿ ಉಚ್ಚ ಜಾತಿಯ ಹಿಂದುಗಳು ಹರಿಜನರಿಂದ ಬೆಂಕಿಯನ್ನು ತರದೆ ತಮ್ಮ ಕಾಮನನ್ನು ಸುಡಲಿಕ್ಕೆ ಶಕ್ಯವಿಲ್ಲ. ಇದೊಂದು ಸಮಾಜದಲ್ಲಿ ಹರಿಜನರಿಗೆ ಕೊಟ್ಟ ಸಾಮಾಜಿಕ ಹಕ್ಕಾಗಿದೆ. ಹಬ್ಬಹುಣ್ಣಿಮೆಗಳಲ್ಲಿ ಹರಿಜನರು ಉಚ್ಚ ಜಾತಿಯವರಿಂದ ಸಿಹಿ ಅಡಿಗೆಗಳನ್ನು ತರುತ್ತಾರೆ. ಮತ್ತು ತಮ್ಮತಮ್ಮಲ್ಲಿ ಸಿಹಿ ಅಡಿಗೆಗಳ ವಿನಿಮಯ ಮಾಡುತ್ತಾರೆ ಇಷ್ಟದೇವತೆ ಮತ್ತು ಆಯಾ ಹಬ್ಬಹುಣ್ಣಿಮೆಗಳಿಗೆ ಸಂಬಂಧಿಸಿದ ದೇವತೆಗಳ ಪೂಜೆ ಮಾಡುತ್ತಾರೆ.

ಹರಿಜನರು ಪೂಜಿಸುವ ದೇವತೆಗಳು (Pantheon) :

ಹರಿಜನರು ಉಳಿದ ಹಿಂದುಗಳಂತೆ ಅನೇಕ ದೇವರು ಹಾಗೂ ದೇವತೆಗಳ ಪೂಜಕರಾಗಿದ್ದಾರೆ. Farnel L. R. ಎಂಬ ಸಮಾಜಶಾಸ್ತ್ರಜ್ಞನು "ಬಹುದೇವತಾಪೂಜೆಯು ನೀತಿಶಾಸ್ತ್ರಕ್ಕೆ ಅನುಗುಣವಲ್ಲವೆಂದು ಹೇಳಲಿಕ್ಕೆ ಶಕ್ಯವಿಲ್ಲ"ವೆಂದು ಹೇಳಿದ್ದಾನೆ. ಅದೇ ರೀತಿ ಹರಿಜನರು ಅನೇಕ ಮತಗಳ, ಅನೇಕ ಧರ್ಮಗಳ ದೇವರುಗಳ ಪೂಜಕರಾಗಿದ್ದರೂ ಅವರ ನೀತಿಯು ನೆಲೆಕಟ್ಟು ಸನಾತನ ಧರ್ಮವು ಹಾಕಿಕೊಟ್ಟ ಮಾರ್ಗವನ್ನು ಬಿಟ್ಟು ಬೇರೆ ಇರುವದಿಲ್ಲ. ಹರಿಜನರಲ್ಲಿ ಪೂಜಿಸುವ ದೇವರು, ದೇವತೆಗಳನ್ನು ನಾವು ಅನೇಕ ಗುಂಪುಗಳಲ್ಲಿ ವಿಂಗಡಿಸಬಹುದಾಗಿದೆ : (೧) ಶಕ್ತಿಪೂಜೆ, (೨) ಶೈವಪಂಥ,

(೩) ವಿಷ್ಣುಪಂಥ, (೪) ಗ್ರಾಮದೇವರುಗಳು, (೫) ಸಾಧು, ಸಂತ ಮತ್ತು ಮಹಾಪುರುಷರು (Heroes), (೬) ಹಿರಿಯರು (Ancestors), (೭ ಹಳ್ಳ, ಕೊಳ್ಳ, ನದಿ, ಬೆಟ್ಟ ಮುಂತಾದವು (Nature worship), (೮) ಪ್ರಾ ದೇವರುಗಳು ಮತ್ತು (೯) ವಸ್ತುಗಳು (Feticism) ಇವೆಲ್ಲ ತರದ ದೇವ ಗಳನ್ನು ಹರಿಜನರು ಪೂಜಿಸುತ್ತಿದ್ದರೂ ಅದರ ಮರ್ಮಭಾಗವನ್ನು ವಿಚಾ ಸಿದಾಗ ದೇವರು ಒಬ್ಬನೇ ಎಂದೂ ಅವನೇ ಪರಮಾತ್ಮ ಇಲ್ಲವೆ ಅದಿ (Supernatural being) ಎಂದೂ ಅವರು ಹೇಳುತ್ತಾರೆ. ಇವೆಲ್ಲ ದೇವ ನಲ್ಲಿ ಪೂಜಿಸುವ ಆಕಾರ (Image) ಗಳೆಂದೂ, ಅವುಗಳ ಹಿಂದೆ ಇರುವ ಭ ಮನಸ್ಸು, ಹೃದಯ, ಶಕ್ತಿಗಳೇ ದೇವರೆಂದು ಅವರಿಗೆ ಮನವರಿಕೆಯಾಗಿ ಭೂತಗಳ ಬಗ್ಗೆ ಸಹ ಅವರಲ್ಲಿ ಕಲ್ಪನೆಗಳಿದ್ದು, ಜಗತ್ತು, ಆಕಾಶ, ಭೂ ನೀರು, ನಕ್ಷತ್ರಗಳ ಬಗ್ಗೆ ಅವರವೇ ಆದ ವಿಚಿತ್ರಕಲ್ಪನೆಗಳೂ ಇವೆ. ಅದ ಸ್ವರ್ಗ, ನರಕ, ದೇವಲೋಕಗಳ ಬಗ್ಗೆಯೂ ಅವರಲ್ಲಿ ಹೇರಳವಾದ ಕಲ್ ಗಳಿವೆ.

೧. ಶಕ್ತಿಪೂಜೆ :

ಹರಿಜನರು ಮೂಲತಃ ಶಕ್ತಿಪೂಜಕರಾಗಿದ್ದಾರೆ. ಅವರ ಪ್ರತಿಯೊ ಓಣಿಗಳಲ್ಲಿ ದ್ಯಾಮವ್ವ, ದುರ್ಗವ್ವ, ಕರಿಯವ್ವ ಮತ್ತು ಮರಿಯವ್ವನ ಗ ಗಳು ಕಂಡುಬರುತ್ತಿವೆ. ಈ ಭಾಗದಲ್ಲಿಯ ಹರಿಜನರು ಸವದತ್ತಿ ಹತ್ತಿರವಿ ಎಲ್ಲಮ್ಮನ ದೇವಸ್ಥಾನಕ್ಕೆ ಯಾತ್ರೆಹೋಗುತ್ತಾರೆ. ಅಲ್ಲಿ ಮಾತಂಗಿ ಎ ಹರಿಜನ ದೇವತೆಯನ್ನು ಆರಾಧಿಸುತ್ತಾರೆ. ಈ ಹರಿಜನ ದೇವತೆಯನ್ನು ಉ ಕುಲದ ಹಿಂದುಗಳೂ ಪೂಜಿಸುತ್ತಾರೆ. ಮನೆಯಲ್ಲಿ ಅನೇಕ ಹೆಸರುಗಳಲ್ಲಿರ ದೇವತೆಗಳನ್ನು ಪೂಜಿಸುತ್ತಾರೆ. ಅವುಗಳಲ್ಲಿ ಮುಖ್ಯವಾದವುಗಳೆಂದರೆ ಕರೆ ಮಾರೆವ್ವ, ಕಂಟೆವ್ವ, ಮಹಾಂಕಾಳಿ, ಏಳುಮಕ್ಕಳ ತಾಯಿ ಮುಂತಾದ ಈ ದೇವತೆಗಳ ಆರಾಧನೆಗೆ ಕುರಿ, ಕೋಳಿಗಳನ್ನು ಹೆಚ್ಚಾಗಿ ಬಲಿಕೊಡುತ್ತಾ ಸಾರ್ವಜನಿಕವಾಗಿ ಕೊಡುತ್ತಿದ್ದ ಕೋಣನ ಬಲಿ ಮತ್ತು ಜರಗಾವಿಧಿಗಳ ಈಗ ಆಚರಿಸುವದು ಕಂಡುಬರುವದಿಲ್ಲ.

೨. ಶೈವಪಂಥ :

ಕರ್ನಾಟಕದಲ್ಲಿಯ ಹರಿಜನರು ಮುಖ್ಯವಾಗಿ ವೀರಶೈವರಾಗಿದ್ದಾ ಆದ್ದರಿಂದ ಅವರು ಬಸವ, ಶಿವ, ಗಣಪತಿ, ವೀರಭದ್ರ ದೇವರುಗಳ ಆರಾ ರಾಗಿದ್ದಾರೆ. ಅವರು ನಂದಿಯನ್ನು ಪೂಜಿಸುತ್ತಾರೆ. ಶಿವರಾತ್ರಿಯಲ್ಲಿ ಉ ವಾಸ ಆಚರಿಸಿ ಮಾಂಸಭಕ್ಷಣವನ್ನು ತ್ಯಜಿಸುತ್ತಾರೆ. ಲಿಂಗಪೂಜೆಯನ್ನು ವ

ಧೂತಿಯನ್ನು ಧರಿಸಿ, ಲಿಂಗವನ್ನು ತಮ್ಮ ಶರೀರದ ಮೇಲೆ ಧರಿಸುತ್ತಾರೆ. ಲವು ಜನ ಶೈವಪಂಥದ ಹರಿಜನರು ತಮಗೆ ಲಿಂಗಾಯತ ದೀಕ್ಷೆಯಾಗಿದೆ ಂದೂ ಹೇಳುತ್ತಾರೆ. ಲಿಂಗಾಯತ ಧರ್ಮದ ಗುರುಗಳ ಹಾಗೂ ಮಠಗಳ ನುಯಾಯಿಗಳಾಗುತ್ತಾರೆ. ಜಂಗಮರನ್ನು ಹಬ್ಬಹುಣ್ಣಿಮೆಗಳಲ್ಲಿ ಮನೆಗೆ ರೆದು ಆರಾಧಿಸಿ, ದಕ್ಷಿಣೆ ಕೊಟ್ಟು ತಾವು ಇಂಥದೇ ಮತಕ್ಕೆ ಸಂಬಂಧಿಸಿದವ ಂದು ಹೇಳಿಕೊಳ್ಳುತ್ತಾರೆ.

. ವೈಷ್ಣವ ಪಂಥ :

ಹರಿಜನರಲ್ಲಿ ಅನೇಕ ಜಾತಿಯ ಜನರು ಮುಖ್ಯವಾಗಿ ಹುಲಸವಾರ, ಾಲದೇಗ, ಮುಲಸಾನ ಜಾತಿಯವರು ವೈಷ್ಣವರಾಗಿದ್ದಾರೆ. ಅವರು ್ರಾಹ್ಮಣರ ಭಟ್ಟನನ್ನೇ ಕರೆದು ತಮ್ಮ ವಿಧಿಗಳನ್ನು ನೆರವೇರಿಸಿಕೊಳ್ಳು ್ತಾರೆ. ಕೃಷ್ಣ, ರಾಮ, ಚನ್ನಕೇಶವ, ವಿಠೋಬಾ, ಸತ್ಯನಾರಾಯಣ ುಂತಾದ ದೇವರುಗಳನ್ನು ಪೂಜಿಸುತ್ತಾರೆ. ಹರಿಕಥಾ, ರಾಮನವಮಿ, ಷ್ಣಾಷ್ಟಮಿಗಳನ್ನು ಆಚರಿಸುತ್ತಾರೆ. ವೈಷ್ಣವರಂತೆ ತಮ್ಮ ಹಣೆಯ ಮೇಲೆ ುಂಕುಮ, ಗಂಧಗಳನ್ನು ಧರಿಸಿ, ಸೀರೆ ಉಡುವ ಪದ್ಧತಿಯಲ್ಲಿ ಉಳಿದ ಾತಿಯ ವೈಷ್ಣವರನ್ನೇ ಅನುಸರಿಸುತ್ತಾರೆ.

. ಗ್ರಾಮದೇವತೆಗಳು :

ಹರಿಜನರಲ್ಲಿ ತಮ್ಮವೇ ಆದ ಕೆಲವು ಕಲ್ಪನೆಗಳಿಂದ ಗ್ರಾಮ್ಯದೇವತೆಗಳು ುದ್ಭವಿಸಿಕೊಂಡಿವೆ. ಕಂಟೆವ್ವ, ಕಾಳಿನಕೊಪ್ಪದ ಪಿರಾಸಿಂಗ, ದೋಣೆವ್ವ, ುಂದವ್ವ ಮುಂತಾದ ದೇವತೆಗಳು ಅವರ ಕಲ್ಪನೆಗಳಿಂದ ಉದ್ಭವಿಸಿವೆ. ಿ ದೇವತೆಗಳು ಕಲ್ಲಿನಲ್ಲಿ, ಕಂಟಿಗಳಲ್ಲಿ, ಮರಗಳಲ್ಲಿ ಮತ್ತು ಊಟ ಮಾಡುವ ದಾರ್ಥಗಳಲ್ಲಿ ಅಡಕವಾಗಿವೆ ಎಂದು ತಿಳಿದುಕೊಳ್ಳುತ್ತಾರೆ.

. ಸಾಧುಸಂತರು ಮತ್ತು ಮಹಾಪುರುಷರು :

ಹರಿಜನರಲ್ಲಿ ಸಾಧುಸಂತರ ಮತ್ತು ಮಹಾಪುರುಷರ ಪೂಜೆಗೇನೂ ೊರತೆ ಇಲ್ಲ. ಒಬ್ಬ ಹಳ್ಳಿಗಾಡಿನ ಸಾಧುವು ಸಹಿತ ಕೆಲವು ಪವಾಡಗಳನ್ನು ಾಡಿರುವನೆಂದು ಸುದ್ದಿ ಹಬ್ಬಿದರೆ ಅವರ ಆರಾಧನೆ ಪ್ರಾರಂಭವಾಗುತ್ತದೆ. ಾಯಿಬಾಬಾ, ನಾಯಿನಿಂಗಪ್ಪ ಮುಂತಾದವರ ಪೂಜೆಯನ್ನೂ ಮಾಡುತ್ತಾರೆ ುಹಾಪುರುಷರಾದ ಅಂಬೇಡಕರ, ಗಾಂಧೀಜಿ, ನೆಹರೂ ಅವರ ಪೂಜೆಗಳನ್ನೂ ಾಡುತ್ತಾರೆ.

೬. ಹಿರಿಯರು (Ancestor) :

ಹರಿಜನರ ವಂಶದಲ್ಲಿ ಸತ್ತುಹೋದ ಹಿರಿಯರು ದೇವತೆಗಳ ಸಾಲಿ ನಲ್ಲಿ ಸೇರುತ್ತಾರೆ. ಅವರ ಮೂರ್ತಿಗಳನ್ನು ಮಾಡಿಸಿ ಜಗಲಿಗಳ ಮೇ ಇಟ್ಟು ಪೂಜಿಸುತ್ತಾರೆ. ವರ್ಷದಲ್ಲಿ ಒಮ್ಮೆ ಹಿರಿಯರ ಹಬ್ಬ (Ancesto worship) ಎಂದು ಹಿರಿಯರ ಪೂಜೆಯನ್ನು ವಸ್ತ್ರ, ಒಡವೆ, ಹಿರಿಯರ ಇಷ್ಟ ಖಾದ್ಯ ಪದಾರ್ಥಗಳನ್ನಿಟ್ಟು, ಶ್ರಾದ್ಧ ಕೊಟ್ಟು ಪೂಜಿಸಿ ಊಟ ಮಾಡುತ್ತಾ ಈ ಹಬ್ಬವನ್ನು ಮುಖ್ಯವಾಗಿ ಮಾಳವೆಂದು ಕರೆದು ಯುಗಾದಿ ಇಲ್ಲ ಭಾದ್ರಪದ ತಿಂಗಳಲ್ಲಿ ಮಾಳಪಕ್ಷದಲ್ಲಿ ಅದನ್ನು ಆಚರಿಸುತ್ತಾರೆ.

೭. ಗಿಡಗಂಟಿಗಳು (Nature Worship) :

ಹರಿಜನರಲ್ಲಿ ಪ್ರಕೃತಿಪೂಜೆಯೂ ಕಂಡುಬರುತ್ತದೆ. ಅವರು ಸೂರ್ಯ ಚಂದ್ರ, ಭೂಮಿ, ಆಕಾಶ, ನೀರು ಮುಂತಾದ ಪ್ರಾಕೃತಿಕ ವಸ್ತುಗಳನ್ನು ದೇ ರೆಂದು ತಿಳಿದು ಪೂಜಿಸುತ್ತಾರೆ. ಮೂಲ ಮನುಷ್ಯನಿಗೆ (Primitive mar ಪ್ರಕೃತಿಪೂಜೆಯು ಹೆದರಿಕೆಯಿಂದಲೋ, ಭಕ್ತಿಯಿಂದಲೋ ಪ್ರಕೃತಿಯ ವಿಲಕ್ಷಣತೆಯನ್ನೂ, ಭವ್ಯತೆಯನ್ನೂ ಕಂಡು ಪ್ರಾರಂಭವಾಯಿತು. ಈ ಪೂ ಹರಿಜನರಲ್ಲಿ ಇನ್ನೂ ಕಂಡುಬರುತ್ತದೆ. ಅವರು ಗಿಡಮರಗಳನ್ನೂ ಪೂಜಿಸ ತ್ತಾರೆ. ಮುಖ್ಯವಾಗಿ ಬನ್ನಿ, ಬೇವು, ಅಶ್ವತ್ಥ, ಆಲದಮರಗಳು ಪೂ ವಾಗಿವೆ. ಇವುಗಳಲ್ಲಿ ದೇವತೆಗಳು ವಾಸವಾಗಿರುವರೆಂದು ತಿಳಿಯುತ್ತಾ ಇಂಥ ಗಿಡಗಳ ಕೆಳಗೆ ಕೆಲವು ಕಲ್ಲುಗಳನ್ನಿಟ್ಟು ಅವುಗಳನ್ನು ಪೂಜಿಸುತ್ತಾ ಅದಲ್ಲದೆ ನದಿ, ಬೆಟ್ಟ, ಕೊಳ್ಳಗಳೂ ಪೂಜ್ಯವಾಗಿವೆ.

೮. ಪ್ರಾಣಿದೇವರುಗಳು :

ಹಿಂದುಗಳಿಗೆ ಗೋವು ಪೂಜ್ಯವಾಗಿರುವಂತೆ ಹರಿಜನರಿಗೂ ಪೂಜ್ಯವಾಗಿ ಅವರು ಸತ್ತ ದನಗಳನ್ನು ಮಾತ್ರ ಕೊಯ್ಯಬೇಕೆಂದು ಹೇಳುತ್ತಾರೆ. ಬ ಕೊಡುವಾಗ ದೇವತೆಗೆ ಕೇವಲ ಕೋಣ, ಕುರಿ, ಕೋಳಿಗಳು ಇಷ್ಟವಾದ ಗಳೆಂದು ತಿಳಿಯುತ್ತಾರೆ. ಆದರೆ ಆಕಳು, ಎತ್ತು, ಮಂಗ, ಕುದುರೆ, ಅ ನಾಯಿ, ನಾಗ ಮುಂತಾದವು ಪೂಜ್ಯವಾದವುಗಳೆಂದೂ ತಿಳಿಯುತ್ತಾರೆ. ಅವ ಪ್ರಾಣಿದಯೆಯ ಕಲ್ಪನೆಯೂ ಇದೆ.

೯. ವಸ್ತುಗಳು (Feticism):

ಕೆಲವೊಂದು ವಸ್ತುಗಳನ್ನು ಪೂಜೆ ಮಾಡುವುದರಿಂದ ಕೆಲವು ಶಕ್ತಿಗಳನ ವಶಮಾಡಿಕೊಳ್ಳಲಿಕ್ಕೆ ಶಕ್ಯವಿದೆ ಎಂದು ಹರಿಜನರು ತಿಳಿಯುತ್ತಾರೆ. ಅದ

ಿಂದ ವಿಚಿತ್ರವಾದ ಕಲ್ಲುಗಳನ್ನು, ಬಿನಕಗಳನ್ನು, ತೆಂಗಿನಕಾಯನ್ನು ರುದ್ರಾಕ್ಷಿಗಳನ್ನು ಫಲಗಳನ್ನು ಪೂಜಿಸುತ್ತಾರೆ. ಕೆಲವೊಂದು ಸಲ ಇಂಥ ವಸ್ತುಗಳನ್ನು ಪೂಜಿಸಿ ತಮ್ಮ ಮನೆಯಲ್ಲಿ ಇಲ್ಲವೆ ತಮ್ಮ ಹತ್ತಿರ ಇಟ್ಟುಕೊಳ್ಳುವದರಿಂದ ಶುಭವಾಗುವದೆಂದೂ, ಕಾರ್ಯ ಸಿದ್ಧಿಯಾಗುವದೆಂದೂ ತಿಳಿಯುತ್ತಾರೆ. ತೆಂಗಿನಕಾಯಿಗೆ ಮುಳಿವ್ವ ಎಂಬ ದೇವತೆಯ ಹೆಸರೂ ಇದೆ.

ಹರಿಜನರ ಪೂಜೆಯನ್ನು ನಾವು ಅನೇಕ ವಿಧವಾಗಿ ವಿಭಜಿಸಬಹುದು: (೧) ಮನೆಯಲ್ಲಿಯ ಪೂಜೆ, (೨) ಓಣಿಗಳಲ್ಲಿಯ ಪೂಜೆ, (೩) ಊರ ದೇವರುಗಳ ಪೂಜೆ. (೪) ಯಾತ್ರೆ. ಈ ನಾಲ್ಕು ವಿಧವಾದ ಪೂಜೆಗಳಲ್ಲದೆ ಅನೇಕರು ವೈಯಕ್ತಿಕ ಪೂಜೆಗಳನ್ನೂ ನೆರವೇರಿಸುತ್ತಾರೆ. ಈ ದೇವತೆಗಳನ್ನು ನಾವು ಒಳ್ಳೆಯ ದೇವತೆಗಳೆಂದೂ (White), ಕೆಟ್ಟ ದೇವತೆಗಳೆಂದೂ (Black) ಅವರ ಕಲ್ಪನೆಗಳ ಮೇಲೆ ವಿಭಜಿಸಬಹುದು. ದೇವತೆಗಳಲ್ಲಿ ದ್ಯಾಮವ್ವ, ದುರ್ಗವ್ವ, ಕರಿಯವ್ವ, ಮಾರೆವ್ವ ಕೆಟ್ಟ ದೇವತೆಗಳಾಗಿದ್ದು ಅವರ ಸಿಟ್ಟನ್ನು ಇಳಿಸಲಿಕ್ಕೆ ಅವರ ಇಚ್ಛೆಯಂತೆ ಪೂಜಿಸಿ ಒಲಿಸಿಕೊಳ್ಳಬೇಕಾಗುತ್ತದೆ ಪಾರ್ವತಿ, ಸರಸ್ವತಿ, ಲಕ್ಷ್ಮಿ ಇವರು ಒಳ್ಳೆಯ ದೇವತೆಗಳಾಗಿದ್ದು ಇವರ ಪೂಜೆಯಿಂದಲೇ ವರಗಳನ್ನು ಪಡೆಯಬಹುದು. ದೇವರುಗಳಲ್ಲಿ ವೀರಭದ್ರ ಸಿಟ್ಟಿನವನೆಂದೂ, ಶಿವನು ಭೋಳೇ ಸ್ವಭಾವದವನೆಂದೂ, ವಿಷ್ಣುವು ವಕ್ರಮಾರ್ಗದವನೆಂದೂ ತಿಳಿದುಕೊಳ್ಳುತ್ತಾರೆ. ತಮ್ಮ ಅನೇಕ ರೋಗರುಜಿನಗಳಿಗಾಗಿ ದೇವತೆಗಳನ್ನು ಪೂಜಿಸಿ ಗುಣಪಡಿಸಿಕೊಳ್ಳಲು ಶಕ್ಯವಿದೆ ಎಂದೂ ಏನಾದರೂ ರೋಗರುಜಿನಕ್ಕೆ ಅಂಥದೇ 'ದೇವತೆಯ ಕಾಟ'ವಿದೆ ಎಂದೂ, ಕೆಲವೊಮ್ಮೆ ಭೂತಗಳ ಬಾಧೆಯಿಂದ ಭೂತಬಾಧೆ ಎಂಬ ರೋಗವು ಬರುತ್ತದೆ ಎಂದೂ ತಿಳಿದುಕೊಳ್ಳುತ್ತಾರೆ.

ಹರಿಜನರ ಧರ್ಮ ಹಿಂದು ಧರ್ಮದ ನೆರಳೇ ?

ನಾವು ಇಲ್ಲಿಯವರೆಗೆ ಹರಿಜನರ ಸಾಮಾಜಿಕ ರಚನೆ, ಸಾಮಾಜಿಕ ಸಂಸ್ಥೆಗಳು, ಸಾಮಾಜಿಕ ವ್ಯಕ್ತಿಗಳು, ಧಾರ್ಮಿಕ ನಡತೆಗಳನ್ನು ಪರಿಶೀಲಿಸಿದ್ದೇವೆ. ಇವುಗಳ ಆಧಾರದ ಮೇಲೆ ಹರಿಜನರು ಹಿಂದುಗಳೇ ? ಅವರ ಧಾರ್ಮಿಕ ನಡತೆಗಳ ಮೇಲೆ ಯಾವ ಯಾವ ಧರ್ಮಗಳ ಪ್ರಭಾವವಾಗಿದೆ ಎಂಬುದನ್ನು ವಿಚಾರಿಸುವಾ.

ಇದನ್ನು ಪರೀಕ್ಷಿಸುವದಕ್ಕಾಗಿ ಹರಿಜನರ ಧಾರ್ಮಿಕ ಇಚ್ಛೆಗಳನ್ನು (Preferences) ಪಡೆಯಲಾಯಿತು. ೨೮೦ ಜನ ಹರಿಜನರ ಧಾರ್ಮಿಕ ಇಚ್ಛೆಗಳು ಈಗಿನಂತೆ ಇರುವದಾಗಿ ಕಂಡುಬಂದಿತು.

ಕೋಷ್ಟಕ ನಂ. ೫

ಧಾರ್ಮಿಕ ಇಚ್ಛೆಗಳು (Preferences)

ಇಚ್ಛೆಗಳು	ಹಿಂದುಗಳಲ್ಲಿ ಉಚ್ಚ ಜಾತಿ	ಲಿಂಗಾಯತ ಧರ್ಮ	ಮುಸ್ಲಿಮ ಧರ್ಮ	ಕ್ರೈಸ್ತ ಧರ್ಮ	ಬೌದ್ಧ ಧರ್ಮ	ಒಟ್ಟು
I	೧೭೬	೧೦	೨	೫	೧೯	೨೧೨
II	೫	೨	೧೦	೨೫	೩೪	೭೬
III	೧	—	೨೩	೩೨	೪	೬೦
IV	೨	೧	೨೭	೮	೩	೪೧
V	೧	—	—	—	—	೧
ಒಟ್ಟು	೧೮೫	೧೩	೬೨	೭೦	೬೦	—

ಮೇಲಿನ ಕೋಷ್ಟಕದ ಮೇಲಿಂದ ಬಹಳಷ್ಟು ಜನರು ಹಿಂದುಗಳಲ್ಲಿಯ ಉಚ್ಚಜಾತಿಗಳನ್ನು ಇಚ್ಛಿಸುತ್ತಾರೆಂಬುದು ಕಂಡುಬರುತ್ತದೆ. ಎರಡನೆಯದು ಕ್ರೈಸ್ತಧರ್ಮ, ಮೂರನೆಯದು ಮುಸ್ಲಿಮ ಧರ್ಮ ಮತ್ತು ನಾಲ್ಕನೆಯದು ಬೌದ್ಧ ಧರ್ಮವಾಗಿದೆ. ಕೆಲವರು ಲಿಂಗಾಯತ ಧರ್ಮವನ್ನು ಇಚ್ಛಿಸುವದಾ ಪ್ರಕಟಪಡಿಸಿದ್ದಾರೆ. ಹರಿಜನರನ್ನು ಮತಾಂತರದ (Convertions) ಬಗ ಪ್ರಶ್ನಿಸಿದಾಗ ಅವರು ಕೆಳಗಿನಂತೆ ಮತಾಂತರ ಹೊಂದಲು ತಮ್ಮ ಇಚ್ಛೆಗಳನ ವ್ಯಕ್ತಪಡಿಸಿದರು.

ಕೋಷ್ಟಕ ನಂ. ೬

ಮತಾಂತರ (Convertions)

ಇಚ್ಛೆಗಳು	ಹಿಂದು ಉಚ್ಚ ಜಾತಿ	ಜೈನ	ಬೌದ್ಧ	ಕ್ರೈಸ್ತ	ಇಸ್ಲಾಮ	ಲಿಂಗಾಯತ	ಒಟ್ಟು
I	೪	೨	೪೦	೨೨	೯	೧೭	೯೪
II	೧	—	೧	೫	೨	೧	೧೦
III	—	—	—	೩	೧	—	[illegible]
IV	--	—	೧	—	—	—	[illegible]
V	-	—	—	—	—	೧	[illegible]
ಒಟ್ಟು	೫	೨	೪೨	೩೦	೧೨	೧೯	[illegible]

ಮೇಲಿನ ಕೋಷ್ಟಕದ ಮೇಲಿಂದ ಬಹುಮತವು ಮತಾಂತರಹೊಂದ ಇಚ್ಛೆ ಇಲ್ಲವೆಂದು ಗೊತ್ತಾಗುತ್ತದೆ. ಮತಾಂತರಹೊಂದಲು ಇಚ್ಛೆಪಟ್ಟವ

ಬೌದ್ಧ ಧರ್ಮ, ಕ್ರೈಸ್ತಧರ್ಮ ಮತ್ತು ಲಿಂಗಾಯತ ಧರ್ಮಗಳಿಗೆ ಹೆಚ್ಚು ಪ್ರಾಶಸ್ತ್ಯವನ್ನು ಕೊಟ್ಟಿದ್ದಾರೆ. ಹರಿಜನರನ್ನು ಅಸ್ಪೃಶ್ಯರೆಂದೂ ಕೀಳು ಕುಲದವರೆಂದೂ ಹಿಂದುಗಳು ಗಣಿಸುವದರಿಂದಲೇ ಮುಖ್ಯವಾಗಿ ಅವರು ಮತಾಂತರ ಹೊಂದಲು ಇಚ್ಛೆಪಡುತ್ತಾರೆ.

ನೀವು ಉಳಿದ ಮತ, ಧರ್ಮ, ಜಾತಿಯವರೊಡನೆ ಕೂಡಿಕೊಂಡು ನಡೆಯುವಿರೇ ಎಂದು ೨೮೦ ಜನರನ್ನು ಪ್ರಶ್ನಿಸಿದಾಗ ೨೨೨ ಜನರು ಕೂಡಿಕೊಳ್ಳುವರೆಂದೂ ೫೮ ಜನರು ಕೂಡಿಕೊಳ್ಳಲು ಶಕ್ಯವಿಲ್ಲವೆಂದೂ ತಿಳಿಸಿದ್ದಾರೆ. ಇದಕ್ಕೆ ಮುಖ್ಯವಾಗಿ ಪಾರಂಪರ್‍ಯವಾಗಿ ಬಂದ ಉದ್ಯೋಗ, ರೀತಿನೀತಿಗಳು ಕಾರಣವಾಗಿವೆ. ಭಂಗೀಜನರನ್ನು, ತೊಗಲಿನ ಉದ್ಯೋಗ ಮಾಡುವವರನ್ನು ಉಚ್ಚವರ್ಗದವರು ತಮ್ಮಲ್ಲಿ ಬೆರೆಯುವದಕ್ಕೆ ಬಹಳ ಆತಂಕ ಮಾಡುವರೆಂದು ತಿಳಿಯುತ್ತದೆ.

ಇದೇ ೨೮೦ ಜನರನ್ನು ನಿಮಗೆ ಸಾರ್ವಜನಿಕ ಸ್ಥಳಗಳಲ್ಲಿ ಪ್ರವೇಶವಿದೆಯೆ? ಎಂದು ಕೇಳಿದಾಗ ೨೧೧ ಜನರು ಪ್ರವೇಶ ಇದೆ ಎಂದೂ, ೬೯ ಜನರು ಪ್ರವೇಶ ನಿರಾಕರಿಸಲ್ಪಟ್ಟಿದೆ ಎಂದೂ ಹೇಳಿದರು. ಇದು ಧಾರವಾಡದಂಥ ಶಹರ ಜೀವನ ಮತ್ತು ಸುಸಂಸ್ಕೃತ ಜೀವನವಿರುವ ಪ್ರದೇಶದಲ್ಲಿ. ಇದರಮೇಲಿಂದ ಹಳ್ಳಿಗಳಲ್ಲಿಯ ಪರಿಸ್ಥಿತಿ ಹೇಗೆ ಇರಬಹುದೆಂದು ಊಹಿಸಬೇಕು. ಶಹರದಲ್ಲಿ ಸಹಿತ ಎರಡು ದಶಕಗಳ ಹಿಂದೆ ಪರಿಸ್ಥಿತಿ ಬಹಳ ಕೀಳು ಇತ್ತೆಂದೂ, ಸ್ವಾತಂತ್ರ್ಯಾನಂತರ ಹರಿಜನರಿಗೆ ಹೆಚ್ಚು ಪ್ರಾಶಸ್ತ್ಯ ಸಿಗುತ್ತಿರುವದೆಂದೂ ಹರಿಜನರು ತಿಳಿದುಕೊಂಡಿದ್ದಾರೆ.

ಕೇವಲ ಉಚ್ಚಜಾತಿಯವರ ಗುಡಿಗುಂಡಾರಗಳ ಪ್ರವೇಶದ ಬಗ್ಗೆ ೨೮೦ ಜನರನ್ನು ಪ್ರಶ್ನಿಸಿದಾಗ, ೨೩೪ ಜನರು ತಾವು ಉಚ್ಚಜಾತಿಯ ಜನರ ಗುಡಿಗುಂಡಾರ, ಮಠಗಳನ್ನು ಪ್ರವೇಶಿಸುವದಾಗಿಯೂ, ೪೬ ಜನರು ತಮಗೆ ಪ್ರವೇಶವು ದೊರೆಯಲಿಲ್ಲವೆಂದೂ ಹೇಳುತ್ತಾರೆ.

ಇದೇ ರೀತಿ ಹರಿಜನರು ಉಚ್ಚಜಾತಿಯವರ ಸೇವೆ ಮಾಡುತ್ತಿದ್ದರೂ ಅವರಿಗೆ ಕೆಲಸಿಗರಿಂದ, ಬ್ಯಾಂಡ ಕಂಪನಿಯವರಿಂದ, ಅಗಸರಿಂದ, ಸಿಂಪಿಗರಿಂದ ಸೇವೆಪಡೆಯಲು ತೊಂದರೆಗಳು ಶಹರದಲ್ಲಿಯೂ ಕಂಡುಬರುತ್ತವೆ. ನೀರು ಬೇಕಾಗುವಾಗ ಅವರು ಸಾರ್ವಜನಿಕ ಸ್ಥಳಗಳನ್ನು ಪ್ರವೇಶಿಸಲಾರರು. ದೂರ ನಿಂತು ಒಯ್ಯಬೇಕಾಗುತ್ತದೆ.

ಈ ರೀತಿಯಾಗಿ ಹರಿಜನರು ರೀತಿ-ನೀತಿಗಳಲ್ಲಿ, ಧರ್ಮಾಚರಣೆಯಲ್ಲಿ, ಸಾಮಾಜಿಕವಾಗಿ ಹಿಂದೂ ಧರ್ಮದ ನೆರಳಿನಲ್ಲಿ ಬಂದವರಾಗಿದ್ದರೂ ಅಸ್ಪೃಶ್ಯತೆಯು ಇನ್ನೂ ಅವರನ್ನು ಪ್ರತ್ಯೇಕವಾಗಿಟ್ಟಿದೆ.

★ ಎನ್. ಕೆ. ಕಡೆತೋಟದ

ನನ್ನ ಹಾಡು

ತನ್ನವರು ಸತ್ತಾಗ
ಹೆಣವೆದುರು ಕೂತು
ಬಿದ್ದು ಉರುಳ್ಯಾಡಿ
ಎದೆ-ಎದೆ ಬಡಕೊಂಡು
ಘೋರಾಡಿ–ಚೀರಾಡಿ
ಅತ್ತು ಹೈರಾಣಾದ
ನಂತರ

ಹೆಣ ಹೊತ್ತೊಯ್ದು
ಸುಟ್ಟು, ಬೂದಿಯೂ
ಗಾಳಿಯಲ್ಲಿ ಗಾಳಿಯಾದಾಗ
ತಟಕ್-ತಟಕ್ ಅಂತ
ಒಂದೊಂದೇ ಬರುವ
ಬಿಕ್ಕುಗಳ ಹಾಗೆ
ಈ ನನ್ನ ಹಾಡು

ಶಂಕರಕವಿ ವಿರಚಿತ

ಗುರುಶಂಕರೇಶ್ವರಶತಕ

ಕನ್ನಡ ಸಾಹಿತ್ಯ ಹಲವಾರು ರೀತಿಯಲ್ಲಿ ಸಂಸ್ಕೃತ ಸಾಹಿತ್ಯಕ್ಕೆ ಋಣಿ-
ಯಾಗಿದೆ; ಸಂಸ್ಕೃತದ ಮಾದರಿಯಲ್ಲಿ ತನ್ನ ಸಾಹಿತ್ಯವನ್ನು ಬೆಳೆಸಿಕೊಳ್ಳಲು
ತುಂಬಾ ಯತ್ನಿಸಿದೆ. ಅದರ ಫಲವಾಗಿ ಕನ್ನಡ ಸಾಹಿತ್ಯದಲ್ಲಿ ವೈವಿಧ್ಯವೂ
ವೈಶಿಷ್ಟ್ಯವೂ ತಲೆದೋರಿದೆ. ಕನ್ನಡ ಪಡೆದುಕೊಂಡ ಅನೇಕ ಸಂಸ್ಕೃತ
ಕೊಡುಗೆಗಳಲ್ಲಿ ಶತಕಸಾಹಿತ್ಯವೂ ಒಂದಾಗಿದೆ. ನೀತಿಬೋಧೆಯೇ ಶತಕಸಾಹಿ-
ತ್ಯದ ಗುರಿ. ಶೃಂಗಾರ, ವೈರಾಗ್ಯ, ಭಕ್ತಿಸಹಿತವಾದ ನೀತಿವಿಷಯವನ್ನು
ರೂಪದಲ್ಲಿ ಸ್ವಾರಸ್ಯ ಬರುವ ಹಾಗೆ ನೂರೊಂದು ಪದ್ಯಗಳಲ್ಲಿ ಹೇಳುತ್ತ
ಇರುವುದರಿಂದ ಈ ಸಾಹಿತ್ಯಪ್ರಕಾರಕ್ಕೆ 'ಶತಕ'ವೆಂದು ಹೇಳಲಾಗಿದೆ.
ಶತಕವನ್ನು ಕನ್ನಡದಲ್ಲಿ ಮೊಟ್ಟಮೊದಲು ನಿರ್ಮಿಸಿದ ಕವಿ ನಾಗವರ್ಮಾ-
ಚಾರ್ಯ (ಕ್ರಿ. ಶ ೧೦೭೦). ಆತನು ರಚಿಸಿದ ಚಂದ್ರಚೂಡಾಮಣಿಶತಕವು
ವೃತ್ತದಲ್ಲಿದ್ದು ತಾತ್ತ್ವಿಕ ವಿಷಯವನ್ನು ಬೋಧಿಸುವ ಸಪ್ತತಿಯೆನಿಸಿಕೊಂಡಿದೆ.
ಇದರ ಶೈಲಿ ಸುಲಭವಾಗಿದ್ದು ಜನಾದರಣೀಯವೆನಿಸಿದೆ.

ಶತಕವು ಗಾತ್ರದಲ್ಲಿ ಕಿರಿದು; ಸೂತ್ರದಲ್ಲಿ ಹಿರಿದು. ಚಿಕ್ಕ ಚಿಕ್ಕ ವಿಷಯ-
ಗಳನ್ನು ಚೊಕ್ಕಟವಾಗಿ ಹೇಳಲು ಹೆಚ್ಚು ಅನುಕೂಲವಾದುದು. ಹೀಗಾಗಿ
ಇದು ಕೂಡಲೇ ಕನ್ನಡಿಗರ ಮನವನ್ನು ಆಕರ್ಷಿಸಿರಬೇಕು. ಆದ್ದರಿಂದಲೇ
ಕನ್ನಡದಲ್ಲಿ ಶತಕಸಾಹಿತ್ಯದ ಬೆಳೆ ಹುಲುಸಾಗಿ ಬಂದಿದೆ. ನೂರಕ್ಕೂ ಮೀರಿ
ಶತಕಗಳ ಸಂಖ್ಯೆ ಬೆಳೆದುದು ತಿಳಿದುಬಂದಿದೆ. ಸಾಮಾನ್ಯವಾಗಿ ಸಂಸ್ಕೃತ ಕವಿಗಳು
ತಮ್ಮ ಶತಕಗಳನ್ನು ಸಮವೃತ್ತಗಳಲ್ಲಿ ಹೇಳುತ್ತ ಬಂದರು. ಮುಂದಿನ
ಕವಿಗಳಿಗೆ ಅದೇ ಮಾರ್ಗವಾಗಿ ಪರಿಣಮಿಸಿತು. ಕನ್ನಡಕವಿಗಳು ಸಹ ಮೊದ-
ಮೊದಲು ವೃತ್ತಗಳಲ್ಲಿಯೇ ಶತಕಗಳನ್ನು ಬರೆಯಲಾರಂಭಿಸಿದರು. ಮುಂದೆ
ಬಂದ ಕವಿಗಳು ಈ ಸಂಪ್ರದಾಯವನ್ನು ಮುರಿದು ಕಂದ, ಷಟ್ಪದಿ, ತ್ರಿಪದಿ,
ಸಾಂಗತ್ಯ ಮುಂತಾದ ಛಂದೋವಿಧಾನಗಳಲ್ಲಿ ಶತಕರಚನೆ ಮಾಡತೊಡಗಿದರು.
ವಿಷಯಸ್ಪಷ್ಟತೆಗೆ ಒಂದೊಂದು ಶತಕದಲ್ಲಿ ನೂರರಿಂದ ನೂರಿಪ್ಪತ್ತೈದರವರೆಗೆ
ಪದ್ಯಸಂಖ್ಯೆ ಬೆಳೆದರೂ ತಪ್ಪಲ್ಲವೆಂದು ಬಗೆದು ಹಾಗೆ ಮಾಡಿ ತೋರಿದರು.
ಗೆ ಅಲ್ಲಿ ಹೆಚ್ಚು ಅವಕಾಶವಿರಬೇಕೆಂದು ಪ್ರತಿಪಾದಿಸಿದರು. ಕೆಲವರಂತೂ
ತಮ್ಮ ಮತಪ್ರಚಾರಕ್ಕಾಗಿಯೇ ಶತಕಗಳನ್ನು ರಚಿಸಿದುದು ಸ್ಪಷ್ಟವಾಗಿ

ಕಂಡುಬರುತ್ತದೆ. ಒಟ್ಟಿನಲ್ಲಿ ಸರ್ವಮತೀಯರೂ ಶತಕಸಾಹಿತ್ಯವನ್ನು ಮೆಚ್ಚಿ-
ಕೊಂಡುದು ಗಮನಾರ್ಹವಾಗಿದೆ.

ಶಂಕರೇಶ್ವರಶತಕವನ್ನು ರಚಿಸಿದ ಕವಿ ಶಂಕರದೇವ. ಈ ಶತಕದಲ್ಲಿ
ಎಲ್ಲಿಯೂ ತನ್ನ ಹೆಸರನ್ನಾಗಲಿ, ಕಾಲವನ್ನಾಗಲಿ ಹೇಳಿಕೊಂಡಿಲ್ಲ. 'ಗುರು
ಶಂಕರೇಶ್ವರಾ' ಎನ್ನುವ ಅಂಕಿತ ಮಾತ್ರ ಪ್ರತಿಯೊಂದು ಪದ್ಯದ ಅಂತ್ಯದಲ್ಲಿ
ಸ್ಪಷ್ಟವಾಗಿ ಬಂದಿದೆ. ಈ ಅಂಕಿತಕ್ಕೆ ತೀರ ಸಮೀಪವಾಗಿ ಇನ್ನೊಂದು ಅಂಕಿತ
ವುಳ್ಳ ಒಂದು ಕೃತಿ 'ಶಂಕರದೇವರ ಕಂದ' ಎಂಬುದು. ಅದರ ಅಂಕಿತ
'ಪ್ರಸನ್ನಶಂಕರಲಿಂಗ' ಎಂದಿದೆ. ಅದು ಕಂದದಲ್ಲಿದ್ದು ನೂರಿಪ್ಪತ್ತು ಪದ್ಯಗ
ನ್ನೊಳಗೊಂಡಿದೆ. ಭಾವ, ಭಾಷೆ, ವಿಷಯ, ಶೈಲಿ—ಈ ದೃಷ್ಟಿಯಿಂದ ಅ
ಲೋಕಿಸಿದರೆ ಶಂಕರೇಶ್ವರಶತಕ ಮತ್ತು ಶಂಕರದೇವರ ಕಂದ ಇವೆರಡೂ ಕೃ
ಗಳು ಒಬ್ಬ ಕವಿಯಿಂದಲೇ ನಿರ್ಮಿತವಾಗಿರುವುದು ಸಾಧ್ಯವೆನಿಸುತ್ತದೆ ಮತ್ತು
ಷಡಕ್ಷರರಗಳೆ, ಭಕ್ತಿಬಿನ್ನಪರಗಳೆ, ವೀರಶೈವರಗಳೆ, ಮೈದುನ ರಾಮನ ರಗ
ಪ್ರಸಿದ್ಧವಾಗಿದ್ದು ಇವುಗಳ ಅಂತ್ಯದ ಕಂದಗಳು 'ಪ್ರಸನ್ನಶಂಕರಲಿಂಗ' ಎಂ
ಮುಕ್ತಾಯಗೊಂಡಿವೆ. ಈ ಸಾಮ್ಯವಿರುವುದರಿಂದ ಈ ರಗಳೆಗಳನ್ನೂ ಶಂಕ
ದೇವಕವಿಯೇ ರಚಿಸಿರಬೇಕೆಂಬುದಕ್ಕೆ ಆಧಾರಬಲ ಬರುತ್ತದೆ. ಇದು ನಿಜ
ವಾದರೆ ಶಂಕರದೇವಕವಿ ಕನ್ನಡದಲ್ಲಿ ಎರಡು ಶತಕಗಳನ್ನೂ ನಾಲ್ಕು ರಗ
ಗಳನ್ನೂ ನಿರ್ಮಿಸಿದ ಕವಿಯೆನಿಸಿಕೊಳ್ಳುತ್ತಾನೆ. ಆತನ ಶೈಲಿ ಶುದ್ಧ ನಡುಗನ್ನ
ಶೈಲಿ. ವೃತ್ತಕಂದಗಳ ರಚನೆಯಲ್ಲಿಯೂ ನಡುಗನ್ನಡ ಪದಪ್ರಯೋಗಗಳನ
ಅತ ಬಳಸಿಕೊಂಡಿದ್ದಾನೆ. ಹೀಗಾಗಿ ಆತನು ಬಾಳಿದ ಕಾಲ ಇತ್ತೀಚಿನದೆಂಬು
ಸ್ಪಷ್ಟವಾಗಿದೆ ಕ್ರಿ.ಶ. ೧೬೨೦ರ ಸುಮಾರಿಗೆ ಶಂಕರದೇವ ಇರಬೇಕೆಂದು ಕ
ಚರಿತ್ರೆಕಾರರು ಊಹಿಸಿದ್ದಾರೆ. ಆ ಮಾತನ್ನು ಅಲ್ಲಗಳೆಯಲು ಸಾಕಷ್ಟು ಆಧಾ
ಗಳು ಸದ್ಯಕ್ಕೆ ದೊರೆತಿಲ್ಲ.

ಗುರುಶಂಕರೇಶ್ವರಶತಕವನ್ನು ಶಂಕರಶತಕವೆಂದು ಕರೆಯುವುದು ರೂ
ಯಲ್ಲಿದೆ. ಈ ಶತಕದಲ್ಲಿ ಬಂದಿರುವ ಪದ್ಯಗಳು ಸಂಸ್ಕೃತ ಸಮವೃತ್ತಗಳಾಗಿ
ಕವಿ ಶತಕಾರಂಭದಲ್ಲಿ ಭಕ್ತಿಪ್ರಿಯನಾದ ಶಿವನನ್ನು ಸ್ತುತಿಸಿ ಸರ್ವರಿ
ಆತನಿಂದ ಅಭಯಪ್ರಸಾದ ದೊರೆಯಲೆಂದು ಹಾರೈಸುತ್ತಾನೆ. ಮನುಷ್ಯ
ದೊರೆಯುವುದೇ ದುರ್ಲಭ. ದೊರೆತಾಗಲೇ ಭವವನ್ನು ನೀಗಿ ಮುಕ್ತಿಯ
ಸಾಧಿಸುವ ಹಂಬಲ ಆತನಿಗೆ ಆಗಬೇಕು. 'ನಾನಾರು' ಎಂಬುದರ ಅ
ಮೂಡುತ್ತಲೇ ಈ ದೇಹ ತಾನಲ್ಲವೆಂಬುದು ಸ್ಪಷ್ಟವಾಗಿ ಹೊಳೆಯುವುದು.
ಅನಿತ್ಯದೇಹದಿಂದ ಆಗಬೇಕಾದುದೇನು ? ದೇಹವಿಕಾರ ಕೈಬಿಟ್ಟರೆ ಹೆಚ್ಚಾ
ತ್ತದೆ. ಅದಕ್ಕೆ ಜೀವ ಭ್ರಮೆಗೊಂಡು ನಿಜಾನುಭವಕ್ಕೆ ನಿಲ್ಲದೆ ಹೋಗುತ್ತ
ಹೀಗಾಗಿ ಜೀವಕಾಯಗಳೆರಡೂ ಅಸತ್ಯಮಯವೆನಿಸಿಕೊಂಡು ನಿಲ್ಲುತ್ತ

ವನ್ನು ನೆಚ್ಚಲಾಗದು; ಇವುಗಳ ಶುದ್ಧಿಗೆ ಮುಖ್ಯವಾಗಿ ಬೇಕಾದುದು ಪರಶಿವನ ಭಾರ್ವ ನಿಜಪ್ರಸಾದಸುಖ. ಆತ್ಮನು ಅದನ್ನು ಪರಮಾತ್ಮನಿಂದ ಪಡೆಯಲು ಪಜಿಸಬೇಕು; ಶಿವಾರ್ಚನೆಯೇ ಆತನ ನಿತ್ಯಕಾರ್ಯವಾಗಬೇಕು. ಜನ್ಮಜಾಡ್ಯ ರಿಯುವುದಕ್ಕೆ ಅದೊಂದೇ ಹಾದಿ.

ಕಾಮ ಕ್ರೋಧ ಮೋಹ ಲೋಭ ಮದ ಮಾತ್ಸರ್ಯಗಳು ಆತ್ಮನಿಗೆ ರಮವೈರಿಗಳು. ಅವು ಅಂತರಂಗದಲ್ಲಿದ್ದು ಮಿತ್ರತ್ವದ ವೇಷದಲ್ಲಿ ಶತ್ರುವಾಗಿ ತ್ಮನನ್ನು ಬಂಧಿಸಲು ಯತ್ನಿಸುತ್ತವೆ. ಜೀವಹಂಸನಿಗೆ ಗೊತ್ತಾಗದಂತೆ ಮದ ಗಾಳಿ ಬೀಸುತ್ತದೆ; ಕೋಪದ ಮೋಡ ಮುಸುಗುತ್ತದೆ. ಲೋಭ-ಭದ ಮಿಂಚು ಸಂಚರಿಸುತ್ತದೆ. ಮೋಹದ ಮಳೆ ಸುರಿಯಲಾರಂಭಿಸು ದೆ. ಮದದ ಸೋನೆ ಜಿನುಗುತ್ತದೆ. ಮತ್ಸರದ ಗುಡುಗು ಕೇಳಿಬರುತ್ತದೆ. ರ್ಷಾಕಾಲ ಆತ್ಮನಿಗೆ ದುಷ್ಕಾಲವನ್ನುಂಟುಮಾಡಿ ಸಂಸಾರದ ಹುದಲಲ್ಲಿ ಳುತ್ತದೆ. ಇವುಗಳ ಕೈಯಲ್ಲಿ ಆತ್ಮ ಹೇಗೆ ಪಾರಾಗಬೇಕು ? ಪರಮಾತ್ಮನ ರುಣಕಟಾಕ್ಷವೊಂದೇ ಇವುಗಳ ನಾಶಕ್ಕೆ ಕಾರಣವಾಗಬಲ್ಲುದು. ಅಂತರಂಗ ದ್ಧಿಗೆ ಇದೊಂದೇ ಮುಖ್ಯಸಾಧನ.

ಅಷ್ಟಾವರಣಗಳು ಸಾಧನಭಕ್ತಿಗೆ ಸೋಪಾನಗಳು. ಅವು ಅಂತರಂಗ ನ್ನೂ ಬಹಿರಂಗವನ್ನೂ ಶುದ್ಧಗೊಳಿಸುತ್ತವೆ. ಶರಣನ ಹೃದಯ ಸ್ಫಟಿಕ ಷ್ಟು ಸ್ವಚ್ಛ. ಆತ ನಡೆದೊಡೆ ಭೂಮಿ ಪಾವನ; ಆತ ನುಡಿದೊಡೆ ಕೇಳಿದವರ ಸ್ಮನಿವಾರಣ. ಆತನನ್ನು ಒಮ್ಮೆ ಕಂಡವನೇ ಕೃತಾರ್ಥ. ಶರಣನು ಕಾರಣ ಹಿ, ಕರುಣಾಶ್ರಯ, ನಿಜಾತ್ಮ, ಸಂಸ್ಕಾರಿ, ಸಧರ್ಮಿ, ಶುಚಿ, ಶುಭೋದಯ ತ್ವಚಿಂತನೆ, ಸಹಜಪ್ರವರ್ತನೆ, ಮಹೇಶ್ವರಕೀರ್ತನೆ ಶರಣನ ಸಲ್ಲಕ್ಷಣ ಈ ಕ್ಷಣ ಆತನಲ್ಲಿ ತೋರಬೇಕಾದರೆ ಗುರುವಿನ ಕೃಪೆ, ಹರನೊಲವು ಮುಖ್ಯ. ವು ದೊರೆತವನೇ ಶರಣ. ಅವರ ಮಾರ್ಗವೇ ಸಹಜ ಮಾರ್ಗ. ಆತನ ನುಭವವೇ ಶಿವಾನುಭಾವ.

ಅಳಿಯುವುದು ಅಂಗ; ತಾನುಳಿಯುವುದು ಶಿವಲಿಂಗ. ಅಂಗಲಿಂಗವೆರಡೂ ನ್ನವೆನಿಸಿವಾಗ ಜಗತ್ರಯ ತೋರುತ್ತದೆ. ಪ್ರಪಂಚ ಸಾಗುತ್ತದೆ ಅವೆರಡೂ ದಾದಾಗ ಅದಾವುದೂ ಇಲ್ಲ. ಪ್ರಪಂಚವೇ ಶೂನ್ಯ. ಎಲ್ಲೆಲ್ಲಿಯೂ ಶೂನ್ಯ. ವೇ ಆತ್ಮ ಪರಮಾತ್ಮರ ಅನುಸಂಧಾನ, ಲಿಂಗಾಂಗಸಾಮರಸ್ಯ. ಇವೆಲ್ಲ ್ಯಾಪಾರಕ್ಕೂ ಆ ಶೂನ್ಯವೇ ಕಾರಣ. ಅದನ್ನೇ ಲಿಂಗಲೀಲೆಯೆಂದು ಕರೆಯು ಗುವುದು. ಇವೇ ಮೊದಲಾದ ವಿಷಯ ಶಂಕರೇಶ್ವರಶತಕದಲ್ಲಿ ಮನೋಹರ ಗಿ ಹೆಚ್ಚು ಸ್ಪಷ್ಟವಾಗಿ ಬಂದಿರುವುದನ್ನು ಅರಿಯಬಹುದಾಗಿದೆ.

ಶಂಕರಕವಿಯ ಶೈಲಿ ಪೆರ್ದೊರೆಯಂತೆ ಹರಿಯುತ್ತದೆ. ಆ ರಭಸದಲ್ಲಿ ವು ತಪ್ಪು ತಲೆದೋರುವುದೂ ಸಹಜ. ಎಡೆವಾಯ್ದುಬಂದ ಒಂದೆರಡು

ದೋಷ ಈ ಕೃತಿಯಲ್ಲಿ ಬಂದರೂ ಕಡೆತನಕ ಬಂದ ಲೇಸಿಂಗೆ ನಾವು ತ ರಾಗಲೇಬೇಕು. ಪ್ರಾಸ, ಛಂದ, ಅನ್ವಯ, ಅರ್ಥಗಳಿಗೆ ಊನೆ ಬರಬಾ ದಂದೇ ಕವಿ ಕೃತಿನಿರ್ಮಿಸುತ್ತಾನೆ. ಪ್ರತಿಭೆಯು ಕಾವು ಏರಿದಾಗ ಅದೆಲ್ಲ ಮರೆ ಹೋಗುತ್ತದೆ. ಆ ತಪ್ಪು ಒಪ್ಪೆಂದೇ ನಾವು ಹೇಳಬೇಕು. ನೂರು ತಪ್ಪಿದ್ದ ಅದೊಂದು ಮಹಾಕಾವ್ಯ ಎನ್ನುವವರ ಜೊತೆಗೆ ಒಂದು ತಪ್ಪಿದ್ದರೂ ಅ ಕಾವ್ಯವೇ ಅಲ್ಲ ಎನ್ನುವವರೂ ಇದ್ದಾರೆ. ಅದು ವಾದಗ್ರಸ್ತ ವಿಷಯ. ಶಂಕ ಕವಿಯ ಭಕ್ತಿಯು ಓಘ ಹಿರಿದು, ಭಾವ ಹಿರಿದು. ಅದನ್ನು ಒಂದೊಂದು ಸ ಭಾಷೆ ಬೆನ್ನುಹತ್ತಿ ದಣಿಯುತ್ತದೆ. ಭಾವಭಾಷೆಗಳ ಸಂಗಮವಾಗುವ ವಿರಳ. ಆದರೆ ಕವಿ ಗೆದ್ದ; ವಿಮರ್ಶಕ ಬಿದ್ದ.

ಗುರುಶಂಕರೇಶ್ವರಶತಕ ವೃತ್ತದಲ್ಲಿ ರಚಿತವಾಗಿದೆ. ವೃತ್ತನಿರ್ಮಿತಿಗೆ ಕ ಬಳಸಬೇಕಾದುದು ಸಂಸ್ಕೃತಭೂಯಿಷ್ಠ ಹಳಗನ್ನಡ ಶೈಲಿ. ಆದರೆ ಶಂಕರ ವೃತ್ತನಿರ್ಮಿತಿಗೇ ನಡುಗನ್ನಡಶೈಲಿಯನ್ನು ಬಳಸಿಕೊಂಡಿದ್ದಾನೆ. ಹೀಗಾ ವೃತ್ತಕ್ಕಿರಬೇಕಾದ ಬಿಗುವು ಇಲ್ಲದೇ ಹೋಗಿದೆ. ಆದರೂ ಸಲಿಲವಾ ಹರಿಯುವ ವೃತ್ತದ ಓಟ ಎಲ್ಲಿಯೂ ಕುಗ್ಗಿದಂತೆ ಕಾಣುವದಿಲ್ಲ. ಇ ಪ್ರತಿಭೆಯ ಲೀಲಾಜಾಲ. ಇಂತಹ ಒಳ್ಳೆಯ ಕೃತಿ ಶುದ್ಧವಾಗಿ ಪ್ರಕ ವಾಗುವುದು ಅವಶ್ಯವಾಗಿತ್ತು. ಅದನ್ನು ಮನದಂದು ಕನ್ನಡ ವಿಭಾಗದ ಹ ಪ್ರತಿ ಭಂಡಾರದಲ್ಲಿರುವ ಮೂರು ಪ್ರತಿಗಳ ಸಹಾಯಪಡೆದು ಈ ಶತಕವನ ಶುದ್ಧಗೊಳಿಸಿದ್ದೇವೆ. ಈ ಕಾರ್ಯದಲ್ಲಿ ನೆರವಾದವರನ್ನು ಹೃದಯತುಂ ನೆನೆಯುತ್ತೇವೆ.

★ ಸಂಪಾದಕ

ಗುರುಶಂಕರೇಶ್ವರ ಶತಕ

ಶ್ರೀಯುಗಜಾಮನೋವನವಸಂತ ನಿರಂತರ ನಿರ್ವಿಕಾರ ಪ್ರ-
ತ್ಯಯುತ ಕೀರ್ತಿ [1]ದಿಗ್ಭರಿತ[1] ಮೂರ್ತಿ [2]ನಿಜಾಶ್ರಿತ ಭಕ್ತಭಾವನಾ-
ಪ್ರಿಯ[2] ಮದೀಯದೇವ [3]ಮಾಯದೇವ[3] ಭಯಾಭಯದೇವ ದೇವತಾ
ರಾಯ[4] ವಿಮಾಯ ಸರ್ವಗತಕಾಯ ನಮೋ ಗುರುಶಂಕರೇಶ್ವರಾ ॥ ೧ ॥

ರಪುರುಷಾರ್ಥಮಂ ಪರಹಿತಾರ್ಥಮನಗ್ಗಳ ಪಾರಮಾರ್ಥಮಂ
ರುಷಮಲಿಂಗನಿಷ್ಠೆಯ ಮಹಾಗಣಶುಷ್ಟಿಯನೀಶಗೋಷ್ಠಿಯಂ
ರುಚಿರ ಸತ್ಯಶಾಂತಿದಮೆಯಂ ಕ್ಷಮೆಯಂ ಅಭಯಪ್ರಸಾದಮಂ
ರುಣಿಸು ದೇವ ಮೂಜಗದ ಜೀವರಿಗಂ ಗುರುಶಂಕರೇಶ್ವರಾ ॥ ೨ ॥

ತ್ತಣ ದೇಹಮೆತ್ತಣ ಮನೋಭ್ರಮೆಯೆತ್ತಣ ಮಾಯೆಮೋಹ ತಾ-
ತ್ತಣ ನಿದ್ರೆನೀರಡಿಕೆಯೆತ್ತಣ ಕಾಮವಿಕಾರ ನೋಡು ನೋ-
ತ್ತಣ ಪುಣ್ಯಪಾಪ ಸುಖದುಃಖದ [5]ಮೋಲಭಿಲಾಷೆ[5]ಯೆತ್ತಣೆಂ-
ತ್ತ ಮನುಷ್ಯಜನ್ಮವೆನಗಾಯ್ತು ಕಟಾ ಗುರುಶಂಕರೇಶ್ವರಾ ॥ ೩ ॥

ನಿದಱಿಂದೆ ಸಿದ್ಧಿ ತನಗೇನಿದಱಿಂದಭಿವೃದ್ಧಿ ಜೀವನಿಂ-
ನಿದಱಿಂದೆ ಪುಣ್ಯಗತಿಯೇನಿದಱಿಂ [6]ಮತಿಯಾದುದಕ್ಕಟಾ[6]
ನತರ ಪ್ರಪಂಚವನಡರ್ದು ತೊಡರ್ದು ನಿರರ್ಥದುರ್ಥವಾಂ-
ಲೋನಿಧಿಯಲ್ಲಿ ಬೀಳುತಿದೆ ನೋಡಿದೆಯಾ ಗುರುಶಂಕರೇಶ್ವರಾ ॥ ೪ ॥

ಸುಕುಳ ಮೂತ್ರ ತುಂಬಿ ತುಳುಕಾಡುವ ದೇಹಮನಿತ್ಯದೇಹಮಂ
ಮುಸುಕಿರುವಸ್ಥಿಯಸ್ಥಿಯ[7] ಮುಸುಂಕಿದ ಮಾಂಸವ ಹೇಯಮಾಂಸಮಂ
ಮುಸುಕಿದ ರಕ್ತ ರಕ್ತವ ಮುಸುಂಕಿದ ಚರ್ಮಶರೀರಕಾಗಿ ನಾಂ
ಶುಷತಿ ನಿಮ್ಮನೇಕೆ ಮಱೆವೆಂ ತೊಱೆವೆಂ ಗುರುಶಂಕರೇಶ್ವರಾ ॥ ೫ ॥

ನು ಸಹೆಯೆಂಬೆನೇ ತನುವಿದೆನ್ನ ವಿಕಾರಿ ಮನಸ್ಸಹಾಯಮೆಂ-
ನೆ ಮನವೊಬ್ಬ ಹೊತ್ತು ನೆಲೆಗೊಳ್ಳದು ನಿಮ್ಮೊಳು ಹೋಗ[8]ಲೆನ್ನ[8] ಜೀ-
ನ ಸಹೆಯೆಂಬೆನೇ ಭ್ರಮಿತಜೀವ ನಿಜಾನುಭವಕ್ಕೆ [9]ನಿಲ್ಲದಿ[9]-
ನಗೆ ಸಹಾಯಮಿಲ್ಲ [10]ಸಹೆ[10] ನೀನೆ ಕಣಾ ಗುರುಶಂಕರೇಶ್ವರಾ ॥ ೬ ॥

ಶುಭತರ (ಸ) ೩. ಮಹಾಮುನಿಜಾಲ ಪುಂಗವ । ಪ್ರಿಯ (ಮ) ೪. ಗುರುದೇವ (ಸ)
ಗೇಯ (ರ) ೫. ಮೋಲಣನೀಕ್ಷ್ಣ (ಮ) ೬. ಮತಿಗೆಟ್ಟಿನಕ್ಕಟಾ (ಮ) ೭. ಮುಸುಕಿದ
ಮುಚ್ಚಿಯ (ರ) ೮. ಬಿನ್ನ (ಸ, ರ) ೯. ಸಜ್ಜನ (ಮ, ರ) ೧೦. ಸಖ (ಮ).

ಜೀವನೊಳಾದ ಸಿದ್ಧಿ ಯೆನಗಾವುದು ಕಾಯದೊಳಾದ ಸಿದ್ಧಿ ತಾ-
ನಾವುದು ಜೀವಕಾಯಮೆರಡುಂ ಸಟೆ ನಾನಿವನಂಜೆ ನಿಮ್ಮ ನಿ-
ರ್ಭಾವ ನಿಜಪ್ರಸಾದಸುಖಮೊಂದನೆ ಹಾರುವೆ ಸಾರುವೆಂ ಮಹಾ-
ದೇವಯಿಂದೆನ್ನ [1]ಸನ್ನುತ[1] ಗುಣಾನುಮತಂ ಗುರುಶಂಕರೇಶ್ವರಾ ||

ಆರಕೆ ಸತ್ಪುತ್ರದಾರಕೆಯುದೇಕಳಂತಿರ್ದಪರೆಂಬ ಗಾದೆಯಂ-
ತಾರಕೆಗಾಗಿ ಪೋಪ ತನುವೀ ತನುವಂ ಪೊರೆವೊಂದು ಬುದ್ಧಿಯಿಂ-
ದಾರಕೆಯೆನ್ನದಾರಕೆಯ ಬೇಡಿ ವೃಥಾ ಮುಖ ಬಾಡಿ ಸಾವೆನಾಂ
ಕ್ರೂರನಲಾ ವಿಚಾರಕತಿದೂರನಲಾ ಗುರುಶಂಕರೇಶ್ವರಾ ||

ಪರರನೆ ಕಾಡಿ ಜೇಡಿ ಪರಲೋಕಕೆ ನಾಂ ಧನನಾಗಿ ಪೋದೆನೀ
ಶರಿರಮಿದೆನ್ನದೆಂದು ಪೊರೆವೆಂ ಪೊರೆದುಂ ಕಡೆಗೆನ್ನ ಸಂಗಡಂ
ಶರಿರಮಿದೇನು ಬರ್ಪುದೆ ವೃಥಾ ವರದರ್ಪಣಮುಂ ಬಿಸುಟ್ಟು ನಾಂ
ನೆರೆ ಪುರಿಯೋಡನಾಂತೆ ಸುಡಲೆನ್ನಱಿವಂ ಗುರುಶಂಕರೇಶ್ವರಾ ||

ವೇಷವ ತಾಳ್ದು ದೇಶವ ತೊಳಲ್ದು ಪರಾನ್ನದೆ ಬಾಳ್ದು ಕಂಡರಂ
ಹೇಸದೆ ಬೇಡಲಂತವರು ನೋಡಿ ನಗಲ್ [2]ಮೊಗ[2] ಬಾಡಿ ಜೀವಿಪೊಂ-
ದಾಸೆಯ ಪಾಶದೊಳ್ ಕೆಡಹಿಯೆನ್ನ ಲಘುತ್ವವ ಮಾಡಿದಲ್ಲಿಯಾ-
ದ್ಯೈಸಿರಿಯೇನು ತಂದೆ ನಿಮಗಿಂತದಱಿಂ ಗುರುಶಂಕರೇಶ್ವರಾ ||

ಸಲೆ ದಿವಿಜೇಂದ್ರನಾಗಲಿ ನರೇಶ್ವರನಾಗಲಿ ನಾಗರಾಜನಾ-
ಗಲಿ ಇವರಿಂದೆ ಬಲ್ಲಿದರೆ ತಾವ್ ಕಡೆಗಾಗಲಿ ನಿತ್ಯದೇಹಮಂ
ತಳೆದ ಮಹಾತ್ಮರಾಗಲಿ ಶರೀರವನಾಂತ ಬಳಿಕ್ಕೆ ಸಾವುದೇ
ನೆಲೆ ಬಱಿದೇಕೆ ಗರ್ವಿಸುವರೋ ಮನುಜರ್ ಗುರುಶಂಕರೇಶ್ವರಾ ||

ತೆಱ[3]ಹೊಱ[3] ಸಂಕಸೋದಿಗೆ ಸರಗಿಪ್ರ ಮಾನ್ಯಗಳೈಸೆ ನಾವು ಕಂ-
ದಱಿಯೆವು ಸಾವು ಮಾನ್ಯದ ಮನುಷ್ಯರನೀ ಜಗದಲ್ಲಿ ಬೇಡ ನೀ-
ನಱಿಯೆ ಸದಾ ಶಿವಾರ್ಚನೆಯ ಮಾಡೆಲೆ ಜೀವನೆ ಮಾಡದಿರ್ದಡೇಂ
ಪಱಿವುದೆ ಜನ್ಮಜಾಡ್ಯಮಿದು ಸತ್ಯ ಕಣಾ ಗುರುಶಂಕರೇಶ್ವರಾ ||

---

೧. ಸನ್ಮತ (ರ) ೨. ಮನ (ನು)

ಲಿ ಧರ್ಮಿಯೆನೆಲಿ ದಯಾಪರಯೆನೆಲಿ ಭಕ್ತವತ್ಸಲಾ
ಲಿ ಜಾತಯೆನೆಲಿಯಜಾತಯೆಂದೆಲ್ಲಿಯು ದಾದುಗಕ್ಕೆ ತಂ-
ಸಿಯೆನ್ನ ನೋಂಕಿದಪೆ ನಾಂ ಪೊಱಲಾರ್ಪೆನೆ ಕಾಮುಭಾರಮಂ
ತಿಬೇಗದಿಂದಲಿಳುಹಾ [1]ತಿಳುಹಾ[1] ಗುರುಶಂಕರೇಶ್ವರಾ || ೧೩ ||

ಜರ ಮೋಜಿನೊಳ್ಸಿಯು [2]ಪತ್ತಿಸಿ[2] ಮಾನಮಾನನಕ್ಕೆ ಸು-
ದ ತೊಡೆದಿಂದ್ರುವೈರಿಗಳ ಟಂಬಕನಾಡಿಸಿ ಕಾಡುಮಂಗಜಾ-
ದ ಗೆಲಲಾಂ ಸಮರ್ಥನೆ ದಿಟಂ ಪರಮಾರ್ಥನೆ ನೀನೆ ಬಂದು ನ-
ವನಿವನೆಂದು ಕೈವಿಡಿದೊಡಾನುಳಿವೆಂ ಗುರುಶಂಕರೇಶ್ವರಾ || ೧೪ ||

ಂ ಮದೇಂದ್ರಿಯಂ ಕವಿದು ಕತ್ತಲೆಯಾಗಿದೆ ಕಾಡೆ ಕಾಡೆನೀ-
ಂ ಜಗಂಗಳಂ ಪೊಱೆವ ದೇವನ ತೋಱುವರಿಲ್ಲವಾರ್ಗಿದಂ
ುವೆ ಕೊಂದು ಕೂಗುತಿದೆ ಬೆಂದ ಮನೋಭ್ರಮೆಯೆನ್ನ ಹುಯ್ಯಲಂ
ಂ ದಯಾಳುಮೂರ್ತಿ ಶಿವನೇ ಭವನೇ ಗುರುಶಂಕರೇಶ್ವರಾ || ೧೫ ||

ಯೊಳಾದೊಡಂ ಪರಮದೇಶಿಕರಾಯನೊಳಾದೊಡಂ ಮಹಾ-
ಗಳೊಳಾದೊಡಂ ಸಟೆಯನೇ [3]ಬಯಸುತ್ತಿದೆ[3] ಬೆಂದ ಜಿಹ್ವೆ ಜ-
ಜಱದೈದೆ ಎನ್ನೊಳಗೆ ನಾನೆ ನಿರಂತರ ಸತ್ಯ ಹುಟ್ಟುತೈ-
ಹುಸಿಗಾಱನಾಱ ಪೊರೆಯೋ [4]ಪೊರೆಯೈ[4] ಗುರುಶಂಕರೇಶ್ವರಾ || ೧೬ ||

ಡದಟ್ಟು [5]ಮೆಟ್ಟಿ[5] ನಿಜ ದೇಹವನಾವರಿಸಿತ್ತು ಬೇಕುಬೇ-
ವರಿಲ್ಲ ತನ್ನಹರೆ ತನ್ನ ಕೊಲಲ್ ಕೊಱಚಾಡಿ ಕಾಡಿ ಬೇ-
ವ ಮಾಡುತಿರ್ದಪುದು ದುರ್ವಿಷಯಾಗ್ನಿಯಿಂದಂ [6]ತ್ವದೀಯ[6] ಪಾ-
ಬುವ ಬೇಗ ತಂದೆಱೆದು ನಂದಿಸು ನೀಂ ಗುರುಶಂಕರೇಶ್ವರಾ || ೧೭ ||

ದ ಗಾಳಿ ಬೀಸಿ ನಿಜ ಕೋಪದ ಮೋಡ ಮುಸುಂಕೆ ಲಾಭಲೋ-
ಷಮಿಂಚು ಸಂಚರಿಸಿ ಮೋಹದ ಮರ್ಮಳೆ ಪೊಯ್ದು ಪಿಱಿ ನಾ-
ದಧಾರೆ ಕಲ್ಪಱದು ಮತ್ಸರಮೋಘರವಂ ತೊಡರ್ದಿರ-
ಮಿಗೆ ಜೀವಹಂಸ [7]ಗಱಿವಿಲ್ಲ[7] ಕಣಾ ಗುರುಶಂಕರೇಶ್ವರಾ || ೧೮ ||

ಹುಟ್ಟು (ಮ) ೨. ಸಚೆಸಿ (ಸ) ೩. ಬಳಸುತ್ತಿದೆ (ಸ್ತ, ರ) ೪. ಪೊರೆಯೆಂ (ಸ)
ಟ್ಟಿ (ಮ) ೬. ತದೀಯ (ರ) ೭ ಗಿರವಿಲ್ಲ (ಮ).

ಐದು ಮುಖಂಗಳಾಗಿ ಕವಿದೈದು ಮದೇಂದ್ರಿಯ ಸುತ್ತಿ ಮುತ್ತಿ ಮೇ-
ಲ್ವಾಯ್ದು ತೊಡರ್ದು ಜೀವನಡರ್ದಳಿವುತ್ತಿರೆಯೆಂತು ಬಾಳ್ವೆನೀ-
ರೈದು ಕರಂಗಳಿಂದಭಯಮಿತ್ತು ಕಟಾಕ್ಷದಿ ನೋಡು ನಿನ್ನ ಮೂ-
ಜ್ಜೈದು ವಿಲೋಚನಂಗಳೊಳು ಸತ್ಕೃಪೆಯಿಂ ಗುರುಶಂಕರೇಶ್ವರಾ || ೧೯ ||

ಭಾಪುರೆ ಭಾಪುರೇ ಮದನಬಾಣದ ಗಾಢದ ಕಾಟವಾವನಂ
ಪಾಪಕೆ ನೂಂಕದಾವನ [೧]ಕುಮಾರ್ಗಕೆ[೧] ಸೇರಿಸದಾವನಾತ್ಮಸಂ
ದೀಪದ [೨]ಮಾಳ್ಕೆ[೨] ನಂದಿಸದು ನಿರ್ಮ್ಮವನಾಗಿಯೆ [೩]ಕಾಮತಾಪಕಿ[೩]
ನ್ನಾಪೆನೆ [೪]ಕಾಪಥಕ್ಕೆ[೪] ಗುರಿಮಾಡದಿರೈ ಗುರುಶಂಕರೇಶ್ವರಾ || ೨೦ ||

ಕಾವಲಿಕೋಟಿಯೊಳ್ ಕನಕದರ್ಪಣಮುಂಟೆ ಕುಲಾಲವಾಸದೊಳ್
ಪೂವಿನ [೫]ದಿಂಡೆಯುಂಟೆ[೫] ಪೊಸತಾವರೆವನಂಗಳೊಳುಂಟೆ ಕಲ್ಪವೃ-
ಕ್ಷಾವಳಿಯೆನ್ನೊಳುಂಟೆ ಸಹಜಾನುಭವಸ್ಥಿತಿಯೆಂತದಕ್ಕೆ ನಾಂ
ಗಾವಿಲನೆಂದು ಕೈಬಿಡದೆ ಪಾಲಿಸು ನೀಂ ಗುರುಶಂಕರೇಶ್ವರಾ || ೨೧ ||

ಗ್ರಾಮದ ಸಾರವತ್ತಲಿರು ನೀಂ ಬರಬೇಡವಪೇಯಮೆಂದದಂ
ಆ ಮಹಿತಾಬ್ಧಿ ನಿಂದಿಸದೆ ತಾನೊಳಕೊಂಡಿತು ತಂದೆ ಪೊರ್ದಿದೆಂ
ಕಾಮವಿರೋಧಿ ನಾಂ ಬಡವನಾದೊಡೆ ನೀಂ ಬಡವಲ್ಲ ರಕ್ಷಿಸ-
ಯ್ಯೋ ಮತಿಹೀನನಂ ಮದಡಮಾನಿಸನಂ ಗುರುಶಂಕರೇಶ್ವರಾ || ೨೨ |

ಸ್ನೇಹದೊಳಾದೊಡಂ ಪರುಷ[೬]ಲೋಹವ[೬]ನದ್ದೊಡಮಲ್ಲಿ ಲೋಹಮು-
ಸ್ನೇಹದೊಳಾ[೭]ದೊಡೇಂ[೭] ಪರುಷ ಕಬ್ಬುನಮಂ ಬಿಗಿದಪ್ಪೆ ಭಾವಿಸಲ್
ಲೋಹಮೊ ಹೇಮಮೋ ತಿಳಿಯೆ ನಿರ್ಮ್ಮಲವಿಂ ಮುಳಿಸಿಂ ಕೃತಾರ್ಥನಾಂ
ಮೋಹವಿದೂರನಿಂತಿದಕೆ ಸಂಶಯಮೇ ಗುರುಶಂಕರೇಶ್ವರಾ || ೨೩ ||

ಆ ಹರಸಂಹರಪ್ರಹರಯೆಂದವನೆಯ್ದಿದನಂತೆ ಮುಕ್ತಿಯಂ
ಮೋಹದೊಳಾವಗಂ ಹರಹರಾ ಎನುತಿರ್ಪವನೆಯ್ದಿರ್ಪನೇ
ಸಾಹಸದಿಂದೆ ಸದ್ಗತಿಯನೇತಱ ಮಾತದು ಹೋಗಲಿನ್ನು ಸಂ-
ದೇಹಮೆ ನಿತ್ಯಮುಕ್ತ ಶಿವಭಕ್ತ ಕಣಾ ಗುರುಶಂಕರೇಶ್ವರಾ || ೨೪ ||

---

೧. ಮರ್ಗತಿಗೆ (ರ) ೨. ರೂಪ (ಸ) ೩. ಕಾಮಪಾತಕಿ (ಮ) ೪. ಮುಷ್ಪಥಕ್ಕೆ (ರ)
೫. ಗಿಂಡಿಯುಂಟೆ (ಸ) ೬. ಕಬ್ಬುನ (ವ) ೭. ವಗಂ (ರ)

ಶ್ವಾನನ ಭೀತಿಯಿಂ ಪರಿದುಬಂದ ವರಾಹ ಮಹೇಶ್ವರಾಲಯ
[1]ಸ್ನಾನದ[1] ಕೂಪದೊಳ್ ಮುಳುಗಿ ಸತ್ತು ಸರಾಗದೊಳೈದಿದಂತೆ ಸು-
ಜ್ಞಾನಗಣತ್ವಮಂ ನಡೆಯೊಳಾ ನುಡಿಯೊಳ್ ದೃಢಭಾವಿಯಾದೊಡಂ
ಭೂನುತ ಭಕ್ತನೈದದಿಹನೇ ಗತಿಯಂ ಗುರುಶಂಕರೇಶ್ವರಾ || ೨೫ ||

ಆಡುವ ಮಕ್ಕಳೆಲ್ಲ [2]ನೆರೆದೊಲ್ದು[2] ಶಿವಾ[3]ಲಯವ ಬೇಗ[3] ಧೂಳಿನೊಳ್
ಮಾಡಿ ಮಹೇಶ್ವರರ್ಗೆ ನೆಱೆವಂದಿಸಿ ಬಾಲಕರಂದು ಮೋಕ್ಷಮಂ
ಕೂಡಿದರಂತೆ ನಿಮ್ಮ ನಿಜಪಾದವನರ್ಚಿಸಿಯೊಮ್ಮೆಯಿಮ್ಮೆ ಕೊಂ-
ಡಾಡಿದ ಭಕ್ತಗೇನರಿದು [4]ಮುಕ್ತಿಪದಂ[4] ಗುರುಶಂಕರೇಶ್ವರಾ || ೨೬ ||

ಅಪಹರಿಸಲ್ಕನಂ ಬಯಸಿ ಚೋರನದೊಂದು ಶಿವಾಲಯಕ್ಕೆ ಬಂ-
ದುಪಕರಣಂಗಳಂ ತಡಕಿ ಕಾಣದೆ ನಂದುವ ದೀಪಮಂ ನಿಮಿ-
ರ್ಚೆ ಪಟುವ ಮಾಡಿ ದೇವವರಸಂಪದಕೈದಿದನಂತೆ ದೇವ ನಿ-
ಮ್ಮ ಪದವನರ್ಚಿಸುತ್ತಿಹನೆ ಭಕ್ತ ಕಣಾ ಗುರುಶಂಕರೇಶ್ವರಾ || ೨೭ ||

ಶ್ವೇತನೃಪಂ [5]ಪರಾಂಗನೆಯುಪೋಗುತೆ[5] ಬಿದ್ದರಳಂ ಮಹೇಶಸಂ-
ಪ್ರೀತಿಯಿದೆಂದ ಮಾತಿಗೆ ಮಹಾಗಣಸಂಪದವಾಯಿತಂತೆ ಮೋ-
ಹೇತಱ ಮಾತು ನಿಮ್ಮಡಿಯರ್ಚಿಸುವಾತನೆ ರುದ್ರಮೂರ್ತಿ ವಿ-
ಖ್ಯಾತಿಯ ಕೈಯ ಕಂಕಣಕೆ ಕನ್ನಡಿಯೇ ಗುರುಶಂಕರೇಶ್ವರಾ || ೨೮ ||

[6]ಹರಗಣೆ[6] ತಪ್ಪಿತೆಂದಿರುಳು ಚಿಂತಿಸುತಿರ್ದ ನರಂಗೆ ನೋಡಿರೇ
ಹರಗಣಸಂಪದಂ ದೊರಕಿತಂತೆ ನಿರಂತರ ಭಕ್ತಿಯುಕ್ತಿಯಿಂ
[7]ಹರಹರಯೆಂದು[7] ಹಂಬಲಿಸುವಾತನ ನೂತನ ಸನ್ಮಹಾತ್ಮೆಯಂ
ಉರಗನರರ್ಗೆ ಪೇಳಲರಿದೆನ್ನಳವೇ ಗುರುಶಂಕರೇಶ್ವರಾ || ೨೯ ||

ಮಸಣದೊಳೊರ್ವ ನೀರಡಸಿ ಸಾವೆಡೆಯಲ್ಲಿ ಸರಾಗದಿಂದೆ ಬಂ-
ದು ಶುನಕ ಬೂದಿಯೊಳ್ ಪೊರಳಿ ಸಾವನ ಭಾಳವ ಮೆಟ್ಟಿ ಪೋಗಲಾ
ಭಸಿತವ ಕಂಡು ಕಾಲನವರಂಜೆ ಗಣತ್ವಕೆ ಸಾರ್ದನಂತೆಯೆ-
ಯ್ದಿಸಬಹುದೇ ವಿಭೂತಿ ಶಿವ ನಿಮ್ಮಡಿಯಂ ಗುರುಶಂಕರೇಶ್ವರಾ || ೩೦ ||

೧. ಸ್ನಾನದ (ರ) ೨. ನೆರೆದೊಂದು (ಮ) ೩. ಲಯಮೊಂದದ (ಸ) ೪. ಮುಕ್ತಿಪಥಂ(ರ).
೫. ಪಣ ಪ್ರಮದೆಗೊಯ್ಯುತೆ (ಮ) ೬. ಹರಗಣ (ರ) ೭. ಹರಹರನೆಂದು (ಸ)

ಅಕ್ಷಯುಮಪ್ಪ ಪೇರಡವಿಯೊಳ್ ಶಬರಂ ಶುನಕಂಗೆ ತಂದು ರು-
ದ್ರಾಕ್ಷೆಯ ಕಟ್ಟಲಾ ಶುನಕ ತನ್ನ ಕುಲಂಬೆರಸೈದಿತಂತೆ ಸಂ-
ಮೋಕ್ಷವ ನಿಚ್ಚ [1]ತಾಳ್ದನ[1] ಮಹಾತ್ಮೆಯದೆಂತುಟೊ ಪೇಳ್ವುದಿನ್ನು ಫಾ-
ಳಾಕ್ಷಗೆ ತೀರದೆನ್ನಲೆನಗೇನಳವೇ ಗುರುಶಂಕರೇಶ್ವರಾ ॥ ೩೧ ॥

ಅಕ್ಷರವೈದಱಲ್ಲಿಯೆ ಷಡಕ್ಷರದಲ್ಲಿ ವಿಭೂತಿಯಲ್ಲಿ ರು-
ದ್ರಾಕ್ಷೆಗಳಲ್ಲಿ ಲಿಂಗದಲಿ ಜಂಗಮದಲ್ಲಿ ಗುರುಪ್ರಸಾದ ಪಾ-
ದಾಕ್ಷಯತೀರ್ಥದಲ್ಲಿ ಮನಗಟ್ಟಿ ನಿರಂತರ ಬಾಳ್ವನಂಘ್ರಿಯಂ
ಈಕ್ಷಿಪೆನೆನ್ನ ಕಂಗಳ ಬಱಂ ಹಱಿಯಲ್ ಗುರುಶಂಕರೇಶ್ವರಾ ॥ ೩೨ ॥

ನಡೆದೊಡೆ ಭೂಮಿ ಪಾವನ ಮಹಾಶರಣಂ ಸಹಜಾನುಭಾವದಿಂ
ನುಡಿದೊಡೆ ಸರ್ವಜೀವಿಗಳ ಜನ್ಮನಿವಾರಣಮೊಮ್ಮೆ ನೋಡಿ ಕಂ-
ಡೊಡೆಯುವನೇ ಕೃತಾರ್ಥ ಕರಪಂಕಜ ಮಂಡೆಯ ಮೇಲೆ ಬಂದು ಬೀ-
ಳ್ದೊಡೆ ಕುಲಕೋಟಿಯೆಲ್ಲಕೆ ಸಮುದ್ಧರಣಂ ಗುರುಶಂಕರೇಶ್ವರಾ ॥ ೩೩ ॥

ಗಿರಿಗಳೊಳೆಲ್ಲ ಹೇಮಗಿರಿಯೇ ಹಿರಿಯಂ ತರುಕೋಟಿಯೆಲ್ಲಱೊಳ್
ಸುರತರುವೇ ಸದಾ ಹಿರಿದು ತಾರಗೆಯೆಲ್ಲಱೊಳಂ ಶಶಾಂಕನೇ
ಹಿರಿಯ ತಟಾಕವೆಲ್ಲಱೊಳು ವಾರಿಧಿಯೇ ಹಿರಿಯಂ ಮನುಷ್ಯರೊಳ್
ನಿರುಪಮಲಿಂಗಭಕ್ತನೆ ಮಹಾಹಿರಿಯಂ ಗುರುಶಂಕರೇಶ್ವರಾ ॥ ೩೪ ॥

ಕಾರಣದೇಹಿಯೆಂಬೆ ಕರುಣಾಶ್ರಯನೆಂಬೆ ನಿಜಾತ್ಮನೆಂಬೆ [2]ಸಂ-
ಸ್ಕಾರಿ ಸಧರ್ಮಿಯೆಂಬೆ[2] ಸಹಜಾನುಭವಾಗ್ರಣಿಯೆಂಬೆ ಸರ್ವಸಂ-
ಸಾರವಿದೂರನೆಂಬೆ ಶುಚಿಯೆಂಬೆ ಶುಭೋದಯನೆಂಬೆ ದುರ್ಭವೋ-
ತ್ತಾರಕನೆಂಬೆ ಸಂತತ ಶಿವಾರ್ಚಕನಂ ಗುರುಶಂಕರೇಶ್ವರಾ ॥ ೩೫ ॥

ಸಲೆ ಶತಕೋಟಿಜನ್ಮದೊಳು ಘೋರತಪಂಗಳ ಮಾಡಿದಲ್ಲದೀ-
ಸುಲಲಿತಲಿಂಗನಿಷ್ಠೆ ದೊರೆಕೊಳ್ಳದು ಸಂತತ ಲಿಂಗಪೂಜೆಯೇಂ
ಸುಲಭಮೆ ಕಂಡಕಂಡವರಿಗೇತಱ ಮಾತದು ಬೇಡ ಸುಮ್ಮನಿರ್
ತಿಳಿವೊಡೆ ವೀರಶೈವ[3]ದಳವೇನಣುವೇ[3] ಗುರುಶಂಕರೇಶ್ವರಾ ॥ ೩೬ ॥

---

೧. ನಾಂತನ (ಮ). ೨. ಸಂಸ್ಕಾರವಿಧರ್ಮನೆಂಬೆ (ಸ) ೩. ಸುಖಸಣ್ಣತುದೇ (ಸ, ಮ)

ನಡೆವೊಡೆ ಹಜ್ಜೆಯೊಳ್ ಮಡಿದ ಜೀವಿಗಳೆಲ್ಲಕೆ ಮೋಕ್ಷಸಂಪದಂ
ನುಡಿದೊಡೆ ಶಬ್ದಮಂ ಕಿವಿಯೊಳಾಲಿಸಿ ಕೇಳಿದ ಮಾನವರ್ಗೆ ಸೂ-
ರ್ಮಡಿ [1]ಗತಿ[1] ಭಾಪುರೆ ಶರಣನಾ ನಡೆಯಾ ನುಡಿ [2]ತಾನಿಹಕ್ಕೆ[2] ಬೆಂ-
ಬಿಡದೆ ಪರಕ್ಕೆ ನಿಚ್ಚಣಿಕೆಯಾದುದಲಾ ಗುರುಶಂಕರೇಶ್ವರಾ || ೩೭ ||

ಶರಣರ ಪುಣ್ಯವರ್ತನೆಯ ದೂರದೆ ಕೇಳಿದ ಜೀವಿಗಳ್ ಕೃತಾ-
ರ್ಥರು ನಡೆತಂದು ಮೂರ್ತಿಯ ನಿರೀಕ್ಷಿಸಿ ಕಂಡವರೇ ಅನೂನಧ-
ನ್ಯರು ನೆಜಿಸಾರ್ದು ಪಾದಜಲತೀರ್ಥವನಾಂತು ಪರಪ್ರಸಾದಮಂ
ಧರಿಸಿದ ಕಾರಣೀಕರವರೇ ಮುಕುತರ್ ಗುರುಶಂಕರೇಶ್ವರಾ || ೩೮ ||

ಈಶನ ಭಕ್ತನಾವೆಡೆಯೊಳಿರ್ದಪನಿರ್ದೊಡೆ ನಿಚ್ಚನಿಚ್ಚ ಕೈ-
ಲಾಸನಿವಾಸಮಾಯ್ತೊಡನೆ ಶಬ್ದಿಸುತಿರ್ದಪನಾರ ಕೂಡೆ ಸಂ-
ತೋಷವ ಮಾಡುತಿರ್ದಪನದಾರ ನಿರೀಕ್ಷಿಸುತಿರ್ದಪಂ ಮಹಾ-
ಪಾಶವಿಮೋಕ್ಷಮಾದುದವರ್ಗೆಲ್ಲರಿಗುಂ ಗುರುಶಂಕರೇಶ್ವರಾ || ೩೯ ||

ಬಣ್ಣಿಸಲೇನು ಲಕ್ಷತರುವೊಂದು ಸುರದ್ರುಮವಾಗಬಲ್ಲವೇ
ಸಣ್ಣ ತಟಾಕಬಾವಿನದಿಕೋಟಿಗಳೊಂದು ಸಮುದ್ರವಾಗಬಲ್ಲವಿ-
ಕ್ಕಣ್ಣಿನ ಬಣ್ಣ ಬಚ್ಚನೆಯ ಹೆಣ್ಣಿನ ದೈವಸಹಸ್ರಕೋಟಿ ಮು-
ಕ್ಕಣ್ಣ ಮಹೇಶಗೊಬ್ಬ ಗೆಣೆಯಪ್ಪುವೆ ಪೇಳ್ ಗುರುಶಂಕರೇಶ್ವರಾ || ೪೦ ||

ಹರಿಯಜರಿಂಗಸಾಧ್ಯವಹ ಮೂಱು ಪುರಂಗಳನೊಂದೆ ಬಾಣದಿಂ-
ದುರುಹಿದ ದೇವಕೋಟಿಗಳ ಹಿಂಗದೆ ನುಂಗುವ ಕಾಳಕೂಟಮಂ
ಕೊರಳಲಿ ತಾಳ್ದ ದೇವನ ಪದಾಬ್ಜಕೆ ಮಿಕ್ಕಿನ ಚುಕ್ಕಿದೈವಮಂ
ಸರಿಯೆನೆ ಬೆಂದ ಬಾಯ್ ಪುಳಿಯದಿರ್ಪುದೆ ಪೇಳ್ ಗುರುಶಂಕರೇಶ್ವರಾ || ೪೧ ||

ನೆಜಿಶಿವದೂಷಕರ್ಗೆ ಶಿವಪೂಜೆಯ ನಿಂದಿಸುವರ್ಗೆ ಭಕ್ತರಂ
ಜಜಿವ [3]ನರರ್ಗೆ[3] ಬರ್ಪ ಬಹುದೋಷವ ಪೇಳ್ವೊಡಜಂಗೆ [4]ಕಂಠಹ-
ತ್ತಜಿವಗೆ ಷಣ್ಮುಖಂಗೆ[4] ಫಣಿರಾಜಗೆ ತೀರದು ಪೇಳ್ವೊಡಾನದೇ
[5]ಜಜಿವನು[5] ಜಿಹ್ವೆಯೊಂದಜಿವನೆನ್ನಳವೇ ಗುರುಶಂಕರೇಶ್ವರಾ || ೪೨ ||

---

೧. ಸಳೆ (ಮು). ೨. ಬಿನ್ನಹಕ್ಕೆ (ಸ) ೩. ಜನರ್ಗೆ (ಸ) ೪. ರಾವಣಂ । ಗರಿಯೆ ಷಡಾನನಂಗೆ (ಮು) ೫. ಸರವನೊ (ಸ)

ಎಲ್ಲೆಡೆಯಲ್ಲಿ ವಾಗ್ಬಲುಮೆಯುಂ ಮೆಱೆದೊಂದು ವಿಕಾರಬುದ್ಧಿಯಿಂ
ಸೊಲ್ಲಿಗೆ ಸೊಲ್ಲನಾಂತು ಪರರಂ ತಲೆವಾಗಿಸಿ ತಾಪವರ್ಗಳಿಂ
ಬಲ್ಲವರಾಗಿ ಬಾಯ್ಬಡಿವ ಖುಲ್ಲ ನರಾಧಮರಾಪ ಪಾಪದೊಳ್
ಮಲ್ಲಳಿಗೊಂಬರೋ ತಿಳಿಯಲೆನ್ನಳವೇ ಗುರುಶಂಕರೇಶ್ವರಾ || ೪೩ ||

ಮನೆಮನೆಗುಂಟೆ ಪಾಯಸದ ಭಕ್ಷ್ಯವದೇತಱ ಮಾತು ತತ್ವಚಿಂ-
ತನೆ ಸಹಜಪ್ರವರ್ತನೆ ಮಹೇಶ್ವರಕೀರ್ತನೆ ಜನ್ಮಜಾಡ್ಯದೊಳ್
ಜಿನುಗುವ ಜೀವಿಗಳ್ಗೆ ದೊರೆಕೊಂಬುದೆ ನಾವದನಾಡಲೇಕೆ ನಿ-
ಮ್ಮ ನಿಜಕಟಾಕ್ಷವಾರನೆಡೆಗೊಂಡಿಹುದೋ ಗುರುಶಂಕರೇಶ್ವರಾ || ೪೪ ||

ಅಲ್ಲಿದನಿಲ್ಲಿದಂ ಶಿವನೆನುತ್ತೆಡೆಯಾಡಲದೇಕೆ ಭಾವಿಸಲ್
ಬಲ್ಲೊಡೆ ಬಳ್ಳದಲ್ಲಿ ಪುಳಲಲ್ಲಿ ಪಯೋಧರದಲ್ಲಿ [1]ಗಟ್ಟ[1] ಕ-
ಲ್ಲಲ್ಲಿ ಕೊರಂಟಿನಲ್ಲಿ ಫಣಿಯಲ್ಲಿ ಪೊದಳ್ದಿಹ ಪುತ್ತಿನಲ್ಲಿ ನೀ-
ವಲ್ಲದೆ [2]ಮತ್ತೆ[2] ಬೇಡಿದುದನಿತ್ತವರಾರ್ ಗುರುಶಂಕರೇಶ್ವರಾ || ೪೫ ||

ವೀರಮಹೇಶ್ವರಾಂಘ್ರಿಜಲತೀರ್ಥವ ಮಿಂದು ಕೃತಾರ್ಥರಾಗದ-
ಯ್ಯೋ ರಸರೂಪಗಂಧವಿಷಯಾಜಮುಖರ್ ಮತಿಗೆಟ್ಟು ದುಃಖದಿಂ-
ದೂರಿಸಿ ಕಾಲ್ಗೆ ಕಪ್ಪಡವ ಕಟ್ಟಿಕೊಳುತ್ತೆರ್ದೆಯಾಱಿ ಮೀಱಿ ಕೇ-
ದಾರಕೆ ಹೋಹ ಸಂಕಟಮಿದೇಂ ವಿಧಿಯೋ ಗುರುಶಂಕರೇಶ್ವರಾ || ೪೬

ಮಾರುತನಿಂದೆ ಮುಂಚುವ ತುರಂಗವನೊಲ್ಲದೆ ಕೀಳುಗತ್ತೆಯುಂ
ಸಾರುವನಂತೆ ನಿಮ್ಮಡಿಗಳಂ ನೆಱೆನಂಬದ ಹೀನಮಾನವರ್
ಮಾರಿಯ ನೊಂತು ತಮ್ಮ ಮನೆಮಕ್ಕಳವಾಯುಷ ಭಾಷೆಯೆಲ್ಲ [3]ಕ-
ಮ್ಮಾರಿಯು[3] -ತಂದುಕೊಂಡಪರದೇತಕೆ ಪೇಳ್ ಗುರುಶಂಕರೇಶ್ವರಾ || ೪೭

ಹಿಂಗವೆ ನಿಚ್ಚ ಹಾಲೆಱೆದು ಸಾಕಿದೊಡಂ ಫಣಿ ಸಾಕಿದಾತನಂ
[4]ತಿಂಗುಡಿ[4] ಮಾಡಿ [5]ಕಚ್ಚ[5]ದಿಹುದೆಂದದ ಕೊಂಡೆಮಗೇನು ಕಾರ್ಯ ಪೇಳ
ಜಂಗುಳಿದೈವಕೋಟಿಗಳ ನೋಂತೊಡೆ ನೋಂತ ಮನುಷ್ಯಪಾಪಿಯುಂ
ನುಂಗುವುವೈಸೆ ನುಂಗದವು ಬಿಟ್ಟಪವೇ ಗುರುಶಂಕರೇಶ್ವರಾ || ೪೮

೧. ನಟ್ಟ (ಮ). ೨. ಜೇಟಿ (ಮ) ೩. ಕುಮ್ಮಾರಿಯು (ರ) ೪. ಕೆಂಗುಡಿ
೫. ತಿನ್ನ (ಸ).

ೋಡಿರೆ ನೋಡಿರೇ ಮನೆಯ ಮುಂದಣ ಪಾಲ್ಗಡಲಂ ಬಿಸುಟ್ಟು ಜೋ-
ಾಡುವ ಬಂಜೆಗೋವ ಕಱೆದುಂಡಪೆನೆಂಬವನಂತೆ ಜಾಹ್ನವೀ-
ತೂಡನ ಪಾದಪಂಕಜವನೊಲ್ಲದೆ ಸಿಂಬಕಕೋಟಿದೈವಮಂ
ಾಡುವ ಮೂಢರಂ ಹಿರಿಯ ಹೇಸಿಗಳಂ ಗುರುಶಂಕರೇಶ್ವರಾ || ೪೯ ||

ುರದ ಮೊದಲ್ಗೆ ನೀರೆಱೆವರಲ್ಲದೆ ಶಾಖೆಗೆ ಬೇಱೆ ಕಟ್ಟೆಯಂ
ರಚಿಸಿ ಮತ್ತೆ ನೀರೆಱೆವರೇ ತನುರೂಪದ ಕೂಪದಿಂ ಚರಾ-
ತರಜಗಮೆಲ್ಲಮಂ ತಳೆದ ದೇವನ ಪೂಜಿಸುವರ್ಗೆ ಮಿಕ್ಕ ನಿ-
ರ್ಜರರನದೇಕೆ ಪೂಜಿಸುವ ಕೋಟಲೆ ಪೇಳ್ ಗುರುಶಂಕರೇಶ್ವರಾ || ೫೦ ||

ಾಯನ ತಂದು ತನ್ನ ಮನೆಯೊಳ್ ಸೆಱೆಯಿಟ್ಟವ ನಾಳಿಗೊಪ್ಪದಿಂ
ಾಯಸಪಂಚಭಕ್ಷ್ಯಗಳನಿಕ್ಕುವನಂತೆ ಶರೀರದಲ್ಲಿ ನಿ-
ರ್ಮಾಯಕ ಲಿಂಗಮಂ ಧರಿಸಿ ಮರ್ಕಟದೈವವ ನೋಂತ ಮಾನವರ್
ಾಯಕರೌರವಕ್ಕಿಳಿಯದಿರ್ಪರೆ ಪೇಳ್ ಗುರುಶಂಕರೇಶ್ವರಾ || ೫೧ ||

ಾತಕದೂರನಂ ಪ್ರಮಥನಾಥನ ಪಾದವನೊಲ್ಲದಕ್ಕಟಾ
ಪ್ರೇತಜ ದೈವಮಂ ಪಿರಿದು ನೋನುವ ಪೀಡೆ ಮನುಷ್ಯನಾಯನಿ-
ಸ್ಸೀ ತೆಗೆಯತ್ತ ನೋಡುವೊಡೆ ಲಿಂಗದ ನಿಷ್ಠೆಯುಳ್ಳ ನಿ-
ರ್ಜಾತರ ತೋಱೆ ಕರ್ಮಿಗಳ ತೋಱದಿರಾ ಗುರುಶಂಕರೇಶ್ವರಾ || ೫೨ ||

ೊಲೆಯ ಗಡೆಲ್ಲ ಪಕ್ಷಿಯೊಳೆ ವಾಯಸ ನೋಡಿರೆ ತಂದೆತಾಯ್ಗಳಂ
ೊಲೆಯರ ಮಾಡಿ ಮಾತೆಪಿತರೆಂದವ ಭಾವಿಸಿ ಕಾಗೆಗಳ್ಗೆ ಕೂ-
ಳನೊಲಿದಿಕ್ಕುವಾತ ಪಿತೃಕಂಟಕನೋ ಪಿತೃಭಕ್ತಿಯುಕ್ತನೋ
ಲಸದೆ ಪೇಳು ನೀನೆನಗಿದಂ ತಿಳಿಯಲ್ ಗುರುಶಂಕರೇಶ್ವರಾ || ೫೩ ||

ಗಳೆ ತಂದೆತಾಯಿಗಳ ಕಾಗೆಯ ²ಮಾಡಿದ² ತಂದೆತಾಯ್ಗಳಂ
ೀಗುರುವೆಂಬ ಭಾವವ ನಿರರ್ಥಕೆ ³ನೀಗಿದ³ ತಾತಮಾತೆಗಳ್
ಾಗೆಗಳಾಗಿ ಪೋದ ಬಳಿಕೇತಱ ತತ್ಪಿತೃಮಾತೃಭಕ್ತಿಯ-
ಯ್ಯೋ ಗಣನಾಥ ಮಾಣಿಸವರಜ್ಞತೆಯಂ ಗುರುಶಂಕರೇಶ್ವರಾ || ೫೪ ||

ನೊಳಿಯೂಳಿಗಂ (ರ) ೨. ಮಾಡುತೆ (ಸ) ೩. ನೀಗುತೆ (ಸ)

ತರುಕುಲಮಂತುಟಿಂತುಟೆನಬಪ್ಪುದೆ ಪಾವಕ ಪುಟ್ಟಿದಂದು ಗೋ-
ತ್ರರುಕುಲಮಂತುಟಿಂತುಟೆನಬಪ್ಪುದೆ ಲಿಂಗವು ಸೋಂಕಿದಂದು ಇಂ-
ತೆಂತಿವ ಭೇದಮಂ ತಿಳಿದುನೋಡಿ ಕುಲಭ್ರಮಿತರ್ ಮಹೇಶಭ-
ಕ್ತರ ಕುಲಮಂ ವಿಚಾರಿಸುವರೇತಕೆ ಪೇಳ್ ಗುರುಶಂಕರೇಶ್ವರಾ ||

ನೆಱೆ ಭವಿಭಕ್ತರೆಂಬವೆರಡೇ ಕುಲಂ ಪೇಱೆ ಕುಲಂಗಳಿಲ್ಲ ಗೋ-
ಳ್ಱೆ ಮರುಳೇ ವಿಚಾರಿಸದಿರಾ ಕುಲಮೀಕುಲಮೆಂದು ಭಕ್ತರಂ
ಕೆಱೆಯೊಳಗೇಕೆ ಕುಂಟೆಯನು ಕಟ್ಟುವೆ ಕಟ್ಟದಿರೆಂದು ಸಂತತಂ
ಮಱೆಯದೆ ಪೇಳಿ ಪೇಳಿ ಮಿಗೆ ಬೇಸತ್ತೆನಾಂ ಗುರುಶಂಕರೇಶ್ವರಾ ||

ಅಮಮ ಪವಿತ್ರವೆಂಬ ಕುಲಕಾಱದೆ ಭಕ್ತಕುಲಕ್ಕೆ ಸಾರ್ದ ಲಿಂ-
ಗಮ ನೆಱೆ ತಾಳ್ದು ಭಕ್ತರ ಕುಲಂಗಳನೇಕೆ[1] ವಿಚಾರಿಪರ್ ಮನೋ-
ಭ್ರಮಿತರು ತಮ್ಮ ಕೈಗಳೊಳು ತಮ್ಮಯ ಕಣ್ಣನೆ ಮುಚ್ಚಿಕೊಂಡು ತಾಂ
ಭ್ರಮಣೆಯೊಳಲ್ಲಿ ಗೋಂಟನೆಣಿಸುತ್ತಿಹರ್ಕೈ ಗುರುಶಂಕರೇಶ್ವರಾ ||

ಕಟ್ಟರಸೆಲ್ಲಿ ಬಿಟ್ಟೊಡದು ಪಟ್ಟಣಮೆಂಬರೊ ಹಳ್ಳಿಯೆಂಬರೋ
ನೆಟ್ಟನೆ ಲಿಂಗ ಬಂದು ಕರಪೀಠವ ಸಾರ್ದ ಬಳಿಕ್ಕಲಾತನಂ
ಪುಟ್ಟಿದ ಭಕ್ತನೆಂಬರೊ ಕುಲಾಧಮನೆಂಬರೊ ದೇವ ನಾನಿದಂ
ಪುಟ್ಟಿಸೆನೆಲ್ಲಿಯುಂ ತಿಳಿಯಪೇಳೆನಗಂ ಗುರುಶಂಕರೇಶ್ವರಾ ||

ದ್ವಿಜ ಧರಿಸಿರ್ದೊಡಂ ದ್ವಿಜವಿಭೂತಿಯು ಮಹಾದ್ವಿಜಲಿಂಗಮಾಗಿಯುಂ-
ತ್ಯಜ ಧರಿಸಿರ್ದೊಡಂತ್ಯಜವಿಭೂತಿಯುದಂತ್ಯಜಲಿಂಗಮಾದುದೇಂ
ಗಜಬಜೆ ಬೇಡವೆಲ್ಲರ ಕರೀಟದ ಲಿಂಗವಿಭೂತಿಯೊಂದೇ ಕೇಳ್
ನಿಜಪ ಕುಮಿಷ್ಟರ್ಗೆ ಕಡುತ್ತ್ಯವರೆಲೇ ಗುರುಶಂಕರೇಶ್ವರಾ ||

ಕುಲಮದ ವಿದ್ಯೆರೂಪಧನಯೌವನರಾಜ್ಯತಪೋಮದಂ ಮಹಾ-
ಬಲಮದಮೆಂಬುವೆಂಟು ಮಿಗೆ ಟೆಂಟಣಿಸುತ್ತಿವೆ ಕಾಣೆ ಕಾಣೆ ಕ-
ತ್ತಲೆ ಘನ ನಿಮ್ಮ ಸತ್ತ್ವರುಣಮೆಂಬರುಣೋದಯಮಂ ಮನಕ್ಕೆ ಮಾ-
ಡೆಲೆ [2]ನತಸಿಂಧುವೇ ದೀನಬಂಧುವೆ ನೀಂ ಗುರುಶಂಕರೇಶ್ವರಾ ||

---

೧. ನಯ್ಯೊ (ರ) ಭ್ರಮಣತೆಯಲ್ಲಿ ಗೋಂಟನೆಯೊಳೆಯುಂಬಪ್ಪೆ (ಮ) ೨. ನತಜ
 ಕೃಪೆಯ ಸಿಂಧುವೆ (ಸ)

ನೊಳಿದಾತನೇ ಕುಲಜ ನೀನೊಳಿದಾತನೇ ಮಂಗಳಾತ್ಮಕಂ
ನೊಳಿದಾತನೇ ಶರಣ ನೀನೊಳಿದಾತನೇ ಲೋಕವಂದಿತಂ
ನೊಳಿದಾತನೇ ಪರಮಪಾವನ ನೀನೊಳಿದಾತನೇ ಸದಾ
ನೆಯುವಂ ಅವಂ ತಿಳಿಯೆ ನೀನೆ ಕಣಾ ಗುರುಶಂಕರೇಶ್ವರಾ || ೬೧ ||

ನ್ನೊಲವಿಲ್ಲದಾತನೆ ಕುಲಾಧಮ ನಿನ್ನೊಲವಿಲ್ಲದಾತನೇ
ರ್ಗಯುಧರ್ಮಿಯಾತ್ಮಭವಿಯುಂಗಮಹಾಭವಿ ಕೋಟಿದುರ್ಜನಾ
ನ್ನೊಲವಿಲ್ಲದಾತನೆಯಿಹಕ್ಕೆ ಪರಕ್ಕೆ ವಿರುದ್ಧಬದ್ಧಕಂ
ನ್ನೊಲವಿಲ್ಲದಾತನೆ [1]ಕಳಾವಿಕಳಂ[1] ಗುರುಶಂಕರೇಶ್ವರಾ || ೬೨ ||

ಣರ ಮಾರ್ಗವೇ ಸಹಜಮಾರ್ಗವದೆಂತಿರಲಂತದೇ ಮಹಾ-
ಶರಣಾರ್ಥಿಯೆಂದವರಿಗೆಂಬವನೇ ಕೃತಕೃತ್ಯನಣ್ಣ ಮು-
ರಮುದವೆತ್ತು ತಾನವರನಾಡುತೆ ನೋಡುತಮಿರ್ದ ಮಾನವಂ
ಕವ ತನ್ನ ತಾ ಕರೆದುಕೊಂಡ ಕಣಾ ಗುರುಶಂಕರೇಶ್ವರಾ || ೬೩ ||

ತ್ತದ ಡೊಂಕು ಹಾವಿಗೆ ಮಹಾಸಸಿನಂ ಹೊಸ ಹುಳ್ಳಿಯೊಂದು ಡೊಂ-
ತ್ತರಿರ್ದ ವಾತಸಹಿಗಂ ಸಸಿನಂ ಶಿವಭಕ್ತರೆನಿಂತಿರಲ್[2]
ತ್ತಜವ್ವೆರಿಗಂ ಸಸಿನವಂತದ ಕಂಡು ನಿರರ್ಥ ನಿಂದಿಪರ್
ತ್ತಮನುಷ್ಯರೀಶ್ವರಹಮಾರ್ಜಕರಂ ಗುರುಶಂಕರೇಶ್ವರಾ || ೬೪ ||

ದೊಳಗೆಲ್ಲ ತನ್ನ ಜಜ್ಜೆಯುತ್ತಿಹರಂತದ ನೋಡನೆಲ್ಲಿಯುಂ
ಗಿವಿಂಗೆ ನಿಂದಿಸುತ್ತಿಹ ವೃಥಾ ಪೆಜಿರಂ ನಿಜ ಸೋಡಿಕೊಳ್ಳ ತ-
ಲ ನೊಣಂಗಳಂ ನೊಣವ ಸಾರಿಕೆಯುಂಬಗಲಿಂಗೆ ಸೋಹುವಾ-
ಗತಿ ಯಾವುದೋ ತಿಳಿಯಲಾಸಜ್ಜಿಯಿಂ ಗುರುಶಂಕರೇಶ್ವರಾ || ೬೫ ||

ಟ ಕಂಥಸೂತ್ರದೊಳಗಾಡುವ ಬೊಂಬೆಯನೊಂದ ಕಂಡಿದೇಂ
ರ್ಕಟನೇಕಸಿಷ್ಟ ಗುಣದಾಟವನಾಡಿದುದೆಂದು ನೋಟಕರ್
ಬಯಲ್ಗೆ ನಿಂದಿಸುವರೇಕೆಯದಾಡಿತೆ ತನ್ನ ಬುದ್ಧಿಯಿಂ
ನೆ ಪೇಳು ನೀನೆನಗಿದಂ ತಿಳಿಯಲ್ ಗುರುಶಂಕರೇಶ್ವರಾ || ೬೬ ||

---

[1] ...ಳಂ ವಿಕಳಂ (ಸ) [2] ರಿಂಬವರ್ (ಮ)

ಶೂಲಿಕಪಾಲಿಯಾಡಿಸಿದ ಮಾಳ್ಕೆಯೊಳಾಡುವರೈಸೆ ಜೀವಿಗಳ್
ಮೇಲೆಯು ಮಾರ್ಗದಿಂ ಸಹಜಮಾರ್ಗದೊಳಾಡುವರಲ್ಲವನ್ಯರಂ
ಆಳಿಗೊಳಲ್ಕೆ ದೋಷವಹುದೆಂದಿಳೆಯೊಳ್ ಮಿಗೆ [೧]ಪೇಳ್ದರನ್ಯರೇ[೧]
ಕೇಳರು ಮೂರ್ಖರಂ ತಿಳುಹಿ ಬೇಸತೆನಾಂ ಗುರುಶಂಕರೇಶ್ವರಾ || ೬೭ |

ಆವುದನಲ್ಲವೆಂಬೆನದೆಂಬೆನಹುದಾವುದನೀ ಜಗತ್ರಯಂ
ದೇವರ ದೇವ ನಿಮ್ಮ ನಿಜಲೀಲೆಯು ಮಾಲೆಯು ಕಂಭಸೂತ್ರದೊಳ್
ತೀವಿದ ಬೊಂಬೆಯಾಗಿದೆಯಿದಕ್ಕೆ ನಗೇತಱ ವಿಸ್ಮಯಾಸ್ಪದಂ
ಕೋವಿದಲಿಂಗಮಧ್ಯಜಗ ತಾನೆಯಲಾ ಗುರುಶಂಕರೇಶ್ವರಾ || ೬೮ |

ಅಳಿವುದೆಯಂಗ ತಾನುಳಿವುದೇ ಶಿವಲಿಂಗ ನಿಜಾನುಭಾವದೊಳ್
ತಿಳಿವೊಡೆಯಂಗಲಿಂಗವೆರಡಾಗಿ ಜಗತ್ರಯ ತೋಱಿತಾಗಿ ನಾಂ
ಮುಳಿವೆನದಾರ್ಗೆ ಮೋಹಿಸುವೆನಾರ್ಗೆ [೨]ಮಹೇಶಸುರೂಪ[೨] ನೀನೆ ನಿ-
ನ್ನೊಳು ಜಗವಾ ಜಗಂಗಳೊಳು ನೀನೆಯಲಾ ಗುರುಶಂಕರೇಶ್ವರಾ || ೬೯ |

ಮಾಡಿದರಾರು ಕಾಷ್ಠದಲಿ ಬೊಂಬೆಯ ಮಾಡಿಯದಕ್ಕೆ ಸೂತ್ರಮಂ
ಹೂಡಿದರಾರು ಹೂಡಿಯದನಾಡಿಸುತಿರ್ದಪರಾರೆನುತ್ತದಂ
ನೋಡದೆ ಕಾಡಕಾಷ್ಠದ ಅಚೇತನರೂಪಿನ ಬೊಂಬೆ ತನ್ನ ತಾ-
ನಾಡಿದೆನೆಂಬುದೇನು ಅಱಿವೋ ಮಱವೋ ಗುರುಶಂಕರೇಶ್ವರಾ || ೭೦

ನಡೆದಪೆನೆಂಬ ಚೇತನಮುದಾರದು ಚಿತ್ರವಿಚಿತ್ರಶಬ್ದಮಂ
ನುಡಿದಪೆನೆಂಬ ಚೇತನಮುದಾರದು ನಿಮ್ಮ ನಿಜಾಜ್ಞೆ ವಿಶ್ವದೊಳ್
[೩]ನಡೆನುಡಿಯಾಗಿ[೩] ವರ್ತಿಸುವುದೈಸೆ ಚರಾಚರಪಾಶಜೀವಿಗಳ್
ನಡೆಯಲು ಬಲ್ಲರೇ ನುಡಿಯಬಲ್ಲರೆ ಪೇಳ್ ಗುರುಶಂಕರೇಶ್ವರಾ || ೭೧

ಶಿವಶಿವ ಭೂಮಿಸೂತ್ರದೊಳು ಬೊಂಬೆಯನಾಡಿಸುವಾಟಕಾಱನಾ
ಜವನಿಕೆಯಾಚೆ ನಿಂದು ಪಿಡಿದಾಡಿಸುವಂತೆ ತನುತ್ರಯಂಗಳೆಂ-
ಬವ ಮಱೆಗೊಂಡುಯೆನ್ನ ಗುಣಮೂಱಱೊಳಾಡಿಪ ನಿನ್ನ ಮೂರ್ತಿಗಾ-
ಪ್ಯವ ತಿಳಿಯಲ್ ವಚೋಮನಕಭೇದ್ಯ ಕಣಾ ಗುರುಶಂಕರೇಶ್ವರಾ || ೭೨

---

೧. ಹೇಗೆ ಹೇಳ್ದೊಡಂ (ಸ) ೨. ಸ್ವರೂಪನಿರೂಪ (ರ)
೩. ನಡೆನಡೆಯಾಗಿ (ರ)

ಅಡಗಿದೊಡಂ ಮುಖಂ ಮಱೆಸಿಕೊಂಡೊಡವಾಗಳೆ ಮಾಯುವಾದೊಡಂ
ಬಿಡುವರೆ ನಂಬಿದಾತ್ಮಜರು ತನ್ನ ತನುತ್ರಯದಲ್ಲಿ ದೇವ ನಿ-
ಮ್ಮಡಿಗಳು ಮೂರ್ತಿಗೊಂಡಿರಲು ಮೂರ್ತಿಯ ತೋಱದೇಕೆ ತೋಱದಿ-
ರ್ದೊಡೆ ಬಿಡುವಂತುಟಾಂ ಮರುಳನಲ್ಲ ಕಣಾ ಗುರುಶಂಕರೇಶ್ವರಾ || ೭೩ ||

ಸದ್ದೊಡೆ ತದ್ದೊಡಂ ಕೆಡಹಿ ಯೊದ್ದಡೆ ಆಯುವ ನಡ್ಡ ಲಿಕ್ಕಿ ಕೊಂ-
ಡಿದ್ದೊಡೆ ಬಂಟನೊಳ್ ಮುಳಿದು ಮೋಱೆಯ ಗಂಟಿಡುತಂತೆ ಮೌನಗೊಂ-
ಡಿರ್ದೊಡೆ ನಿಮ್ಮನಾಂ ಬಿಡುವನೇ ಬಱದೇತಕೆ ಕಾಣದಂತೆ ನೀ-
ನಿರ್ದಪೆಯಿರ್ದೊಡಂಜೆನದು ಕಾರಣ ಪೇಳ್ ಗುರುಶಂಕರೇಶ್ವರಾ || ೭೪ ||

ಮಾಡಿದ ಹಾಂಗೆ ಮಾಡಿಸಿಕೊಳುತ್ತಿವನಿರ್ದಪನೆಂದು ಚಿತ್ತದೊಳ್
ನೋಡದಿರಯ್ಯ ಮುನ್ನೆನಗೆ ತೆತ್ತಿಗರುಂಟು ಮಹೇಶ ಹಿಂದೆ ನೀಂ
ಕಾಡಿಸಿದಂತೆ ಕಾಡಿದೊಡೆ ನಮ್ಮ ಪುರಾತನರಲ್ಲಿಯೆನ್ನ ಜೋ-
ಡಾಡಿದನೆಂದು ದುರ್ಜನಿಸಿ ಪೇಳುವೆನಾಂ ಗುರುಶಂಕರೇಶ್ವರಾ || ೭೫ ||

ನೆಱೆ ಭವದಲ್ಲಿ ಬಂಧಿಸಿಹನೆಂದು ವಿಕಾರದ ಬೇಗೆಯಿಂದೆ ಬೇ-
ಸಱಿಸಿಹನೆಂದು ಮತ್ಸರಕೆ ಮಾಱಿಹನೆಂದು ಶರೀರಮೋಹವೆಂ-
ಬುಱಿಯೊಳು ನೂಂಕಿ ನೋಡಿ ಕೊಱಚಾಡಿಸಿ ಕಾಡಿಹನೆಂದು ಬೇಡ ನೀ-
ನಱಿಯೆ ಮಹಾಗಣಂಗಳಿಗೆ ದೂಱುವೆನಾಂ ಗುರುಶಂಕರೇಶ್ವರಾ || ೭೬ ||

ಕ್ರೂರವಿಕಾರಮಂ ಪೊಱಿಸಿ ನೋಡಿ ನಗುತ್ತಿರಲೇಕೆ ದೇವ ಸಂ-
ಸಾರದ ಭಾರಮಂ ಹೊಱುವಡೆನ್ನಳವೇ ಹೊಱಲಾಱೆನಿನ್ನು ತಂ
ಜಾರಿಸ ಬೇಡ ದಂದುಗದ ಹೆಂದದ ಭಾರವನೆತ್ತಿ ಹೊತ್ತು ನೀಂ
ಭೋರನೆ ತಾಳ್ದು ನಿಂದೊಡಱಿಯಲ್ ಬಹುದೈ ಗುರುಶಂಕರೇಶ್ವರಾ || ೭೭ ||

ಒಡರನುತಾಪಚಿಂತೆಬಹುದುಃಖದರಿದ್ರನಿರೋಧಕಟ್ಟುಮು-
ಟ್ಟಡೆ ರಿಣರೋಗಸಂಕಟವನೆನ್ನಯ ಮೇಲಿಡಲೇಕೆ ದೇವನಾಂ
ಕಡೆಗವು ಬಂದೊಡಂತಹವಱ ಭಾರಮನೆಲ್ಲವ ನಿನ್ನ ಮೇಲೆ ತಂ-
ದಿಡುವೆನು ಬೇಡ ನೀನಱಿಯೆ ಸಾಱದೆನಾಂ ಗುರುಶಂಕರೇಶ್ವರಾ || ೭೮ ||

---

೧. ಪೊಯ್ದೊಡೆಯಾಸ್ಯವ (ಮ). ೨. ಂದು ಧಿಕ್ಕಾರಿಸ (ಮ)

ಎಳಗಱು ಕಣ್ಣಿಯೊಳ್ ಸಿಲುಕಿ ತಾಯನೆ ಚಿಂತಿಸುವಂತೆ ಹೆತ್ತ ತಾಯ[1]
ಹೊಲದೊಳಗಿರ್ದು ತನ್ನ ಕಱುವಂ ನೆನೆವಂತೆ ವಿಕಾರಪಾಶದೊಳ್
ಮುಳುಗಿ ನಿರಂತರಂ ಮೊಱೆಯನೆಯ್ದಿಸುವೆನ್ನೊಳು ಚಿತ್ತವಿತ್ತೆಲೈ
ನೆಲಸಿಹನೆಂದು ನಾನಱಿಯೆ ನೀನೆಮಗಂ ಗುರುಶಂಕರೇಶ್ವರಾ ॥ ೭೯ ॥

ಜನನಿಯು ಹಂಬಲಂತೆ ತನಯಂಗೆ ನಿರಂತರ ತಾಯಿಗಂ ತನೂ-
ಜನ ನೆನಹಿಲ್ಲವೇ ಭವದ ಬಂಧನ [2]ಕಾಱದೆ[2] ನಿಚ್ಚ ನಿಮ್ಮೊಳಾಂ
ಕನಲುವೆನ್ನೈಸೆಯಾಂ ನಿನಗೆ ನೀನೆನಗಂ ಪರಮೇಶ ಶಂಭು ನೀ-
ನೆನಗೆಯಭಿನ್ನ ನಾ ನಿನಗಭಿನ್ನ ಕಣಾ ಗುರುಶಂಕರೇಶ್ವರಾ ॥ ೮೦ ॥

ಇನಿಯನ ಕೂಡೆ ಮಾನಿನಿ ಕೆರಳ್ವಳಲ್ವಳು ವಲ್ಲಭಂ ನಿಜಾಂ-
ಗನೆ ಮನಸಿಂಗೆ ಬಾರದಿರೆ ಬಯ್ವನು ಪೊಯ್ವನದಕ್ಕೆಯಿಬ್ಬರೊಳ್
ಮನಮುನಿಸುಂಟೆ ನಾನೆ ಸತಿ ನೀನೆ ಮಹಾಪತಿ ಕೊಲ್ಲು ಕಾಯಿ ಕೇ-
[2]ಳಿನಿತಕೆ[2] ಬೇಸಱಂ ಮನದೊಳಾಂಪೆನೆ ನಾಂ ಗುರುಶಂಕರೇಶ್ವರಾ ॥ ೮೧ ॥

ತೆಂಗಿಗೆ ನೀರುತಿದ್ದಿವ ನರಂಗೆಳನೀರ್ಗಳು ಕೈಯ ಮೇಲೆ ಸಾ-
ಧ್ಯಂ ಗಡ ಲಿಂಗಜಂಗಮಕೆ [3]ನೀಡುವ[3] ಭಕ್ತಗೆ ಕೈಯ ಮೇಲೆ ಮೋ-
ಕ್ಷಾಂಗನೆ ಸಾಧ್ಯವಾಗದಿಹಳೇ ಶಿವಲಿಂಗದ ನಿಷ್ಠೆಯ ಸೇರಿದಾತನೇ
ಮಂಗಳರೂಪ ದೇವಕುಲದೀಪ ಕಣಾ ಗುರುಶಂಕರೇಶ್ವರಾ ॥ ೮೨

ನೆಱೆ ಗುರುಲಿಂಗಜಂಗಮಕೆ ಮಾಡದೆ ನೀಡದೆ ಜನ್ಮಪಾಶಮಂ
ಹಱಿವೊಡೆ ನೂಲದಾರಮೆ ವೃಥಾ ಹೆಳವಂ ತನಿವಣ್ಗೆ ಬಾತು [4]ಬಾ-
ಯುಱಿತೊಡೆ[4] ಬರ್ಪುದೇ ಬಱಿಯ ಮಾತಿನ ಮಾಲೆಯೊಳೇನು ಸಿದ್ಧಿ ನಾ-
ವಱಿಯೆವು ನೋಡಿಕೊಂಬುದು ಯಥಾರ್ಥಮನೇ ಗುರುಶಂಕರೇಶ್ವರಾ ॥ ೮೩

ಡಿಳ್ಳಿಯ ದಾರಿ ನೋಳ್ಪೊಡಣುಮಾತ್ರಮೆಲೇ ಹರಿಕಾರಗಲ್ಲಿಯುಂ
ಕುಳ್ಳಿತು ಮಾತ ಬಣ್ಣಿಪಗೆ ಸಾವಿರ ಯೋಜನ ಲಿಂಗಲಿಷ್ಠೆಯೊಂ-
ದುಳ್ಳ ಮಹಾನುಭಾವಿಗೆ ಸಮೀಪ ಕಣಾ ನಿಜಮೋಕ್ಷ ನಾವಿದಂ
[5]ಸೊಲ್ಲಲದೇಕೆ[5] ಸರ್ವರಿದ ಬಲ್ಲರಲಾ ಗುರುಶಂಕರೇಶ್ವರಾ ॥ ೮೪

೧. ತಾಪಪೆ (ಸ್ವ) ೨. ಳಿನಿಸಕೆ (ವ) ೩. ಮಾಡುವ (ಸ) ೪. ಜಾಯ್ದಿರೆದೊಡೆ (
೫. ಸೊಲ್ಲಿಪುದೇಕೆ (ಸ)

ದೇಹಮಿದಾರದೆನ್ನೊಳಿಹ ಜೀವಮಿದಾರದು ಹೇಮಕಾಮಿನೀ
ಮೋಹಮಿದಾರದನ್ನಜಲಕಾಂಕ್ಷೆಯದಾರದು ಕೋಪಚಿಂತೆಸಂ-
ದೇಹಮಿದಾರದಾನಱಿಯೆನೆನ್ನವೊ ನಿನ್ನವೊ ಪೇೞು ನಂದಿನೀ-
ವಾಹನ ಭಕ್ತಿಭಾವನ ಸರಾಗದೊಳಿಂ ಗುರುಶಂಕರೇಶ್ವರಾ ॥ ೮೫ ॥

ನವಜಲಗಂಧಪುಷ್ಪವಿಮಲಾಕ್ಷತೆಧೂಪ[1]ನಿವೇದ್ಯದೀಪವೆ-[1]
ನ್ನವೊ ಶಿವ ನಿನ್ನವೊ ಕೆಱೆಯ ನೀರನೆ ತಾಂ ಕೆಱೆಗೀವ ಬುದ್ಧಿಯಿಂ-
ದವೆ ಕೃತಕೃತ್ಯನಾಂ ಬಯಲಹಂಕೃತಿಯೀ ತನುವಿಂದೆ ನಿಮ್ಮನಾಂ
ವಿವರಿಸಲಾರೆ[2]ನೆಂದಱಿಯೆ[2]ನಾಂ ತಿಳುಹೈ ಗುರುಶಂಕರೇಶ್ವರಾ ॥ ೮೬ ॥

ಅಡಿಗಡಿಗೆನ್ನನಂದಲೆವ ಚಿತ್ತವನಟ್ಟಿಯೆ ಕಟ್ಟಿಮೆಟ್ಟಿ ನಿ-
ಮ್ಮಡಿಯೊಳು ಭಾವಮಂ.ನಿಲಿಸಿ ಭಕ್ತನ ಮಾಡಿ ಭವಕ್ಕೆ ನೂಂಕದಿ-
ರ್ದೊಡೆ ಶರಣೆಂಬೆನೆನ್ನೊಡೆಯನೆಂಬೆ ಜಗತ್ಪ್ರಭುವೆಂಬೆ ಸರ್ವಥಾ
ಮೃಡಶಿವನೆಂಬೆನೆಂದೊಡೆನಗಂಜಿಕೆಯೇ ಗುರುಶಂಕರೇಶ್ವರಾ ॥ ೮೭ ॥

ಪುರಹರನೆಂಬೆ ಪುಷ್ಪಶರಮರ್ದನನೆಂಬೆ ಪುರಾಣಕೋಟಿಯಂ
ಪೊರೆವವನೆಂಬೆ ಪೂರ್ವದ ಪುರಾತನ ಪುಂಗವರಂಗಸಂಗದೊಳ್
ನೆರೆವವನೆಂಬೆ ಪೊರ್ದಿದವರಂ ಪರಿಪಾಲಿಸುವಾತನೆಂಬೆ ಪೊನ್-
[3]ಗಿರಿಪತಿಯೆಂಬೆ[3] ಭೀತಿಯೆನಗೇನಿದಱಿಂ ಗುರುಶಂಕರೇಶ್ವರಾ ॥ ೮೮ ॥

ಉಡುಪತಿಮೌಳಿಯೆಂಬೆನುಮೆಯಂ [4]ಶರೀರಾರ್ಧದಿ[4] ತಾಳ್ದನೆಂಬೆ ಕ-
ಮ್ಮೃಡುವ ಶಿರಾಗ್ರದೊಳ್ ಧರಿಸಿಕೊಂಡಿಹನೆಂಬೆ ಫಣಾದಿನಾಥನಂ
ಮುಡಿದಹನೆಂಬೆ [5]ಕೋಟಿಶಿರ[5]ಮಾಲೆಯನಾಂತಿಹನೆಂಬೆನೆಂಬೆನೆಂ-
ದೊಡೆ ಕಡೆಗೆನ್ನ ಮಾಣಿಸುವವರಾರ್ ಜಗದೊಳ್ ಗುರುಶಂಕರೇಶ್ವರಾ ॥ ೮೯ ॥

ಜನನವಿದೂರನೆಂಬೆ ಜಗಮೂಱಱ ದೇವರ ತಾತನೆಂಬೆ ನ-
ಚ್ಚಿನ ಶರಣರ್ಗೆ ಮೆಚ್ಚಿ ಮರುಳಾಗಿಹನೆಂಬೆ ಶಿವಾರ್ಚಕರ್ಗೆ ತ-
ನ್ನನೆ ತವೆ ಸೂಱೆಗೊಟ್ಟು ಸತತಂ ಸುಖಿಯಾಗಿಹನೆಂಬೆನೆಂಬೆನೆಂ-
ಬೆನು ಬಿಡದೆಂಬೆನೆಂದವರ ಕೊಂದಪೆಯಾ ಗುರುಶಂಕರೇಶ್ವರಾ ॥ ೯೦ ॥

---

೧. ದೀಪನೈವೇದ್ಯವೆ (ಮು) ೨. ಸಂತುಮುಮನಾ (ಸ) ೩. ಗಿರಗಿನನೆಂಬೆ (ರ)
೪. ವಪುರರ್ಧದೆ (ಸ) ೫. ಶೀರ್ಷಶತ (ರ)

ಭೋಗನ ಹಿಂದುಗೊಂಡುರುಳಿ ಪೋದವನೆಂಬೆನು ದೈತ್ಯಬಾಣನಾ
ಬಾಗಿಲ [1]ಕಾಯ್ದು[1] ಭಕ್ತಿರಸಲಂಪಟನೆಂಬೆನು ನಂಬಿಯಣ್ಣಗಾ-
ಳಾಗಿಯೆ ಮೋಹಕುಂಟಣಿಗನಾದವನೆಂಬೆನು ಚನ್ನನೆಂಜಲಂ
ಭೋಗಿಪನೆಂಬೆನೆಂಬೆನದ ಮಾಣಿಪೆಯಾ ಗುರುಶಂಕರೇಶ್ವರಾ ॥ ೯೧ ॥

ಮಲರಿಪುವೆಂಬೆ ಮಂಗಳಮಹಾತ್ಮಕನೆಂಬೆ ಮಹೇಶನೆಂಬೆ ನಿ-
ರ್ಮಳ ನಿಜರೂಪನೆಂಬೆ ನತಬಾಂಧವನೆಂಬೆ ನಿಳಿಂಪಸಿಂಧುವಂ
ತಲೆಯೊಳು ತಾಳ್ದನೆಂಬೆ ತರುಣಾರುಣಕೋಟಿಸುತೇಜನೆಂಬೆನೈ
ಸಲೆ ಪೆಱತೊಂದನೆಂಬೆನಿದಕಂಜಿ ಕಣಾ ಗುರುಶಂಕರೇಶ್ವರಾ ॥ ೯೨ ॥

ನಿರ್ಲಯನೆಂದೆ ನಿರ್ಗಮಿತನೆಂದೆ ನಿರಾಶ್ರಯನೆಂದೆ ಪಾರ್ವತೀ-
ವಲ್ಲಭನೆಂದೆ ಬಲ್ಲವರ ಬಲ್ಲಹನೆಂದೆ ದರಿದ್ರಮಾನಿನೀ-
ದಲ್ಲಣನೆಂದೆ ಕಂಜಸಖನಂದನಭಂಜನನೆಂದೆನೆಂದೆನೈ
ಸಲ್ಲದೆ ಬೇಱೆ ದೈವ ಪೆಱತೆಂದೆನೆ ಪೇಳ್ ಗುರುಶಂಕರೇಶ್ವರಾ ॥ ೯೩ ॥

ಕುಂದದೆ ಭಕ್ತರಂಗದೊಳು [2]ತಾಂಗಿಹನೆಂದೆ[2] ಗಣಪ್ರಸಂಗದೊಳ್
ಸಂದಿಹನೆಂದೆ ಸತ್ಯರೊಳು ಸಾರ್ದಿಹನೆಂದೆ ನಿಜಾನುಭಾವದೊಳ್
ನಿಂದಿಹನೆಂದೆನೈಸೆ ಪದಿನಾಲ್ಕು ವಿಲೋಕಕೆ ಬೇಱೆ ದೈವಮುಂ-
ಟೆದೆನೆ ಜಾಗ್ರದೊಳ್ ಕನಸುನಿದ್ರೆ[3]ಯೊಳಂ[3] ಗುರುಶಂಕರೇಶ್ವರಾ ॥ ೯೪ ॥

ಅಲಿ-ಸರೋಜ ತುಂಬಿ ಶಿವಮೂರುತಿಯಿರ್ಕೆ ತೊಡರ್ದು ಸಂತತಂ
ನಾಲಗೆ ತುಂಬಿ ಪುಣ್ಯಮಯ ಕೀರುತಿಯಿರ್ಕೆ ಮನೋಲತಾಗ್ರದೊಳ್
ಶೂಲಿಕಪಾಲಿ ನಿಮ್ಮ ನೆನಹೇ [4]ನೆಲಸಿರ್ಕೆ[4] ಸದಾ ಕೃತಾರ್ಥನಾಂ
ಮೇಲಣ ಮುಕ್ತಿಗಿಕ್ತಿಯಿದಱಿಂ ಘನವೇ ಗುರುಶಂಕರೇಶ್ವರಾ ॥ ೯೫ ॥

ಮನದ ವಿಕಾರಮಾಗಿ ಕೆಲಸಾರಿತು ಭಕ್ತಿ ವಸಂತಕಾಲ ಸಂ-
ಜನಿಸಿತು ಲಿಂಗಮೋಹಲತೆಯುಂಕುರಿಸಿತ್ತು ನಿಜಾನುಭಾವ [5]ಮಾ-
ವಿನತರು[5] ಪೂತು ಕಾತುದು ಶುಭೋದಯುವಾದುದು [6]ಭಾಪು ಭಾಗ್ಯವೇ[6]
ದಿನದಿನಕಂ ಮಹಾಸುದಿನಮಾಯ್ತೆನಗಂ ಗುರುಶಂಕರೇಶ್ವರಾ ॥ ೯೬ ॥

---

೧. ಕಾಯ್ದು (ರ) ೨. ತಾನಿಹನೆಂಬೆ (ಸ); ಕೊಂಗಿಹನೆಂದೆ (ರ) ೩. ಗಳೊಳ್ (ಮ
೪. ನೆಲಸಲ್ಕೆ (ಸ) ೫. ಚೂತನಗವು (ಸ) ೬. ಭಾಗ್ಯವದಲಾ (ರ)

ಂಗದೊಳಾಡುತುಂ ಬಿಡದೆ ಲಿಂಗವ ಹಾಡುತೆ ಲಿಂಗದೇವನಂ
ಂಗದೆ ನೋಡುತಂ [೧]ಮುಜ್ಜಿದು[೧] ಲಿಂಗವ ಬೇಡುತೆ ಲಿಂಗದಲ್ಲಿಯಾ-
ಂಗನ ಮಾಡುತುಂ ನಿಜದೆ ಲಿಂಗವ ಕೂಡುತೆ ಲಿಂಗದಂಘ್ರಿತೀ-
ರ್ಥಂಗಳ ಸೂಡುತುಂ ಸುಕೃತಿಯಾದೆ ಕಣಾ ಗುರುಶಂಕರೇಶ್ವರಾ || ೯೭ ||

ುಡಿಗಳನೆತ್ತಿ ತೋರಣವ ಕಟ್ಟಿ ಸಮಾರ್ಜನೆ [೨]ರಂಗವಲ್ಲಿ[೨] ಕ-
ೃಡಿಕಳಸಂಗಳಿಂದೆಯುಘೇ ಜಾಂಗುಭಲಾಯೆನೆ ದೇವಕೋಟಿಯುಂ-
ಡನೆಯುನಾಂತು ಬಂದು ಕರಪೀಠದೊಳಂ ಹೊಱಬೀಡ ಬಿಟ್ಟು ನಿ-
ಟ್ಮುಡಿಗಳು [೩]ಮೂರ್ತಿಗೊಳ್ಳೆ[೩] ಸುಖಿಯಾದೆ ಕಣಾ ಗುರುಶಂಕರೇಶ್ವರಾ || ೯೮ ||

ತಬಲದಲ್ಲಿ ವಿಷ್ಣು ಶತಕೋಟಿಯುಜರ್ ಶತಕೋಟಿ ಹಿಂದುಮುಂ-
ಡಸಿದ ರುದ್ರಭದ್ರಗಣ ಸಾಸಿರಕೋಟಿ ಹಸಾದ ಜೀಯ ಜಾ-
ೂಡೆಯನೆಯೆಂದು ಕೀರ್ತಿಸೆ ಕರಾಂಬುಜಪೀಠದೊಳೊಪ್ಪಿಯೋಲಗಂ-
ೂಡುತೆ ನಿಜಾನುಭಾವ ಸುಖಿಯಾಗಿರು ನೀಂ ಗುರುಶಂಕರೇಶ್ವರಾ || ೯೯ ||

ಿಮಿಷರಾಜದುಂದುಭಿ ಧಳಂಧಳವೆಂದೆನೆ ಪುಷ್ಪವೃಷ್ಟಿ ಭೋ-
ನೆ ಭುವನತ್ರಯಂಗಳ ಜನಂಗಳುಘೇಯೆನೆ [೪]ದೇವರಾಯ[೪] ಜೀ-
ುನೆ ಗಣನಾಥರುಗ್ಗಡಿಸೆ ತುಂಬುರರೆನ್ನ ಕರಾಗ್ರಪೀಠದೊಳ್
ನಸುಖಸಂಗಿಯಾಗಿ ನೆಲೆಸಿರ್ಪುದು ನೀಂ ಗುರುಶಂಕರೇಶ್ವರಾ || ೧೦೦ ||

ೇಡಿದವರ್ಗೆ ಬೇಡಿದ ಪದಂಗಳ ನೀವುತೆ ಬೇಡಲೊಲ್ಲದಾ-
ಷಗಣಾಗ್ರಗಣ್ಯರಿಗೆ ನಿನ್ನನೆಯೊಚ್ಚತಗೊಟ್ಟು ಸೌಖ್ಯಮಂ
ೂಡುತೆಯೆನ್ನ ಸತ್ಕರಸರೋರುಹಪೀಠದ ಮೇಲೆ ಮೂರ್ತಿಗೊಂ-
ಡುತೆ ಪಾಡುತುಂ ವಿಜಯನಾಗಿರು ನೀಂ ಶಂಕರೇಶ್ವರಾ || ೧೦೧ ||

ಯುಜಯ ರುದ್ರಭದ್ರ ಜಯ ಮಂಗಳಮೂರ್ತಿಯನಾಥಬಂಧುವೇ
ಯುಜಯ ಜಾಹ್ನವೀಧರ ಜಯಾಜಯ ಸಿದ್ಧಶಿವಾತ್ಮಸಿಂಧುವೇ
ಯುಜಯಯೆಂದು ಕೀರ್ತಿಸುವ ಮಂಗಳಪಾಠಕಕೋಟಿಯಿಂ ನಿರಾ-
ಯಕರಪೀಠದೊಳ್ ನೆಲೆಸಿ ಪಾಲಿಸು ನೀಂ ಗುರುಶಂಕರೇಶ್ವರಾ || ೧೦೨ ||

ಮೆಟ್ಟಿದು (ಮ) ೨. ರಂಗವಾಲಿ (ರ) ೩. ಮೂರ್ತಿಗೊಂಡು (ಸ)
ದೇವರಾಜಿ (ರ); ದೇವರಾವು (ಸ).

ಈ ಶತಕಪ್ರಬಂಧವ ಮಹೋತ್ಸವದಿಂ [1]ಮನಮುಟ್ಟಿ[1] ಚಿತ್ತದೊಂ-
ದಾಸಜಿ ಬಿಟ್ಟು [2]ಮುಕ್ತಿಗೊಡಂಬಟ್ಟು[2] ಕರಂ ಕಿವಿಗೊಟ್ಟು ಕೇಳ್ವ ವಿ-
[3]ಶ್ವಾಸನಶೇಷಭೂಷಣನ ಪಾದದೊಳ್ ಮನೆಗಟ್ಟಿಗೊಂಡು ನಾಂ
ಭಾಸುರಭಕ್ತಿಭಾವನೆಯೊಳಿಪ್ಪೆ ಕಣಾ ಗುರುಶಂಕರೇಶ್ವರಾ[3] || ೧೦

★ ಸಂ: ಎಂ. ಎಸ್. ಸುಂಕಾಪು

---

೧. ಮನವಿಟ್ಟು ೨. ಮುಕ್ತಿರತಿದೊಟ್ಟು (ಮ)

೩. ಶ್ವಾಸಿಗಶೇಷಭಾಗ್ಯಚಯಮಂ ಶುಭಕೀರ್ತಿಯುನೀವ್ವತಂತ್ರದೊಳ್
ಭಾಸುರಮುಕ್ತಿಸಂಪದವನಾಗಿಸು ನೀಂ ಗುರುಶಂಕರೇಶ್ವರಾ (ರ)

ರಸಾನುಭೂತಿಯಲ್ಲಿ ಆವರಣಭಂಗ

ಜಗತ್ತಿನ ವಿಚಾರಕ್ಷೇತ್ರಕ್ಕೆ ಭಾರತೀಯ ಕಾವ್ಯಮೀಮಾಂಸಕರು ನೀಡಿದ ...ಣಿಕೆಗಳಲ್ಲಿ ರಸಪ್ರಸ್ಥಾನವು ಪ್ರಮುಖವಾದುದು. ರಸದ ಬಗೆಗಿನ ವಿಚಾರ ...ನ್ನು ಭರತನು ತನ್ನ ಪ್ರಸಿದ್ಧವಾದ ಸೂತ್ರದಲ್ಲಿ ಮಂಡಿಸಿದ್ದಾನೆ. 'ವಿಭಾವಾ_ ...ಭಾವಸಂಚಾರಿಸಂಯೋಗಾದ್ರಸನಿಷ್ಪತ್ತಿಃ' ಎಂಬುದೇ ಆ ಸೂತ್ರ. ವಿಭಾವ, ...ನುಭಾವ, ವ್ಯಭಿಚಾರಿಭಾವಗಳು, ಸ್ಥಾಯಿ ಭಾವದೊಂದಿಗೆ ಸಂಯೋಗ ...ಹೊಂದಿ ರಸವು ಅನುಭೂಯಮಾನವಾಗುವದು ಎಂಬುದು ಸೂತ್ರಾರ್ಥ. ಈ ...ಯೆ ನಡೆಯುವದು ಹೇಗೆ ಎಂಬ ಬಗೆಗೆ ಹಲವು ಜನರು ತಮ್ಮವೇ ಆದ ವಾದ ...ಳನ್ನು ಮಂಡಿಸಿದ್ದಾರೆ. ಭಟ್ಟಲೊಲ್ಲಟ, ಶಂಕುಕ, ಭಟ್ಟನಾಯಕ, ಅಭಿನವ ...ಪ್ತ ಮೊದಲಾದವರು ಪ್ರತಿಪಾದಿಸುವ ವಾದಗಳಲ್ಲಿ ಯಾವವೂ ರಸಾನು- ...ವದ ರಹಸ್ಯವನ್ನು ಪೂರ್ಣವಾಗಿ ಮನಸ್ಸಿಗೆ ನೆಮ್ಮದಿ ಆಗುವಂತೆ ಬಿಚ್ಚಿಡುವಲ್ಲಿ ...ಶಸ್ವಿಯಾಗಿಲ್ಲ. ಅರ್ವಾಚೀನ ಅಲಂಕಾರಿಕನಾದ ಜಗನ್ನಾಥ ಪಂಡಿತನು ತನ್ನ ...ಸಗಂಗಾಧರದಲ್ಲಿ ಮಂಡಿಸಿದ ಆವರಣಭಂಗದ ಪ್ರಸಕ್ತಿಯು ರಸಾನುಭವದ ...ಜಸ್ವರೂಪವನ್ನು ತಿಳಿಸುತ್ತದೆ. ಆ ಆವರಣಭಂಗದ ವಿವರಣೆಯೇ ಇಲ್ಲಿ ...ಸ್ತುತವಾಗಿದೆ.

'ಆವರಣಭಂಗ ಎಂಬ ಪದವಾಗಲೀ, ಆ ಪ್ರಕ್ರಿಯೆಯಾಗಲೀ ಅಲಂಕಾರ- ...ಶಾಸ್ತ್ರದ್ದಲ್ಲ. ಅದು ವೇದಾಂತಶಾಸ್ತ್ರಕ್ಕೆ ಸಂಬಂಧಿಸಿದುದು. ವೇದಾಂತಪರಿ- ...ಭಾಷೆಯಲ್ಲಿ ಆವರಣಭಂಗದ ವಿವರಣೆಯುಂಟು. ಪಂಡಿತರಾಜ ಜಗನ್ನಾಥನು ...ದನ್ನು ರಸಾನುಭವಕ್ಕೆ ಕಾರಣವಾಗಿ ತೋರಿಸಿ ರಸರಹಸ್ಯವನ್ನು ಬಿಡಿಸಿದ್ದಾನೆ. ...ಾವ್ಯ ಅಥವಾ ನಾಟಕವನ್ನು ಓದುವಾಗ ಅಥವಾ ಕೇಳುವಾಗ ಸಹೃದಯನು ...ರಸವನ್ನು ಅನುಭವಿಸುವದು ಹೇಗೆ ಎಂಬ ಬಗ್ಗೆ ಪೂರ್ವ ಅಲಂಕಾರಿಕರ ಅಭಿ- ...ಪ್ರಾಯಗಳನ್ನು ಸಂಕ್ಷಿಪ್ತದಲ್ಲಿ ಹೇಳಿ ಅನಂತರ ರಸಗಂಗಾಧರದಲ್ಲಿನ ವಿವರಣೆ ...ಯನ್ನು ನೋಡಬಹುದು.

ಭಟ್ಟಲೊಲ್ಲಟನ ಪ್ರಕಾರ ನಾಟಕದಲ್ಲಿ ನಾಯಕ-ನಾಯಿಕೆಯರಲ್ಲಿ ನಿಜ ...ವಾದ ಶೃಂಗಾರಭಾವವಿರುತ್ತದೆ. ರಾಧಾ-ಮಾಧವರ ಕಥೆಯು ನಾಟಕದಲ್ಲಿದ್ದರೆ ...ವರೇ (ರಾಧಾ, ಮಾಧವರು) ನಿಜವಾದ ಪ್ರೇಮಿಗಳು. ಅವರ ಅನುಕರಣ ...ನ್ನು ಮಾಡುವ ನಟರಲ್ಲಿ ಕೂಡ ಈ ಭಾವವು ಅನುಕರಣೆಯಲ್ಲಿ ಬರುತ್ತದೆ. ... ನಟರ ಕೌಶಲ್ಯದಿಂದ ನಾಟಕ ನೋಡತಕ್ಕ ಸಹೃದಯರಲ್ಲಿಯೂ ಆ ...ಂಗಾರಭಾವವು ಬರುತ್ತದೆ. ಆದರೆ ಅದು ನಿಜವಾದ ರಾಧಾಮಾಧವರಲ್ಲಿದ್ದಷ್ಟು ...ತ್ಕಟವಲ್ಲ. ಗೌಣರೂಪದಲ್ಲಿಯದು. (ಲೊಲ್ಲಟಮೀಮಾಂಸಕ. ಇದು ...ಮೀಮಾಂಸಾ ಪದ್ಧತಿಯ ಆರೋಪವಾದ)

ಶಂಕುಕನ ಅಭಿಪ್ರಾಯವೂ ಹೆಚ್ಚುಕಡಿಮೆ ಇದೇ. ಆದರೆ ಅನುಕಾರ್ಯರ (ಮೂಲ ರಾಧಾಮಾಧವರು) ಅನುಕರ್ತರಲ್ಲಿ (ನಟರು) ಚಿತ್ರದಲ್ಲಿನ ಕುದುರೆ ಯಂತೆ ತಾದಾತ್ಮ್ಯಭಾವವಿರುವವೆಂದು ಅವನ ಅಭಿಪ್ರಾಯ. ಚಿತ್ರದಲ್ಲಿಯ ಕುದುರೆಯು ಕುದುರೆಯುಹುದೋ ಅಲ್ಲವೋ ಎಂಬಂತೆ ಚಮತ್ಕಾರಿ ತಾದಾತ್ಮ್ಯಹೊಂದಿರುತ್ತದೆ. ಆ ಚಮತ್ಕಾರದಿಂದಲೇ ಸಹೃದಯನು ರಸವನ್ನು ಅನುಭವಿಸುತ್ತಾನೆ. ಇಲ್ಲಿಯ ರಸಾನುಭವ ಕೂಡ ಮೂಲನಾಯಕಾದಿಗಳಷ್ಟು ತೀವ್ರವಲ್ಲ. ಅದು ಗೌಣವೇ. (ಇದು ನೈಯಾಯಿಕ ಪದ್ಧತಿಯ ಅನುಮಿತಿ ವಾದವು.)

ಭಟ್ಟನಾಯಕನ ವಿವರಣೆಯು ಹೆಚ್ಚು ಸುಸಂಬದ್ಧವೂ ತಾರ್ಕಿಕವೂ ಆಗಿದೆ. ಅವನು ಸಹೃದಯನಿಗೇ ಮಹತ್ವವನ್ನಿತ್ತು ಆತನೇ ಪೂರ್ಣರಸಾನು ಭವವನ್ನು ಪಡೆಯುವನೆಂದು ಸ್ಥಾಪಿಸುತ್ತಾನೆ. ಶಬ್ದದ ಅಭಿಧಾ, ಲಕ್ಷಣಾ ವ್ಯಂಜನಾದಿಶಕ್ತಿಗಳೊಡನೆ ಭಾವಕತ್ವ ಭೋಜಕತ್ವ ಎಂಬ ಇನ್ನೆರಡು ಶಕ್ತಿ ಗಳನ್ನು ಇವನು ಒಪ್ಪುತ್ತಾನೆ. ಶಬ್ದದ ಭಾವಕತ್ವಶಕ್ತಿಯು ಮೂಲ ಅನು ಕಾರ್ಯರ ವೈಶಿಷ್ಟ್ಯವನ್ನು ತೆಗೆದುಹಾಕಿ ಸಾಧಾರಣೀಕರಣವನ್ನು ಮಾಡುತ್ತದೆ. ಅಂದರೆ ರಾಧೆಯ ರಾಧಾತ್ವವನ್ನು, ಮಾಧವನ ಮಾಧವತ್ವವನ್ನು ಸಹೃದಯ ಮನಸ್ಸಿನಲ್ಲಿ ಅಳಿಸಿಹಾಕಿ ಅವರನ್ನು ಸಾಧಾರಣ ಪ್ರಿಯಪ್ರೇಯಸಿಯರನ್ನಾ ಮಾಡುತ್ತದೆ. ಇಲ್ಲವಾದರೆ ರಾಧಾಮಾಧವರ ದೇವತ್ವವು ರಸಬೋಧೆಗೆ ಬಾಧಕ ವಾಗುತ್ತದೆ. ಶಬ್ದದ ಭೋಜಕತ್ವ ಶಕ್ತಿಯಿಂದ ಸಹೃದಯನು ಆ ನಾಯ ಕಾದಿಗಳ ಅನುಭವವನ್ನೇ ಅನುಭವಿಸುತ್ತಾನೆ. (ಇದು ಸಾಂಖ್ಯಪದ್ಧತಿಯ ಭುಕ್ತಿವಾದವೆಂದು ಹೆಸರು).

ಅಭಿನವಗುಪ್ತರು ಈ ಮತವನ್ನು ಒಪ್ಪುವದಿಲ್ಲ ಶಬ್ದಕ್ಕೆ ಎರ ಶಕ್ತಿಗಳನ್ನು ಹೇಳುವದು ಅನವಶ್ಯ ಮತ್ತು ಅಸಮರ್ಥನೀಯ. ಸಹೃದಯನ ಸಂಸ್ಕಾರರೂಪವಾಗಿರುವ ಅನುಭವಗಳೇ ವಿಭಾವಾದಿಗಳಿಂದ ಪ್ರಚೋದಿತವಾ ರಸದ ಅನುಭವ ಪಡೆಯುವವು. ಮಳೆ ಬಂದೊಡನೆ ಮಣ್ಣಿನ ವಾಸನೆ ತಾನಾ ಹೊರಸೂಸುವಂತೆ ವಿಭಾವಾದಿಗಳ ಸಂಯೋಗವು ರಸಿಕನಲ್ಲಿ ರಸಾನುಭವ ವನ್ನು ಉಂಟುಮಾಡುತ್ತದೆ. ಸಂಸ್ಕಾರಹೀನನಿಗೆ ರಸಾನುಭವವಾಗುವದಿ ಬಾಲಕರು ಶೃಂಗಾರರಸವನ್ನು ಅನುಭವಿಸಲಾರರು. (ವೇದಾಂತದ ಅಭಿವ್ಯಕ್ತಿ ವಾದವು ಇದು.) ಇದನ್ನೇ ಅಲಂಕಾರಿಕರು ತಮ್ಮ ಮತವೆಂದು ಅಂಗೀಕ ಸಿದ್ದಾರೆ.

ಈ ಮತವನ್ನು ಒಪ್ಪುವದರಿಂದ ಶೃಂಗಾರಾದಿ ರಸಾನುಭವಕ್ಕೆ ವಿವ ಸಿಕ್ಕಬಹುದು. ಆದರೆ ಕರುಣ ಬೀಭತ್ಸ ಇತ್ಯಾದಿಗಳ ವಿಷಯದಲ್ಲಿ ಹೇಗೆ? ಅ ಕಾವ್ಯಗಳನ್ನು ಕೇಳುವಾಗ ನಮಗೆ ಆಗುವದು ಆನಂದವೊ, ದುಃಖ ಜುಗು

ಗಳೊ? ಈ ಪ್ರಶ್ನೆಗೆ ಸುಲಭವಾಗಿ ಉತ್ತರವು ಸಿಕ್ಕುವದಿಲ್ಲ. ಕೆಲವರು ಕಾವ್ಯದಲ್ಲಿ ಬೀಭತ್ಸಾದಿಗಳ ಚಿತ್ರಣದಿಂದ ಆಗುವ ಸಂತೋಷವು ಕವಿಯ ವರ್ಣನಾ ಚಮತ್ಕಾರವನ್ನು ಮೆಚ್ಚಿ ಸೂಸುವ ಭಾವನೆ ಎನ್ನುತ್ತಾರೆ. 'ಅಹಾ ಎಷ್ಟು ಚೆನ್ನಾಗಿ ಈ ದೃಶ್ಯವನ್ನು ಕವಿ ವರ್ಣಿಸಿದ್ದಾನೆ' ಎಂಬ ಮೆಚ್ಚುಗೆಯೇ ಅಲ್ಲಿ ಸಹೃದಯನು ಅನುಭವಿಸುವ ಆನಂದ ಎಂದು ಅವರು ಹೇಳುತ್ತಾರೆ. ಆದರೆ ಈ ಮೆಚ್ಚುಗೆ ಬೇರೆ, ರಸಾನುಭವ ಬೇರೆ ಎಂಬುದು ಸ್ವತಃ ಸಿದ್ಧವಾದ ಮಾತೇ ಆಗಿದೆ. ಇನ್ನು ಕೆಲವರು (ದರ್ಪಣಕಾರ) ಕರುಣ ಬೀಭತ್ಸಗಳೂ ಸಂತೋಷವನ್ನೇ ಕೊಡುವವೆಂದೂ, ಅದಕ್ಕೆ ಸಹೃದಯರ ಅನುಭವವೇ ಪ್ರಮಾಣವೆಂದೂ, ಪ್ರತ್ಯಕ್ಷಪರಿಣಾಮವೇ ತಿಳಿದಿರುವಾಗ ಬೇರೆ ವಿವರಣೆ ಬೇಕಿಲ್ಲವೆಂದೂ ಹೇಳಿ ಜಾರಿಕೊಳ್ಳುತ್ತಾರೆ. ಆದರೆ ಆವರಣಭಂಗದ ವಿವರಣೆಯಿಂದ ಈ ಸಂದೇಹಕ್ಕೆ ಸರಿಯಾದ ಉತ್ತರ ಸಿಕ್ಕುತ್ತದೆ.

ವಿಭಾವಾದಿಗಳಿಂದ ರಸವು ಅಭಿವ್ಯಕ್ತವಾಗುತ್ತದೆ. ರಸವು ಹೊಸದಾಗಿ ಹುಟ್ಟುವ ಅಥವಾ ಬೇರೆಡೆಯಿಂದ ಬರುವ ಪದಾರ್ಥವಲ್ಲ. ಇದ್ದ ಪದಾರ್ಥವೇ ವ್ಯಕ್ತವಾಗುತ್ತದೆ. ಅಂದರೆ ಪ್ರಕಾಶಕ್ಕೆ ಬರುತ್ತದೆ. ಕತ್ತಲೆಯಲ್ಲಿನ ಪದಾರ್ಥವು ಪ್ರಕಾಶ ಬಿದ್ದೊಡನೆ ಕಾಣುವಂತೆ, ವಿಭಾವಾದಿಗಳಿಂದ ಸಹೃದಯನ ಹೃದಯದಲ್ಲಿನ ರಸ ಅಭಿವ್ಯಕ್ತವಾಗುತ್ತದೆ. ಅದರ ಅನುಭವವೂ ಆಗಲೇ ಆಗುತ್ತದೆ. ರಸವೆಂದರೆ ಆನಂದವೇ ವಿನಾ ಬೇರೊಂದಲ್ಲ. ರಸದ ಅನುಭವವು ಆನಂದವೆಂದು ಶ್ರುತಿಯೇ ಹೇಳಿದೆ. 'ರಸೋ ವೈ ಸಃ ರಸಂ ಹ್ಯೇವಾಯಂ ಲಬ್ಧ್ವಾಽನಂದೀಭವತಿ' ಎಂದು ತೈತ್ತಿರೀಯದ ಬ್ರಹ್ಮಾನಂದದಲ್ಲಿ ಉಪನಿಷತ್ ಹೇಳಿದೆ. ಅಲಂಕಾರಿಕರೂ ಇದನ್ನು ಒಪ್ಪಿದ್ದಾರೆ. 'ಅನಾವೃತಾನಂದ ಏವ ರಸಃ' ಆನಂದದ ಅನಾವರಣವೇ ರಸವು. ಹಾಗಿದ್ದರೆ ರಸವನ್ನು ಯಾವದು ಆವರಿಸುತ್ತದೆ. ಅದರ ಭಂಗ ಹೇಗೆ? ಇಲ್ಲಿ ವೇದಾಂತಪ್ರಕ್ರಿಯೆಯ ಸಹಾಯ ಬೇಕಾಗುವದು.

ನಿರ್ಗುಣನೂ ನಿರಾಕಾರನೂ ಆದ ಪರಬ್ರಹ್ಮವಸ್ತುವೊಂದೇ ಸತ್ಯವಾಗಿರುವದಷ್ಟೆ. ಅದು ಅನಾದಿಯಾದ ಮಾಯೆಯ ಉಪಾಧಿಯಿಂದ ಈಶ್ವರ ಜೀವನಾಗುತ್ತದೆ. ಈ ಈಶ್ವರಲೀಲೆಯಿಂದಲೇ ಮಾಯಾರೂಪವಾದ ಪಂಚ ಮಹಾಭೂತ, ಜಗತ್ತು ಇತ್ಯಾದಿಗಳು ಉಂಟಾದವು. ಇವೆಲ್ಲವುಗಳ ಜ್ಞಾನಕ್ಕೆ ಅಧಿಷ್ಠಾನವಾಗತಕ್ಕದ್ದು ಜೀವಚೈತನ್ಯವು. ಇದರಿಂದಲೇ ಜೀವರಿಗೆ ವಸ್ತುಗಳ ಪ್ರತ್ಯಕ್ಷ ಜ್ಞಾನವಾಗುತ್ತದೆ ಪ್ರತ್ಯಕ್ಷ ಜ್ಞಾನವೆಂದರೆ ಜಾಗೃದವಸ್ಥೆಯಲ್ಲಿ, (ನಾವು ಎಚ್ಚರವಾಗಿರುವಾಗ) ಇಂದ್ರಿಯವ್ಯಾಪಾರಗಳಿಂದ ನಮಗೆ ತಿಳಿಯುವದು. ಇಂದ್ರಿಯಗಳಿಂದ ಜ್ಞಾನವಾಗುವದು ಪ್ರತ್ಯಕ್ಷದಲ್ಲಿ ಮಾತ್ರ. ಒಂದು ಪದಾರ್ಥದ ಜ್ಞಾನವೆಂದರಾದರೂ ಏನು? ಆಯಾ ಪದಾರ್ಥದಲ್ಲಿದ್ದ

ಚೈತನ್ಯದ ಅಭಿವ್ಯಕ್ತಿಯಾಗುವದೇ ಅದರ ಜ್ಞಾನ. ಸರ್ವಪದಾರ್ಥಗಳಲ್ಲಿಯ
ಈಶ್ವರಚೈತನ್ಯವಿರುತ್ತದೆ. ಅದನ್ನು ಅವಿದ್ಯೆಯು ಮುಚ್ಚಿರುತ್ತದೆ. ಇ
ಮೂಲಾವಿದ್ಯೆಯು. ಈ ಮೂಲಾವಿದ್ಯೆಯಲ್ಲದೇ ಇನ್ನೊಂದು ಅಜ್ಞಾನವಿ
ತ್ತದೆ. ಅದು ಕಾರ್ಯಾವಿದ್ಯಾ ಅಥವಾ ತೂಲಾವಿದ್ಯಾ. ಅದು ಪದಾರ್ಥಗಳ
ಮುಚ್ಚಿಹಾಕಿರುತ್ತದೆ. (ಮೂಲಾವಿದ್ಯೆಯು ಪದಾರ್ಥಗಳಲ್ಲಿಯ ಈ
ಚೈತನ್ಯವನ್ನು ಮುಚ್ಚಿಹಾಕಿದರೆ ತೂಲಾವಿದ್ಯೆಯು ಪದಾರ್ಥದ ಅಭಿ
ಮಾಡಿಕೊಡುವದಿಲ್ಲ.) ಇಂದ್ರಿಯಗಳ ವ್ಯಾಪಾರದಿಂದ ಆ ತೂಲಾವಿದ್ಯೆ
ಪರದೆ ಸರಿದಾಗ ಅಲ್ಲಿ ಚೈತನ್ಯ ಅಭಿವ್ಯಕ್ತವಾಗಿ ಆಯಾ ಪದಾರ್ಥದ ಅ
ವಾಗುತ್ತದೆ. ಕಣ್ಣು ಕೊಡವನ್ನು ನೋಡಿದಾಗ ಅದರ ಮೇಲಿನ ತೂ
ವಿದ್ಯೆಯು ತೆರೆಸರಿದು ಅಲ್ಲಿ ಘಟಚೈತನ್ಯವು ಅಭಿವ್ಯಕ್ತವಾಗುತ್ತದೆ. ಕೊಡವ
ಮುಚ್ಚಿದ ತೂಲಾವಿದ್ಯೆಯೇ ಆವರಣವು. ಆ ಅವಸ್ಥೆಯೇ ಆವರಣಾವಸ್ಥೆ.
ಆವರಣವನ್ನು ಸರಿಸುವದೇ ಆವರಣಭಂಗವು.

ಪದಾರ್ಥಗಳ ಜ್ಞಾನವಾಗುವದು ಮನುಷ್ಯನ ಅಂತಃಕರಣದ ಮೂ
ವಾಗಿ. ಅಂತಃಕರಣದಲ್ಲಿಯೇ ಜೀವಚೈತನ್ಯವಿರುತ್ತದೆ. ಈ ಜೀವಚೈತ
ಪ್ರಭಾವದಿಂದಲೇ ತೈಜಸದ್ರವರೂಪವಾದ ಅಂತಃಕರಣವು ಹರಿದಾಡುತ್ತ
ಈ ಅಂತಃಕರಣವು ಜೀವಚೈತನ್ಯದ ಪ್ರಭಾವ, ಪ್ರಚೋದನೆಯಿಂದ ತಾನು ತಿಳಿ
ಬೇಕಾದ ವಸ್ತುವನ್ನು ಇಂದ್ರಿಯದ್ವಾರದಿಂದ ಹೊರಬಿದ್ದು ತತ್ತದಾಕಾರ
ವ್ಯಾಪಿಸುತ್ತದೆ. ಚೈತನ್ಯವು ಅಲ್ಲಿ ಹೋದೊಡನೆ ತೂಲಾವಿದ್ಯೆಯು ಅ
ಬಿಟ್ಟು ಹೋಗಲೇಬೇಕು. ಚೈತನ್ಯ ಅಜ್ಞಾನಗಳು ಒಂದೇ ಸ್ಥಳದಲ್ಲಿರುವ
ಮತ್ತೊಬ್ಬ ಅಧೀಶನು ವರ್ಗವಾಗಿ ಬಂದರೆ ಮೊದಲಿನವನು ಅನಿವಾರ್ಯ
ತನ್ನ ಚಾರ್ಜಿಯನ್ನು ಅವನಿಗೆ ಕೊಡಬೇಕಾಗುವದು. ಇದೇ ಆವರಣಭಂಗ

ರಸಾನುಭವದಲ್ಲಿಯೂ ಈ ಕ್ರಿಯೆ ನಡೆಯುತ್ತದೆ. ನಮ್ಮಲ್ಲಿಯೇ ಇ
ಆನಂದವು ಅಜ್ಞಾನದಿಂದ ಆವರಣಾವಸ್ಥೆಯಲ್ಲಿರುತ್ತದೆ. ವಿಭಾವಾದಿಗಳ ಸ
ಯಿಂದ ಅಂತಃಕರಣ ಕರಗಿ ಆವರಣಭಂಗವಾಗಿ ಆನಂದವು ತನ್ನ ಶುದ್ಧರ
ದಲ್ಲಿ ಪ್ರಕಟವಾಗುತ್ತದೆ. ಆಗ ಸಹೃದಯನು ಅನಿರ್ವಚನೀಯವೂ, ಬ್ರ
ನಂದಸಮಾನವೂ ಆದ ಶುದ್ಧ ಆನಂದವನ್ನು ಅನುಭವಿಸುತ್ತಾನೆ. ಇದೇ
ವಾದ ರಸಾನುಭವವು.

ಕರುಣ ಬೀಭತ್ಸಾದಿಗಳಿಗೂ ಈ ಮಾತು ಅನ್ವಯಿಸುವದೆ ? ಅಂತಃ
ಚೈತನ್ಯವು ಪದಾರ್ಥಗಳನ್ನು ತತ್ತದಾಕಾರ ವ್ಯಾಪಿಸುವದೆಂದು ಹೇಳಿದ
ಹಾಗಾದರೆ ದುಃಖ ಜುಗುಪ್ಸೆಗಳೇ ಅನುಭವವಾಗಬೇಕಲ್ಲ; ಎಂದರೆ
ಹಾಗಲ್ಲ. ರಸವು ಆನಂದಸ್ವರೂಪವು. ಕರುಣಾದಿಗಳು ಅದು ಪ್ರಕಟವಾ
ವಿವಿಧ ಮಾಧ್ಯಮಗಳು, ಅವುಗಳು ಆನಂದದ ತೆರೆ ಸರಿಸುವ (ಆವರ

ರೆಯುವ) ಕಾರ್ಯ ಮಾತ್ರ ಮಾಡುತ್ತವೆ. ತೆರೆ ಸರಿದಾಗ ಆಗುವ ಅನುಭವ ನಂದವೇ. ಶೃಂಗಾರ, ಕರುಣ ಎಲ್ಲ ರಸಗಳ ವಿಭಾವಾದಿಗಳು—ಗುರಿ ಅಲ್ಲ, ಧನಗಳು. ಅಮೃತ ಆನಂದವನ್ನು ಅವು ತೆರೆಯುವ ಕೆಲಸ ಮಾತ್ರವಿರುವದ ಂದ ಎಲ್ಲ ವಿಭಾವಾದಿಗಳ ರಸಗಳ ಪರಿಣಾಮವೊಂದೇ. ಅದೂ ಅಲ್ಲದೇ ಅಂಥ ರಿಸರದಲ್ಲಿ ದುಃಖಾದಿಗಳು ಅನುಭವಾಯಮಾನವೇ ಆಗುವದಿಲ್ಲ. ದುಃಖವೆಂದ ೇನು? 'ಬಲವದ್ವೇಷವಿಷಯಃ ದುಃಖಲಕ್ಷಣಮ್.' ನಾವು ಯಾವದನ್ನು ಲವಾಗಿ ದ್ವೇಷಿಸುವೆವೋ ಅದರ ಅನುಭವವೇ ದುಃಖ. ಕಾವ್ಯನಾಟ-ಾದಿಗಳ ಪರಿಣಾಮದಲ್ಲಿ ನಮಗೆ ದ್ವೇಷಸಂಭವವೇ ಇಲ್ಲದಿರುವಾಗ ುಃಖದ ಪ್ರಸಕ್ತಿಯೇ ಬರುವದಿಲ್ಲ. ರತಿಕ್ರೀಡೆಯಲ್ಲಿ ಉಗುರು ಹಲ್ಲುಗಳ ಾಯಗಳಾದರೂ, ದೈಹಿಕ ಶ್ರಮವಾದರೂ ಅದು ದುಃಖದಾಯಕವಾಗದೇ ಂತೋಷವಹವಾಗಿರುವದು. ಕಾರಣವೆಂದರೆ ಅಲ್ಲಿ ನಮಗೆ ದ್ವೇಷವಿಲ್ಲದಿರು ದೇ. ಆದ್ದರಿಂದ ರಸಾದಿಗಳ ಅನುಭವವು ಕೇವಲ ಸುಖವೇ. ಎಲ್ಲಿಯವರೆಗೆ ಭಾವಾದಿಗಳ ಪ್ರಚೋದನೆಯಿಂದ ಅಂತಃಕರಣಚೈತನ್ಯವು ರಸವನ್ನು ಅನಾ-ರಿಸಿ ವ್ಯಾಪಿಸಿರುವದೊ ಅಲ್ಲಿಯವರೆಗೆ ರಸಾನುಭವವಿರುತ್ತದೆ. ವಿಭಾವಾದಿ ುಗಿದು ಜೀವಚೈತನ್ಯ ಆ ಸ್ಥಳ ಬಿಟ್ಟೊಡನೆ ಅಜ್ಞಾನ, ಮತ್ತೆ ರಸದ ಮೇಲಿ ರೆ ಎಳೆಯುತ್ತದೆ. ಇದು ಆವರಣ ಹಾಗೂ ಭಂಗದ ಕ್ರಿಯೆ.

ಆವರಣಭಂಗದ ಈ ಪ್ರಕ್ರಿಯೆಯು ರಸಸಿದ್ಧಾಂತವನ್ನು ಅದರ ನೈಜ ರೂಪದಲ್ಲಿ ಮಂಡಿಸಿ ಆದಕ್ಕೆ ತರ್ಕಬದ್ಧ ವಿವರಣೆಯನ್ನು ಒದಗಿಸಿದೆ. ರಸಾನು ವದ ಬಗೆಗಿನ ಸಂದೇಹಗಳನ್ನೆಲ್ಲ ನಿವಾರಿಸಿದೆ. ಅಲಂಕಾರಶಾಸ್ತ್ರದ ಕ್ಷೇತ್ರದಲ್ಲಿ ಪ್ರಕ್ರಿಯೆಯ ಸಹಾಯದಿಂದ ರಸಪ್ರಸ್ಥಾನವು ಅಜೇಯವಾಗಿ ಮೆರೆಯ ಸುದು.*

★ ವಿ. ಕೆ. ವೀಣಾಕರ

* ಈ ವಿಷಯದಲ್ಲಿ [illegible] ಅನುಕೂಲ್ಯ ಮಾರ್ಗದರ್ಶನಕ್ಕಾಗಿ ಧಾರವಾಡದ ಶ್ರೀ ಶಂಕ-ರಾಚಾರ್ಯ ಸಂಸ್ಕೃತ ಮಹಾಪಾಠಶಾಲೆಯ ಪ್ರಧಾನರಾದ ಪಂಡಿತವರೇಣ್ಯ ವಿದ್ವಾನ್ [illegible] ಬಾಲಚಂದ್ರ ಶಾಸ್ತ್ರಿಗಳವರಿಗೆ [illegible]

ಅರ್ಜುನವಾಡ ಶಾಸನದ ಕವಿಳಾಸಪುರ

ಬಸವಣ್ಣನವರನ್ನು ಕುರಿತು ಹಲವಾರು ಶಾಸನಗಳು ಇದುವ
ದೊರೆತಿವೆ. ಈ ಶಾಸನದಲ್ಲಿ ಅಪೂರ್ವವಾದುದು ಅರ್ಜುನವಾಡದ ಶಾಸ
ಈ ಶಾಸನ ದೊರೆಯುವವರೆಗೆ, ಬಸವಣ್ಣನವರು ಕೇವಲ ಪೌರಾಣಿಕ ವ್ಯಕ್ತಿ
ಯಾಗಿರುವರೆಂಬುದಾಗಿ ಹಲವು ವಿದ್ವಾಂಸರುಗಳ[೧] ವಾದವಾಗಿತ್ತು. ಅರ್ಜು
ವಾಡ ಶಾಸನವು ಈ ಎಲ್ಲ ಸಂದೇಹಗಳನ್ನು ಕೊಚ್ಚಿಹಾಕಿ ಬಸವಣ್ಣನವ
'ಐತಿಹಾಸಿಕ ವ್ಯಕ್ತಿ' ಎಂದು ದೃಢಪಡಿಸಿತು. ಅಂತೆಯೇ ಈ ಶಾಸನವು ಅತ್ಯ
ಮಹತ್ವದ್ದಾಗಿದೆಯೆಂದು ನಂಬಲಾಗಿದೆ.

ಅರ್ಜುನವಾಡ ಶಾಸನದಿಂದ ಎಷ್ಟೋ ಸಂಗತಿಗಳು ಬೆಳಕಿಗೆ ಬಂದಿ
ಅವುಗಳಲ್ಲಿ ಬಸವಣ್ಣನವರ ವಂಶಾವಳಿಯು ಪ್ರಾಮುಖ್ಯವಾದುದು.

"......ಮತ್ತಂ ತದ್ವರ್ಣಾವಾಡಿ ಮಧ್ಯಗ್ರಾಮ ಬಾಗವಾಡಿ ಪುರವರಾಧೀಶ್ವರ ಮಾ
ರಾಜನ ತನೂಜಂ ಬಸವರಾಜನ ಮಹಿಮೆಯೆಂತೆಂದಡೆ......

ಸಂಗನಬಸವನ ಅಗ್ರ [ಜ][೨]
[೩][ಲಿಂ]ಗೈಕಂ ದೇವರಾಜ ಮುನಿಪನ ತನಯಂ ॥
ಜಂಗಮಪರುಸಂ [೪][ಕಾವ]ರ
ಸಂಗಂ ಪ್ರಿಯಸುತನೆನಿಪ್ಪ ಕಲಿದೇವರಸಂ ॥

ಕಲಿದೇವಮುನಿಪನಾತ್ಮಜ
ನಲೆ ಮೂಜಗದೊಳಗೆ ಮೆರೆವ ಮಾ[ನ]ವ ದೇವಂ ॥
ಗೆಲಿದಂ ಅಶನ ಬೆಸನವ
ಛಲರದಿಕಂ ಹಾಲಬಸವಿದೇವ-ಮುನೀಶಂ॥ *

ಹೀಗೆ ಮಾದಿರಾಜನಿಂದ ಹಾಲಬಸವಿದೇವ ಮುನೀಶನ ವರೆಗೆ ಸ್ಪಷ್ಟವಾ
ವಂಶಚಿತ್ರ ಮೂಡಿದೆ. ಹಾಲಬಸವೀಶನು ಬಸವನ ಅಣ್ಣನಾದ ದೇವರಾ
ಮರಿಮಗ. ಆತ ವೀರವ್ರತಿಯಾಗಿ "ಕವಿಳಾಸಪುರ"ದಲ್ಲಿ ಮೆರೆದನೆಂಬುದ
ವರ್ಣನೆ ಬರುತ್ತದೆ.

ಯಾದವ ಕನ್ನರದೇವನ [ಕ್ರಿ.ಶ. ೧೨೪೬–೧೨೬೦] ಪಾದಪದ್ಮೋ
ಜೀವಿಗಳಾದ ಚೌಡಿಸೆಟ್ಟಿ–ನಾಗರಸರು ಮತ್ತು ಉಭಯ ನಾನಾದೇಶಿಮುಮ್ಮ

---

೧. ಡಾ. ವೆಂಕಟಸುಬ್ಬಯ್ಯ-ಮುಂತಾದವರು
೨-೩-೪. N. ಲಕ್ಷ್ಮೀನಾರಾಯಣರಾಯರ ಪಾಠ
* ಅರ್ಜುನವಾಡ ಶಾಸನದ ಭಾಗ.

ಂಡಗಳು ಕೊಟ್ಟ ಎರಡು ದತ್ತಿಗಳನ್ನೊಳಗೊಂಡ ಶಾಸನವಿದಾಗಿದೆ. "ಚೌಡಿ- ಟ್ಟಿಯುರ ನಿಯಾಮದಿಂ" 'ನಾಗರಸರು' ಹಾಲಬಸವಿಮುನೀಶನಿಗೆ ಕ್ರಿ.ಶ. ೩೬೦ರಲ್ಲಿ ದತ್ತಿಬಿಟ್ಟಿರುವದಾಗಿ ತಿಳಿಯುತ್ತದೆ.

ಈ ಶಾಸನದಲ್ಲಿ "ಕವಿಳಾಸಪುರವೆ ಶಾಸನದ ಪನೆ"[೧] ಎಂದು ಲಿಖಿತವಾಗಿದೆ. ದರೆ ಈ "ಕವಿಳಾಸಪುರ" ಯಾವುದು ಎಂಬುದು ವಾದಗ್ರಸ್ತ ವಿಷಯ- ಾಗುಳಿದಿದೆ.

"ಪುಲಿಗೆರೆಯ" ಸೋಮನಾಥನ ಸಮ್ಮುಖದಲ್ಲಿ ದತ್ತಿಬಿಟ್ಟು ಕೆತ್ತಿಸಿದ ಾಸನ ಅರ್ಜುನವಾಡದ ಅಡವಿಯಲ್ಲಿರುವ ಹಾಳಾದ ಮಲ್ಲಿಕಾರ್ಜುನ ಗುಡಿಯಲ್ಲಿ ೊರೆತಿದೆ "ಕವಿಳಾಸಪುರವೆ ಶಾಸನದಪನೆ"[೧]-ಯೆಂದು ಹೇಳುವಲ್ಲಿ ಶಾಸನ ೊರೆತ ಸ್ಥಳಕ್ಕೂ "ಕವಿಳಾಸಪುರ"ಕ್ಕೂ ಯಾವುದಾದರೂ ಸಂಬಂಧವಿದೆಯೇ ಂಬುದೀಗ ವಿಚಾರಾರ್ಹ ವಿಷಯವಾಗಿದೆ.

ಡಾ. ನಂದೀಮಠರವರು ಚೌಡದಾನಪುರ ಶಾಸನದಲ್ಲಿ ಉಕ್ತವಾದ "ಧರೆ- ೊಳ್ ಕವಿಳಾಸಮೆನಿಪ ಮುಕ್ತಿಕ್ಷೇತ್ರಂ" ಎಂಬುದರ ಮೇಲಿಂದ ಕವಿಳಾಸ- ರವೆಂದರೆ ಚೌಡದಾನಪುರವಾಗಿರಬಹುದೆಂಬುದಾಗಿ ಹೇಳಿದ್ದಾರೆ.[೨]

ಶ್ರೀ ಮಲ್ಲಿಕಾರ್ಜುನ ಅವರು[೩] "ಮಣಿಗವಳ್ಳಿ"(ಮನುಗೂಳಿ)ಯೇ ವಿಳಾಸಪುರ'ವಾಗಿರಬೇಕು ಎಂದು ಹೇಳಿದ್ದಾರೆ. ಹೀಗೆ ಹೇಳುವಾಗ ಶಾಸನ ತ್ತಿದವ 'ಲಿ' ಲುಪ್ತವಾಗಿರಿಸಿರಬೇಕೆಂದು ವಾದಿಸಿ, 'ಮಣಿಗವಳ್ಳಿ'ಯೇ ವಿಳಾಸಪುರ" ಎಂದು ವಿವರಿಸುವರು. ಇದು ಬಳಸುದಾರಿಯೆನ್ನಿಸುತ್ತದೆ.

ಪ್ರೊ. ಎಂ. ಎಂ. ಕಲಬುರ್ಗಿ, ಎಂ. ಎ, ಅವರು ಈ ವಿಷಯವನ್ನು ರ್ಚಿಸುತ್ತಾ[೪], ಅರ್ಜುನವಾಡದ ಶಾಸನದ ಉತ್ತರಾರ್ಧದಲ್ಲಿರುವ "ಕವಿಳಾಸ ರ"ದ ಸೀಮೆಯನ್ನು ಕುರಿತು ಹೇಳಿದ ಮಾತುಗಳೆಡೆಗೆ ಗಮನವನ್ನು ಸೆಳೆದಿ ದ್ದಾರೆ. ಅದುವೇ ನಿಜವಾದ, ವಿಚಾರಣೀಯ ಪ್ರಸ್ತುತ ವಿಷಯ.

ಅರ್ಜುನವಾಡದ ಶಾಸನದಲ್ಲಿ ವರ್ಣಿತವಾದ 'ಕವಿಳಾಸಪುರ'ದ ಸೀಮೆ—

..... ಚೌಡಿಸೆಟ್ಟಿಯುರ ನಿಯಾಮದಿಂ ನಾಗರಸರುಂ ಪುರದಿಂ ಪಡುವಲ ೆರೆಯ ಕೂಡಿದ ಹಳ್ಳ ನೀರುವರಿಯೆ ಮೇರೆಯಾಗಿ ಮೇಲೆ ಕಲುಕುಟಿಗಗೆರೆ ವನ ಗೋಡಿ, ಬಡಗಲು ಮೊಸರಗುತ್ತಿಯ ರಾರವಿಡಿ[ದು], ಮೂಡಲು ಚಿಗಲ್ಲು ಕಡೆ ಕುಜ್ಜಗೋಡಿಯಿಂ ಬಂದ ಹಳ್ಳ ನೀರುವರಿಯೆ, ತೆಂಕಲು ೆರೆಯ ಕೂಡಲು, ಈ ಚತುಸ್ಸೀಮಾಭ್ಯಂತರ ಕವಿಳಾಸಪುರದಲ್ಲಿ......."[೫]

೧. ಅರ್ಜುನವಾಡ ಶಾಸನ; ೨. ಶಿವಾನುಭವ ೪-೪. ೩. ಶ್ರೀ ಬ. ಶಾ. ಪು. ೧೫೧. ಬಸವಣ್ಣನವರನ್ನು ಕುರಿತ ಶಾಸನಗಳು, ಪುಟ ೪೬. ೫. ಅರ್ಜುನವಾಡದ ಶಾಸನ. ಪಾ. ೧೬

ಈ ಹೇಳಿಕೆಯಲ್ಲಿ "ಕವಿಳಾಸಪುರ"ದ ಸ್ಪಷ್ಟವಾದ, ನಿಸ್ಸಂದಿಗ್ಧವಾ ಮೇರೆಯನ್ನು ವಿವರಿಸಲಾಗಿದೆ. ಈ ಮೇರೆಯನ್ನೇ ಸೂಚನಾಂಶ(ನಿರ್ದೇಶಕಾಂ ವಾಗಿ ಹಿಡಿದುಕೊಂಡು ಅರ್ಜುನವಾಡದ ನೆರೆಯ ನಾಡನ್ನು ಹುಡುಕಿದ ಬೆಳಕು ಬೀಳಬಹುದು.

ಅರ್ಜುನವಾಡದಿಂದ ಉತ್ತರಕ್ಕೆ ಎರಡು ಅಥವಾ ಮೂರು ಫರ್ಲಾಂ ನಡೆದು ಬಂದರೆ, ಮಧ್ಯ ಫಲವತ್ತಾದ ಪ್ರದೇಶವೂ, ಮೂಡಲಬದಿಯಲ್ಲಿ ಮ (ದಿನ್ನೆ) ಪ್ರದೇಶವೂ ಕಾಣಸಿಗುತ್ತದೆ. ಈ ಭಾಗ ವಿಸ್ತಾರವಾದುದಾಗಿದೆ. ಇದ ಮಧ್ಯದಲ್ಲಿಯೇ ಹಾಳಾದ ಆದರೂ ಇಂದಿನ ರೀತಿಯಲ್ಲಿ ನವೀಕರಿಸಿದ "ಮಲ್ಲಿ ಕಾರ್ಜುನ" ದೇವಾಲಯ[೧] ಕಾಣಸಿಗುತ್ತದೆ. ಈ ಗುಡಿಯ ಬಲ ಬದಿಯ ಹಾಗೂ ಮುಂಭಾಗದಲ್ಲಿ ಭಗ್ನವಾದ ಮತ್ತೆರಡು ಲಿಂಗಗಳು ಕಾಣಸಿಗುತ್ತ ಇವುಗಳೇ 'ನಾಗೇಶ್ವರ'[೨] ಹಾಗೂ 'ಸಂಗಮೇಶ್ವರ'[೩] ಲಿಂಗಗಳೆಂದು ಅಲ್ಲಿಯ ಜ ಹೇಳುತ್ತಾರೆ. ಮಲ್ಲಿಕಾರ್ಜುನ ಗುಡಿಯ ಪೂರ್ವಭಾಗದಲ್ಲಿ ಕೆಲವೇ ಹೆಜ್ಜೆ ಗ ಅಂತರದಲ್ಲಿ ಹಾಲಬಸವಿದೇವಮುನಿಪನ ಮಂದಿರವಿದೆ.

ಮಲ್ಲಿಕಾರ್ಜುನ ಗುಡಿಯ ಹಿಂಬದಿಯಲ್ಲಿ ಎಂದರೆ ಪಶ್ಚಿಮಕ್ಕೆ "ಹ ಕಾಶಿ" ನದಿಯಿದೆ. ಅದು ಇಲ್ಲಿ [೪]ದಕ್ಷಿಣಾಭಿಮುಖವಾಗಿ ಅರ್ಜುನವಾಡ ವ ಒಂದೆರಡು ಫರ್ಲಾಂಗು ಹರಿದಿದೆ. [ನಕ್ಷೆ ನೋಡಿರಿ]. ಇದನ್ನೇ "ಕವಿಳಾಸತೀರ್ಥ ಎಂದು ಕರೆಯುತ್ತಾರೆ. ಇಂದಿಗೂ ರೂಢಿಯಲ್ಲಿದೆ. "ಕವಿಳಾಸತೀರ್ಥ"ದಿ ಪಡುವಲಕ್ಕೆ[೬] ೨, ೩ ಫರ್ಲಾಂಗ ಮೇಲ್ಮುಖವಾಗಿ ಹೋದರೆ ಅಲ್ಲಿ 'ಕೊಚ್ಚ ಹಳ್ಳವು ಬಂದು ಕೂಡಿದೆ. ಈ ಹಳ್ಳ ಹುಟ್ಟಿದ ಸ್ಥಳ "ಕಲಕುಟಿಗೆರೆ", ಹ ಭಾಗ[೭] "ಬಸವನಗೋಡಿ"; ಇದರಿಂದ ಉತ್ತರ ಬದಿಗೆ "ಮುಸರಗುಪ್ಪಿ"[೮] ಮರಡಿಯಿದೆ. ಕಲಕುಟಿಗೆರೆಯಿಂದ ಮೊದಲು ಇದು ಪಶ್ಚಿಮಾಭಿಮುಖವ ಹೊರಳಿ "ಪಡುವಲತೊರೆ"[೯]ಯನ್ನು ಮೇಲೆ ಹೇಳಿದಂತೆ ಕೂಡುತ್ತದೆ.

೧, ೨, ೩. "ಕವಿಳಾಸಪುರದೊಳಗೆ ಸ್ವಂಭುಮಲ್ಲಿಕಾರ್ಜುನ, ಸಂಗಮೇಶ್ವರ, ನಾಗೇ ಈ ಮೂರು ಲಿಂಗಕಂ......" —ಅ. ಶಾಸನ.

೪. "ತೆಂಕಲುತೊರೆ" —ಅ. ಶಾಸನ.

೫. "ಕವಿಳಲಸತೀರ್ಥ......" —ಅ. ಶಾಸನ.

೬. "ಪಡುವಲ ತೊರೆಯ ಕೂಡಿದ ಹಳ್ಳ ನೀರುವರಿದು..." —ಅ. ಶಾಸನ.

೭. "...ಮೇಲೆ ಕಲಕುಟಿಗಗೆರೆ ಬಸವನಗೋಡಿ..." —ಅ. ಶಾಸನ.

೮. "...ಮುಸರಗುಪ್ಪಿಯ ದಾರವಿಡಿದು..." —ಅ. ಶಾಸನ.

೯. "ಪಡುವಲತೊರೆ" —ಅ. ಶಾಸನ.

ಹಾಲಬಸವಿದೇವನ ಮಂಟಪದಿಂದ ಸ್ವಲ್ಪ ಮುಂದೆ ಬಂದರೆ "[೧]ತಳದ ೇವರು" ಎನ್ನುವ ಸ್ಥಳವಿದೆ

ಕಲಕುಟಿಗಗೆರೆಯಿಂದಲೇ ಇನ್ನೊಂದು ಹಳ್ಳ ಪ್ರಾರಂಭವಾಗಿ ಅದು [೨]ಮೂಡಲ ದಿಕ್ಕಿಗೆ ಹರಿಯುತ್ತದೆ. ಮುಂದೆ ಅದು ಕೆಲವು [೩]"ಕಲ್ಲಖಣಿ"ಗಳಲ್ಲಿ ಾಯ್ದು ಒಂದು [೪]"ಕೋಡಿ"ಯನ್ನೇ ನಿರ್ಮಿಸಿಕೊಂಡು ದಕ್ಷಿಣಾಭಿಮುಖವಾ- ಿಯೂ, ಮುಂದೆ ಕೆಲವೊಂದು ಅಂತರದಮೇಲೆ ಪಶ್ಚಿಮಾಭಿಮುಖವಾಗಿಯೂ ರಿದು ಅರ್ಜುನವಾಡದ ಉತ್ತರದ ಬದಿಗೆ ಹಾಯ್ದು, [೫]ದಕ್ಷಿಣಾಭಿಮುಖವಾಗಿ ರಿಯುವ ಹರಣಕಾಶಿಯನ್ನು ಕೂಡುತ್ತದೆ.

[೬]ಈ ಎರಡು ಹಳ್ಳ, ನದಿಗಳಿಂದಾಗಿ ಈ ಸೀಮೆಯ ನಡುವೆ ವಿಸ್ತೀರ್ಣ- ಾದುದೊಂದು ಮೈದಾನಪ್ರದೇಶವೇ ನಿರ್ಮಾಣವಾದಂತಾಯ್ತು. ಇಲ್ಲಿ ಂದಿಗೂ ಅಗೆದರೆ ಹಳೆಯಮನೆಗಳ ಅವಶೇಷಗಳೂ, ಕಾಳಿನ ಕಣಜ(ಹಗೆ)ಗಳೂ ಗುತ್ತವೆ. ಕೆಲವೆಡೆಯಲ್ಲಿ ಒಲೆ, ಪಾತ್ರೆ, ಮುಂತಾದ ಪ್ರಾಚೀನ ಕುರುಹುಗಳೂ ೊರೆತಿರುವುದಾಗಿ ಇಲ್ಲಿಯ ಜನ ಹೇಳುತ್ತಾರೆ. ಈ ಭಾಗವೇ 'ಕವಿಳಾಸಪುರದ' ಾಗವಾಗಿರಬಹುದಾಗಿದೆ. ಇದುವೆ 'ಕವಿಳಾಸಪುರವಾಗಿ' ಕಾಲಾಂತರದಲ್ಲಿ ುಹಮ್ಮದೀಯ ದಾಳಿಗೆ ತುತ್ತಾಗಿ ನೆಲಸಮವಾಗಿರಬೇಕು. ಹೀಗಿದ್ದರೂ ಕೆಲ ುರುಹುಗಳು ಉಳಿದಿವೆ. ಅವೇ 'ಮಲ್ಲಿಕಾರ್ಜುನ' 'ನಾಗೇಶ್ವರ' ಸಂಗಮೇಶ್ವರ' ಿಂಗಗಳು ಮತ್ತು 'ಹಾಲಬಸವಿ ಮುನಿಪನ' ಮಂಟಪ.

ಶಾಸನದಲ್ಲಿ ವರ್ಣಿತವಾಗಿರುವ 'ಚತುಸ್ಸೀಮಾಭ್ಯಂತರ....ಪ್ರದೇಶ"ಕ್ಕೂ ೕಲೆ ಪ್ರತ್ಯಕ್ಷ ಕಂಡು ವಿವರಿಸಿರುವ ಪ್ರದೇಶದ ವರ್ಣನೆಗೂ ಇರುವ ಹೋಲಿ- ೆಯನ್ನು ನಕ್ಷೆಯಲ್ಲಿ [ತುಲನಾತ್ಮಕವಾಗಿ ಸೂಚಿಸಲಾಗಿದೆ] ನೋಡಿದರೆ ವಿವರ ುನದಟ್ಟಾಗಿದೆ.

ಶಾಸನದಲ್ಲಿ ವರ್ಣಿತವಾಗಿರುವ ಕೆಲ ಊರು, ಪ್ರದೇಶಗಳೂ, ಮಂದಿರ- ಗಳೂ ಇಂದಿಗೂ ಈ ಭಾಗದಲ್ಲಿ ಕಾಣಲು ದೊರೆಯುತ್ತವೆ.

"ತಳವಿಶಿರ" —ಅ. ಶಾಸನ.

"ಮೂಡಲು" —ಅ. ಶಾಸನ.

"...ಜುಂಚಿಕಲ್ಲಕಣಿ ಕಚ್ಚಗೋಡಿಯಿಂ ಬಂದ ಹಳ್ಳ ನೀರುವರಿಯೆ ತೆಂಕಲು ತೊರೆಯ ಕೂಡಲು..." —ಅ. ಶಾಸನ.

"...ಈ ಚತುಸ್ಸೀಮಾಭ್ಯಂತರ..." —ಅ. ಶಾಸನ.

೧(i) ಕೊತ್ತಸಿ–ಕೊಟ್ಟಸಿ—ಕೊಟ್ಸರಿ>ಕೋಚರಿ.

೧(ii) ಕುರುವನಿಗೆ>ಕುರುಣಿ.

೧(iii) ಮೊಸರಗುತ್ತಿ>ಮುಸರಗುಪ್ಪಿ.

೧(iv) ಅಂಕವಲ = ಅರ್ಜುನವಾಡ.

೧(v) ನೊಲೆನಾಡು>ನೂಲಿನಾಡು>ನೂಲಿಕರಿಯಾತು [ಪೇಶ್ವೆ ಕಾಲದ

ಮೇಲೆ ವಿವರಿಸಿದ ಸಂಗತಿಯನ್ನು ನೋಡಿದರೆ ಒಂದು ಕಾಲ
೨"ಕವಿಳಾಸಪುರ"ವಾಗಿ ಶೋಭಿಸಿ, ಕಾಲನ ದವಡೆಗೆ ತುತ್ತಾಗಿ, ನೆಲಸಮವಾ
ಇಂದು ಫಲವತ್ತಾದ "ಕವಿಳಾಸಪುರ"ದ ಅಡವಿಯಾಗಿ ಶೋಭಿಸುತ್ತಿದೆ. ಇದು
"ಕವಿಳಾಸಪುರ"ವಾಗಿತ್ತೆಂದೇ, "ಸಾಸನದವನೆ ಕವಿಳಾಸಪುರದ"ಲ್ಲಿ ಅರ್ಜು
ವಾಡದ ಶಾಸನ ಸಿಕ್ಕಿದೆ. ಇನ್ನು ಶಾಸನೋಕ್ತ ಹೆಸರುಗಳಿಗೆ ಈಗ ರೂಢಿಯ
ಇರುವ ಹೆಸರುಗಳನ್ನು ನೋಡಬಹುದು.

---

೧. ಕೊಟ್ಟಸಿ...ಕುರುವನಿಗೆ...ಮುಸರಗುತ್ತಿ...ಅಂಕವಲ..ಕುಂಡಿನಾಡ..ನೊಳಿನಾಡ
—ಅ. ಶಾಸನ.

೨. ಶ್ರೀ ಮಲ್ಲಿಕಾರ್ಜುನ ಮುಂತಾದ ವಿದ್ವನ್ಮಣಿಗಳು "ಕವಿಳಾಸಪುರವ" ಬಸವ
ಜನ್ಮಸ್ಥಳವಾಗಿ ವರ್ಣಿಸಿದ್ದಾರೆ. ಈ ರೀತಿಯಿಂದಲೂ ವಿಚಾರಿಸಬಹುದು. ಬಸವ
ನವರು ಮೊದಲು ಕಾಶ್ಯಪ ಗೋತ್ರದ ಚಂದಿಮರಸ, ಚಂದ್ರಾಂಬೆಯ ಮಗ
ಹುಟ್ಟಿದರೇನೂ, ಬಾಲ್ಯದಲ್ಲಿಯೇ 'ಬಾಗವಾಡಿ ಪುರವರಾಧೀಶ್ವರ' ಇವರನ್ನು
ಸಲುಹಿದನು. ಕಾರಣ ಚಂದಿಮರಸ, ಚಂದ್ರಾಂಬೆ ಅಕಾಲಮೃತ್ಯುವಿಗೀಡಾದ
ಅರ್ಜುನವಾಡದ ಶೀಮೆಯ ಕರಣಿಕನು ನಿತನವರು 'ಕಾಶ್ಯಪ'ಗೋತ್ರದವರಾಗಿದ
'ತರ್ದವಾಡಿ ಮಧ್ಯಗ್ರಾಮ ಬಾಗವಾಡಿ", ಈ ಕವಿಳಾಸಪುರದಿಂದ ಕೇವಲ ೧
ಮೈಲು ಅಂತರದಲ್ಲಿದೆ. ಅಲ್ಲಿ ಹಾರೀತ ಸಗೋತ್ರದ ಬ್ರಾಹ್ಮಣರೂ ಇರುವರು.
ಜಿಲ್ಲದ ಬಾಗವಾಡೆಯಿಂದು ಕರೆವರೂ ಅದರ ಹೆಸರು 'ಬಾಗವಾಡಿ'ಯೇ ಆಗಿದೆ.
ದಿಶೆಯಲ್ಲಿ ವಿದ್ವಾಂಸರು ಸಂಶೋಧಿಸಿದರೆ, ಬಸವನ ಜನ್ಮಸ್ಥಳದ ಮೇಲೆ ಹೆಚ್ಚು ಬೆ
ಬಿದ್ದೀತು. ಬಸವ ಈ ಭಾಗದವನಿದ್ದುದರಿಂದಲೇ ಎಲ್ಲಿಯೂ ಸಿಕ್ಕದ ಮಹಾನೀಯ
ಆತನ ಮರಿಮಗನ ತಪೋಭೂಮಿಯೂ ಇದಾಗಿತ್ತೆಂದೂ ಅರ್ಜುನವಾಡ ಶಾಸನ
ತಿಳಿಯುತ್ತದೆ. ಸಂಶೋಧನೆ ನಡೆಯಬೇಕಾಗಿದೆ.



ಅರ್ಜುನಪಾವದ ಅಡವಿಯಲ್ಲಿರುವ "ಕವಿಲಾಸಪುರ"ದ ಸೀಮೆಯ ನಕ್ಷೆ

	ಶಾಸನದಲ್ಲಿ	ಈಗ
1.	"ಮಲ್ಲಿಕಾರ್ಜುನ-ನಾಗೇಶ್ವರ-ಸಂಗಮೇಶ್ವರ."	ಮಲ್ಲಿಕಾರ್ಜುನ ಮಂದಿರ.
2.	—	ಹಾಲಬಸವಿ ಮುನಿಪನ ಮಂದಿರ.
3.	"ತಳವಿರ್ತಿ"	ತಳಿದ ದೇವರು.
4.	"ಪಡುವಲತೊರೆಯ ಕೂಡಿದ ಹಳ್ಳ"	ಕೋಚರಿ ಹಳ್ಳ.
5.	"ಬಸವನಗೋಡಿ"	ಬಸವಣ್ಣನ ಗೋಡಿ.
6.	"ಕಲಕುಟಿಗೆಗೆರೆ"	ಕಲಕುಟಿಕೆ ಕೆರೆ.
7.	"ಜಂಚಿಕಲ್ಲಕಣಿ"	ಕಲ್ಲಖಣಿ.
8.	"ಕುಚ್ಚಗೋಡಿ"	ಕೋಡಿ.
9.	"ಜಂಚಿಕಲ್ಲಕಣಿ ಕುಚ್ಚ-ಗೋಡಿಯಿಂ ಬಂದ ಹಳ್ಳ"	ಅಕ್ಕತಂಗಿಯರ ಹಳ್ಳ
10.	"ಮುಸರಗುತ್ತಿ"	ಮುಸರಗುಪ್ಪಿ
11.	"ಕೊಟ್ಟಸಿ. (ಕೊತ್ತಸಿ)"	ಕೊಚ್ಚರಿ > ಕೋಚರಿ.
12.	"ಕುರುವನಿಗೆ"	ಕುರಣಿ
13.	"ಅಂಕವಲ"	ಅರ್ಜುನವಾಡ.
14.	"ಪಡುವಲತೊರೆ"	ಹರಣಕಾಶಿ ನದಿ.
15.	"ತೆಂಕಲತೊರೆ"	ದಕ್ಷಿಣವಾಹಿನಿ.
16.	"ಕವಿಳಲಸತೀರ್ಥ"	ಕವಿಳಾಸತೀರ್ಥ.
17.	"ಕವಿಳಾಸಪುರ"	[ಕವಿಳಾಸಪುರದಡವಿ]

ಈ ವರೆಗಿನ ವಿವೇಚನೆಯಿಂದ ಬಸವಣ್ಣನವರ ವಂಶಜರು ನೆಲೆನಿಂತ ಕವಿಳಾಸಪುರವು ಈಗಿನ ಅರ್ಜುನವಾಡ ಗ್ರಾಮದ ನೆರೆಯಲ್ಲಿದ್ದಿತೆಂದು ತಿಳಿ ಬರುತ್ತದೆ. ಈ ದಿಸೆಯಲ್ಲಿ ಸಂಶೋಧನೆ ನಡೆಯಬೇಕು.

★ ಆರ್. ಆರ್. ಮುತಾಲಿ

ಪ್ರಾಗ್ಜೀವಿಗಳ ಪಳೆಯುಳಿಕೆಗಳು

ಲೋಕದಲ್ಲಿ ಬದುಕುತ್ತಿರುವ ಸಮಸ್ತ ಜೀವಿಗಳ ಸ್ವರೂಪ, ಸ್ವಭಾವ,
ವನೋಪಾಯ ಇತ್ಯಾದಿ ವಿಷಯಗಳ ಸೂಕ್ತ ಪರಿಚಯ ಮಾಡಿಕೊಡುವ
ೀವಶಾಸ್ತ್ರ'ವು ಈ ಯುಗದ ಮಹತ್ವದ ಜ್ಞಾನಶಾಖೆಗಳಲ್ಲಿ ಒಂದು. ಅದೇ
ತಿ 'ಧಾತ್ರೀ ಪುರಾತನ ಕಾಲ' (Geologic past)ದಲ್ಲಿ ಬದುಕಿ ನಷ್ಟವಾಗಿಯಾ-
ುವ ಜೀವಿಗಳ ದೇಹರಚನೆ, ಜೀವನೋಪಾಯ, ಸಂಘವ್ಯವಸ್ಥೆ ಮುಂತಾ-
ವುಗಳ ಪರಿಚಯ ಮಾಡಿಕೊಡುವ''ಪುರಾತನ ಜೀವಶಾಸ್ತ್ರ'(Palaeontology)
ು ಅಷ್ಟೇ ಮಹತ್ವದ್ದೆನಿಸಿದೆ. ಈ ಪುರಾತನ ಜೀವಶಾಸ್ತ್ರಕ್ಕೆ ಪ್ರಮಾಣಭೂತ-
ದ ಆಧಾರಗಳೆಂದರೆ 'ಪಳೆಯುಳಿಕೆಗಳು' (Fossils). ಇವುಗಳ ನಿರ್ಮಾಣ,
ಹತ್ವ, ಜೀವಪರಂಪರೆ ಮತ್ತು ವಿಕಾಸ ಮುಂತಾವುಗಳ ಅಭ್ಯಾಸವೇ
ಪ್ರಬಂಧದ ಉದ್ದೇಶ.

"ಪ್ರಪಂಚದಲ್ಲಿ ಪ್ರತಿ ವಸ್ತುವೂ ತನ್ನ ಜೀವನಚರಿತ್ರೆಯನ್ನು ಬರೆದಿಡು-
ದರಲ್ಲಿ ನಿರತವಾಗಿರುತ್ತದೆ" ಎಂಬ ಎಮರ್ಸನ್‌ನ ಮಾತು ಸ್ವಾರಸ್ಯವಾಗಿದೆ.
ಪಳೆಯುಳಿಕೆಗಳು" (ಭೂಮಿಯ ತೆಳ್ಳನೆಯ ಹೊರ ಪದರಿನಲ್ಲಿ (Earth's
rust) ಹೂತುಹೋಗಿರುವ ಪುರಾತನ ಕಾಲದ ಜೀವಾವಶೇಷಗಳು)
ುಗಳು 'ಸ್ವರ್ಣಪದಕಗಳು' (Medals of Creation) ಎಂಬ ಮ್ಯಾಂಟೆಲ್‌ನ
ಾತು ಇನ್ನೂ ಸ್ವಾರಸ್ಯವಾಗಿದೆ. ಆಧುನಿಕ ಇತಿಹಾಸಕಾರನಂತೆ ಪುರಾತನ
ೀವಶಾಸ್ತ್ರ ಪ್ರವೀಣರು ಕೂಡ ಇವುಗಳ ಕುರುಹುಗಳನ್ನು (Memorials)
ುರುತಿಸಿ, ಮರ್ಮವನ್ನು ತಿಳಿದುಕೊಳ್ಳಬಲ್ಲರು. ಪ್ರಾಗ್ಜೀವಿಗಳು ಬದುಕಿ-
ುದಕ್ಕೆ ಸಾಕ್ಷೀಭೂತವಾಗಿರುವ ಈ ಪಳೆಯುಳಿಕೆಗಳು ತಮ್ಮ ಜೀವಪರಂಪ-
ಯ ಇತಿಹಾಸವನ್ನು ಖಚಿತಪಡಿಸುತ್ತವೆ.

ಪುರಾತನ ಜೀವಶಾಸ್ತ್ರವು ಭೂವಿಜ್ಞಾನದ ಒಂದು ಶಾಖೆ. ಶಿಲಾಕಡತದಲ್ಲಿ
ೂತುಹೋಗಿರುವ ಜೀವಾವಶೇಷಗಳ ಪರಂಪರೆಯನ್ನು ರಚಿಸುವುದೇ
ಪುರಾತನ ಜೀವಶಾಸ್ತ್ರದ ಮುಖ್ಯ ಗುರಿ. ಈ ಪಳೆಯುಳಿಕೆಗಳ ಅಭ್ಯಾಸದಿಂದ
ೂ ಇತಿಹಾಸವನ್ನು (Earth's History) ನಿರೂಪಿಸಲು ಸಾಧ್ಯವಾಗಿದೆ. ಅಂದರೆ
ಪಳೆಯುಳಿಕೆಗಳ ಮತ್ತು ಅವುಗಳಿರುವ ಶಿಲಾಶ್ರೇಣಿಗಳ ಅಭ್ಯಾಸವು ಒಂದ-
ನ್ನೊಂದು ಅವಲಂಬಿಸಿವೆ. ಅಲ್ಲದೆ ಜೀವವಿಜ್ಞಾನ, ಭೌತವಿಜ್ಞಾನ, ರಸಾಯನ
ವಿಜ್ಞಾನ ಹಾಗು ಇತರ ವಿಜ್ಞಾನಗಳ ಸಹಾಯದಿಂದ ಭೂ ಇತಿಹಾಸವನ್ನು

ರುತಿಸಲು ಅನುಕೂಲವಾಗಿದೆ. ಪಳೆಯುಳಿಕೆಗಳ ಬಗೆಗೆ ಭಾರತದ ಪ್ರ ಸಾಹಿತ್ಯದಲ್ಲಿ ಹೆಚ್ಚಾಗಿ ಉಲ್ಲೇಖವಿದ್ದಂತಿಲ್ಲ.

ಪುರಾಣಗಳಲ್ಲಿ ಬರುವ 'ದಶಾವತಾರ' ಮತ್ತು ಅವುಗಳ ಅನುಕ್ರಮ ಕಾಲ್ಪನಿಕವಾಗಿ ಪರಿಶೀಲಿಸಿದರೆ, ನಮ್ಮ ಪುರಾತನರಿಗೆ ಜೀವಿಗಳ 'ವಿಕಾಸ ಕಲ್ಪನೆ ಕೆಲಮಟ್ಟಿಗಾದರೂ ಇದ್ದಿರಬಹುದೆನಿಸುತ್ತದೆ. ದಶಾವ ಅನುಕ್ರಮವು ಮತ್ಸ್ಯಾವತಾರ (ಪ್ರಥಮ ಬೆನ್ನೆಲುಬುಳ್ಳ ಪ್ರಾ ಪ್ರಾರಂಭ ಆಗುತ್ತದೆ ತರುವಾಯ ಕೂರ್ಮಾವತಾರವು ಸರೀಸೃಪ ವರಾಹಾವತಾರವು ಸಸ್ತನಿಗಳನ್ನು, ನೃಸಿಂಹಾವತಾರವು ಅರ್ಧಮಾ ಕೃತಿಯನ್ನು, ವಾಮನಾವತಾರವು ಆದಿಮನುಷ್ಯನನ್ನು, ಪರಶುರಾ ತಾರವು ಕಾಡುಮನುಷ್ಯನನ್ನು, ರಾಮಾವತಾರವು ನಾಗರಿಕ ಮನು ಮತ್ತು ಕೃಷ್ಣಾವತಾರವು ವೈಚಾರಿಕ ಮನುಷ್ಯನನ್ನು ಸೂಚಿಸುತ್ತವೆ. ಈ ದಶಾವತಾರ ಶ್ರೇಣಿ ಪುರಾತನ ಬೆನ್ನೆಲುಬುಳ್ಳ ಪ್ರಾಣಿಗಳ ವಿಕಾ ತೋರಿಸುತ್ತದೆ. ಹೀಗಿದ್ದರೂ ವೈದ್ಯಶಾಸ್ತ್ರವನ್ನು ಬಿಟ್ಟರೆ ಜೀವಶಾಸ್ತ್ರದ ಅಷ್ಟೇನು ಪ್ರಾಚೀನ ಭಾರತೀಯರು ಗಮನಕೊಟ್ಟಂತಿಲ್ಲ. ಇ ಕಾರಣ ಹಿಂದುಗಳ ಆಧ್ಯಾತ್ಮಿಕ ಮತ್ತು ಧಾರ್ಮಿಕ ಭಾವನೆಗಳು.

ಭಾರತದಲ್ಲಿ ಮೊಗಲ ಮತ್ತು ಇತರ ಅರಸರ ಚರಿತ್ರೆಯನ್ನು ಫರಿಷ್ಟಾ (Ferishta) ಎಂಬುವನು ಮೊದಲಿಗೆ ಪಳೆಯುಳಿಕೆಗಳ ಮಾಡಿದನು (ಕ್ರಿಸ್ತಶಕ ೧೬೬೦). ಅವನು ಚಿಕ್ಕ ನದಿಗಳನ್ನು ಕೂಡಿಸಲು ಕಾಲುವೆಯಲ್ಲಿ, ಮನುಷ್ಯರ ಮತ್ತು ಆನೆಗಳ ಅಸ್ಥಿಗಳನ್ನು ಕಂಡರೂ ಅವುಗಳ ಬಗೆಗೆ ವಿಶೇಷ ಗಮನವಿತ್ತಂತಿಲ್ಲ. ಪ್ರಾಚೀನ ಭಾರತದ ಶಾಸ್ತ್ರವನ್ನು ಕುರಿತ ಸಂಗತಿಗಳಿವು.

ಜೀವಶಾಸ್ತ್ರದ, ಅದರಲ್ಲಿಯೂ ಪುರಾತನ ಜೀವಶಾಸ್ತ್ರದ ನವೀನ ಭಾರತದಲ್ಲಿ ಬೆಳೆದುದು ತೀರ ಇತ್ತೀಚೆಗೆ. ಉಲ್ಲೇಖನಗಳನ್ನು ಅಧ್ಯ ಬೇಕೆಂದರೆ, ದಕ್ಷಿಣ ಭಾರತದಲ್ಲಿ ಜಾನ್ ವಾರೆನ್‌ನು ಮೊಟ್ಟಮೊದಲು 'ಪ ಮರಗಳ' (Fossil wood) ಬಗ್ಗೆ (Asiatic Review, 1810) ಬ ತರುವಾಯ ಕೋಲ್‌ಬ್ರೂಕ್ (೧೮೩೦)ನು ಬೆನ್ನೆಲುಬುಳ್ಳ ಪ್ರಾಣಿಗಳ ಶೇಷಗಳನ್ನು ಗುರುತಿಸಿದನು. ಇತ್ತೀಚೆಗೆ (೧೯೦೯) ಪೋಲಿ ಬೆನ್ನೆಲುಬಿಲ್ಲದ ಪ್ರಾಣಿಗಳ ಅವಶೇಷಗಳನ್ನು ಭಾರತದಲ್ಲಿ ಪ್ರ ಗುರುತಿಸಿ ವರದಿ ಮಾಡಿದನು. ಹೀಗೆ ಪಳೆಯುಳಿಕೆಗಳ ಅಭ್ಯಾಸವು ಬ ನಿಧಾನವಾಗಿ ಮುಂದುವರಿಯಿತು.

ಇನ್ನು ಈ ಪಳೆಯುಳಿಕೆ ಮತ್ತು ಅವುಗಳನ್ನಾಧರಿಸಿದ ಭೂ ವನ್ನು ಮುಂದಿನ ಪುಟಗಳಲ್ಲಿ ಅಭ್ಯಸಿಸಬಹುದು.

(೧) ಪಳೆಯುಳಿಕೆ (Fossil)

(೨) ಜೀವ (Life)

(೩) ಜೀವವಿಕಾಸ (Evolution)

(೧) ಪಳೆಯುಳಿಕೆಗಳು (ಜೀವಾವಶೇಷಗಳು): ಫಾಸಿಲ್ ಶಬ್ದದ ಮೂಲ ಲ್ಯಾಟಿನ್ ಭಾಷೆಯ 'ಫೊಸ್ಸಿಲಿಸ್' (Fossilis). ...ನ್ ಭಾಷೆಯಲ್ಲಿ ಫೊಸ್ಸಿಲಿಸ್ ಎಂದರೆ ಭೂಮಿಯಿಂದ ಅಗೆದ ಯಾವುದೇ ...ರ್. ಆದರೆ ಈ ಹೆಸರಿನಲ್ಲಿ ಭೂಮಿಯಿಂದ ಅಗೆದ ಕಲ್ಲು ಖನಿಜ ಇತ್ಯಾದಿ ...ರ್ವೆಲ್ಲ ಪಳೆಯುಳಿಕೆ ಆಗಲಾರದು. ಈ ದಿಸೆಯಲ್ಲಿ ಪಳೆಯುಳಿಕೆ ... ನಿಜವಾದ ಅರ್ಥವಾದದ್ದು ೧೮ನೆಯ ಶತಕದ ಕೊನೆಯಲ್ಲಿ.

"ಭೂತ್ರೀ ಪುರಾತನ ಕಾಲದಲ್ಲಿ ಬದುಕಿ ಸತ್ತು, ನೈಸರ್ಗಿಕವಾಗಿ ಬಂಡೆ...ಲ್ಲಿ ಹೂತುಹೋದ ಜೀವಿಗಳ ಅವಶೇಷಗಳೇ ಇಂದು ನಾವು ಕರೆಯುವ ...ಳಿಕೆಗಳು."

ಈ ನಿಜಾರ್ಥವು ಬಹುಬೇಗನೆ ಮನ್ನಣೆ ಗಳಿಸಿತು. ಇದರ ಸಹಾಯ ...೧೯ನೆಯ ಶತಮಾನದಿಂದಲೂ ಭೂ ಇತಿಹಾಸವನ್ನು ತೀವ್ರ ಪ್ರಗತಿಪಥ... ಮತ್ತು ವಿಜ್ಞಾನದ ಒಂದು ಮುಖ್ಯ ವಿಭಾಗವೆಂದು ತಿಳಿಯಲೂ ಸಾಧ್ಯ...ತು.

ಪ್ರಥಮತಃ ಗ್ರೀಕ್ ವಿಜ್ಞಾನಿಗಳು[1] ಈ ಪಳೆಯುಳಿಕೆಗಳನ್ನು ಪರೀಕ್ಷಿ...ರು. ಅರಿಸ್ಟಾಟಲ್[2] ತನ್ನ ಪೂರ್ವಜರ ಅಭಿಪ್ರಾಯಗಳನ್ನೆಲ್ಲ ಒಟ್ಟು...ಸಿ, ಪ್ರತಿವಸ್ತುವೂ ಕಾಲಕ್ರಮದಲ್ಲಿ ಬದಲಾವಣೆಹೊಂದುವುದು ಎಂದು ...ಂದನು. ಗ್ರೀಕರ ಈ ವಿಚಾರಗಳನ್ನು ಅರಬ್ (ಅವಿಸೆನ್ನಾ) ವಿಜ್ಞಾನಿಗಳು ...ಮೆಗೊಳಿಸಿ ಕೊನೆಗೆ ಆಂಗ್ಲರಿಗೆ ಕೊಟ್ಟಿರಬೇಕು. ನೇರ ಪರೀಕ್ಷೆಗಳ ತರು...ು ಲಿಯೊನಾರ್ಡೊ ಡಾ. ವಿನ್ಸಿ (ಇಟಲಿಯ ವಿಜ್ಞಾನಿ, ೧೪೫೨–೧೫೧೯) ...ಳಿಕೆಗಳು ಜೀವಜಂತುಗಳ ಅವಶೇಷಗಳಿರಬಹುದೆಂದು ಅಭಿಪ್ರಾಯ...ನು. ಮುಂದೆ ಒಂದು ಶತಮಾನ ಕಳೆಯುವಲ್ಲಿ ಪಳೆಯುಳಿಕೆಗಳ ಕುರುಹು...ಣೆ ಮತ್ತು ಕಟ್ಟುಕತೆಗಳು ಬಿದ್ದುಹೋದವು. ೧೮ನೆಯ ಶತಮಾನದ ...ಪ್ರಮುಖ ಭೂವಿಜ್ಞಾನಿಗಳೆಂದರೆ ಸ್ಕಾಟ್ಲೆಂಡಿನ ಜೇಮ್ಸ್ ಹಟ್ಟನ್[3]

...ಥೇಲಿಸ್, ಗ್ಸ್ಯಾಂಥಸ್, ಗ್ಸೆನೊಫೇನ್ಸ್ ಮತ್ತು ಹೆರೊಡೊಟಸ್. ಸುಮಾರು ಕ್ರಿಸ್ತಪೂರ್ವ ೫೦೦ ವರ್ಷಗಳ ಹಿಂದೆ.

...ಪ್ರಕೃತಿಚರಿತ್ರೆಯಲ್ಲಿ ಅತ್ಯಂತ ಹಿರಿಯ ಮತ್ತು ಗ್ರೀಕರ ಕೊನೆಯ ವಿಜ್ಞಾನಿ.

...ರಸಾಯನ, ವೈದ್ಯ, ಒಕ್ಕಲಿಗ ಮತ್ತು ಭೂವಿಜ್ಞಾನಿ (೧೭೨೬–೧೭೯೭).

ಮತ್ತು ಅಗ್ಗ ವಿಲಿಯಂ ಸ್ಮಿತ್.[೪] ಇವರು ಭೂ ಇತಿಹಾಸಕ್ಕೆ ಮೂಲ ಮುಖ್ಯ ಸಿದ್ಧಾಂತಗಳನ್ನು ನೀಡಿರುವುದು ಶ್ಲಾಘನೀಯವಾಗಿದೆ. ಹಟ್ಟನ್‌ರವರು 'ವರ್ತಮಾನಕಾಲದ ಅರಿವೇ ಭೂತಕಾಲದ ಅರಿವಿಗೆ (The present is the key to the past)ವೆಂದು ಪ್ರತಿಪಾದಿಸಿದರು. ಸಂಚಯನ ಕ್ರಮವನ್ನು ಮತ್ತು ಅನಾನುರೂಪತೆಯನ್ನು ಮೊದಲು ರವರು ಗುರುತಿಸಿದರು. 'ಆರಂಭವು ಸಂಕೇತರಹಿತವೂ ಅಂತ್ಯವು ರವೂ' ಎಂಬುದು ಅವರ ಕೊನೆಯ ಅಭಿಪ್ರಾಯವಾಗಿತ್ತು. ೧೭ನೆಯ ಮಾನದಲ್ಲಿ ಸ್ಟೆನೊ. ಲೆಹಮನ್, ಆರ್ಡುನೊ. ಮೈಕೇಲ್ ಮುಂತಾ 'ಶಿಲಾಪಂಕ್ತಿಯ ಕ್ರಮ'(Order of superposition)ವನ್ನು ದಿಸಿದರು. ಆದರೆ ವಿಲಿಯಂ ಸ್ಮಿತ್‌ರವರು ಶಿಲಾಪರಂಪರೆ ಮತ್ತು ಪರಂಪರೆಗಳನ್ನು ನಿರೂಪಿಸಿ ಶಿಲಾಪೇರಿಕೆಯ ಕ್ರಮಾನುಯಾಯಿಯನ್ನು ಭೂ ಹಾಸಕ್ಕೆ ಅಳವಡಿಸಿ ಕೀರ್ತಿಪಡೆದರು. ಎಂತಲೇ ಸ್ಮಿತ್ ಭೂ ಇತಿ ನಿರ್ಮಾಪಕನೆಂದು ಕರೆಯುವಲ್ಲಿ ಔಚಿತ್ಯವಿದೆ. ಈ ತತ್ತ್ವಗಳೇ ಮುಂದೆ ಪುರಾತನ ಕಾಲಗಣನೆ, ಭೂಕಾಲಮಾಪಕ ಸೂಚಿ (Calender of History) ನಿರ್ಮಿಸಲು ನಾಂದಿಯಾದುವು. ಕ್ರಿಸ್ತಶಕ ೧೮೧೫ರಲ್ಲಿ ಸ್ಮಿತ್‌ರು ಇಂಗ್ಲಂಡ್ ಹಾಗು ವೇಲ್ಸ್ ಪ್ರದೇಶದ ಭೂವಿಜ್ಞಾನದ ನ ಪ್ರಪಂಚದಲ್ಲಿಯೇ ಪ್ರಥಮತಃ ಪ್ರಕಟಪಡಿಸಿದರು. ಸ್ಮಿತ್‌ರ ಸಂಶೋ ಪ್ರಪಂಚದ ನಾಲ್ಕುದಿಕ್ಕಿನಲ್ಲಿ ಹರಡಿತು ಭೂವಿಜ್ಞಾನವು ಶೀಘ್ರಪ್ರಗತಿ ಮೈಲುಗಲ್ಲಾದುವು. ಈ ಮುಖ್ಯವಾಗಿ ಪಳೆಯುಳಿಕೆಗಳ ಸಹಾ ಭೂವೈಜ್ಞಾನಿಕ ನಕ್ಷೆಯನ್ನು (Geologic Map) ತಯಾರಿಸಲು ಜರ್ಮನ್, ಇಟಲಿ ಮತ್ತು ರಷ್ಯ ದೇಶಗಳು ಮುಂದಾದುವು.

ಇದೇ ಸಮಯಕ್ಕೆ ಜಾರ್ಜಸ್ ಕೂವಿಯರ್ ಮತ್ತು ಅಲೆ ಬ್ರೊಂಗ್ನಿಯಾರ್ (French Naturalists) ಕೂಡ ಪ್ಯಾರಿಸ್ ಭೂನಕ್ಷೆಯನ್ನು, ಪಳೆಯುಳಿಕೆಗಳ ಸಹಾಯದಿಂದ ಸಿದ್ಧಪಡಿಸಿದರು ಸ್ಮಿತ್‌ನ ನಕ್ಷೆಗೆ ಸಮನಾಗಿರಲಿಲ್ಲ. ಜಾರ್ಜಸ್ ಕೂವಿಯರ್ ಅನುಭವಿ ಅಂಗರಚನಾಶಾಸ್ತ್ರಜ್ಞನಾದ್ದರಿಂದ ಪಳೆಯುಳಿಕೆಗಳನ್ನು ಶಾಸ್ತ್ರೀಯವಾಗಿ ಪುನರ್ರಚನೆಯ ಪ್ರತಿಭೆಯನ್ನು ತೋರಿದನು. ಅವನ ಸಂಶೋಧನೆಗಳಿಂದ ಪರಂಪರೆಯಲ್ಲಿ ವಿವಿಧ ಪ್ರಾಣಿಗಳ ವಿಕಾಸವನ್ನೂ ಮತ್ತು ನ (Extinct)ಗಳಾದ ಪ್ರಾಣಿಗಳನ್ನೂ ಗುರುತಿಸಲು ಸಾಧ್ಯವಾಯಿತು.

ಸ್ಮಿತ್, ಕೂವಿಯರ್ ಮತ್ತು ಬ್ರೊಂಗ್ನಿಯಾರ್ ಇವರ ಸಂಶೋ ನಂತರ (೫೦ ವರ್ಷಗಳು ಮಿಂಚುವ ಮೊದಲೇ), ೧೮೩೦ರಲ್ಲಿ ಚಾರ್ಲ್ಸ್

---

೪. ಗನಿವಾಸನ್, ಕಾವಲ್ ತಿಪ್ಪಿ ಹಾಗು ಭೂಶಾಸ್ತ್ರಜ್ಞ (೧೭೬೯-೧೮೩೯)

"ಜೀವಜಾತಿಗಳ ಮೂಲ" (Origin of species) ಎಂಬ ಗ್ರಂಥವನ್ನು ...ಲಿ ಅಪಾರ ಕೀರ್ತಿಯನ್ನು ಪಡೆದನು.

...ಗೆಯ ಶಕಪಾದದಿಂದಲೂ ಪಳೆಯುಳಿಕೆಗಳು, ಜೀವವಿಕಾಸವನ್ನು ... ಬಹುಮಟ್ಟಿಗೆ ಪ್ರತ್ಯಕ್ಷೀಕರಿಸಿದರೂ, ಜೀವವಿಕಾಸವು ಹೇಗೆ ...ಕ್ಕೆ ನಡೆಯುತ್ತದೆಂಬುದನ್ನು ಅವು ಸಂಪೂರ್ಣ ಮಾಡುವ ...ಸಲಾರವು. ಶಿಲಾಸಮುದಾಯದ ವಿವಿಧ ಶಿಲಾಪದರು ಇಲ್ಲದೆ ಶಿಲಾಪದರು...ನ್ನು ಅದರಲ್ಲಿರುವ ಜೀವಾವಶೇಷಗಳಿಂದ ಗುರುತಿಸಿ, ಅವುಗಳ ವಯಸ್ಸ... ಮಾಡಬಹುದು (ಇದು ಪಳೆಯುಳಿಕೆಗಳಿಂದ ಶಿಲಾಸ್ತರಗಳಿಗೆ ಅನ್ವಯಿಸುತ್ತದೆ). ಉದಾಹರಣೆಗೆ ಭಾರತದಲ್ಲಿ ಅಮೊನೈಟುಗಳ ...ದ ಮೇಲೆ ಕ್ರಿಟೇಷಸ್ ಯುಗದ ಶಿಲಾಪದರಗಳನ್ನು ವಿಂಗಡಿಸಲು ...ಗಿದೆ.

೭. ಜೀವ :— 'ಜೀವ ಅಂದರೇನು?' ಎಂಬುದು 'ಮನುಷ್ಯ ಅಂದ-...' ಎಂದು ಕೇಳಿದಂತೆ. ಮನುಷ್ಯನೂ ಪ್ರಾಣಿಗಳ ಗುಂಪಿಗೆ ಸೇರಿ-...—ಡಾರ್ವಿನ್ ಹೇಳುವುದರಲ್ಲಿ ಅಲಂಕಾರವೂ, ಔಚಿತ್ಯವೂ ಇದೆ. ಆದರೂ ...ಷ್ಯನು ಅತಿ ವಿಕಾಸಗೊಂಡಿದ ಜೀವಿ' ಎಂಬುದು ಅಷ್ಟೇ ಸತ್ಯವಿದೆ ...ತೆಯನ್ನು ಅರಿಯುವುದರಲ್ಲಿಯೇ ನಮ್ಮ ಭವಿಷ್ಯವಡಗಿದೆ ಎಂದು ...ನಮ್ಮ ಅಪಾರ ಅಜ್ಞಾನವನ್ನು ಬಹುಪಾಲಿಗೆ ಕಡಿಮೆ ಮಾಡಬಹುದು. ...ಮೂಲ ಗುಣಗಳೆಂದರೆ ಸಂತಾನೋತ್ಪತ್ತಿ ಮತ್ತು ವಿಕಾಸ. ಭೂಕಣ ...ಮೂಲ ಗುಣಗಳನ್ನು ಪಡೆದಾಗಿನಿಂದಲೇ ಜೀವಕಣ ಉದ್ಭವಿಸಿದೆ ...ಯಿತು. ಜೀವವು ಎಷ್ಟು ಪುರಾತನವಾದುದು? ಎಂಬ ವಿಷಯವನ್ನು ...ವರ ಅವಶ್ಯಕವಾದರೂ ಅದರ ಸರಿಯಾದ ಜ್ಞಾನವಾಗುವುದು ...ಕಷ್ಟ. ಭೂಮಿಯು ಜೀವಿಗಿಂತ ಪುರಾತನವೆಂಬುದು ವೇದ್ಯ-...ಜೀವೋತ್ಪತ್ತಿಯನ್ನು ಪುರಾತನ ಜೀವಶಾಸ್ತ್ರದ ಆಧಾರಗಳ ಮೂಲಕ ...ಸುವುದಾದರೂ ಅದೊಂದು ಅಪೂರ್ಣ ವಿಷಯವೇ ಸರಿ. ಇದಕ್ಕೆ ...ಭೂತ ಆಧಾರಗಳು ಕಡಿಮೆಯಾದ್ದರಿಂದ ಕರಾರುವಾಕ್ಕಾಗಿ ಹೇಳಲು ...ಲ್ಲ. ಈ ದಿಶೆಯಲ್ಲಿ ಸೂಕ್ಷ್ಮಾಣು ಜೀವಶಾಸ್ತ್ರ (Microbiology) ಜೀವರಸಾಯನ ಶಾಸ್ತ್ರ (Biochemistry)ಗಳು ಕೆಲಮಟ್ಟಿಗೆ ಪ್ರಗತಿಪರ...ಸಿತ್ತಿವೆ. ಅಲ್ಲದೆ ತೀವ್ರ ಸಂಶೋಧನೆಗೆ ಅಗ್ರಪಟ್ಟವಿದೆ.

...ನ್ನು ಭೂಮಿಯ ವಯೋಮಿತಿಯು ಸುಮಾರು ೪೦೦ ಕೋಟಿ (ಇತ್ತೀ...ಶೋಧನೆಗಳ ಪ್ರಕಾರ) ವರ್ಷಗಳೆಂದು ಅಂದಾಜು ಮಾಡಲಾಗಿದೆ

...ನ ವಿವರಣೆಗೆ "Origin of Species" by Charles Darwin, Collier ...ks (1962), New York ಪುಸ್ತಕವನ್ನು ಓದಬಹುದು.

ಇದರ ಪೈಕಿ ಕೊನೆಯ ೧೫೦ ಕೋಟಿ ವರ್ಷಗಳನ್ನು ಮಾತ್ರ ಜೀವಪ್ರಕಾ
ಆವರಿಸುತ್ತದೆ. ೬೦ ಕೋಟಿ ವರ್ಷಗಳ ಭೂ-ಇತಿಹಾಸವು ಸ್ಫುಟ
ಯಾದರೂ ಜೀವೋತ್ಪತ್ತಿ ವಿಷಯವು ನಮ್ಮನ್ನು ೩೬೦ ಕೋಟಿ ವರ್ಷಗ
ಪೂರ್ವಕ್ಕೆ ಕರೆದೊಯ್ಯುವುದು.

ಪಳೆಯುಳಿಕೆಗಳು ಜೀವದ ಆದಿ ಇಲ್ಲವೆ ಪ್ರಾರಂಭದ ಬಗೆಗೆ ಯಾ
ದನ್ನೂ ಖಚಿತವಾಗಿ ಹೇಳಲಾರವು. ಆದಿಯುಗದ (Primeval) ಜೀವಿಗ
ಅತಿ ಮೃದುದೇಹವುಳ್ಳ, ಸೂಕ್ಷ್ಮಜಂತುಗಳು ಆಗಿದ್ದುವು ಅನ್ನುವುದರಲ್ಲಿ ಸ
ಯವೇ ಇಲ್ಲ. ಇವು ಪಳೆಯುಳಿಕೆಯಾಗಲಾರದಂಥ ದೇಹವುಳ್ಳವಾದ್ದರಿ
ಇವುಗಳಿದ್ದ ಬಗೆ ಅಸ್ಪಷ್ಟವಾಗಿದೆ. ಅವುಗಳ ಜೀರ್ಣಾವಶೇಷಗಳು ನಮ
ನೇರ ಪರೀಕ್ಷೆಗೆ ನಿಲುಕಲಾರವು. ನಿಖರವಾಗಿ ಅತಿ ಪುರಾತನವೆಂದು ಹೇಳಬ
ಮತ್ತು ಪ್ರತ್ಯಕ್ಷ ಪರೀಕ್ಷೆಗೆ ನಿಲುಕಬಲ್ಲ ಪಳೆಯುಳಿಕೆ ಎಂದರೆ ಏಕಜಲ ಸ
'ಆಲ್ಗಿ' (Algae) ಎಂಬುದು. ಇದು ಸುಮಾರು ೧೦೦ ಕೋಟಿ ವರ್ಷಗಳ ಹಿ
ಜೀವಿಸಿದ್ದಿರಬೇಕೆಂದು ತಜ್ಞರ ಮತ. ಇತ್ತೀಚೆಗೆ ಗ್ಲಾಸ್ನರ್[೬] (೧೯
ಎಂಬವರು, ಆಸ್ಟ್ರೇಲಿಯ ದೇಶದ ಎಡಿಯಾಕಾರಾ ಎಂಬ ಪ್ರದೇಶದಲ್ಲಿ ಅ
ಜೀವಕಲ್ಪ (Late pre-Cambrian) ಶಿಲಾಸ್ತೋಮಗಳಲ್ಲಿ ನಿಖರವಾಗಿ ಗು
ತಿಸಬಲ್ಲ ಪಳೆಯುಳಿಕೆಗಳ (ಜೆಲ್ಲಿಫಿಶ್, ವರ್ಮ್ಸ, ಕೊರಲ್ಸ) ನಿಕ್ಷೇಪವನ
ಸಂಶೋಧಿಸಿದ್ದಾರೆ. ಇವುಗಳ ವಯೋನಿರ್ಧಾರ ಮಾಡಲು ಸಾಧ್ಯವಾಗಿ
ದಿದ್ದರೂ ಅವು ಆದಿಜೀವಕಲ್ಪದ ಕೊನೆಯ ಕಾಲದಲ್ಲಿ ಜೀವಿಸಿದ್ದಿರಬೇಕೆಂ
ಕರಾರುವಾಕ್ಕಾಗಿ ಹೇಳುವುದು ಸಮಂಜಸವಾಗಿದೆ. ಇದೇ ಪ್ರಕಾ
ಭಾರತದಲ್ಲಿ ಕೂಡ ಆದಿಜೀವ-ಕಲ್ಪದ 'ಪುರಾಣಾಸ್' ಎಂದು ಕರೆಯು
'ಕಡಪಾ' ಶಿಲಾಶ್ರೇಣಿಗಳಲ್ಲಿ (ಆಂಧ್ರ) 'ಸ್ಟ್ರೋಮಾಟೊಲೈಟ್' (ಸಸ್ಯಾ
ಶೇಷಗಳು) ಎಂಬ ಪಳೆಯುಳಿಕೆಗಳು ಕಂಡುಬಂದಿವೆ. ಅಲ್ಲದೆ ಇ
ಕಾಲದ 'ಕಲಾದಗಿ' ಶಿಲಾಪ್ರಸ್ತರಗಳಲ್ಲಿ ಕೂಡ ಅಂಡಾವಶೇಷಗಳಿರುವು
(Coprolites) ತಿಳಿದುಬಂದಿದೆ. ಈ ದಿಶೆಯಲ್ಲಿ ಹೆಚ್ಚಿನ ಸಂಶೋಧನೆ ನಡೆ

ಇಂತಹ ಗುರುತಿಸಬಲ್ಲ ಅತಿ ಪ್ರಾಚೀನ ಪಳೆಯುಳಿಕೆಗಳ ಸಂತ
ನಿಸ್ಸಂಕೋಚವಾಗಿ, ಪ್ರಮಾಣಭೂತವಾಗಿ ಸಿಗಬಲ್ಲ ಜೀವಾವಶೇಷ
ಮೊದಲು, ಏತನ್ಮಧ್ಯೆ ಅಗಾಧ ಕಾಲವು ಗತಿಸಿರಬೇಕೆಂದು ನಂಬಲಾಗಿ
ಎಷ್ಟೇ ಆದರೂ ಪ್ರತ್ಯಕ್ಷ ಪರೀಕ್ಷೆಗೆ ನಿಲುಕುವ ಪಳೆಯುಳಿಕೆಗಳು ೬೦ ಕೋ
ವರ್ಷ ಗತಕಾಲದ ಭೂಇತಿಹಾಸವನ್ನು ಮಾತ್ರ ಖಚಿತಪಡಿಸುತ್ತವೆ.

೬. ಹೆಚ್ಚಿನ ವಿವರಗಳಿಗೆ "Pre-Cambrian Animals" by Glaessnes, Scient
American (1961), Vol. 204, No. 3 ನೋಡಿರಿ.

(೩) **ಜೀವವಿಕಾಸ:** ನಿಸರ್ಗದಲ್ಲಿ ಪ್ರತಿ ವಸ್ತುವೂ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಅನೇಕ ವಿಧಗಳಲ್ಲಿ ಸದಾ ಬದಲಾವಣೆ ಹೊಂದುತ್ತಲೇ ಇವೆ. ಜೀವಜಂತುಗಳು ಕೂಡ ಸೃಷ್ಟಿಗನುಗುಣವಾಗಿ ವಿಕಾಸಹೊಂದುತ್ತಲೇ ಇವೆ. ಇದು ನಿಸರ್ಗನಿಯಮ. ಈ ವಿಕಾಸತತ್ವವನ್ನು ಜಗತ್ತಿಗೆ ಮೊದಲು ಪ್ರಚುರಪಡಿಸಿದ ಕೀರ್ತಿ ಚಾರ್ಲ್ಸ್ ಡಾರ್ವಿನ್‌ನಿಗೆ ಸಲ್ಲುತ್ತದೆ. ಈ ನಿಸರ್ಗ ಬದಲಾವಣೆಗಳನ್ನು ಅಳತೆಮಾಡಲು ಅದೆಷ್ಟೋ ವಿಧಾನಗಳನ್ನು ಕಂಡುಹಿಡಿದಿದ್ದಾರೆ. ಡಾರ್ವಿನ್‌ನು ಪಳೆಯುಳಿಕೆಗಳನ್ನು ಕೂಲಂಕಷವಾಗಿ ಪರೀಕ್ಷಿಸಿ, ಅತ್ಯಂತ ಆದಿಜೀವಿಗಳಿಂದ ಹಿಡಿದು ಈಗಿನ ಜೀವಿಗಳ ವರೆಗೆ, ಮಧ್ಯ ಕಾಲಾಂತರದಲ್ಲಿ, ವಿವಿಧ ಜೀವಿಗಳು ಭೂಮಿಯ ಮೇಲೆ ಕಾಣಿಸಿಕೊಂಡು, ಹಲವು ವಂಶನಷ್ಟ-ಹೊಂದಿರಬೇಕೆಂದು ಕಂಡುಹಿಡಿದನಲ್ಲದೆ, ತನ್ನ ವಿಕಾಸವಾದದ ತಳಹದಿಯನ್ನು ಭದ್ರಪಡಿಸಿದನು. ಇದು ನಂತರದ ವಿಜ್ಞಾನಿಗಳಿಗೆ ಅಪೂರ್ವ ಮಾರ್ಗದರ್ಶನವಾಗಿದೆ.

ಇನ್ನು ಈ ಜೀವಿಗಳ ಪ್ರಾಚೀನತೆಯ ಚಿತ್ರವನ್ನು ನಿರ್ಧರಿಸುವ ವಿವಿಧ ಕಾಲಮಾಪಕ ವಿಧಾನಗಳನ್ನು ತಿಳಿಯೋಣ.

ಭೂವಿಜ್ಞಾನದಲ್ಲಿ ಕಾಲಮಾಪಕ ಸಾಧನೆಗಳೆಲ್ಲ ಇತ್ತೀಚಿನವೆಂದು ಹೇಳಬಹುದು. ಪ್ರೊ. ಝುವ್ನರ್ ಎಂಬ ಆಂಗ್ಲ ವಿಜ್ಞಾನಿ ಕ್ರಿಸ್ತಶಕ ೧೯೪೬ರಲ್ಲಿ "ಡೇಟಿಂಗ್ ದಿ ಪಾಸ್ಟ್" (Dating the Past) ಎಂಬ ಹೊತ್ತಿಗೆಯನ್ನು ಪ್ರಕಟಿಸಿದರು. ಭೂಕಾಲವನ್ನಳೆಯುವ ಕೆಲ ಮಾದರಿ ವಿಧಾನಗಳನ್ನು ಮೂರು ಪ್ರಕಾರಗಳಲ್ಲಿ ತಿಳಿಯಬಹುದು.

೧. ರಿಲೇಟಿವ್ ಡೇಟಿಂಗ್ (Relative Dating) :—

(ಅ) ಶಿಲಾಪೇರಿಕೆ ಕ್ರಮನಿಯಮ (Law of Super Position)

(ಬ) ಜೀವವಿಕಾಸ (Organic Evolution)

೨. ಅಬ್ಸೊಲೂಟ ಡೇಟಿಂಗ್ (Absolute Dating) :—

(ಅ) ವೃಕ್ಷಕಾಲಸೂಚಿ ಪದರುಗಳು (Dendrochronology)

(ಬ) ಜೇಡಿಮಣ್ಣಿನ ಋತುಮಾನದ ಪದರುಗಳು (Varved Clays)

೩. ಫಿಜಿಕಲ್ ಕ್ಲಾಕ್ (Physical Clock) :—

(ಅ) ವಿದ್ಯುತ್ ವಿಕಿರಣಶೀಲ ವಿಧಾನಗಳು (Radioactive Decay)

(ಬ) ಪ್ಲಿಯೊಕ್ರೊಯಿಕ್ ರಿಂಗ್ಸ್ (Pleochroic Rings)

ಪ್ರಪಂಚದಲ್ಲಿ ಅತಿ ಪುರಾತನ ಭೂಭಾಗಗಳಲ್ಲೊಂದಾದ, ಕರ್ನಾಟ ದಕ್ಷಿಣ ಒಂಟಾರಿಯೊ ಶಿಲೆಗಳಿಗೆ (ಆರ್ಷೇಯ ಯುಗ) ಸಮೀಪವಾಗಿ "ಗನ್‌ಫ್ಲಿಂಟ್ ಆಯರ್ನ್" ಶಿಲಾಶ್ರೇಣಿಗಳಿಂದ ಪಡೆದ ಕೆಲ ಅತಿಪ್ರಾ ಸಸ್ಯಾವಶೇಷಗಳನ್ನು ಗುರುತಿಸಲಾಗಿದೆ. ಇವುಗಳನ್ನು ಚೆಕ್ಕುಮುಕಿ ಶಿ (Chert) ಒಂದು ಬಗೆಯ ಬಿಳುಪು ಕಲ್ಲಿನಿಂದ ಬೇರ್ಪಡಿಸಲಾಗಿದೆ. ವಿದ್ಯ ವಿಕಿರಣಶೀಲ[೭] ವಿಧಾನಗಳಲ್ಲೊಂದಾದ ರುಬಿಡಿಯಂ (Rb^{87})—ಸ್ಟ್ರಾನ್ಷಿಯ (Sr^{87}) ಪ್ರಯೋಗದಿಂದ, ಈ ಸಸ್ಯಾವಶೇಷಗಳಿರುವ ಶಿಲೆಗಳ ವಯೋ ನಿರ್ಧಾರವು ೧೬೦ ಕೋಟಿ ವರ್ಷ ಎಂದು ನಿಖರವಾಗಿ ಸಿದ್ಧಪಡಿಸಿದ್ದಾರೆ. ಸಸ್ಯಾವಶೇಷಗಳ ವಯೋನಿರ್ಧಾರವನ್ನು ಟೈಲರ್ ಮತ್ತು ಬಾರ್ಘೂರ್ನ (೧೯೬೪) ಎಂಬುವರು ವರದಿ ಮಾಡಿದ್ದಾರೆ. ಇತ್ತೀಚೆಗೆ ಕೆರ್ಕಟ್ (೧೯ ಎಂಬುವರು 'ವಿಕಾಸ ಸಿದ್ಧಾಂತ'(Theory of Evolution)ವನ್ನು ಪ್ರಕ ದ್ದಾರೆ. ಅವರು ಜೀವವಿಕಾಸದ ಅಂತರ್ ಸಂಬಂಧವನ್ನು ತೋರಿಸುವ ರೀತಿಗಳನ್ನು ಬಣ್ಣಿಸಿದ್ದಾರೆ.—

(೧) ನಿರ್ಜೀವ ವಸ್ತುಗಳು ಸಜೀವ ಕಣಗಳಾದುವು. (ನೈಸರ್ಗಿ ಜೀವೋತ್ಪತ್ತಿ)

(೨) ನೈಸರ್ಗಿಕ ಜೀವೋತ್ಪತ್ತಿ ಒಂದೇ ಬಾರಿಗೆ ಉದಯಿಸಿತು.

(೩) ವೈರಸ್, ಬ್ಯಾಕ್ಟೀರಿಯಾ, ಸಸ್ಯಜಂತುಗಳೆಲ್ಲವೂ ಅಂತರ್ಸಂಬ ವನ್ನು ಹೊಂದಿವೆ.

(೪) ಏಕಾಣು ಪ್ರಾಣಿಗಳು ಬಹುಪ್ರಾಣಿಗಳಿಗೆ ಪರಿವರ್ತಿಸಲ್ಪಟ್ಟ

(೫) ಬೆನ್ನೆಲುಬುಗಳಿಲ್ಲದ ಎಲ್ಲ ಪ್ರಾಣಿಗಳೂ ಒಂದನ್ನೊಂದು ಅಧಿ

(೬) ಬೆನ್ನೆಲುಬುಗಳಿಲ್ಲದ ಪ್ರಾಣಿಗಳು ಬೆನ್ನೆಲುಬನ್ನು ಪಡೆದುವು.

(೭) ಬೆನ್ನೆಲುಬುಳ್ಳ ಪ್ರಾಣಿಗಳಲ್ಲಿ—ಮತ್ಸ್ಯಗಳಿಂದ ದ್ವಿಚರಪ್ರಾಣಿ ದ್ವಿಚರಪ್ರಾಣಿಗಳಿಂದ ಸರಿಸೃಪಗಳು. ಸರಿಸೃಪಗಳಿಂದ ಪಕ್ಷಿ ಕೊನೆಗೆ ಸಸ್ತನಿಗಳ ಉದಯವಾಯಿತು.

ಭೂ ಇತಿಹಾಸದ ಎರಡು ಮುಖ್ಯ ಭಾಗಗಳಾದ ಪುರಾತನ ಜೀವ (Palaeontology) ಮತ್ತು ಸ್ತರಶಾಸ್ತ್ರ (Stratigraphy)ಗಳು

---

೭. ಹೆಚ್ಚಿನ ವಿವರಗಳಿಗೆ "ಕರ್ನಾಟಕದ ಕಲ್ಲುಗಳ ವಯಸ್ಸು"—ಡಾ. ಪೇಟ 'ಕರ್ನಾಟಕ ಭಾರತಿ', ಸಂಪುಟ ೧, ಸಂಚಿಕೆ ೨ (೧೯೬೮), ಪುಟ ಓದಬಹುದು.

ದು ಅವಲಂಬಿಸಿದೆಯಾದರೂ ಅವುಗಳಿಗೆ ತಮ್ಮದೇ ಆದ ವಿಶಿಷ್ಟತೆ ಇದೆ ಶಾಸ್ತ್ರವು ಪದರುಗಳ ಮೇಲೆ ಕೊರೆಯಲ್ಪಟ್ಟ ಪುರಾತನ ಜೀವಶಾಸ್ತ್ರದ ಲಕ ಭೂಮಿಯ ಪುರಾತನಕಾಲದ ಚರಿತ್ರೆಯನ್ನು ಹೇಳುತ್ತದೆ, ಮತ್ತು ಹೇರಿಕೆಯ ಕ್ರಮನಿಯಮವು' ಅದರ ಮೂಲತತ್ವವಾಗಿದೆ. ಅದರಂತೆ ತನ ಜೀವಶಾಸ್ತ್ರವು ಜೀವಪರಂಪರೆಯನ್ನು ಮತ್ತು ಜೀವವಿಕಾಸವನ್ನು ಸುತ್ತದೆ. ಪಳೆಯುಳಿಕೆಗಳ ಪರಿಪೂರ್ಣ ಅಭ್ಯಾಸವೇ ಪುರಾತನ ಜೀವ ದ ಮೂಲ ತತ್ವವಾಗಿದೆ. ಮತ್ತೊಮ್ಮೆ ಈ ಪುರಾತನ ಜೀವಶಾಸ್ತ್ರ —(೧) ಪುರಾತನ ಸಸ್ಯಶಾಸ್ತ್ರ (Palaeobotany) ಮತ್ತು (೨) ಪುರಾತನ ಶಾಸ್ತ್ರ (Palaeozoology) ಎಂದು ವಿಂಗಡಿಸಬಹುದು. ಇದರಲ್ಲಿ ತನ ಪ್ರಾಣಿಶಾಸ್ತ್ರವನ್ನು— (ಅ) ಬೆನ್ನೆಲುಬುಗಳಿಲ್ಲದ (Invertebrates) ಣಿಗಳು, (ಬ) ಬೆನ್ನೆಲುಬುಳ್ಳ (Vertebrates) ಪ್ರಾಣಿಗಳು ಎಂದು ಸಬಹುದು. ಪಳೆಯುಳಿಕೆ ಆಗಬೇಕಾದರೆ ಅವು ಕೆಲ ವೈಶಿಷ್ಟ್ಯತೆ ನ್ನು ಪಡೆದಿರಬೇಕಾಗುತ್ತದೆ. ಯಾವದೇ ಪ್ರಾಣಿಯು ತನ್ನ ಅವಶೇಷ ಳಿಸಬೇಕಾದರೆ ಅದು ಅಸ್ಥಿಯನ್ನು ಇಲ್ಲವೆ ಗಡುಸು ಭಾಗಗಳನ್ನು ದುಭಾಗಗಳು ಶೀಘ್ರ ನಾಶಹೊಂದುವುದರಿಂದ ಅಂಥ ಜೀವಿಗಳಿದ್ದ ಬಗ್ಗೆ ಟಿಸುವುದು ಕಷ್ಟ) ಹೊಂದಿರಬೇಕು. ಎರಡನೆಯದಾಗಿ ಅಸ್ಥಿಗಳಾಗಲಿ ವೆ ಗಡುಸು ಭಾಗಗಳಾಗಲಿ ಜಲಜ ಶಿಲೆಗಳಲ್ಲಿ ಶೀಘ್ರ ನಿಕ್ಷೇಪಗೊಳ್ಳಬೇಕು. ಲ್ಲವಿದ್ದರೆ ಅವು ನಾಶಹೊಂದುವ ಸಾಧ್ಯತೆಗಳೇ ಹೆಚ್ಚು).

ಮ್ಮ ಪಳೆಯುಳಿಕೆಯಾಗುವ ಕೆಲವು ಮುಖ್ಯ ವಿಧಾನಗಳ ಸಂಕ್ಷಿಪ್ತ ಯ ಮಾಡಿಕೊಳ್ಳೋಣ.

ಪಳೆಯುಳಿಕೆಯಾಗುವ ವಿಧಾನಗಳು ಅನೇಕವಿದ್ದು, ಒಂದೇ ಜೀವಿಯು ಶೇಷವು ಅನೇಕ ರೀತಿಯಲ್ಲಿ ಮತ್ತು ಬೇರೆ ಬೇರೆ ಪದಾರ್ಥಗಳಲ್ಲಿ ನಿಕ್ಷೇಪ ಳ್ಳಬಹುದು. ಆದುದರಿಂದ ಜೀವಾವಶೇಷವಾಗುವ ಬಗೆಯು, ವಿವಿಧ ರಾಶಿಗಳ ಗಡುಸು ಭಾಗಗಳ ರಚನೆ, ಸ್ವರೂಪ ಮತ್ತು ಅವುಗಳ ಕಾಲ- ತ್ರ ಇತ್ಯಾದಿಗಳನ್ನೇ ಅವಲಂಬಿಸಿದೆ. ಒಟ್ಟಿನಲ್ಲಿ ಪಳೆಯುಳಿಕೆಯಾಗಲು ರ್ಣ ಆಶ್ರಯವೆಂದರೆ ಸಾಗರದಲ್ಲಿ ಮಾತ್ರ. ಭೂಮಿಯ ಮೇಲೆ ಬಹು ವು. ಪಳೆಯುಳಿಕೆಕರಣ ವಿಧಾನಗಳನ್ನು ಸ್ಥೂಲವಾಗಿ—

(೧) ಸಂಪೂರ್ಣ ಜೀವಿಯುಳಿಕೆ ವಿಧಾನ

(೨) ಅಸ್ಥಿ ಭಾಗಗಳ ರಕ್ಷಣೆ ವಿಧಾನ (ಬದಲಾವಣೆ ಇಲ್ಲದೆ)

(೩) ಇಂಗಾಲ ಸಂಯುಕ್ತ ವಿಧಾನ (Carbonization)

(೪) ಎರಕ ಮತ್ತು ಅಚ್ಚು ವಿಧಾನ (Mould & Cast)

(೫) ಶಿಲೀಕರಣ ವಿಧಾನ (Petrification)

(೬) ಮುದ್ರೆಯೊತ್ತುವ ವಿಧಾನ (Imprints)

(೭) ಶಿಲೀಭೂತ ಪುರೀಷ ವಿಧಾನ (Coprolites)

(೧) **ಸಂಪೂರ್ಣ ಜೀವಿಯುಳಿಕೆ ವಿಧಾನ:** ಕೆಲವೊಮ್ಮೆ ಪ್ರಾಣಿ
ಅಸ್ಥಿಗಳಲ್ಲದೆ ಅವುಗಳ ಮೃದು (ಜೀವಜನಿತ) ಪದಾರ್ಥಗಳೂ ಕೂ
ವಿಶೇಷ ಬದಲಾವಣೆ ಇಲ್ಲದೆ ರಕ್ಷಿಸಲ್ಪಡುತ್ತವೆ. ಈ ದಿಶೆಯಲ್ಲಿ ಒ
ಕೌತುಕವೇ ನಡೆದುಹೋಯಿತೆಂದು ಹೇಳಬಹುದು— (ಕ್ರಿ. ಶ. ೧೯೦
೬ರ್ ರಷ್ಯ ದೇಶದ ಬೇಟೆಗಾರನೊಬ್ಬನು ನರಿಯೊಂದನ್ನು ಬೆನ್ನಟ್ಟಿಹೋ
ಆಕಸ್ಮಿಕವಾಗಿ ನದಿಯ ದಡದಲ್ಲಿ ಬೃಹದ್ಗಜ ಶವವನ್ನು ಕಂಡನು. ಈ ವಿಷ
ಹೇಗೋ "ಇಂಪೀರಿಯಲ್ ಅಕಾಡಾಮಿ ಆಫ್ ಸಾಯನ್ಸ್" ಸಂಸ್ಥೆಗೆ ತಿಳಿಯಿ
ಕೂಡಲೆ ಈ ಸಂಸ್ಥೆಯು ವಿಶೇಷ ತಜ್ಞರ ತಂಡೊಂದು ಆ ಸ್ಥಳಕ್ಕೆ (ಟು
ಹಿಮಪ್ರದೇಶ) ಧಾವಿಸಿ, ತಮ್ಮ ಅನ್ವೇಷಣೆಯಲ್ಲಿ ಅನೇಕ ರೋಮಯು
ಬೃಹದ್ಗಜಗಳ (Wooly Mammoths) ಶವಗಳನ್ನು ಶೋಧಿಸಿದರು.
ಬೃಹತ್ ಪ್ರಾಣಿಗಳ ಶವಗಳು, ಸುಮಾರು ೩೦,೦೦೦ ವರ್ಷಗಳ ಹಿಂದೆ
(Pleistocene Ice Age) ಉತ್ತರ ಸೈಬೀರಿಯಾ ಪ್ರದೇಶದ ಕೆಸರಿನಲ್ಲಿ ಮ
ಹಿಮದಲ್ಲಿ ಹೂತುಹೋಗಿರಬೇಕೆಂದು ತರ್ಕಿಸಲಾಗಿದೆ. ಈ ಪ್ರದೇಶವು ಈಗಿ
ಗಜವಲಯದಿಂದ ಕೇವಲ ೩೦೦೦ಮೈಲು ಉತ್ತರಕ್ಕಿದೆ. ಇದೇ ಪ್ರಕಾರ ಕ್ರಿ
ಕೀಟಕಗಳು ಶಿಲಾರಾಳ(Amber = ತೃಣಮಣಿ)ದಲ್ಲಿ ಅಚ್ಚಳಿಯದೇ ರಕ್ಷಿಸ
ಟ್ಟಿವೆ. ಇಂಥ ತೃಣಮಣಿಗಳು ಪ್ರಶ್ಯಿಯಾ ದೇಶದ 'ಬಾಲ್ಟಿಕ್' ದ
ಕಾಣಸಿಗುವ (ಅಲಿಗೋಸೀನ್) ಶಿಲಾಶ್ರೇಣಿಗಳಲ್ಲಿ ದೊರಕಿದ್ದಿವೆ. ಈ ಪ
'ಶವರಕ್ಷಿತತೆ' (Mummification) ಎಂದೂ ಕರೆಯುತ್ತಾರೆ.

(೨) **ಅಸ್ಥಿಭಾಗಗಳ ರಕ್ಷಣೆ ವಿಧಾನ:** ಪ್ರಾಣಿಗಳ ಅಸ್ಥಿಪಂಜರ
ಮಾತ್ರ ತಮ್ಮ ಮೂಲ ಸ್ಥಿತಿಯಲ್ಲಿ ಯಾವದೇ ಬದಲಾವಣೆ ಇಲ್ಲದೆ ಕಾ
ಲ್ಪಡುತ್ತವೆ. ಆದರೆ ಅವು ತಮ್ಮ ಜೀವಜನಿತ (Organic) ಪದಾರ್ಥ
ಕಳೆದುಕೊಳ್ಳುತ್ತವೆ. ಉದಾಹರಣೆಗೆ ಇಂಗ್ಲಂಡ್ ದೇಶದ ಪ್ಲಾಯೋ
ಶಿಲಾಶ್ರೇಣಿಗಳಲ್ಲಿ ಹುದುಗಿರುವ ವಿವಿಧ ಜಾತಿಯ ಮೃದ್ವಂಗಿಗಳ ಚಿಪ್ಪು
(Shells), ಮತ್ತು ಮಧ್ಯಜೀವಕಲ್ಪದ (ಕೋಷ್ಟಕ ೧ನ್ನು ನೋಡಿರಿ)
ಬೆನ್ನೆಲುಬುಳ್ಳ, ಭೂ ಹಾಗೂ ಜಲಚರ ಪ್ರಾಣಿಗಳ (ದ್ವಿಚರ, ಸರಿಸೃಪ ಮ
ಸಸ್ತನಿಗಳು) ಅಸ್ಥಿ ಅವಶೇಷಗಳು. (ಚಿತ್ರ ನೋಡಿರಿ)

ಭೂ ಇತಿಹಾಸ ಶಿಲಾಸ್ತಂಭ

CENOZOIC ERA

- ಪ್ರಾಚೀನ ಯುಗ
- ಪ್ಲೀಸ್ಟೋಸೀನ ಯುಗ
- ಪ್ಲಿಯೋಸೀನ ಯುಗ
- ಮಯೋಸೀನ ಯುಗ
- ಆಲಿಗೋಸೀನ ಯುಗ
- ಇಯೋಸೀನ ಯುಗ
- ಪೇಲಿಯೋಸೀನ ಯುಗ

MESOZOIC ERA

- ಕ್ರಿಟೇಷಸ್ ಯುಗ
- ಜುರಾಸಿಕ್ ಯುಗ
- ಟ್ರಯಾಸಿಕ್ ಯುಗ

PALAEOZOIC ERA

- ಪರ್ಮಿಯನ್ ಯುಗ
- ಕಾರ್ಬಾನಿಫೆರಸ್ ಯುಗ
- ಡೆವೋನಿಯನ್ ಯುಗ
- ಸೈಲೂರಿಯನ್ ಯುಗ
- ಆರ್ಡೋವಿಷಿಯನ್ ಯುಗ
- ಕೇಂಬ್ರಿಯನ್ ಯುಗ



PRE-CAMBRIAN

- ಆದಿ ಜೀವಕಲ್ಪ (ALGONKIAN)
- ಆರ್ಷೇಯ ಜೀವಕಲ್ಪ (ARCHAEAN)

ALGAE ?

(೪) ಇಂಗಾಲ ಸಂಯುಕ್ತ ವಿಧಾನ: ಕೈಟಿನ್* (Chitin) ಎಂಬ [illegible] ಪದಾರ್ಥವನ್ನು ಹೊಂದಿದ ಜೀವಿಗಳ ಭಾಗಗಳು ದೀರ್ಘ ಸಂರಕ್ಷಣಾ-[illegible] ಒತ್ತಡಕ್ಕೆ ಸಿಲುಕಿದಾಗ, ಸಾರಜನಕ ಮತ್ತು ಆಮ್ಲಜನಕ ಪದಾರ್ಥ-[illegible] ಕೇವಲ ಇಂಗಾಲವನ್ನು ಸಂಯೋಜಿಸಲ್ಪಟ್ಟು, ಇಂಗಾಲ ಸಂಯುಕ್ತ-[illegible]ಗಳು ರಕ್ಷಿಸಲ್ಪಡುತ್ತವೆ. ಉದಾಹರಣೆಗೆ ಪ್ರಸಂಗದಲ್ಲಿ [illegible] ಮತ್ತು ಆದಿಜೀವಕಲ್ಪದ ಪೂರ್ವಾರ್ಧ ಶಿಲಾಸ್ತರಗಳಲ್ಲಿ ಕಾಣ-[illegible] ಗ್ರಾಪ್ಟೊಲೈಟ್ ಎಂಬ ಜೀವಾವಶೇಷಗಳು ಈ ವಿಧಾನದ್ದಾಗಿರುವುದರಿಂದಲೇ [illegible]ಟ್ಟಿವೆ.

(೫) ಎರಕ ಮತ್ತು ಅಚ್ಚು ವಿಧಾನ: ಅನೇಕ ಪ್ರಾಣಿಗಳ (ಬ್ರಾಕಿ-[illegible]ಪಾಡ್, ಮೃದ್ವಂಗಿ, ಫೋರಮಿನಿಫೆರ) ಚಿಪ್ಪುಗಳು ಮತ್ತು ಇತರ [illegible]ಗಳ ಅಸ್ಥಿಗಳು ಶಿಲಾಪದರಗಳಲ್ಲಿ ಹೂತುಹೋದನಂತರ ಅವು ಕಾಲ-[illegible]ದಲ್ಲಿ ನಶಿಸಿ, ಇಲ್ಲವೆ ಕರಗಿಹೋಗುತ್ತವೆ. ಆದರೆ ಅವುಗಳನ್ನು ಗುರುತಿಸಲು [illegible] ಗೂಡುಗಳೇ (ಎರಕ) ಸಾಕು. ಈ ಗೂಡುಗಳಲ್ಲಿ ಅವಶೇಷಗಳ [illegible] ಮತ್ತು ಹೊರಮೈ ಶೃಂಗಾರವಿನ್ಯಾಸಗಳಿಂದಲೇ, ಅವುಗಳ ಸ್ವಭಾವ-[illegible], ರಚನೆ ಮತ್ತು ಪ್ರಾಚೀನತೆಗಳನ್ನು ಪ್ರತ್ಯಕ್ಷವಲ್ಲದಿದ್ದರೂ ಪರೋಕ್ಷ-[illegible] ತಿಳಿದುಕೊಳ್ಳಲು ಸಾಧ್ಯವಿದೆ. ಕಾಲಕ್ರಮೇಣ ದೂಳಿನಿಂದ ಸಾಗಿ-[illegible]ಸಲ್ಪಟ್ಟ ಖನಿಜ ಪದಾರ್ಥಗಳಿಂದ ಆ ಗೂಡುಗಳು ತುಂಬಿ ಅಚ್ಚಾಗು-[illegible] ಉದಾಹರಣೆಗೆ ಜುರಾಸಿಕ್ ಯುಗದ (ಮಧ್ಯಜೀವಕಲ್ಪ) ಅಂತ್ಯ-[illegible]ಗಳಲ್ಲಿ ಸಿಗುವ ಪ್ರೋಟೆರಲ್ಯಾಂಡ್ ಬ್ಯಾಲ್ಟಿಕ್ ಎಂಬ ಶಿಲಾಪದರಗಳಲ್ಲಿ [illegible] ದೊರೆತಿರುವ ಮೃದ್ವಂಗಿಗಳ ಎರಕ ಮತ್ತು ಅಚ್ಚುಗಳು ಗಮನಾರ್ಹವಾಗಿವೆ.

(೬) ಶಿಲೀಕರಣ ವಿಧಾನ: ಸಾಮಾನ್ಯವಾಗಿ ಈ ವಿಧಾನವು ಸಸ್ಯಗಳಿಗೆ ಅನ್ವಯಿಸುತ್ತದೆಂದು ಹೇಳಬಹುದು. ಸಸ್ಯಜೀವಿಯು ಸತ್ತಾಗ ಬಿದ್ದ-[illegible]ಲೆ, ಅದರ ವಿಭಿನ್ನ ಭಾಗಗಳಾದ ಎಲೆ, ಹೂವು, ಕಾಯಿಗಳು ಶೀಘ್ರ-[illegible]ಹಾಗುತ್ತವೆ. ಆದರೆ ಅದರ ಕಾಂಡ, ರೆಂಬೆಕೊಂಬೆಗಳು ನಶಿಸಿಹೋಗದೆ, [illegible]ಗಳೊಂದಿಗೆ ಬೆರೆತು ಸ್ಥಾನಪಲ್ಲಟಕ್ಕೆ ಒಳಪಡುತ್ತವೆ. ಈ ರೀತಿ [illegible] ಶಾಖದಿಂದ ಕ್ರಮೇಣವಾಗಿ 'ಸಿಲಿಕಾ' ಸ್ಥಾನಪಲ್ಲಟವು ಶೀಘ್ರವಾಗಿ ನಡೆ-[illegible]ದು. ಇದರಲ್ಲಿ ಮತ್ತು ಅಂತಹೆಂದರೆ ಸಸ್ಯದ ಮೂಲರೂಪದ ರಚನೆಗಳು [illegible]ತ್ತವೆ. ಜೀವಕೋಶಗಳು (Cellulose) ಮಾತ್ರ ನಶಿಸಿ ಸಿಲಿಕಾ [illegible]

* [illegible]ಟಿನ್ ಎಂಬುದು ಆಮ್ಲಜನಕ, ಸಾರಜನಕ ಮತ್ತು ಇಂಗಾಲಗಳನ್ನೊಳಗೊಂಡ ಸಂಯುಕ್ತ [illegible]ಸಾಯನ ಪದಾರ್ಥ.

ಗಳಿಗೆ ಅವಕಾಶ ಮಾಡಿಕೊಡುತ್ತವೆ. ಇಂಥ ಶಿಲೀಕರಣ ಸಸ್ಯಗಳು 'ಪರ್ಮೊ ಕಾರ್ಬಾನಿಫೆರಸ್' ಯುಗದ ಶಿಲಾಶ್ರೇಣಿಗಳಲ್ಲಿ ಸ್ತಂಭೀಭೂತವಾಗಿವೆ. ಇ ಗಳಿಗೆ "ಕಲ್ಲುಮರ" (Fossil wood) ಎಂದು ಕರೆಯುವರು.

(೬) **ಮುದ್ರೆಯೊತ್ತುವ ವಿಧಾನ :** ಪುರಾತನ ಪ್ರಾಣಿಗಳ ಪಾದಮು ಗಳು ಹಾಗು ಜೆಲ್ಲಿಮತ್ಸ್ಯದ ಮುದ್ರೆಗಳು, ವಿವಿಧ ಯುಗಗಳ ಮರಳ ಪದರು ಶಿಲೆಗಳಲ್ಲಿ ಸಿಗುತ್ತವೆ. ಅಲ್ಲದೆ ಸಸ್ಯ ಎಲೆಗಳ ಮುದ್ರೆಗಳೂ ಇ ವಿಧಾನದ ಕುರುಹುಗಳು. ಈ ಕುರುಹುಗಳಿಂದ ಪ್ರಾಚೀನಕಾಲದ ಪ್ರಾಣಿ ಗಾತ್ರ, ಚಲನೆ ಹಾಗು ರಚನೆಗಳ ವಿಚಾರವಾಗಿ ತಿಳಿಯಲು ಸಹಕಾರಿಯಾ ವಿಶೇಷವಾಗಿ ಮಧ್ಯಜೀವಕಲ್ಪದ ಮತ್ತು ನವಜೀವಕಲ್ಪದ ಶಿಲಾಶ್ರೇಣಿಗ ಸರಿಸೃಪಗಳ ಮತ್ತು ಸಸ್ತನಿಗಳ ಅಡಿಮುದ್ರೆಗಳು ಕಾಣಸಿಗುತ್ತವೆ.

(೭) **ಶಿಲೀಭೂತ ಪುರೀಷ ವಿಧಾನ :** ಪುರಾತನ ಪ್ರಾಣಿಗಳ ಜೀರ್ಣಾ ಶೇಷಗಳು ಕೆಲವೇ ಇದ್ದರೂ ಅವು ಬಹು ಉತ್ಕೃಷ್ಟವಾಗಿವೆ. ಸಾಮಾನ್ಯ ದ್ವಿಚರ, ಸರಿಸೃಪಗಳ ಮತ್ತು ಸಸ್ತನಿಗಳ ಜೀರ್ಣಾವಶೇಷಗಳೇ ಮುಖ್ಯವಾದು ಕೆಲವೊಮ್ಮೆ ಈ ಶಿಲೀಭೂತ ಪುರೀಷದಲ್ಲಿ ಮತ್ಸ್ಯದ ಅಸ್ಥಿಗಳೂ ಹಾಗು ಇ ಪ್ರಾಣಿಗಳ ಗಡುಸು ಭಾಗಗಳೂ ದೊರೆತದ್ದು ಗಮನಾರ್ಹವಾಗಿದೆ ಅ ಮೇಲೆ ಪ್ರಾಚೀನಕಾಲದ ಅನೇಕ ಪ್ರಾಣಿಗಳು ಮಾಂಸಾಹಾರಿಗಳಾಗಿದ್ದ ಎಂಬುದು ಇಲ್ಲಿ ನಿದರ್ಶನವಾಗಿದೆ. ಇಂಥ ಜೀರ್ಣಾವಶೇಷಗಳನ್ನು ಯೋಗ್ಯ ಯಲ್ಲಿ ಪ್ರತ್ಯಕ್ಷ ಪರೀಕ್ಷಿಸಿದರೆ, ಗತಕಾಲದ ಪ್ರಾಣಿಗಳು ಮಾಂಸಾಹಾರಿ ಇಲ್ಲವೆ ಸಸ್ಯಾಹಾರಿಗಳೇ ಎಂಬುದನ್ನು ಖಚಿತಪಡಿಸಬಹುದು. ಅಮೇರಿಕೆ ಟೆಕ್ಸಾಸ್ ಪ್ರದೇಶದಲ್ಲಿ ಕಾರ್ಬಾನಿಫೆರಸ್ ಯುಗದ ಕೆಂಪು ಶಿಲಾಸಮುದಾ ಗಳಲ್ಲಿ ಕೆಲವು ಸರಿಸೃಪಗಳ (ಸೈಮೋರಿಯಾ) ಅಂಡಾವಶೇಷಗಳು ಬಹುವ ಮಹತ್ವವನ್ನು ಬೀರಿವೆ. ಅಲ್ಲದೆ ಗೋಬಿ ಮರುಭೂಮಿಯ ಮಧ್ಯವರ್ತಿಯ ಮಂಗೋಲಿಯಾ ಪ್ರದೇಶದಲ್ಲಿ ಪೂರ್ವಕಾಲದ ಪೆಡಂಭೂತಗಳ[೯] (Dinosa ಅಂಡಾವಶೇಷಗಳು ಉಲ್ಲೇಖನೀಯವಾಗಿವೆ.

ಜೀವಾವಶೇಷಗಳನ್ನು ಹೊರತುಪಡಿಸಿ, ಜಲಜಶಿಲೆಗಳಲ್ಲಿ ಕೊರೆಯಲ ಅಲೆಯ ಗುರುತುಗಳು (Ripple marks), ಮಳೆಹನಿಯ ಮುದ್ರೆ (Rain prints), ಬಿಸಿಲು ಬಿರುಕುಗಳು (Sun cracks), ಪ್ರವಾಹಸ್ತರ

---

೯. ಹೆಚ್ಚಿನ ವಿವರಗಳಿಗೆ "ಪೂರ್ವಕಾಲದ ಪೆಡಂಭೂತಗಳು" (ನಾಗಲ ರಾಮರಾವ್)—ನಾರಾಯಣಯ್ಯಂಗಾರ್ಯ, 'ಪ್ರಬುದ್ಧ ಕರ್ನಾಟಕ'—ಲೇಖನ ಓದಿಕೊಳ್ಳಿರಿ.

rrent bedding), ಕ್ರಮಾನುಕ್ರಮ ಪದರುಗಳು (Graded bedding) ಮತ್ತು ವಿವಿಧ ಅನನುರೂಪತೆಗಳು (Unconformities) ಇವೆಲ್ಲವೂ ಭೂ ಹಾಸವನ್ನು ಸಂಪೂರ್ಣ ತಿಳಿಯಲು ತುಂಬಾ ಸಹಕಾರಿಯಾಗಿವೆ. ಇವೆಲ್ಲ ಗಳಿಂದ ಭೂ ಇತಿಹಾಸಕ್ಕೆ ಆಗಿರುವ ಉಪಕಾರ ಅಷ್ಟಿಷ್ಟಲ್ಲ.[೧]

ಇನ್ನು ಕೊನೆಯದಾಗಿ ಸಂಕ್ಷಿಪ್ತದಲ್ಲಿ ಪಳೆಯುಳಿಕೆಗಳ ಮಹತ್ವವನ್ನು ಸೋಣ. ಇವುಗಳ ಮಹತ್ವವನ್ನು ಮುಖ್ಯವಾಗಿ ನಾಲ್ಕು ಹಂತಗಳಲ್ಲಿ ಸಬಹುದು. ಪಳೆಯುಳಿಕೆಗಳು ಭೂವಿಜ್ಞಾನದ ಸ್ಮಾರಕಗಳು ological Monuments) ಎಂಬುದು ಈಗ ನಮಗೆ ಮನವರಿಕೆಯಾಗಿದೆ ಷ್ಟೆ. ವರ್ತಮಾನಕಾಲದ ಅರಿವೇ ಭೂತಕಾಲದ ತಿಳಿವಿಗೆ ಸಾಧನವೆಂದು ಳಿದಿವಷ್ಟೆ.

(೧) **ಪಳೆಯುಳಿಕೆಗಳು ಭೂಇತಿಹಾಸದ ಕುರುಹುಗಳು :** ಕೆಲವು ಷ್ಟ ಜೀವರಾಶಿಗಳನ್ನು ಜಲಜಶಿಲೆಗಳ ನಿರ್ದಿಷ್ಟ ಪ್ರತಿಪದರುಗಳಲ್ಲಿ ಗುರುತಿಸ ಬಹುದೆಂದು ಮೊದಲು ವಿಲಿಯಂ ಸ್ಮಿತ್ ತಿಳಿಸಿದರು. ವಿವಿಧ ವಿಶಿಷ್ಟ ಜೀವರಾಶಿ ು ವಿವಿಧ ಭೂಕಾಲಗಳ ಕುರುಹುಗಳು ಎಂಬುದನ್ನು ಅವರು ಮನಗಂಡರು. ದೆ ಪಳೆಯುಳಿಕೆಗಳು ಸಮಕಾಲೀನ ಶಿಲೆಗಳನ್ನು ಕರಾರುವಾಕ್ಕಾಗಿ ನಿರ್ಧರಿ ು ಸಹಕಾರಿಗಳೆಂದೂ ಅರಿತರು. ಇವೆಲ್ಲವುಗಳನ್ನರಿತ ವಿಲಿಯಂ ಸ್ಮಿತ್‌ರವರು ರಾತನ ಜೀವಶಾಸ್ತ್ರದ ಪ್ರಥಮ ನಿಯಮವಾದ ಜೀವಪರಂಪರೆಯ ಕ್ರಮ ನ್ನು (Succession of Life) ಸುಮಾರು ಕ್ರಿಸ್ತಶಕ ೧೮೦೦ರಲ್ಲಿ ರೂಪಿಸಲು ಸ್ತರಾದರು. ಇದರ ಪರಿಣಾಮವಾಗಿ ಜೀವಪರಂಪರೆಯ ಕ್ರಮತತ್ತ್ವವು ತೀವ್ರ ನ್ನಣೆಪಡೆಯಿತು. ಇವೆಲ್ಲ ಆಧಾರಗಳ ಮೇಲೆ "ಮಾದರಿ ಭೂ ಇತಿಹಾಸ ಸ್ತಂಭ"(Standard Geologic Column)ವನ್ನು (ಕೋಷ್ಟಕ ೧ನ್ನು ನೋಡಿರಿ) ರಚಿಸಲು ಸಾಧ್ಯವಾಯಿತು. ಈ ತತ್ತ್ವಗಳನ್ನಾಧರಿಸಿ ಪ್ರಪಂಚದ ವಿಧ ಭೂಭಾಗಗಳ ಶಿಲಾಸಮುದಾಯಗಳನ್ನು ವಿಂಗಡಿಸಲು ಮತ್ತು ಕ್ರಮ ಡಿಸಲು ಅನುಕೂಲವಾಗಿದೆ.

ಪ್ರಪಂಚದ ಜೀವಾವಶೇಷಯುಕ್ತ ಪ್ರಸ್ತರಗಳಲ್ಲಿ ಎರಡು ಬಗೆಯ ವಾವಶೇಷಗಳಿರುತ್ತವೆ. ಒಂದು : ಶಿಲಾಶ್ರೇಣಿಯ ಎಲ್ಲಾ ಭಾಗಗಳಲ್ಲಿಯೂ ಗುವ ಒಂದು ರೀತಿಯ ಪಳೆಯುಳಿಕೆಗಳು. ಎರಡು : ಶಿಲಾಶ್ರೇಣಿಯ ಒಂದು ಭಾಗಕ್ಕೆ ಮಾತ್ರ ಸೀಮಿತವಾದ ಅವಶೇಷಗಳು. ಇದರಲ್ಲಿ ಎರಡನೆ- ಯವುಗಳನ್ನು "ಕಾಲಸೂಚಿ ಪಳೆಯುಳಿಕೆಗಳು"[೧೧] (Index Fossils) ಎಂದು

---

೧. ಹೆಚ್ಚಿನ ವಿವರಗಳಿಗೆ, "ಭೂಇತಿಹಾಸ"—ಡಿ. ರಂಗಯ್ಯ, ಇವರ ಪುಸ್ತಕ ನೋಡ ಬಹುದು (೧೯೭೯).

ಕರೆಯುವುದು ಔಚಿತ್ಯವಿದೆ. ಅತಿಮುಖ್ಯವಲ್ಲದಿದ್ದರೂ ಪರಿಣಾಮಕಾ
ಯಾಗಬಲ್ಲ ಮೂರನೆಯ ರೀತಿಯ ಅವಶೇಷಗಳೆಂದರೆ "ವಲಯ ಪಳೆಯುಳಿಕೆ
ಗಳು" (Zonal Fossils). ಹೆಸರು ಸೂಚಿಸುವಂತೆ ಅವು ವಿವಿಧ ಪ್ರಾದೇಶಿಕ
ವಲಯಗಳಿಗೆ ಮಾತ್ರ ಅನ್ವಯಿಸುತ್ತವೆ. ಪ್ರಾಚೀನ ಜೀವಕಲ್ಪದ ವಿವಿಧ
ಶಿಲಾಸಮುದಾಯಗಳನ್ನು ಶಿಲಾಪಾದಗಳನ್ನಾಗಿ ವಿಂಗಡಿಸುವಲ್ಲಿ ಟ್ರೈಲೊಬೈಟು
ಗಳು, ಗ್ರಾಪ್ಟೋಲೈಟುಗಳು ಮತ್ತು ಬ್ರೇಕಿಯೋಪಾಡ್‌ಗಳು ಉಪಯುಕ್ತ
ಕಾಲಸೂಚಿಗಳನ್ನು ಒದಗಿಸಿವೆ. ಮಧ್ಯ ಜೀವಕಲ್ಪದ ಸಮುದಾಯಗಳಿಗೆ
ಅಮೊನೈಟುಗಳು ಪರಿಣಾಮಕಾರಿ ಕಾಲಸೂಚಿಗಳಾಗಿವೆ. ಭೌಗೋಲಿಕವಾಗಿ
ಪರಸ್ಪರ ದೂರದಲ್ಲಿದ್ದರೂ, ಭಾರತದ ರಾಜಮಹೇಂದ್ರಿ (ಅಸ್ಸಾಮ) ಮತ್ತು
ಗರುಡಮಂಗಲಂ(ತ್ರಿಚಿನಾಪಳ್ಳಿ)ಗಳಲ್ಲಿ ದೊರಕುವ ಅಮೊನೈಟ ಕಾಲಸೂಚಿ
ಪಳೆಯುಳಿಕೆಗಳನ್ನೊಳಗೊಂಡ ಕ್ರಿಟೇಷಸ್ ಯುಗದ ಶಿಲಾಶ್ರೇಣಿಗಳನ್ನು
ಸಮಕಾಲೀನ ಶಿಲೆಗಳೆಂದು ಡಿ. ಸಿ. ದಾಸಗುಪ್ತಾ ವರದಿಮಾಡಿದ್ದಾರೆ. ಈ ಶಿಲಾ
ಪಾದಗಳು ಕೇವಲ ೫-೧೦ ಅಡಿ ದಪ್ಪವಾಗಿದ್ದು ಭೌಗೋಲಿಕ ವಿಶಾಲತೆಯನ್ನು
ಹೊಂದಿವೆ.

ಈ ಪ್ರಕಾರ ಭೌಗೋಲಿಕವಾಗಿ ಮತ್ತು ಭೂಇತಿಹಾಸಕ್ಕನುಗುಣವಾಗಿ
ಪಳೆಯುಳಿಕೆಗಳ ಸ್ಥಾನವನ್ನು ನಿರ್ದಿಷ್ಟಪಡಿಸುವುದರಲ್ಲಿಯೇ ಅವುಗಳ
ಮಹತ್ವವು ಅಡಗಿದೆ. ಅತಿ ಪ್ರಾಚೀನಕಾಲದ ಜೀವಿಗಳು ಸುಲಭ ರಚನೆಯನ್ನೂ
ಇತ್ತೀಚಿನ ಜೀವರಾಶಿಗಳು ಕ್ಲಿಷ್ಟರಚನೆಯನ್ನೂ ಹೊಂದಿರುವ ಪ್ರಯುಕ್ತ
ಜೀವಪರಂಪರೆ ಉದ್ದಕ್ಕೂ ಜೀವಿಗಳು ವಿಕಾಸ ಹೊಂದುತ್ತಿವೆ ಎಂಬುದನ್ನು
ಸ್ಮಿತ್‌ರವರು ಬಹು ಹಿಂದೆಯೇ ತಿಳಿದಿದ್ದರು. ಬೇರೆಬೇರೆ ಪ್ರದೇಶಗಳ
ಶಿಲಾಶ್ರೇಣಿಗಳನ್ನು ಹೋಲಿಸುವ ರೀತಿಗೆ "ಸಮದೂಗುವಿಕೆ" (Correlation)
ಎಂದು ಹೆಸರು. ಸಮದೂಗುವಿಕೆಯು ಮುಖ್ಯತಃ ಪಳೆಯುಳಿಕೆಗಳಿಂದ
ಸುಲಭವಾಗಿದೆ. ಈ ಸಮದೂಗುವಿಕೆಯು ಜೀವಾವಶೇಷಯುಕ್ತ ಶಿಲಾಪದರು
ಗಳ ಪರಸ್ಪರ ಸಂಬಂಧವನ್ನೂ, ಭೂಇತಿಹಾಸ ಶಿಲಾಸ್ತಂಭದಲ್ಲಿ ಅವುಗಳ
ಸ್ಥಾನವನ್ನೂ ತಿಳಿಸುವಲ್ಲಿ ವಿಶೇಷ ಮಹತ್ವವನ್ನು ಪಡೆದಿವೆ.

(೨) **ಪಳೆಯುಳಿಕೆಗಳು ಪುರಾತನ ಭೌಗೋಲಿಕ (Palaeogeography) ಕುರುಹುಗಳು :** ಜೀವಾವಶೇಷಗಳ ರಚನೆ, ಸ್ವರೂಪಗಳು ಪುರಾತನ ಭೂ
ಸಾಗರಗಳ ವಿಶಾಲತೆ, ವಾಯುಗುಣಗಳ ಸ್ಥಿತಿಗತಿಗಳನ್ನು ತಿಳಿಯುವಲ್ಲಿ ಬೇಕಾ
ಬೇರಿವೆ. ಪಳೆಯುಳಿಕೆಗಳು, ಪ್ರಾಚೀನ ಭೂಲಕ್ಷಣಗಳನ್ನೂ, ಸಾಗರದಾ
ಮತ್ತು ಸಿಹಿನೀರು ಇತ್ಯಾದಿಗಳ ವಿಶಿಷ್ಟತೆಯನ್ನೂ, ವಿವಿಧ ವಾತಾವರಣಗಳ

೧೧. ಅತಿ ಕಡಿಮೆ ಕಾಲದಲ್ಲಿ ವಿಶಾಲ ಭೌಗೋಲಿಕ ವಿಸ್ತಾರವನ್ನು ಹೊಂದಿದ ಜೀವಿಗಳು.

ಅವು ಹೇಗೆ ಪರಿವರ್ತನೆ ಹೊಂದುತ್ತಿದ್ದುವು ಎಂಬುದನ್ನೂ ಕರಾರುವಾಕ್ಕಾಗಿ ಹೇಳಬಲ್ಲವು. ಉದಾಹರಣೆಗೆ, ಭಾರತದ ತ್ರಿಚಿನಾಪಳ್ಳಿ ಮತ್ತು ರಾಜಮಹೇಂದ್ರಿ ಪ್ರದೇಶಗಳನ್ನು, ಕ್ರಿಟೇಷಸ್ ಯುಗದಲ್ಲಿ ಸಾಗರವು ಆತಿಕ್ರಮಿಸಿತ್ತು ಎಂಬುದಕ್ಕೆ ಈಗಿರುವ ಸಾಗರಜನಿತ ಜೀವಾವಶೇಷಯುಕ್ತ ಶಿಲಾಶ್ರೇಣಿಗಳೇ ಕ್ರಮಬದ್ಧ ಸಾಕ್ಷಿಗಳಾಗಿವೆ. ಇದಲ್ಲದೆ ಪಳೆಯುಳಿಕೆಗಳು ಭೂವಾತಾವರಣದ ಮತ್ತು ಸಾಗರವಾತಾವಾರಣದ ಕಾಲಕ್ರಮದಲ್ಲಿಯ ಬದಲಾವಣೆಗಳನ್ನು ತಿಳಿಸುತ್ತವೆ.

(೩) ಪಳೆಯುಳಿಕೆಗಳು ಜೀವವಿಕಾಸದ ಕುರುಹುಗಳು : ವಿಕಾಸ ತತ್ವವನ್ನು ತಿಳಿಯಲು ಜೀವಾವಶೇಷಗಳು ಮಾತ್ರ ನೇರ ಸಾಕ್ಷಿಗಳಾಗಿವೆಯಷ್ಟೆ. ಈ ಹಿಂದೆ ಹೇಳಿದಂತೆ ಅವು ಜೀವಪರಂಪರೆಯ ಕುರುಹುಗಳು. ಜೀವಪರಂಪರೆಯಲ್ಲಿ ಅನೇಕ ಜೀವಿಗಳು ದೀರ್ಘಾಯುಗಳಾಗಿ ಉತ್ಕೃಷ್ಟತೆಯನ್ನು ಪಡೆದುವಲ್ಲದೆ ಇನ್ನೂ ಹಲವು ಅಲ್ಪಾಯುಗಳಾಗಿ ಮಧ್ಯದಲ್ಲಿಯೇ 'ಗತವಂಶಿ (Extinct)ಗಳಾದುವು. ಉದಾಹರಣೆಗೆ ಇಡೀ ಭೂಮಂಡಲವನ್ನೇ ಆಳಿದ ಪೆಡಂಭೂತಗಳು ಮಧ್ಯಜೀವಕಲ್ಪದಲ್ಲಿ ಹುಟ್ಟಿ, ಉತ್ಕೃಷ್ಟತೆಯನ್ನು ಹೊಂದಿ ಅದೇ ಕಲ್ಪದ ಕೊನೆಗೆ (ಕ್ರಿಟೇಷಸ್ ಯುಗದ ಅಂತ್ಯ) ತಮ್ಮ ಗತವೈಭವದೊಂದಿಗೆ ನಷ್ಟವಂಶಿಗಳಾದುವುದು. ಪ್ರಾಚೀನ ಜೀವಕಲ್ಪದಲ್ಲಿ ಜನಿಸಿದ ಕೆಲವು ಪ್ರಾಣಿಗಳು (ಬ್ರೇಕಿಯೋಪಾಡ್ ಗುಂಪಿಗೆ ಸೇರಿದ ಲಿಂಗುಲಾ) ಈಗಲೂ ಜೀವಿಸಿದ್ದುದು ತಿಳಿದುಬಂದಿದೆ. ಆದ್ದರಿಂದ ಪಳೆಯುಳಿಕೆಗಳು ಭೂಇತಿಹಾಸ ಶಿಲಾಸ್ತಂಭದ ವಾಸ್ತುಶಿಲ್ಪಿಗಳೂ, ಪೂರ್ವಜರ ವಿಕಾಸಿಗಳೂ ಮತ್ತು ವಂಶೋದ್ಧಾರಿಗಳೂ ಎಂಬುದು ಸರ್ವವಿದಿತ.

(೪) ಪಳೆಯುಳಿಕೆಗಳು ಅನನುರೂಪತೆಯ ಕುರುಹುಗಳು : ಭೂ ಇತಿಹಾಸದ ಉದ್ದಕ್ಕೂ ಅನೇಕ ಸಣ್ಣ ಮತ್ತು ದೊಡ್ಡ ಅನನುರೂಪತೆಗಳಿರುವುದು ಸರ್ವಸಾಮಾನ್ಯ ಆಗಿದೆ ಅನನುರೂಪತೆಯು ಅಲ್ಪ ಇಲ್ಲವೆ ದೀರ್ಘಕಾಲವನ್ನು ಸೂಚಿಸುತ್ತದೆ. ಅಂದರೆ ಈ ಕಾಲದಲ್ಲಿ ಶಿಲಾಸಂಚಯನವು ಇರುವುದಿಲ್ಲ. ಅನೇಕ ರೀತಿಯಲ್ಲಿ ಅನನುರೂಪತೆಯನ್ನು ಗುರುತಿಸಬಹುದು. ಶಿಲಾಪೇರಿಕೆಯ ಕ್ರಮ ಇಲ್ಲವೆ ರಚನಾಕ್ರಮಗಳಲ್ಲಿ ಯಾವುದೇ ಬದಲಾವಣೆ ಇಲ್ಲದಿದ್ದರೆ ಶಿಲಾಶ್ರೇಣಿಗಳಲ್ಲಿ ಅನನುರೂಪತೆ ಗುರುತಿಸುವುದು ಕ್ಲಿಷ್ಟವಾಗಬಹುದು. ಇಂಥ ಸಮಯದಲ್ಲಿ ಪಳೆಯುಳಿಕೆಗಳು ಬಹು ಮಹತ್ವದ ಪಾತ್ರವಹಿಸಬಲ್ಲವು. ಅಂದರೆ ಅನನುರೂಪತೆ ಇರುವಲ್ಲಿ ಪಳೆಯುಳಿಕೆಗಳು ನಿಧಾನವಾಗಿ ಬದಲಾವಣೆ ತೋರಬಹುದು ಇಲ್ಲವೆ ಅದೃಶ್ಯವಾಗಬಹುದು. ಇದೂ ಅಲ್ಲದೆ ಅನನುರೂಪತೆಯ ಎರಡೂ ಭಾಗದಲ್ಲಿ, ಅವಶೇಷಯುಕ್ತ ಶಿಲಾಶ್ರೇಣಿಗಳಿದ್ದರೆ, ಪಳೆಯುಳಿಕೆಗಳ

ಸಹಾಯದಿಂದ ಆ ಶಿಲಾಗುಂಪುಗಳ ವಯೋನಿರ್ಧಾರ ಮಾಡಿ, ಅನುರೂಪ
ತೆಯ ಅವಧಿಯನ್ನೂ ಖಚಿತವಾಗಿ ನಿರ್ಧರಿಸಬಹುದು.

ಈ ಪ್ರಬಂಧವನ್ನು ಮುಗಿಸುವ ಮೊದಲು ಜೀವಿಗಳ ಸಾಗರೋತ್ತ
ಮೂಲಾಶ್ರಯಗಳನ್ನು ಕುರಿತು ಉಪಯುಕ್ತವಾದ ಎರಡು ಮಾತು ಹೇ
ಬೇಕಾಗಿದೆ. ಹವೆ, ಭೂಮಿ ಮತ್ತು ಜಲ ಇವು ಪ್ರತಿ ಜೀವಿಗಳಿಗೆ ಮೂಲಾಶ್ರಯ
ಗಳಾಗಿದ್ದರೂ, ಜೀವಿಗಳ ವ್ಯಾಪನೆಯು ನಾನಾ ಪ್ರದೇಶದ ನೈಸರ್ಗಿಕ ಗುಣಧ
ಗಳನ್ನೇ ಅವಲಂಬಿಸಿದೆ. ಪುರಾತನ ಜೀವಪರಂಪರೆಯು ಅಧಿಕ ಸಂಖ್ಯೆಯ
ಸಾಗರಜನಿತ ಶಿಲೆಗಳಲ್ಲಿಯೇ ಕಂಡುಬರುವುದರಿಂದ ಸಾಗರ ವಾತಾವರಣ
ಸ್ಥಿತಿಗತಿಗಳನ್ನು ಸ್ವಲ್ಪದರಲ್ಲಿ ತಿಳಿಯುವುದು ಅವಶ್ಯವೆನಿಸುತ್ತದೆ. ಸಾಗ
ವಾತಾವರಣವನ್ನು ನಾಲ್ಕು "ಜೀವವಲಯ"(Life Zones)ಗಳಲ್ಲಿ ವಿಂಗಡಿ
ಬಹುದು.

'ಕಡಲತೀರ ಪ್ರದೇಶ'(Litoral or Tidal Zone)ವು : ಇವು ಸಾಗ
ಸಮಪಾತಳಿಯ ಏರಿಳಿತಗಳಿಗೆ ಸೀಮಿತವಾಗಿರುವ ಕಿರಿದಾದ ಪಟ್ಟಿ. ಈ ಪಟ್
ಯಲ್ಲಿ ತೀವ್ರ ಏರಿಳಿತಗಳಿರುವುದರಿಂದ ಜೀವಿಗಳಿಗೆ ಬದುಕಲಿಕ್ಕೂ ತಮ
ಗುರುತುಗಳನ್ನು ಕಾಯ್ದಿಡಲಿಕ್ಕೂ ಅನುಕೂಲವಿಲ್ಲ.

'ನೆರಿಟಿಕ್' (Neritic) : ಈ ಈಜೀವವಲಯವು ಭೂಖಂಡದ ಅಂ
ಭಾಗ (Continental shelf). ಸಾಗರದ ಕೆಳ ಏರಿಳಿತದಿಂದ ಹಿಡಿದು ಸುಮಾ
೬೦೦ ಅಡಿ ಆಳದವರೆಗೆ ಇದು ಹಬ್ಬಿಕೊಂಡಿದೆ. ಇದು ಫಲವತ್ತಾದ ಸ
ಗಳಿಂದ ತುಂಬಿದೆಯಲ್ಲದೆ ಅನೇಕ ಜೀವರಾಶಿಗಳಿಗೆ ಜೀವಪೋಷಕವಾಗಿ
ಬೆನ್ನೆಲುಬುರಹಿತ ಪ್ರಾಣಿಗಳ ಅವಶೇಷಗಳು ಈ ವಲಯದಲ್ಲಿ ಹೇರಳವಾಗಿವೆ.

'ಬೇಥಿಯಲ್' (Bathyal) : ಈ ಜೀವವಲಯವು ೬೦೦ಅಡಿ ಆಳದಿ
೬೦೦೦ ಅಡಿ–ಆಳದವರೆಗೆ ಚಾಚಿಕೊಂಡಿದೆ. ಇದು ನೆರಿಟಿಕ್ ವಲಯದ ಕೆ
ಭಾಗವನ್ನೂ ಮತ್ತು ಅಬಿಸಲ್ ವಲಯದ ಮೇಲ್ಭಾಗವನ್ನೂ ಆವರಿಸಿ
ಈ ವಲಯದಲ್ಲಿ ಶಿಲಾಸಂಚಯನವು ನಿಧಾನವಾಗಿರುವುದರಿಂದ ವಿವಿಧ ಜೀ
ರಾಶಿಗಳ ರಕ್ಷಣೆಗೆ ಬಹಳ ಅನುಕೂಲವಾಗಿದೆ.

ಸುಮಾರು ೬೦೦೦ ಅಡಿ ಆಳದಿಂದ ಕೆಳಗಿರುವುದೆಲ್ಲ (ಸಾಗರದ ತಳಭಾ
ಸಹಿತ) 'ಅಬಿಸಲ್' (Abyssal) ಜೀವವಲಯವೆಂದು ತಿಳಿಯಲಾಗಿದೆ.
ವಲಯವು ಪ್ರಕಾಶರಹಿತವೂ, ಶೀತವೂ ಮತ್ತು ವಾಯುಭಾರದಿಂದ ತುಂ
ದುದೂ ಆಗಿದೆ. ಇಲ್ಲಿ ಹಸಿರು ಸಸ್ಯಗಳ ಬೆಳವಣಿಗೆಗೆ ಅವಕಾಶವೇ ಇಲ್ಲ. ಶಿ
ಸಂಚಯನವು ಮಂದವಾಗಿದ್ದರೂ ಪ್ರಾಣಿಗಳ ರಕ್ಷಣೆಗೆ ಅಷ್ಟೊಂದು ಅನುಕೂ
ವಾಗಿಲ್ಲವೆಂದೇ ಹೇಳಬೇಕು.

ಸಾಗರದ ಅತಿ ಆಳದಲ್ಲಿ ಅಲೆದಾಡುವ ಜೀವಜಂತುಗಳಿಗೆ 'ವ್ಯಾಗ್ರಂಟ ಬೆಂಥೋಸ್' (Vagrant Benthos) ಎಂದೂ ಮತ್ತು ಸಾಗರದ ತಳಭಾಗಕ್ಕೆ ಅಂಟಿಕೊಂಡಿರುವ ಜಂತುಗಳಿಗೆ 'ಸೆಸ್ಸೈಲ್ ಬೆಂಥೋಸ್' (Sessile Benthos) ಎಂದೂ ಕರೆಯುವರು. ಕಡಲತೀರದಿಂದ ಅತಿ ದೂರದಲ್ಲಿ ಹಾಗು ಸಾಗರ ಸಮುಪಾತಳಿಯಲ್ಲಿಯೇ ಅಲೆದಾಡುವ ಇನ್ನೊಂದು ಬಗೆಯ ಪ್ರಾಣಿಗಳಿಗೆ 'ಪೆಲಾಜಿಕ್' (Pelagic) ಎಂಬ ಹೆಸರು ಇದೆ.

ಈ ವರೆಗೆ ವಿವರಿಸಿದುದು ಪುರಾತನ ಜೀವಶಾಸ್ತ್ರದ ಕಿರುಪರಿಚಯ, ಭೂ-ಇತಿಹಾಸದಲ್ಲಿ ಪಳೆಯುಳಿಕೆಗಳ ಮಹತ್ವ, ಪಳೆಯುಳಿಕೀಕರಣ ವಿಧಾನ, ಜೀವಿಗಳ ಸಾಗರೋತ್ತರ ಮೂಲಾಶ್ರಯಗಳ ವರ್ಣನೆಯಾಗಿದೆ. ತಾವು ಬದುಕಿದ್ದುದಕ್ಕೆ ಪ್ರಮಾಣಭೂತವಾಗಿ ಜೀವಿಗಳು ಬಿಟ್ಟುಹೋಗಿರುವ ಜೀವಾವಶೇಷಗಳನ್ನು ಕೂಲಂಕಷವಾಗಿ ಪರೀಕ್ಷಿಸಿದ್ದೇ ಆದರೆ, ಅವುಗಳ ನಿಜಸ್ವರೂಪಗಳನ್ನು ವಿಶದವಾಗಿ ತಿಳಿದುಕೊಳ್ಳಲು ಅಪಾರ ಸಾಮಗ್ರಿ ಇದೆ. ಈ ಅಪಾರ ಅಜ್ಞಾನವನ್ನು ಎಷ್ಟು ತಿಳಿದರೂ ಕಡಿಮೆಯೇ.

ಕರ್ನಾಟಕ ವಿಶ್ವವಿದ್ಯಾಲಯ ಭೂವಿಜ್ಞಾನ ವಿಭಾಗದ ಮುಖ್ಯಸ್ಥರು ಮತ್ತು ಪ್ರಾಧ್ಯಾಪಕರು ಆದ ಡಾ॥ ಎಂ. ಎಸ್. ಸದಾಶಿವಯ್ಯ ಅವರು ಈ ಪ್ರಬಂಧವನ್ನು ವಿಮರ್ಶಿಸಿ, ಉಪಯುಕ್ತ ಸಲಹೆಗಳನ್ನಿತ್ತು ಪ್ರೋತ್ಸಾಹಿಸಿದ್ದಕ್ಕಾಗಿ ಅವರಿಗೆ ನಮ್ಮ ವಂದನೆಗಳು.

ಕೋಷ್ಟಕ—೧

ಭೂ ಇತಿಹಾಸ ಕಾಲಸೂಚಿ ಚಕ್ರ

ಕಲ್ಪಗಳು (Eras)		ಯುಗ ಮತ್ತು ಕಾಲಗಳು (Periods & Epochs)	ಪ್ರಾರಂಭಕಾಲ (ಕೋಟಿ ವರ್ಷಗಳ ಹಿಂದೆ)	ಪುರಾತನ ಜೀವಪರಂಪರೆಯ ಮಹತ್ವದ ಘಟನೆಗಳು	ಭೂ ನೈಸರ್ಗಿಕ ಘಟನೆಗಳು
ಆಧುನಿಕ ಜೀವಕಲ್ಪ (Cainozoic)	ಚತುರ್ಥ ಜೀವಕಲ್ಪ (Quaternary)	ರೀಸೆಂಟ್	೦.೦೦೧	ಅತ್ಯಾಧುನಿಕ ಜೀವಿಗಳ ಉದ್ಭವ. ಇತಿಹಾಸಿಕ ಯುಗ ಪ್ರಾರಂಭ. ಮಾನವನ ಸಂಸ್ಕೃತಿ. ವಿಜ್ಞಾನಗಳ ವಿಕಾಸ.	ಅಣುಯುಗ ಪ್ರಾರಂಭ, ವಿಜ್ಞಾನದ ಹಾವಳಿ, ಆಕಾಶಬಾಣಗಳ ಹಾರಾಟ, ಚಂದ್ರದರ್ಶನ.
		ಪ್ಲೀಸ್ಟೋಸೀನ್	೦.೨	ಪ್ರಪ್ರಥಮ ಆದಿಮಾನವನ ದರ್ಶನ ಮಹಾಸಸ್ತನಿಗಳು ಮತ್ತು ಆಧುನಿಕ ಸಸ್ಯಗಳು ಹೇರಳವಾದವು.	ಭೂಖಂಡಗಳು ಹಿಮದಿಂದ ತುಂಬಿ, ಹಿಮಪ್ರವಾಹಗಳಾದವು. ಅತಿ ಶೀತವಾತಾವರಣ. ಕೊನೆಯ ಹಿಮಪ್ರವಾಹ ೧೦,೦೦೦ ವರ್ಷಗಳ ಹಿಂದೆ.
	ತೃತೀಯ ಜೀವಕಲ್ಪ (Tertiary)	ಪ್ಲಿಯೋಸೀನ್	೧.೧	ಸಸ್ತನಿಗಳ ತೀವ್ರ ವಿಕಾಸ, ಮಂಗಮಾನವನ ಗೋಚರ. ಶೀತೋಷ್ಣ ಸಸ್ಯಗಳು ಬೆಳೆದುವು. ಆಧುನಿಕ ಬೆನ್ನೆಲುಬುಗಳಿದ್ದ ಪ್ರಾಣಿಗಳು ಹೇರಳವಾದವು.	ಭೂಖಂಡಗಳ ಏರಿಳಿಕೆ ಮತ್ತು ಸಾಗರಗಳ ಹಿಂಜರಿಯುವಿಕೆ ಪ್ರಾರಂಭ.
		ಮಯೋಸೀನ್	೨.೫	ವಿವಿಧ ಸಸ್ತನಿಗಳ ವಿಕಾಸ ಮತ್ತು ವಿಸ್ತಾರ. ವಿಶಾಲ ಹುಲ್ಲು ಪ್ರದೇಶಗಳು ಬೆಳೆದುವು.	ಅನೇಕ ಕಡೆ ಭೂ ಮೈದಾನಗಳು ರೂಪುಗೊಂಡವು.
		ಆಲಿಗೋಸೀನ್	೪	ಗಜಗಳ, ಕೋಡೆಹಲ್ಲಿನ ಬೆಕ್ಕುಗಳ ಗೋಚರ. ವಿವಿಧ ಜಾತಿಯ ಮಂಗಗಳ ಮತ್ತು ವಾನರಗಳ ಗೋಚರ.	ಹಲವೆಡೆ ಪರ್ವತಗಳು ರೂಪುಗೊಂಡವು.
		ಇಯೋಸೀನ್	೬	ಕುದುರೆಗಳ, ಖಡ್ಗಮೃಗಗಳ, ಒಂಟೆಗಳ ಪ್ರಥಮ ಗೋಚರ. ವಿವಿಧ ಜಾತಿಯ ಸಸ್ತನಿಗಳು ಬೆಳೆದುವು.	ಅಮೇರಿಕ, ಯುರೋಪ ಖಂಡಗಳು ಸಾಗರದಿಂದ ಬೇರ್ಪಟ್ಟವು.
		ಪೇಲಿಯೋಸೀನ್	೭	ಆಧುನಿಕ ಪಕ್ಷಿಗಳು ಮತ್ತು ಪ್ರಥಮ ಕೋತಿಜಾತಿಯ ಪ್ರಾಣಿಗಳು [illegible]	ಸಾಗರಗಳಿಂದ ಭೂ ಆಕ್ರಮಣ ಮತ್ತೆ [illegible]

ಪ್ರ. ೧೦

ಕಲ್ಪಗಳು (Eras)	ಯುಗ ಮತ್ತು ಕಾಲಗಳು (Periods & Epochs)	ಪ್ರಾರಂಭಕಾಲ (ಕೋಟಿ ವರ್ಷಗಳ ಹಿಂದೆ)	ಪುರಾತನ ಜೀವಪರಂಪರೆಯ ಮಹತ್ವದ ಘಟನೆಗಳು	ಭೂ ನೈಸರ್ಗಿಕ ಘಟನೆಗಳು
ಮಧ್ಯ ಜೀವಕಲ್ಪ Mesozoic	ಕ್ರಿಟೇಷಸ್	೧೩.೫	ಪುಷ್ಪ ಸಸ್ಯಗಳ ವಿಕಾಸ ಮತ್ತು ವಿಸ್ತಾರ. ಪೆಡಂಭೂತಗಳು ಅತಿ ವಿಕಾಸಗೊಂಡು ನಷ್ಟವಂಶಿಗಳಾದವು. ಕ್ಲಿಷ್ಟ ರಚನೆಯುಳ್ಳ ಅಮ್ಮೊನೈಟುಗಳ ವಿಶಿಷ್ಟತೆ.	ಸಾಗರಗಳಿಂದ ಕೊನೆಯ ಭೂ ಅಕ್ರಮಣ.
	ಜುರಾಸಿಕ್	೧೮	ಪ್ರಥಮ ಸಸ್ತನಿಗಳು, ಪಕ್ಷಿಗಳು ಕಾಣಿಸಿದವು. ಪೆಡಂಭೂತಗಳು ಬಹು ಭೂಭಾಗವನ್ನು ಆಕ್ರಮಿಸಿದವು.	ಭೂಭಾಗಗಳನ್ನು ಒಳಗೊಂಡ ಚಿಕ್ಕ ಸಾಗರಗಳು ಸೀಮಿತಗೊಂಡವು.
	ಟ್ರಿಯಾಸಿಕ್	೨೨.೫	ಪ್ರಪ್ರಥಮ ಪೆಡಂಭೂತಗಳ (Dinosaurs) ಉಗಮ. ಅಮ್ಮೊನೈಟುಗಳ ವಿಶಿಷ್ಟತೆ.	ಹಲವು ಮರ ಭೂಮಿಗಳು ರೂಪುಗೊಂಡವು.
ಪ್ರಾಚೀನ ಜೀವಕಲ್ಪ Palaeozoic	ಪರ್ಮಿಯನ್	೨೭	ಸಸ್ತನಿಗಳನ್ನು ಹೋಲುವ ಸರಿಸೃಪಗಳು ಕಂಡವು. ವಿವಿಧ ಬೆನ್ನೆಲುಬುಗಳಿಲ್ಲದ ಪ್ರಾಣಿಗಳು ಗತವಂಶಿಗಳಾದವು.	ಅನೇಕ ಭೂಭಾಗಗಳು ಮೇಲಕ್ಕೆ ಎತ್ತಲ್ಪಟ್ಟವು.
	ಕಾರ್ಬಾನಿಫೆರಸ್	೩೫	ಪ್ರಥಮ ಸರಿಸೃಪಗಳ ಮತ್ತು ಕ್ರಿಮಿಕೀಟಗಳ ಗೋಚರ. ಬಹು ಭೂಭಾಗವು ಅರಣ್ಯಮಯವಾಯಿತು.	ಕಲ್ಲಿದ್ದಲಿ ನಿಕ್ಷೇಪಗೊಂಡಿತು. ದಕ್ಷಿಣ ಗೋಲಾರ್ಧದಲ್ಲಿ ಹಿಮಪ್ರವಾಹಗಳಾದವು.
	ಡೆವೊನಿಯನ್	೪೦	ದ್ವಿಚರ ಪ್ರಾಣಿಗಳ ಪ್ರಥಮ ಗೋಚರ ಮತ್ತು ಕಾಡುಗಳು ಕಾಣಿಸಿಕೊಂಡವು.	ಇತರ ವಿಶಾಲ ಭೂನಿಕ್ಷೇಪಗಳು ಮಡ್ಡಿಯಿಂದ ತುಂಬಿದವು.
	ಸೈಲೂರಿಯನ್	೪೪	ಪ್ರಥಮ ಹವೆಯುಸಿರಾಡುವ ಪ್ರಾಣಿಗಳು ಮತ್ತು ಭೂಸಸ್ಯಗಳ ಗೋಚರ. (ವೈತ್ಯಚೇಲುಗಳ ಸಮೃದ್ಧಿ)	ಸಾಗರಗಳು ಭೂಭಾಗವನ್ನು ಆತಿಕ್ರಮಿಸಿದವು.

ಕಲ್ಪಗಳು (Eras)	ಯುಗ ಮತ್ತು ಕಾಲಗಳು (Periods & Epochs)	ಪ್ರಾರಂಭಕಾಲ (ಕೋಟಿ ವರ್ಷಗಳ ಹಿಂದೆ)	ಪುರಾತನ ಜೀವಪರಂಪರೆಯ ಮಹತ್ವದ ಘಟನೆಗಳು	ಭೂ ನೈಸರ್ಗಿಕ ಘಟನೆಗಳು
	ಆರ್ಡೋವಿಷಿಯನ್	೫೦	ಪ್ರಪ್ರಥಮ ಬೆನ್ನೆಲುಬುಳ್ಳ ಪ್ರಾಣಿಗಳು ಕಾಣಿಸಿಕೊಂಡವು (ಮತ್ಸ್ಯ). ಗ್ರಾಪ್ಟೊಲೈಟುಗಳು, ಟ್ರೈಲೊಬೈಟುಗಳು ಹೇರಳವಾಗಿದ್ದವು.	ಅನೇಕ ಭೂಭಾಗಗಳು ಸಾಗರಗಳಿಂದ ಆವರಿಸಲ್ಪಟ್ಟವು.
	ಕೇಂಬ್ರಿಯನ್	೬೦	ಬೆನ್ನೆಲುಬುಗಳಿಲ್ಲದ ಸಾಗರಪ್ರಾಣಿಗಳು ಹೇರಳವಾಗಿದ್ದವು. (ಟ್ರೈಲೊಬೈಟುಗಳ ಸಮೃದ್ಧಿ)	ಭೂ ನಿಕ್ಷೇಪ ಪ್ರದೇಶಗಳು, ದ್ವೀಪಸಮೂಹಗಳು ರೂಪುಗೊಂಡವು
ಪ್ರಾಕ್ ಕೇಂಬ್ರಿಯನ್ (Pre-Cambrian)	ಆದಿಜೀವಕಲ್ಪ (Proterozoic)	೨೫೦	ಪ್ರಪ್ರಥಮ ಬೆನ್ನೆಲುಬಿಲ್ಲದ ಸಾಗರ ಪ್ರಾಣಿಗಳ ಹುಟ್ಟು (೧೨೦ ಕೋಟಿ ವರ್ಷಗಳ ಹಿಂದೆ)	ಅನೇಕ ವಿಶಾಲ ಭೂನಿಕ್ಷೇಪ ಪ್ರದೇಶಗಳು (Geosynclines) ಮಡ್ಡಿಯಿಂದ ತುಂಬಿ, ಮೇಲಕ್ಕೆ ಎತ್ತಲ್ಪಟ್ಟು, ಸವೆಯಲ್ಪಟ್ಟವು. ಅಗ್ನಿಶಿಲೆಗಳ ಅಂತಸ್ಸರಣ ಮತ್ತು ಅಗ್ನಿಶಿಲಾ ಪ್ರವಾಹಗಳಾದವು.
	ಆರ್ಷೇಯಕಲ್ಪ (Archaozoic)	೪೫೦	ಪ್ರಪ್ರಥಮ ಸಾಗರ ಸಸ್ಯಜೀವಿ (Marine Algae) ಕಾಣಿಸಿಕೊಂಡಿತು. (೩೨೦ ಕೋಟಿ ವರ್ಷಗಳ ಹಿಂದೆ)	

ಆಧಾರಗ್ರಂಥಗಳು

(೧) History of the Earth by *Kummer.*

(೨) Invertebrate Fossils by *Moore, Lalicker, Fisher.*

(೩) Outlines of Palaeontology by *Swinnerton* (1958)

(೪) Principles of Invertebrate Palaeontology by *Shrock & Twenhofel* (1953)

(೫) Time, Life & Man by *Stirton* (1959)

(೬) The Origin of Life by *Miller*

(೭) Investigating the.Earth—ESCP Publication (1968)

(೮) Study of the Earth by *White* (1968)

(೯) Stratigraphy & Life History by *Kay & Colbert* (1965)

(೧೦) 'ವಿಜ್ಞಾನ ಪ್ರಪಂಚ'— ಶಿವರಾಮ ಕಾರಂತ, ಭಾಗ ೨ (೧೯೬೦)

★ ಎಂ. ಎಸ್. ಮನ್ನಿಕೇರಿ
ಮತ್ತು
ಕೆ. ಗೌಡರೆಡ್ಡಿ

ಹೆಣ

ಅಂತೂ—

ಅಂತೂ ಒಮ್ಮೆ ಎಲ್ಲ ಕೆಲಸ ಮುಗಿಸಿ ಎಲ್ಲರನ್ನೂ ಸಾಗಹಾಕಿ ರೂಮಿ ಬಾಗಿಲು ಹಾಕಿಕೊಂಡು ಟೇಬಲಿನ ಸಮೀಪ ಕುರ್ಚಿ ಸರಿಸಿಕೊಂಡು, ಇಂದ ಬರೆದೇ ಬಿಡಬೇಕು ಒಂದು ಕವನ ಎಂದುಕೊಂಡು, ಪೆನ್ನು ತೆರೆದರೆ ಎದುರಿ ಧುತ್ತೆಂದು ಬಂದು ನಿಂತಿತು.

—ಆ ಹೆಣ.

ಅದು ಹೀಗೆ ಎದುರಿಗೇ ನಿಂತಿರುವಾಗ ಬರೆಯುವುದಾದರೂ ಹೇಗೆ ಅದನ್ನು ಅತ್ತ ದೂರ ಕಳಿಸಬೇಕು. ನಂತರ ಬರೆಯಬೇಕು. ಇಷ್ಟು ದಿ ಕೇವಲ ರಾತ್ರಿ ಮಾತ್ರ ಭೆಟ್ಟಿಯಾಗುತ್ತಿದ್ದ ಈ ಹೆಣ ಇಂದು ಹಗಲುಹೊತ್ತಿ ನಲ್ಲೇ ಬಂದಿದೆ—ಅದೂ ಕವನ ಬರೆಯಬೇಕೆಂದು ಕೂತಾಗ; ತನ್ನನ ನಿರ್ಲಕ್ಷಿಸಿ ಹೇಗೆ ಏನನ್ನು ಬರೆಯುತ್ತೀ ನೋಡೋಣ ಎಂದು ಸವಾಲು ಹಾ ವಂತೆ. ಇದನ್ನು ನಿರ್ಲಕ್ಷಿಸಿದರೆ ನಾನು ಏನನ್ನೂ ಬರೆಯಲಾರೆನೆ? ಯಾಕೆ ಹೇಳಿಕೇಳಿ ಇದೊಂದು ಹೆಣ. ಬರೆಯಲೇಬೇಕೆಂಬ ನನ್ನ ಸಂಕಲ್ಪಕ್ಕೆ ಅ ಯಾಗುವಷ್ಟು ಧೈರ್ಯವೇ ಇದಕ್ಕೆ ?

ಏ, ನಡೆಯಾಚೆ. ಇವತ್ತು ನಾನು ಎಂಥದೇ ಆಗಲೊಲ್ಲದು, ಕವ ಹಾಗೆ ಕಾಣುವಂಥದನ್ನೇನನ್ನಾದರೂ ಬರೆದು ನಾಳೆ ಮುಂಜಾನೆ ಆ ಸಂಪಾ ನಿಗೆ ಪೋಸ್ಟ ಮಾಡಬೇಕು. ನೀನು ರಾತ್ರಿ ಬಾ ಬೇಕಾದರೆ. ಮಾತಾಡೋಣ ನೀನು ಹೀಗೆ ನಿಂತಿದ್ದರೆ ನನಗೇನು ಮಣ್ಣೂ ಹೊಳೆಯುವುದಿಲ್ಲ. ಹೋಗು.

—ಊಹ್ಞೂ, ಅದು ಮಿಸುಕಿದರೆ ಆಣೆ.

ಬಿಡಲಿ. ನಿಂತಿರಲಿ. ನನಗೇನು ? ನಾನು ಅತ್ತ ನೋಡುವುದೇ ಇಲ್ಲ.

ನಿನ್ನೆ ಸಂಜೆ ಮತ್ತೆ ಬಂದಿದ್ದ ಆ ಸಂಪಾದಕ. ಅವನು ಕೊಟ್ಟ ತಿಂಗ ಅವಧಿ ಮುಗಿದು ವಾರವಾಯಿತೆಂದು ನೆನಪಿಸಲು. ಹಾಳಾಗಿ ಹೋಗೆಂ ಹೇಳಿಕಳಿಸಬಹುದಿತ್ತು. ಆದರೆ ಗೆಳತಿ ಶಶಿಯ ಗಂಡ ಅವನು. ಹೊಸದೊಂ ಪತ್ರಿಕೆ ಸುರುಮಾಡಿದ್ದ. 'ಮೊದಲ ಸಂಚಿಕೆಯಲ್ಲಿ ನಿಮ್ಮದೊಂದು ಕ ಬೇಕೇ ಬೇಕು'—ಎಂದು ಆಗ್ರಹಪೂರ್ವಕ ಕೇಳಿಕೊಂಡಿದ್ದ.

ಕವನ........ಹ್ಞ. ನಾನು ಬರೆಯುವುದನ್ನು ಬಿಟ್ಟು ಯುಗವಾಯಿತೆ ಗೊತ್ತಿರಲಿಲ್ಲ ಅವನಿಗೆ.

'ನೀ ಕಾಲೇಜಿನ್ಯಾಗಿದ್ದಾಗ ಎಷ್ಟ ಛಂದ ಕವಿತಾ ಬರೀತಿದ್ದೆಲ್ಲ? ಎಲ್ಲಾ ಹುಚ್ಚಹುಚ್ಚ ಆಗತಿದ್ರು ನಿನ್ನ ಕವಿತಾ ಓದಿ. ಈಗ್ಯಾಕ ಒಮ್ಮಿಲೆಗೇ ಬಿಟ್ಟುಬಿಟ್ಟಿ'?—ಶಶಿ ಕೇಳಿದ್ದಳು.

ದೇಶಾವರಿ ನಗೆ ನಗುತ್ತ ಉತ್ತರಿಸಿದ್ದೆ, 'ಹ್ಞ, ಈಗ ಟೈಮೇ ಸಿಗೂದಿ

'ಆದರ ಇವರ ಪತ್ರಿಕಾಕ್ಕ ನೀ ಒಂದು ಕವಿತಾ ಕೊಡಲಿಕ್ಕೇ ಬೇಕು ...ೇದ. ನಾನೂ ಇವರಿಗೆ ಪ್ರಾಮಿಜ್ ಮಾಡೀನಿ ನಿನ್ನ ಪರಿಯಿಂದ. ಇನ್ನೂ ...ದಿನ ಅವ. ನೀ ಹೊಸಾ ಕವಿತಾ ಬರಿ. ನಿನಗೇನು ಅದು ಅಸಾಧ್ಯ ಅಲ್ಲ. ನಿಂತ-...ತಲ್ಲೇ ಕವಿತಾ ಬರದಬಿಡ್ತಿದ್ದಿ ನೀ ಕಾಲೇಜಿನ್ಯಾಗಿದ್ದಾಗ,' — ಒಲೆಯ ...ಲೆ ಎಸರಿಟ್ಟು ಪುಡಿ-ಸಕ್ಕರೆ ಹಾಕಿ ಇಳಿಸಿ ಹಾಲು ಬೆರೆಸಿದೊಡನೆ ತಯಾ-...ಗಿಬಿಡುವ ಚಹಾದಷ್ಟೇ ಸರಳ ಇದೂ ಸಹ—ಎಂಬಂತೆ ಮಾತಾಡಿದ್ದಳು ಶಶಿ. ...ಟ್ಟು ಬಂದಿತ್ತು. ತಾನೇ ಪ್ರಾಮಿಜ್ ಮಾಡಿದಳಂತೆ ನನ್ನ ಪರಿಯಿಂದ. ಯಾರು ...ೇಳಿದ್ದರು ಇವಳಿಗೆ ಇಂಥ ಕಾರಭಾರ ಮಾಡಲು? ಎಲ್ಲಕ್ಕೂ ಅಸಹ್ಯವೆಂದರೆ ...ವಳ ದನಿಯಲ್ಲಿ ಸ್ಪಷ್ಟ ಕಾಣುತ್ತಿದ್ದ ವಿಶ್ವಾಸ; ತಾನು ಕೇಳಿದಾಗ ನಾನು ...ಡದೇ ಇನು ಎಂಬ ನಿರ್ಲಕ್ಷ್ಯವಾದ ವಿಶ್ವಾಸ.

'ನನಗೆ ಆಗೂದಿಲ್ಲ ಶಶೀ', ಎಂದಾಗ ಅದಕ್ಕೆ ಇನೂ ಕಿಮ್ಮತ್ತು ಕೊಡ-...ಯೆ ಮುಂದುವರಿಸಿದ್ದಳಾಕೆ, 'ಛೀ ಛೀ, ಆಗೂದಿಲ್ಲ ಅನ್ನೋ ಮಾತೇ ಸುಳ್ಳು. ...ಷ್ಟು ಜನ ಕೇಳಿದ್ರು ಎಲ್ಲಾರಿಗೂ ಕಳಿಸತಿದ್ದಿ. ಎಲ್ಲಾ ಕವಿಸಮ್ಮೇಳನದಾಗೂ ...ದತಿದ್ದಿ. ಎಷ್ಟು ಕಲೆಕ್ಶನ್ಸು ಪಬ್ಲಿಶ್ ಮಾಡಿದ್ದಿ ನೀ ಕಾಲೇಜಿನ್ಯಾಗಿದ್ದಾಗ—' ...ವಳ 'ನೀ ಕಾಲೇಜಿನಾಗಿದ್ದಾಗ' ಇನೋ ಒಜ್ಜೆಯಾಗಿ, ಇನೋ ಮುಳ್ಳಿನಂತಾಗಿ, ...ನೋ ವಿಷವಾಯುವಾಗಿ, ತಲೆಯೇರಿ ಚುಚ್ಚಿ ಉಸಿರುಕಟ್ಟಿಸುವಂತಾಗಿ, ...ೇಗಾದರಾಗಲಿ ಪಾರಾಗಬೇಕೆಂದು ಹೇಳಿದ್ದೆ, 'ಆಗಲಿ ನೋಡೋಣ. ಇನ್ನೂ ...ಂದು ತಿಂಗಳ ಅವಧಿ ಇದೆಯಲ್ಲ.'

ಅಂದು ಅವರಿಬ್ಬರೂ ಹೋದನಂತರ ಪುನಃ ಆ 'ನೀ ಕಾಲೇಜಿನಾಗಿದ್ದಾಗ' ...ನಪಾಗಿತ್ತು. ಅಂದಹಾಗೆ ಆಗೆಲ್ಲ ಎಷ್ಟೊಂದು ಬರೆಯುತ್ತಿದ್ದೆ........ಈಗೇಕೆ ...ಮ್ಮೆಲೆ ಎಲ್ಲ ಬಿಟ್ಟೆ? ಬರೆಯಬೇಕು. ಮತ್ತೆ ಬರೆಯಲು ಸುರುಮಾಡಬೇಕು.

—ಇತಿಹಾಸಕ್ಕೆ ಗುಡ್ ಬೈ ಹೇಳಿದ್ದೆ ನಿಜ. ಆದರೆ ಈ ಬರೆಯುವುದು ...ನ್ನ ಇತಿಹಾಸದ ಅಂಗ ಮಾತ್ರವಾಗಿತ್ತೆ? ಅದಕ್ಕೂ ಏಕೆ ಗುಡ್ ಬೈ ಹೇಳಿದ್ದೆ ...ಷ್ಟು ದಿನ? ಇನ್ನು ಬರೆಯಬೇಕು, ಅಂದರಾದರೂ ಈ ನಿರಂತರ ಶೂನ್ಯದ ...ನುಭವ ಇಲ್ಲವಾದೀತು . . .

'ಯಾಕ, ಭಾಳ ಖುಶೀ ಕಾಣಸ್ತೀಯಲ್ಲ ಇವತ್ತ?' —ಸಂಜೆ ದವಾಖಾನೆ ...ಿಂದ ಬಂದ ಶ್ರೀನಿವಾಸ ಕೇಳಿದ್ದ.

ಇನ್ನೂ ಅವನೆದೆಯ ಮೇಲಿದ್ದ ಸ್ಟೆಥೋಸ್ಕೋಪಿನೊಂದಿಗೆ ಆಟವಾಡುತ್ತ ...ತ್ತರಿಸಿದ್ದೆ, 'ಶ್ರೀ, ಇವತ್ತ ಶಶಿ ಬಂದಿದ್ದಳು. ಆಕೀ ಗಂಡ ತನ್ನ ಪತ್ರಿಕಾಕ್ಕ ...ನ್ನದೊಂದು ಕವಿತಾ ಬೇಕಂತ ಕೇಳ್ಯಾನ.'

'...ಹೋ, ಹೀಂಗೇನು? ಕವಿತಾದ ಮೂಡಿನ್ಯಾಗ ಇದ್ದೀ ಅಂಧಾಂಗಾತು. ...ನಗೇನು ಇವತ್ತ ಚಹಾಗಿಹಾ ಸಿಗತದೋ ಇಲ್ಲೋ?'

ಚಹಾ, ಊಟ, ಪೇಶಂಟ್ಸ—ಇಷ್ಟನ್ನು ಬಿಟ್ಟರೆ ಬೇರೇನನ್ನೂ ವಿಚಾರಿಸಲ
ಗದ ಆವನ ಬಗ್ಗೆ ಕೋಪ ಬಂದಿತು. ತೀರ materialistic, ತೀರ prosai
ಆಗಿದ್ದಾನೆ ಈ ಗಂಡ—ಅನ್ನಿಸಿ ಜುಗುಪ್ಸೆಯಾಯಿತು.

'ಕವಿತಾ-ಗಿವಿತಾ ಬರಿಯೂದಿದ್ರ ಮಧ್ಯಾಹ್ನದಾಗ ಬರೀ ನೀನು. ನಾನು
ಡಿಸ್ಪೆನ್ಸರಿಗೆ ಹೋಗಿರ್ತೀನಿ. ನಿನಗ ಡಿಸ್ಟರ್ಬ ಮಾಡ್ಲಿಕ್ಕೆ ಇರೂದಿಲ್ಲ. ನಾ ಮನ
ಗಿದ್ದಾಗ ಮಾತ್ರ ಅಂಥಾವೆಲ್ಲಾ ಉಸಾಬರಿ ಮಾಡಬ್ಯಾಡ.'

'ಉಸಾಬರಿ'ಯಂತೆ. ಸ್ವಾರ್ಥಿ ಎಂದು ಕೂಗಬೇಕೆನಿಸಿತು. ಆವನ ಅಜ್ಞಾ
ಕ್ಕಾಗಿ ಕನಿಕರವಾಯಿತು.

ಕವನದ ಬಗೆಗೇ ಯೋಚಿಸುತ್ತಿದ್ದೆ ಅಂದು ಸಂಜೆ – ರಾತ್ರಿಯಿಡೀ. ಮಧ
ರಾತ್ರಿ ಯಾರೋ ಅಲುಗಾಡಿಸಿ ಎಬ್ಬಿಸಿದಂತಾಯಿತು. ಕಣ್ಣು ತೆರೆಯಲೂ ಆ
ದಷ್ಟು ನಿದ್ರೆ. ಆದರೂ, 'ಖಳು-ಖಳು' ಎಂದದ್ದು ಕೇಳಿಸಿ ಎಚ್ಚರಾಯಿತ
ಯಾರು ನಿದ್ರೆ ಕೆಡಿಸಿದವರೆಂದು ಸಿಟ್ಟಾಗಿ ನೋಡಿದ್ದೆ—ಮಂಚದ ಪಕ್ಕದ
ಉದ್ದಕ್ಕೆ ನಿಂತಿತ್ತು.

--ಇದೇ ಹೆಣ.

ಎಲ್ಲೋ ಭೆಟ್ಟಿಯಾದ ನೆನಪು. ಏನೋ ಆತ್ಮೀಯಭಾವ ಅನ್ನಿಸಿತ
ಆದರೂ ಯಾಕೋ ಅದರ ಗುರುತು ನನಗೆ ಹತ್ತಿದ್ದು ಅದಕ್ಕೆ ತಿಳಿಯಬಾರ
ಅನ್ನಿಸಿತು. ಮಲಗಿದ್ದ ಹಾಗೆಯೇ ಕೇಳಿದೆ,

'ಯಾರು ನೀನು ?'

'ನಾನು ಹೆಣ.'

—ಹೌದು. ಗೊತ್ತಾಗುತ್ತಿದೆ. ಅದು ಏನು, ಎಂಥದು ಎಂದೆಲ್ಲ ಗೊತ
ಗುತ್ತಿದೆ. ಆದರೆ ಈ ಗೊತ್ತಾಗುವಿಕೆ ತೀವ್ರವಾಗಿ ಬೇಡವಾಗುತ್ತಿದೆ. ಮ
ಕೇಳಿದೆ,

'ಎಲ್ಲಿದ್ದಿ ಇಷ್ಟು ದಿನ ?'

'ಇಲ್ಲೇ ಇದ್ದೆ '

'ಮತ್ತೇಕೆ ಒಮ್ಮೆಯೂ ಕಾಣಲಿಲ್ಲ ?'

'ನನ್ನನ್ನು ನೋಡಿಯೂ ನೋಡಲಾರದಂತಿದ್ದಿ ನೀನು.'

'ಈಗೇಕೆ ಬಂದಿರುವಿ ?'

'ಕವನ ಬರೀಬೇಕು ಅಂತಿದ್ದಿಯಲ್ಲ ?'

'ಆದಕ್ಕೂ-ನಿನಗೂ ಸಂಬಂಧವೇನು ?'

—ಹಹ್ಹಹ್ಹಾ ಎಂದು ಗಹಗಹಿಸಿತು ಹೆಣ. ಕಣ್ಣು ಕೆಕ್ಕರಿಸಿ ಸಿಟ
ನೋಡಿದೆ.

'ನಗುತ್ತೀ ಏಕೆ?'

'ಸಂಬಂಧ ಕೇಳಿದಿ. ಹಳೆಯ ಸಂಬಂಧ. ಹೋಗಲಿ ಬಿಡು. ನೀ ಕವನ ರೆಯಲು ನನ್ನ ಸಹಾಯ ಬೇಕು. ಅದಕ್ಕೇ ಬಂದೆ.'

'ನೀನೇನು ಮಾಡುವ ಹಾಗಿದ್ದೀ ?'

'ನೀ ಕವನ ರಚಿಸುವುದು ಸಾಧ್ಯವಾಗಬೇಕಿದ್ದರೆ ಮೊದಲು ನನ್ನನ್ನು ದುಕಿಸು. ನಾನು ಜೀವ ತಳೆದಾಗ ಮಾತ್ರ ನೀನು ಬರೆಯುವುದು ಸಾಧ್ಯ. ನು ಹೆಣವಾಗಿರುವಾಗ ನೀನು ಏನೂ ಬರೆಯಲಾರಿ.'

'ನೀನು ತಪ್ಪು ತಿಳಿದಿರುವಿ. ನಾನು ಯಾರ ಸಹಾಯವಿಲ್ಲದೆಯೇ ಬರೆಯ ಲ್ಲೆ. ನೀನು ಹೆಣವಾಗಿದ್ದರೇನು, ಬದುಕಿದರೇನು? ನೀನು ಯಾರೋ ಓ—'

'ನಾನು—'

'ನೀನು ಏನೇ ಆಗಿರು. ನನ್ನ ಸುದ್ದಿಗೆ ಬರಬೇಡ.'

'ಹಾಗಿದ್ದರೆ ನಿನ್ನ ಕವನ—'

'ಅದರ ಚಿಂತೆ ನನಗಿರಲಿ. ನೀನು ಹೊರಡು.'

'ಕವನದ ಚಿಂತೆ ನಿನಗಿದ್ದರೆ ನನ್ನ ಚಿಂತೆಯನ್ನೂ ನೀನು ಮಾಡಬೇಕಾಗು ದು. ನಾ ಜೀವಂತವಾಗದ ಹೊರತು ಏನೂ ಬರೆಯಲಾರಿ ನೀನು.'

'ನೀನು ಹೆಣವಾಗಿದ್ದಾಗಲೇ ನಾನು ಕವನ ಬರೆಯುವೆ ನೋಡುತ್ತಿರು.'

'ಕವನದ ಹೆಣ ಬರೆಯಬಹುದು ಅಷ್ಟೆ.'

'ಶಟಪ್. ನನ್ನ ಕವನಗಳೆಂದಾದರೂ ಹೆಣವಾಗಿದ್ದವೇ? ಹಿಂದೆ ಬರೆದವು ಲ್ಲ ಜೀವಂತ ಕವನಗಳಾಗಿರಲಿಲ್ಲವೇ?'

'ಆಗಿನ ಮಾತು ಬೇರೆ. ನಾನು ಆಗ ಹೆಣವಾಗಿರಲಿಲ್ಲ.'

'ಹ್ವೊ? ಹಾಗಿದ್ದರೆ ನಾನು ವಿಚಾರ ಮಾಡುವೆ ಈ ಬಗ್ಗೆ. ನಾಳೆ ಬಂದು ಯಾಗು.'

ಇಷ್ಟು ದಿನ ಎಲ್ಲಿತ್ತೋ, ಬಹಳ ದಿನಗಳನಂತರ ಒಂದು ಕವನ ಬರೆಯ ೆಂದು ವಿಚಾರ ಮಾಡತೊಡಗಿದಾಗ ಈಗ ಪ್ರತ್ಯಕ್ಷವಾಗಿತ್ತು ಈ ಹೆಣ. ರು ಗಂಡ ಕೊಟ್ಟ ಅವಧಿ ಸದ್ದಿಲ್ಲದೆ ಮುಗಿದುಹೋಗಿತ್ತು. ಆದರೂ ಯುವುದು ಸಾಧ್ಯವಾಗಿರಲೇ ಇಲ್ಲ. ಈ ಎಲ್ಲ ದಿನಗಳಲ್ಲಿ ರಾತ್ರಿಯಾದೊಡನೆ ರಾಗುತ್ತಿತ್ತು ಈ ಹೆಣ; 'ನನ್ನನ್ನು ಬದುಕಿಸು. ನನ್ನೊಂದಿಗೆ ನಮ್ಮೂರಿಗೆ ಜೊತೆಯಾಗಿ ಅಲ್ಲಿ ಅಡ್ಡಾಡೋಣ. ಮಜಾ ಮಾಡೋಣ. ಆಗ ಮಾತ್ರ ನ ಬರೆಯಬಲ್ಲೆ ನೀನು'—ಎಂದು ಕಾಡುತ್ತಿತ್ತು.

ಯಾವುದೋ ಅಜ್ಞಾತಶಕ್ತಿ ಎಲ್ಲೋ ದೂರದೂರ ಎಳೆಯುತ್ತಿದ್ದಂತೆ . ಒಮ್ಮೆ ಅದರೊಂದಿಗೆ ಹೋಗಿ ನೋಡೋಣವೇ ಎಂದು ಸಹ ಅನ್ನಿಸಿತ್ತು.

ಅವರೆ ಒಂದು ಕವನ ರಚಿಸಿಬಿಟ್ಟು, ಅದನ್ನು ಶಶಿಯ ಗಂಡನಿಗೆ ಕಳಿಸಿ...
ಅನಂತರ ಇವನ್ನು ನೋಡೋಣ ಎಂದುಕೊಂಡು ದಿನ ತಳ್ಳುತ್ತ ಬಂದಿದ್ದೆ.

—ಬರೆಯುವುದು ಸಾಧ್ಯವಾಗಿರಲಿಲ್ಲ. ನಿನ್ನೆ ಬಂದು ಅವನು, 'ನಮ...
ಪತ್ರಿಕೆಯ ಪ್ರಿಂಟಿಂಗ್ ನಡೆದಿದೆ. ನಾಲ್ಕು ದಿನದಲ್ಲಿ ಎಲ್ಲ ಮುಗಿಯುವುದ...
ನಾಡದು ನಿಮ್ಮ ಕವಿತೆ ಕೊಡಲೇಬೇಕು'—ಎಂದು ಹೇಳಿದಾಗ ಬಹಳ ಬೇಸ...
ವಾಯಿತು. ಇಂದು ಸಂಜೆ ಬಂದಿದ್ದ ಸ್ನೇಹಿತರನ್ನೆಲ್ಲ ಏನೇನೋ ನೆಪ ಹೇ...
ಸಾಗಹಾಕಿ, ಕ್ಲಬ್ಬಿಗೆ ಹೊರಟಿದ್ದ ಶ್ರೀನಿವಾಸನಿಗೆ ರಾತ್ರಿ ಹತ್ತರವರೆಗೂ ಬ...
ಕೂಡದೆಂದು ತಾಕೀತು ಮಾಡಿ, ಬರೆದೇ ಬಿಡಬೇಕೆಂಬ ನಿರ್ಧಾರ ಮಾ...
ಕೂತರೆ ಬಂದು ನಿಂತಿತ್ತು,

—ಮತ್ತೆ ಈ ಹೆಣ.

ಇತ್ತೀಚೆ ಇದನ್ನು ನೋಡಿದಾಗೆಲ್ಲ ನಾನು ಸೋಲುತ್ತಿರುವೆನೆಂಬ ಅರಿವ...
ವಿಚಿತ್ರ, ಸಂಕಟವಾಗುವುದು. ಇದು ಸದಾ ಹೇಳುತ್ತಿರುವಂತೆ ಇದು ಜೀವ...
ವಾಗದ ಹೊರತು ನಾನು ಬರೆಯುವುದೂ ನಿಜವಾಗಿಯೂ ಹೆಣವೇ ಆಗು...
ದೇನೋ ಅನಿಸುವುದು... ಇಲ್ಲ, ಇಂದು ಇದಕ್ಕೆ ದಾದು ಮಾಡದೆ ಒಂದು ಕ...
ಬರೆದೇ ತೀರಬೇಕು....

'ಬರೀಲಿಕ್ಕೆ ಆಗಲಿಲ್ಲ ಹೌದಲ್ಲೊ? ಹೊಟ್ಟೀತುಂಬ ಉಂಡು, ಗಂ...
ಜೋಡಿ ಮಜಾ ಮಾಡಿ, ಆರಾಮಾಗಿ ಡನ್‌ಲಪ್ ಸೋಫಾದ ಮ್ಯಾಲೆ ಕೂ...
ಹ್ಯಾಂಗ ಬಂದೀತು ಅದು ?'

ಸಿಟ್ಟು ಬಂತು ನನಗೆ. ಪೆನ್ನು ಮುಚ್ಚಿಟ್ಟು ಕೇಳಿದೆ, 'ಹ್ಯಾಂಗಾರ...
ಮಾಡಬೇಕಂತೀ ?'

'ಬಾ ನನ್ನ ಜೋಡಿಗೆ. ಹೇಳತೀನಿ. ಕವಿತಾ ಬರೀಲಿಕ್ಕೆ ಆರಾ...
ಇರಬಾರದು ನೋಡು. ಕಲ್ಲಾಗ-ಮುಳ್ಳಾಗ ಅಡ್ಡ್ಯಾಡಬೇಕು, ಗುಡ್ಡಾ...
ಬೇಕು, ನದೀ ದಾಟಬೇಕು. ಬೆಂಕಿಯೊಳಗ ಬೇಯಬೇಕು, ಸ್ವಲ್ಸ...
ಸಾಯಬೇಕು, ಸತ್‌ಸತ್ತು ಬದುಕಬೇಕು. ಅಂದರ ಬರತದ ಅದು.'

—ಬೇಡ. ಆ ಕಲ್ಲುಮುಳ್ಳಿನ ದಾರಿಯು, ಗುಡ್ಡಬೆಟ್ಟಗಳ, ಹಳ್ಳತಿಟ್ಟು...
ಆ ಜೀವಂತ ಸಾವಿನ ನೆನಪು ಈಗೇಕೆ ಎಲ್ಲ ಮುಗಿದು ಇಷ್ಟು ವರ್ಷಗ...
ನಂತರ? ಕಳೆದ ಜನ್ಮದ ಕತೆ ನೆನೆದು ಕತ್ತಲಲ್ಲಿ ಕೂತು ಅಳುವವರ ಹೈ...
ನಾನು. ಆ ಎಲ್ಲ ನೆನಪನ್ನು, ಆಗಿನ ಕನಸುಗಳನ್ನು ಕೊಂದುಹಾಕಿ...
ಜೀವನ ಸುರುಮಾಡಿಯೇ ಹಳೆಯ ಕಾಲವಾಯಿತು.

'ಆಗ ಎಷ್ಟು ಸಲೀಸಾಗಿ ಬರೀತಿದ್ದಿ ನೆನಪದs ಏನು?'

ಹೌದು. ಆಗ ಬೆಂಕಿ ಉರಿಯುತ್ತಿತ್ತು; ಕನಸುಗಳು-ಅನಿಸಿ...
ಜ್ವಲಂತವಾಗಿದ್ದವು. ಈಗೆಲ್ಲ ತಣ್ಣಗಾಗಿದೆ; ಬೂದಿಯಾಗಿದೆ.

'ಆಗ ನಾ ಬರೆಕಿದ್ದೆ.'— ಮತ್ತೆ ಮಾತನಾಡಿತು ಹೆಣ, 'ನಾ ಹಿಂಗ ಹೆಣಾ ...ಗಿನಿಂದ ಒಂದಕ್ಷರ ಬರಿಯೂದಾಗಿಲ್ಲ ನನಗ.'

...ಬಹುದು. ಆದರೆ ಮತ್ತೆ ಆ ಅಗ್ನಿಕುಂಡ ಹೊಕ್ಕು ನೋಡದ ಹೊರತು ... ಬರೆಯುವುದು ಸಾಧ್ಯವಿಲ್ಲವೇ ?

'ಬತ್ತೀಯೇನ ನಮ್ಮೂರಿಗೆ ?'

'ಬರತೇನ.'

—ದೊಡ್ಡಕ್ಕಾಗಿ ಉತ್ತರಿಸಿ ಪೆನ್ನು–ನೋಟುಬುಕ್ಕು ಅಲ್ಲೇ ಬಿಗಿದು ... ಹೊರಗೆ ಬಂದು ನಿಂತೆ. ಕ್ಲಬ್ಬಿನಿಂದ ಮರಳಿದ್ದ ಶ್ರೀನಿವಾಸ ಕೆಳಗಡೆ ... ನಿಲ್ಲಿಸಿ ಹಾರ್ನ ಮಾಡುತ್ತಿದ್ದ. ಗೇಟು ತೆರೆಯಲೆಂದು ಇಳಿದೆ

'ಕವಿತಾ ಬರದೇನು?'—ರಾತ್ರಿ ಕೇಳಿದ್ದ ಶ್ರೀ.

'ಇಲ್ಲ ಇನ್ನೂ. ಆದರೆ ಇವತ್ತ ಬರೀತೀನಿ ನಾಳೆ ಕಳಿಸ್ಲಿಕ್ಕೇಬೇಕಲ್ಲ.'

'ಶ್ರೀಗಳಾತಲ್ಲ ಬರೀಲಿಕ್ಕೆ ಸುರೂವಾತು? ಅದೇನ ಮುಗಿಯೋಹಾಂಗ ...ಣಿಸಿಲ್ಲ.'

'ಇವತ್ತ ಮುಗಿಸೇಬಿಡಬೇಕಂತ ಮಾಡೀನಿ.'

'ಹಂಗಾದರ ನಿನ್ನ ಮಾತಾಡ್ಸೂದಿಲ್ಲ ಇವತ್ತ'—ಎಂದು ಆತ ಮಗ್ಗು- ...ಗಿದ್ದ.

—ಇವರ ಗೊರಿಕೆಯ ಸದ್ದು ಕೇಳುತ್ತ ಶೂನ್ಯದತ್ತ ದೃಷ್ಟಿ ನೆಟ್ಟು— ...ಗೆ ಕೂತು ಎಷ್ಟೋ ಹೊತ್ತಾಯಿತು....ನಿದ್ರೆ ಬರತೊಡಗಿದೆ....

'ಹಲೋ.'

'ಹಲೋ' ಎಂದು ಕತ್ತೆತ್ತಿ ನೋಡಿದರೆ ಬಾಗಿಲು ಚೌಕಟ್ಟಿಗೆ ಆತು ...ತಿತ್ತು.

—ಆ ಹೆಣ.

'ಏನು ಮಾಡುತ್ತಿದ್ದೀ ?'

ಯಾಕೋ ಆ ಹೆಣದ idle curiosity ಬಗ್ಗೆ ವಿಪರೀತ ಸಿಟ್ಟುಬಂದಿತು. ...ಲಗಿದ್ದ ಶ್ರೀಗೆ ಎಚ್ಚರವಾದೀತೆಂದು ಹಳ್ಳಗೆ ಆದರೂ ಕಟುವಾಗಿ ಕೇಳಿದೆ.

'ನೀ ಹಾಳಾಗಿ ಹೋಗಬಾರದs ? ಯಾಕ ಹಿಂಗ ಕಾಡಲಿಕ್ಕತ್ತೀ? ಯಾವ ...ಬಸಾನೂ ಮಾಡಿಕೊಡದಲ್ಲೆ ಹೊತ್ತಿಲ್ಲದ ಹೊತ್ತಿನ್ಯಾಗ ಬಂದು ಹಿಂಗ್ಯಾಕ ...ಬರ ಮಾಡಲಿಕ್ಕತ್ತೀ ?'

'ಕವನ ಬರೀಬೇಕು ಅನ್ನುತ್ತಿದ್ದೀ—'

'ನೀ ಅತ್ತ್ಯಾಗ ಹಾಳಾಗಿ ಹೋದರ ಬರದೇನು.'

'ಇಲ್ಲ, ನಾ ಇಷ್ಟು ದಿನಾ ಹಾಳಾಗೇ ಹೋಗಿದ್ದೆನಲ್ಲ, ಏನು ಬರೆದಿ? ನಿನ್ನ

ಸುದ್ದಿಗೇ ಬಂದಿದ್ದಿಲ್ಲ ನಾನು. ಆದಾ ಈಗ ನೀ ಕವಿತಾ ಬರೀಬೇಕು ಅ...
ಮುಂತ ಬಂದೀನಿ ನೀ ಬರೀಬೇಕಾದರ ನಾ ಜೀವಂತ ಆಗಬೇಕು.'

—ಹಾಡಿದ್ದೇ ಹಾಡು. ಹೆಣವಾಗಿದ್ದೇ ಇಷ್ಟು ಕಾಡುವ ಇವ... ಬದುಕಿದರೆ ನಾನೇ ಹೆಣವಾಗುವಷ್ಟು ಕಾಡೀತು. ಇವನ ಮಾತು ಕೇಳುತ್ತಿ... ಏನೋ ಸೆಳೆತ, ಏನೋ ಕಾತರ, ಏನೋ ಧುಂಧಿ....

'ಇವತ್ತ ಬಾ ನನ್ನ ಜೋತಿಗೆ. ನಮ್ಮೂರಿಗೆ ಹೋಗೋಣ.'

'..............' —ನಾನು ಮೌನವಾಗಿದ್ದೆ.

'ನಡಿ. ಹೋಗೋಣ. ಬರ್ತೀಯಲ್ಲ ಹಂಗಾರ......?'

'..................'

'ಏಳು, ಬೆಳಗಾಗೂದರಾಗ ತಿರಿಗಿ ಬಂದಬಿಡೂಣಂತ.' —ಹೆಣ ... ಉತ್ತರಕ್ಕೆ ಕಾಯದೆ ಹೊರಟು ನಿಂತಿತು.

ನಾನು—

—ಸಪ್ಪಾಗದ ಹಾಗೆ ಹೆಜ್ಜೆಯಿಡುತ್ತ ಹಿಂಬಾಲಿಸಿದೆ......

—ದೂರ ದೂರ.......ಗಾಳಿಯಾಗಿ, ಮಿಂಚಾಗಿ, ಸಿಡಿಲಾಗಿ, ಬೆ... ಕತ್ತಲೆಯಾಗಿ, ಹೊಗೆಯಾಗಿ, ಹಾಗೇ ದೂರ.......

—ದಾರಿಯಲ್ಲೆಲ್ಲ ಎಂಥೆಂಥವೋ ಗಿಡಗಳು, ಬಂಡೆಗಳು, ಮಡು... ಕೊಳಚೆ ನೀರು, ತಾರುಕಂಬಗಳಿಗೆ ಜೋತುಬಿದ್ದಿದ್ದ ತೊಗಲುಬಾವಲಿಗ... ಎಲ್ಲಾ ಎಲ್ಲೋ ಕಂಡ ನೆನಪು, ಮಸುಕುಮಸುಕಾಗಿ, ಕವನ ಒಂದೊಂದೇ... ರೂಪುಗೊಳ್ಳುತ್ತಿರುವ ಹಾಗೆ...........ಮೌನ ಭೇದಿಸಿ ಮಾತನಾಡಿತು... ' ಈ ಗುಡ್ಡ ನೋಡಿದ ನೆನಪು ಇರಬೇಕಲ್ಲ ನಿನಗ ?'

—ಹೌದು. ಬಣ್ಣಬಣ್ಣದ ನೆನಪು ಕಾಮನಬಿಲ್ಲಿನಂತೆ ಮೂಡತೊಡಗಿ... ಬೇಡವಾಗಿದ್ದ ನೆನಪು. ಈ ಸತ್ತಂಥ ಬದುಕಿನಿಂದ ದೂರ ಆ ಜೀವಂತ... ದಿನಗಳೆಡೆ ಎಳೆದೊಯ್ಯತೊಡಗಿದ್ದ ನೆನಪು....ಹೌದು. ಇದೇ ಗುಡ್ಡದ... ಆ ಮರದ ನೆರಳಲ್ಲಿ ಆದದ್ದು.

—ಮೊದಲ ಭೆಟ್ಟಿ.

' ನಾ ಇಲ್ಲೇ ಹುಟ್ಟಿದ್ದು' —ಹೆಣ.

ಕಾಲು ನೋಯುತ್ತಿವೆ. ಇನ್ನಿದನ್ನು ಏರುವುದಾಗದು. ತಿರುಗಿ... ಬೇಕು.

...ಆದರೆ ಎಲ್ಲ ಮಂಜುಮಂಜಾಗಿದೆ....

' ಈಗ ನಾವು ಗುಡ್ಡದ ತುದಿಗೆ ಬಂದೆವು. ಈ ಜಾಗಾ ನನ... ಸೇರತದ. ನಾ ಬೆಳದದ್ದು, ಕಣ್ಣುಮುಚ್ಚಳಿಕೆ ಆಟಾ ಆಡಿದ್ದು, ಕು... ನಾಡಿದ್ದು ಎಲ್ಲಾ ಇಲ್ಲೇ. ನಿನಗ ಗುರ್ತು ಸಿಗತದೇನು ?'

ಎಚ್ಚೆತ್ತಿದ್ದಂತೆ ಉದ್ವೇಗದಿಂದ ಮಾತನಾಡಿತು ಜೀವ. 'ನಾನ್ನ
ಕಿಸು. ನೀನು ಮತ್ತ ಟನ್‌ಗಟ್ಟಲೆ ಕವನ ಬರೆಯುವಂತೆ ಮಾಡುವೆ.
ನಾವು ಈ ಗುಡ್ಡಾ ಹತ್ತೋಣ, ಕುಣಿದಾಡೋಣ, ಹಕ್ಕೀಹಾಂಗ ಹಾರಾಡೋಣ,
ಮೀನಿನ್ಹಾಂಗ ಈಸಾಡೋಣ, ಬದುಕೋಣ....'

—'ಸತ್‌ಸತ್ತು ಬದುಕೋಣ? ಊಹ್ಞೂ. ನಾ ಒಲ್ಲೆ. ನನಗೆ
ನಾ ಈಗ ಆರಾಮಿದ್ದೇನಿ ನಿನ್ನ ಕುಣಿದಾಡೋದು, ಹಾರಾಡೋದು, ಹತ್ತೋ
ಇಳಿಯೋದು, ಅಳೋದು, ಬೀಳೋದು, ಬೇಯೋದು, ಸಾಯೋದು—
ನಿನಗೇ ಇರ್ಲಿ.'

'ಮತ್ತ ಕವನ?'

'ದೇವರಾಣಿ ನಾ ಇನ್ನ ಕವನಾ ಬರಿಯೋ ಹುಚ್ಚುತನಾ ಮಾಡೋ
ನನಗ ಯಾವದೂ ಬ್ಯಾಡ. ನಾ ಹೊಂಟೆ.'

'ಖರೇನs?'

'ಖರೆ, ಖರೆ, ಖರೆ.'

....ಜೀವ ಶೂನ್ಯದತ್ತ ನೋಡುತ್ತ ಮೌನವಾಗಿ ನಿಂತಿತು. ನಾನೇ
ಕೇಳಿದೆ.

'ನನ್ನ ಕಳಿಸಲಿಕ್ಕ ಬರ್‍ತೀಯೇನು ಅಲ್ಲೀತನಕ?'

'ಒಲ್ಲೆ. ಕವನಾ-ಗಿವನಾ ಬರಿಯೂದಿಲ್ಲ ಅಂತೀ. ಇನ್ನ ನ
ಕೆಲಸದ ಅಲ್ಲ? ನಾ ಇಲ್ಲೇ ನನ್ನ ಗೋರಿಯೊಳಗ ಇರ್‍ತೇನಿ. ಹೋಗಿ
ಗುಡ್ ಬೈ.

'ಹೋಗತೀನಿ. ತಿರಿಗಿ ಬರೂದಿಲ್ಲ. ನೀನೂ ಆ ಕಡೆ ಬರಬ್ಯಾಡ.'

'ಏ ಏಳ್ರೀ, ಎಷ್ಟೊತ್ತದು ಮಲಗೋದು? ಕವಿತಾ ಬರದು
ಬಿಟ್ಟಿಯೇನು ನಿನ್ನೆ ರಾತ್ರಿ? ಚಹಾದ ಹೊತ್ತಾತು ಏಳ್ರಿ.'—ಹೊ
ನ್ನೆಳೆದು ಎಬ್ಬಿಸಲು ಪ್ರಯತ್ನಿಸುತ್ತಿದ್ದ ಶ್ರೀ.

ನಿಧಾನವಾಗಿ ಕಣ್ಣು ಬಿಟ್ಟೆ. 'ಹ್ಞ? ಹ್ಞೂ....ಏನಂದಿ?'

'ಕವಿತಾ ಬರದು ಮುಗಿಸಿದೇನು ಅಂದೆ.'

'ಕವಿತಾ? ಛೀ. ಇಲ್ಲ. 'ಆಗೂದಿಲ್ಲ, Excuse me'—ಅಂತ
ಮೊದಲ ಒಂದು ಪತ್ರಾ, ಬರೀಬೇಕು ಆ ಸಂಪಾದಕಗ. ನಿನಗ ಚಹಾ ಆ
ಮಾಡ್ತೇನಿ.'

★

... ಮೂರು ಪಂಚವಾರ್ಷಿಕ ಯೋಜನೆಗಳು

...ಮ್ಮ ದೇಶವೀಗ ಮೂರು ಪಂಚವಾರ್ಷಿಕ ಯೋಜನೆಗಳನ್ನು ಪೂರೈಸಿ ...ನೆಯ ಪಂಚವಾರ್ಷಿಕ ಯೋಜನೆಯನ್ನು ಜಾರಿಗೊಳಿಸಲು ಸಾಗಿದೆ ... ದೃಷ್ಟಿಯಲ್ಲಿ ಯೋಜನೆಗಳಿಗೆ ಅನಿಯಮಿತ ಸ್ಥಾನದೊರೆ... ...ಕ್ಕಯ ತೋರಿದೆ. ಇದಕ್ಕೆ ಕಾರಣ, ಅವುಗಳ ಪ್ರತಿಫಲ ಕಡಿಮೆಯಾದ...ದು. ಆದುದರಿಂದ ಈ ಲೇಖನದಲ್ಲಿ ನಮ್ಮ ಆರ್ಥಿಕ ಪ್ರಗತಿಗೆ ಅಡ್ಡಿ ಮಾಡ...ಳೇನು ಎಂಬುದನ್ನು ಪರಿಶೀಲಿಸಲಾಗಿದೆ.

ಯೋಜನಾಬದ್ಧವಾದ ಆರ್ಥಿಕ ಪ್ರಗತಿಯನ್ನು ಅಳೆಯಲು, ರಾಷ್ಟ್ರೀಯ ...ು ಮತ್ತು ತಲಾ ಆದಾಯ ಇವುಗಳನ್ನು ಅಳತೆಗೋಲಾಗಿ ಬಳ್ಳ...ವುದುಂಟು. ಇವೆರಡರ ಹೆಚ್ಚಳವೇ ದೇಶದ ಅಭ್ಯುದಯವನ್ನು ಪ್ರಜೆಗಳ ... ನೆಮ್ಮದಿಯನ್ನೂ ಸೂಚಿಸುತ್ತದೆ. ಈ ಮಾನದಂಡಗಳಿಂದ ನಮ್ಮ ...ು ಪಂಚವಾರ್ಷಿಕ ಯೋಜನೆಗಳ ಫಲಿತಾಂಶಗಳನ್ನು ವಿಮರ್ಶಿಸಬಹುದು. ಈ ಮೂರು ಪಂಚವಾರ್ಷಿಕ ಯೋಜನೆಗಳೆಂದರೆ ದೇಶದ ಆರ್ಥಿಕ ...ವನ್ನು ಸುಧಾರಿಸುವ ದಿಶೆಯಲ್ಲಿ ಮೊದಲ ಹೆಜ್ಜೆಗಳಾಗಿವೆ ... ದೃಷ್ಟಿಯಲ್ಲಿ. ಅವು ಜನರ ಬದುಕನ್ನು ಸುಧಾರಿಸುವುದಕ್ಕೆ, ನಮ್ಮ ...ಾಳನ್ನು ತೊಡಗಿಸಿ, ಉತ್ಪಾದನೆಯನ್ನು ವೃದ್ಧಿಗೊಳಿಸಿ, ಉದ್ಯೋ...ಾಶವನ್ನು ಕಲ್ಪಿಸುವಂತಹ ಆಕಾಂಕ್ಷೆಯ ಯೋಜನೆಗಳೇ ಆಗಿವೆ. ಆದರೆ ...ಪ್ರಭುತ್ವ-ಸಮಾಜವಾದದ ಚೌಕಟ್ಟಿನಲ್ಲಿ ನಮ್ಮ ಯೋಜನೆಗಳ ...ಗೊಂಡು ಕಾರ್ಯಗತವಾಗಬೇಕಾಗಿರುವುದರಿಂದ ಆರ್ಥಿಕ ತತ್ವಗಳ ...ಯಿಂದಲೇ ಅವುಗಳನ್ನು ಅಳೆಯಲಾಗುವುದಿಲ್ಲ. ಯೋಜನೆಯೆಂದರೆ ... ವೃತ್ತಿಯಿಂದ ಹೊಸ ವೃತ್ತಕ್ಕೆ ಆರ್ಥಿಕ ಚಟುವಟಿಕೆಗಳನ್ನು ತಿರುಗಿ...ದೇ ಆಗಿದ್ದು, ಈ ರೂಪಾಂತರದಲ್ಲಿ ಹೆಚ್ಚು ಬಂಡವಾಳ ತೊಡಗಿಸ...ಲ್ಲಿ ಅನೇಕ ಗುರಿಗಳನ್ನು ದೃಷ್ಟಿಯಲ್ಲಿಟ್ಟುಕೊಳ್ಳುವುದು ಸಹಜ...ತ್ತದೆ.

...ಯ ಆದಾಯ ಮತ್ತು ತಲಾ ಆದಾಯ :

...ಮೂರು ಪಂಚವಾರ್ಷಿಕ ಯೋಜನೆಗಳ ಅವಧಿಯಲ್ಲಿ ನಮ್ಮ ರಾಷ್ಟ್ರೀಯ ...ು ಮತ್ತು ಸರಾಸರಿ ತಲಾ ಆದಾಯ ೧೯೬೦-೬೧ರ ಬೆಲೆಯ ಮೇರೆಗೆ ...ತಿಯಿದೆ :[೧]

...ನೆಯ ಪಂಚವಾರ್ಷಿಕ ಯೋಜನೆ : ಪುಟ ೩೫; ನಾಲ್ಕನೆಯ ಪಂಚವಾರ್ಷಿಕ ...ಯೋಜನೆ : ಪುಟ ೩.

ವರ್ಷ	ರಾಷ್ಟ್ರೀಯ ಆದಾಯ (ಕೋಟಿ ರೂಪಾಯಿಯಲ್ಲಿ)	ಸರಾಸರಿ ತಲಾ ಆದಾ (ರೂಪಾಯಿಯಲ್ಲಿ)
೧೯೫೦–೫೧	೧೦,೨೪೦	೨೮೪
೧೯೫೫–೫೬	೧೨,೧೩೦	೩೦೬
೧೯೬೦–೬೧	೧೪,೧೪೦	೩೨೬
೧೯೬೧–೬೨	೧೪,೪೯೦	೩೨೬
೧೯೬೨–೬೩	೧೪,೭೪೦	೩೨೩
೧೯೬೩–೬೪	೧೫,೪೬೦	೩೩೧
೧೯೬೪–೬೫	೧೬,೬೩೦	೩೪೮
೧೯೬೫–೬೬	೧೫,೯೩೦	೩೨೫

ಮೊದಲನೆಯ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ನವ... ರಾಷ್ಟ್ರೀಯ ವರಮಾನ ಸರಾಸರಿ ವರ್ಷಂಪ್ರತಿ ತೊಡಗಿಸಿದ ಬಂಡವಾ... ನೂರಕ್ಕೆ ೪·೪ರಂತೆ ಹೆಚ್ಚಾಯಿತು ಆದುದರಿಂದ ಮೊದಲನೆಯ ಯೋಜ... ಯಲ್ಲಿ ರಾಷ್ಟ್ರೀಯ ವರಮಾನ ತೃಪ್ತಿಕರವಾಗಿ ಹೆಚ್ಚಾಯಿತು ಎಂದು ಹೇ... ಬಹುದು. ಈ ಹೆಚ್ಚಳ ವಿಶೇಷವಾಗಿ ರಾಷ್ಟ್ರೀಯ ಉಳಿತಾಯವನ್ನು ಅ... ಲಂಬಿಸಿದ್ದು ಕಡಿಮೆ ವಿದೇಶೀ ನೆರವನ್ನು ಹೊಂದಿದ್ದಿತು. ಆದರೆ, ಎರಡನೆ... ಪಂಚವಾರ್ಷಿಕ ಯೋಜನೆ, ಇಟ್ಟುಕೊಂಡ ಗುರಿಯ ಲೆಕ್ಕದಿಂದ ಯಶಸ್... ಯಾಗಲಿಲ್ಲ. ಈ ಯೋಜನೆಯ ಅವಧಿಯಲ್ಲಿ ಉಳಿತಾಯದ ಗುರಿಯನ್... ಮುಟ್ಟುವುದು ಸಾಧ್ಯವೇ ಆಗಲಿಲ್ಲ. ಸರಾಸರಿ ವರ್ಷಂಪ್ರತಿ ಶೇಕಡ ೪ರ... ರಾಷ್ಟ್ರೀಯ ವರಮಾನವು ಹೆಚ್ಚುತ್ತ ಹೋಯಿತು. ಮೂರನೆಯ ಪಂ... ವಾರ್ಷಿಕ ಯೋಜನೆಯ ಅವಧಿಯಲ್ಲಿ ಸರಾಸರಿ ವರ್ಷಂಪ್ರತಿ ಪ್ರತಿಶತ ೫ರ... ರಾಷ್ಟ್ರೀಯ ವರಮಾನ ಹೆಚ್ಚಬೇಕೆಂಬ ಗುರಿಯನ್ನು ಇಟ್ಟುಕೊಳ್ಳಲಾಗಿದ್ದಿತ... ಆದರೆ, ಆದು ೨·೫ರಷ್ಟು ಮಾತ್ರ ಹೆಚ್ಚಾಯಿತು. ಈ ಕೆಳಗಣ ಕೋಷ್ಟಕ... ಮೂರನೆಯ ಯೋಜನೆಯ ಪ್ರತಿವರ್ಷದ ರಾಷ್ಟ್ರೀಯ ಆದಾಯವೃ... ಯನ್ನು ತೋರಿಸುತ್ತದೆ :[೨]

ವರ್ಷ	ಗುರಿ (ಪ್ರತಿಶತ)	ಸಾಧನೆ (ಪ್ರತಿ...
೧೯೬೧–೬೨	೫·೦	೨·೫
೧೯೬೨–೬೩	೫·೦	೧·೭
೧೯೬೩–೬೪	೫·೦	೪·೯
೧೯೬೪-೬೫	೫·೦	೭·೬
೧೯೬೫–೬೬	೫·೦	–೪·೨

೨. ನಾಲ್ಕನೆಯ ಪಂಚವಾರ್ಷಿಕ ಯೋಜನೆಯ ರೂಪರೇಷೆಗಳು : ಪುಟ ೫.

"ಮೊದಲನೆಯ ಪಂಚವಾರ್ಷಿಕ ಯೋಜನೆ ಗಮನಾರ್ಹವಾದ ಜಯವನ್ನು ಗಳಿಸಿತು. ಎರಡನೆಯ ಪಂಚವಾರ್ಷಿಕ ಯೋಜನೆಯ ಪ್ರಗತಿ ಹೆಚ್ಚು ಸಂತೋಷಕರವಾಗಿಲ್ಲವಿದ್ದರೂ, ಪರವಾಯಿಲ್ಲ. ಆದರೆ, ಮೂರನೆಯ ಪಂಚವಾರ್ಷಿಕ ಯೋಜನೆಯ ಪ್ರಗತಿ ಮಾತ್ರ ಕುಂಠಿತವಾಗಿದೆ" ಎಂದು ನಮ್ಮ ಯೋಜನಾ ಆಯೋಗವು ಅಭಿಪ್ರಾಯಪಟ್ಟಿದೆ. ಭೌತಿಕ ವಸ್ತುಗಳ ರೂಪದಲ್ಲಿ ಪ್ರಗತಿ ಗುರಿಯನ್ನು ತಲುಪದೆ ಹೋಗಿದೆ. ಯೋಜನಾ ಆಯೋಗದ ಅಭಿಪ್ರಾಯದಂತೆ, 'ಜನಸಂಖ್ಯೆಯ ಹೆಚ್ಚಳವು ತಲಾ ಆದಾಯದ ಹೆಚ್ಚಳವನ್ನು ಕಡಿಮೆ ಮಾಡಿದ್ದು ಪ್ರಗತಿಯ ಹೆಜ್ಜೆಗೆ ತೊಡಕಾಗಿದೆ."

ಒಕ್ಕಲುತನ :

ಆದರೆ ಒಕ್ಕಲುತನದಲ್ಲಿ, ಅದರಲ್ಲೂ ಆಹಾರ ಸಾಮಗ್ರಿಗಳ ವಿಷಯದಲ್ಲಿ ಗುರಿಯನ್ನು ಸಾಧಿಸದಿರುವುದೆ ಕಾರಣವೆಂದು ಹೇಳಿದರೆ ತಪ್ಪಾಗಲಾರದು. "ಒಕ್ಕಲುತನ ಹುಟ್ಟುವಳಿಗಳ ಪ್ರಮಾಣವು ಹೆಚ್ಚಾಗದಿದ್ದುದೇ ಭಾರತದ ಅರ್ಥಪ್ರಗತಿಗೆ ಅಡ್ಡಿಯಾಗಿದೆ" ಎಂದು ಗಿಲ್ ರಿಚರ್ಡ್‌ಸರವರು ಅಭಿಪ್ರಾಯ ಪಟ್ಟಿದ್ದಾರೆ.

ಒಟ್ಟು ರಾಷ್ಟ್ರೀಯ ವರಮಾನದಲ್ಲಿ ಒಕ್ಕಲುತನದ ಉತ್ಪನ್ನವು ೧೯೬೦–೬೧ರಲ್ಲಿ ಸುಮಾರು ೬೮೯೦ ಕೋಟಿ ರೂಪಾಯಿ ಇದ್ದಿತು. ೧೯೬೪–೬೫ರಲ್ಲಿ ಇದು ೭೪೬೦ ಕೋಟಿ ರೂಪಾಯಿಗೆ ಏರಿತು. ಆದರೆ, ೧೯೬೫–೬೬ರಲ್ಲಿ ಕೃಷಿ ಉತ್ಪನ್ನ ಇಳಿದು ಸುಮಾರು ೬೨೯೦ ಕೋಟಿ ರೂಪಾಯಿಗೆ ಬಂದಿತು. ಅಂದರೆ, ಸುಮಾರು ೧೧೭೦ ಕೋಟಿಗಳ ಇಳಿತಾಯ ಒಕ್ಕಲುತನದಲ್ಲಿಯೇ ಆಯಿತೆಂದು ಹೇಳಬಹುದು. ಈ ಅವಧಿಯ ಒಕ್ಕಲುತನದ ಉತ್ಪನ್ನದ ಏರಿಳಿತಗಳನ್ನು ಕೆಳಗಿನ ಕೋಷ್ಟಕದಲ್ಲಿ ಕಾಣಬಹುದು :

(ಮಿಲಿಯನ್ ಸಂಖ್ಯೆಯಲ್ಲಿ)

ವಸ್ತು		೧೯೫೦–೫೧	೧೯೬೦–೬೧	೧೯೬೪–೬೫	೧೯೬೫–೬೬
ಆಹಾರಸಾಮಗ್ರಿ	(ಟನ್ನು)	೫೪.೯	೮೨.೦	೮೯.೦	೭೨.೩
ಎಣ್ಣೆ ಕಾಳುಗಳು	,,	೫.೧	೭.೦	೮.೩	೬.೧
ಹತ್ತಿ	(ಬೇಲು)	೨.೯	೫.೩	೫.೪	೪.೭
ಸಣಬು	,,	೩.೩	೪.೧	೬.೦	೪.೫

೧೯೬೫–೬೬ರಲ್ಲಿ ಆಹಾರಸಾಮಗ್ರಿಯ ಪೂರೈಕೆ ಅದರ ಹಿಂದಿನ ವರುಷಕ್ಕಿಂತ ೧೬.೭ ಮಿಲಿಯನ್ ಟನ್ನುಗಳಷ್ಟು ಕಡಿಮೆಯಾಗಿದ್ದುದು ಕಂಡುಬರುತ್ತದೆ. ನಮ್ಮ ದೇಶದ ವ್ಯವಸಾಯವು ವಾಸ್ತವವಾಗಿ ಅನುಕೂಲ ಹವಾ-

ಮಾನವನ್ನೇ ಅವಲಂಬಿಸಿದೆ ಎಂದೊಪ್ಪಿಕೊಂಡರೂ ಅನುಕೂಲ ಹವಾಮಾ
ವುಳ್ಳ ೧೯೬೪–೬೫ರಲ್ಲಿಯೂ ನಮ್ಮ ಗುರಿಯನ್ನು ಸಾಧಿಸಲಾಗಲಿಲ್ಲವೆಂಬುದ
ದುಃಖದ ಸಂಗತಿಯಾಗಿದೆ.

ನಾಲ್ಕನೆಯ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ೧೨೦ ಮಿಲಿ
ಯನ್ ಟನ್ನುಗಳಷ್ಟು ಆಹಾರಸಾಮಗ್ರಿಗಳನ್ನು ಉತ್ಪಾದಿಸಬೇಕೆಂಬ ಗು
ಯನ್ನಿಟ್ಟುಕೊಳ್ಳಲಾಗಿದೆ. ೧೯೬೫–೬೬ನೆಯ ಉತ್ಪಾದನೆಗಿಂತಲೂ ೪೭·
ಮಿಲಿಯನ್ ಟನ್ನುಗಳಷ್ಟು ಹೆಚ್ಚಾಗಬೇಕೆಂಬುದು ಇದರರ್ಥ.

ಕಳೆದ ೧೫ ವರುಷಗಳಲ್ಲಿ ಕಾರ್ಯಗತವಾದ ಮೂರು ಯೋಜನೆಗಳನ್ನು
ಪರಿಶೀಲಿಸಿದರೆ, ನಮ್ಮ ಯೋಜನಾಬದ್ಧವಾದ ಪ್ರಯತ್ನವು ಆಹಾರಪೂರ್
ಕೆಯ ದಿಶೆಯಲ್ಲಿ ೩೫ ಮಿಲಿಯನ್ ಟನ್ನುಗಳಿಗಿಂತಲೂ ಹೆಚ್ಚು ಸಾಧಿಸಿರುವ
ದಿಲ್ಲ. ಅಂದರೆ ನಾಲ್ಕನೆಯ ಯೋಜನೆಯಲ್ಲಿ ಹಿಂದಣ ೧೫ ವರುಷಗಳಲ್ಲಿ ಸಾ
ಸದಿದ್ದ ಗುರಿಯನ್ನು ತಲುಪಬೇಕು ಎಂದರ್ಥವಾಗುತ್ತದೆ. "ಇದೊಂದು ನಿ
ವಾದ ಆಹ್ವಾನವೇ ಆಗಿದೆ. ಅಲ್ಲದೆ, ಈ ಹದಿನೈದು ವರುಷಗಳಲ್ಲಿ ಪ್ರತಿಶ
೩·೫ರಂತಿದ್ದ ಬೆಳೆವಣಿಗೆಯನ್ನು ಪ್ರತಿಶತ ೬ಕ್ಕೆ ನಾಲ್ಕನೆಯ ಯೋಜನೆಯ
ಹೆಚ್ಚಿಸಬೇಕೆಂದಾಯಿತು.

ನಾಲ್ಕನೆಯ ಯೋಜನೆಯಲ್ಲಿಟ್ಟುಕೊಂಡ, ಒಕ್ಕಲುತನದ ಉತ್ಪನ್ನ
ಅಭಿವೃದ್ಧಿಯ ಗುರಿಯ ಕೋಷ್ಟಕವು ಇಂತಿದೆ :

		೪ನೆ ಯೋಜನೆಯ		
		ಹೆಚ್ಚಿನ	ಕೊನೆಯ	ಪ್ರತಿಶ
ವಸ್ತು	೧೯೬೫–೬೬	ಉತ್ಪಾದನೆ	ಅಂದಾಜು ಉತ್ಪನ್ನ	ಹೆಚ್ಚಳ
ಆಹಾರ (ಮಿಲಿಯನ್ ಟನ್ನು)	೯೦	೩೦	೧೨೦	೩೩
ಎಣ್ಣೆಕಾಳು ,,	೭·೫	೩·೨	೧೦·೭	೪೩
ಹತ್ತಿ (ಮಿಲಿಯನ್ ಬೇಲು)	೬·೩	೨·೩	೮·೬	೩೭
ಸಣಬು ,,	೬·೨	೨·೮	೯·೦	೪೫

ನಾಲ್ಕನೆಯ ಪಂಚವಾರ್ಷಿಕ ಯೋಜನೆಯ ಈ ಅಂಕಿಸಂಖ್ಯೆಗಳನ್ನು ಪ
ಶೀಲಿಸಿದರೆ ನಾವು ಗುರಿಯನ್ನು ಸಾಧಿಸುವುದು ಕಷ್ಟವಾಗಬಹುದು ಎಂಬ ಶಂ
ಉಂಟಾಗುತ್ತದೆ.

ಇದಲ್ಲದೆ ನಾಲ್ಕನೆಯ ಪಂಚವಾರ್ಷಿಕ ಯೋಜನೆಯ ಅವಧಿಯ
ರಾಸಾಯನಿಕ ಗೊಬ್ಬರದ ಉತ್ಪಾದನೆಯೂ ಆಗಿನಕಿಂತ ೯ ಪಟ್ಟು ಹೆ
ಬೇಕೆಂದೂ ಸುಧಾರಿಸಿದ ಬೀಜಗಳ ಉತ್ಪಾದನೆ ಈಗಿನ ಇಮ್ಮಡಿಯಾಗಬೇಕೆಂದ
ಹೇಳಲಾಗಿದೆ. ಈ ಯೋಜನೆಯಲ್ಲಿ, ಸಾರ್ವಜನಿಕ ಕ್ಷೇತ್ರದಲ್ಲಿ ಒಕ್ಕಲುತನ

ತೊಡಗಿಸುವ ಬಂಡವಾಳವು ನೂರಕ್ಕೆ ನೂರರಷ್ಟು ಹೆಚ್ಚಾಗಬೇಕೆಂದು— ಆದರೆ ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿದ್ದ ೧೧೦೩ ಕೋಟಿ ರೂಪಾಯಿಗಳ ಒಕ್ಕಲುತನದ ವೆಚ್ಚ ನಾಲ್ಕನೆಯ ಯೋಜನೆಯಲ್ಲಿ ೨೯೧೦ ಕೋಟಿ ರೂಪಾಯಿಗಳಾಗಬೇಕೆಂದು ನಿಗದಿಪಡಿಸಲಾಗಿದೆ.

ಹಾಗೆ ನೋಡಿದರೆ, ಮೂರನೆಯ ಪಂಚವಾರ್ಷಿಕ ಯೋಜನೆಯ ಗುರಿಯನ್ನು ಸಾಧಿಸಲು ಹಣಕಾಸಿನ ತೊಂದರೆಯೇನೂ ಇರಲಿಲ್ಲ. ಒಕ್ಕಲುತನಕ್ಕೆ ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿದ್ದ ೨೧೦ ಕೋಟಿ ರೂಪಾಯಿಗಳ ವೆಚ್ಚವನ್ನು ಮೂರನೆಯದರಲ್ಲಿ ೬೦೦ ಕೋಟಿ ರೂಪಾಯಿಗಳಿಗೆ ಏರಿಸಲಾಗಿದ್ದಿತು; ಅಲ್ಲದೆ, ಗುರಿಯನ್ನು ಸಾಧಿಸುವುದಕ್ಕೆ ಇನ್ನೂ ಹೆಚ್ಚಿಗೆ ಹಣ ಬೇಕಾದರೆ ಒದಗಿಸಲಾಗುವುದೆಂಬ ಭರವಸೆಯನ್ನೂ ನೀಡಲಾಗಿದ್ದಿತು. ಆದರೂ ಆ ಯೋಜನೆ ಕೃಷಿವಿಷಯದಲ್ಲಿ ಕೂಡ ನಿರ್ದಿಷ್ಟವಾದ ಗುರಿಯನ್ನು ಸಾಧಿಸದೆ ಹೋಯಿತು.

ಒಕ್ಕಲುತನಕ್ಕೆ ಹವಾಮಾನ ಪರಿಸ್ಥಿತಿಯನ್ನೇ ಅವಲಂಬಿಸಿರದ ಕ್ಷೇತ್ರಗಳಲ್ಲಿಯೂ ಪ್ರಗತಿಯನ್ನು ಸಾಧಿಸಲಾರದೆ ಹೋದುದು ವಿಷಾದದ ಸಂಗತಿಯಾಗಿದೆ. ೧೨.೮ ಮಿಲಿಯನ್ ಎಕರೆಗೆ ನೀರಾವರಿಯನ್ನೊದಗಿಸಬೇಕೆಂಬುದು ಯೋಜನೆಯ ಗುರಿ; ಆದರೆ ೧೯೬೪-೬೫ರ ಕೊನೆಯಲ್ಲಿ ಕೇವಲ ೩.೮ ಮಿಲಿ-ಯನ್ ಎಕರೆ ಭೂಮಿಗೆ ಮಾತ್ರ ನೀರುಣಿಸಲು ಸಾಧ್ಯವಾಯಿತು. ರಾಸಾಯನಿಕ ಗೊಬ್ಬರಗಳ ವಿಷಯದಲ್ಲಿಯೂ ನಿರಾಶೆಯೇ ಆಯಿತು. ೧.೬೩ ಮಿಲಿಯನ್ ಟನ್ ರಾಸಾಯನಿಕ ಗೊಬ್ಬರವನ್ನು ಉತ್ಪಾದಿಸಬೇಕೆಂದು ನಿರ್ಧರಿಸಿದ್ದಾಗ, ಕೇವಲ ೦.೮೪ ಮಿಲಿಯನ್ ಟನ್ ಉತ್ಪಾದಿಸಲಾಯಿತು. ಅಂತೆಯೇ, ಸುಧಾರಿಸಿದ ಬೀಜಗಳ ಉತ್ಪಾದನೆಯಲ್ಲಿ, ಮಣ್ಣು ಸಂರಕ್ಷಣೆಯ ವಿಷಯದಲ್ಲಿ, ಮತ್ತು ಬೆಳೆಗಳ ರಕ್ಷಣೆಯ ವಿಷಯದಲ್ಲಿ ಇಟ್ಟುಕೊಂಡ ಗುರಿಯನ್ನು ಮುಟ್ಟಲಾಗಲಿಲ್ಲ. ಈ ವಿಷಯಗಳೇನೂ ಹವಾಮಾನವನ್ನು ಅವಲಂಬಿಸಿದವಲ್ಲ.

ನಮ್ಮ ಆರ್ಥಿಕ ಕ್ಷೇತ್ರದಲ್ಲಿ ಒಕ್ಕಲುತನವು ಮಹತ್ವದ ಸ್ಥಾನವನ್ನು ಪಡೆದಿದೆಯಾಗಿ, ಆ ಕ್ಷೇತ್ರದಲ್ಲಿ ಉತ್ಪಾದನೆ ನಿಯೋಜಿತ ಧ್ಯೇಯವನ್ನು ಮುಟ್ಟದಿದ್ದರೆ, ರಾಷ್ಟ್ರೀಯ ಹಾಗೂ ತಲಾ ವರಮಾನದ ಇಳಿತಾಯವಾಗುವುದು ಸಹಜ. ಆದುದರಿಂದ, ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿಯ ಒಕ್ಕಲುತನ ಉತ್ಪಾದನೆಯ ಸಾಧನೆಯಲ್ಲಿ ದೊರೆತ ಫಲ ಮತ್ತು ಅನುಭವಗಳು ನಮಗೆ ೪ನೆಯ ಯೋಜನೆಯ ಧ್ಯೇಯಸಾಧನೆಯಲ್ಲಿ ದಾರಿ ತೋರಿಸಬೇಕಾಗಿದೆ.

ಯೋಜನೆಗಳ ನಿಧಾನಪ್ರಗತಿಗೆ ಕಾರಣಗಳು :

ಅನಭಿವೃದ್ಧ ರಾಷ್ಟ್ರಗಳ ಆರ್ಥಿಕ ಸಮೀಕ್ಷೆಯನ್ನು ನಡೆಸಿದ ಸಂಯುಕ್ತ ರಾಷ್ಟ್ರಸಂಘದ ವರದಿಯ (೧೯೬೦) ಪ್ರಕಾರ, ಅನಭಿವೃದ್ಧ ರಾಷ್ಟ್ರಗಳ ಸಾಲಿನಲ್ಲಿ

ಭಾರತವು ಕಟ್ಟಕಡೆಯದಾಗಿದೆ. ಇಸ್ರೇಲ್, ಇರಾಕ್, ಬ್ರೆಜಿಲ್, ಥಾಯಿಲ್ಯಾ ದೇಶಗಳ ಪ್ರಗತಿ ಕ್ರಮವಾಗಿ ತಮ್ಮ ಬಂಡವಾಳದ ಪ್ರತಿಶತ ೧೯, ೯, ೬, ರಂತೆ ಇದ್ದರೆ ಭಾರತ ಪ್ರಗತಿಪಥದಲ್ಲಿ ಪ್ರತಿಶತ ೩ರಂತೆ ಮಾತ್ರ ಮುಂದೆ ನಡೆದಿದೆಯೆಂದು ಕಂಡುಬರುತ್ತದೆ.

(೧) ನಮ್ಮ ಯೋಜನೆಗಳನ್ನು ರೂಪಿಸುವಲ್ಲಿ ಏನೂ ತಪ್ಪಿರುವುದಿಲ್ಲ. ತಪ್ಪೆಲ್ಲವೂ ಅವುಗಳನ್ನು ಕಾರ್ಯಗತ ಮಾಡುವಲ್ಲಿಯೆ ಆಗಿದೆಯೆಂಬುದನ್ನು ಕಾಣುತ್ತೇವೆ. ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ ಒಕ್ಕಲುತನವು ಸ್ಥಳೀಯ ಹಂತದಲ್ಲಿ ಸರಿಯಾಗಿ ರೂಪಿಸಲ್ಪಡಲಿಲ್ಲ. ಒಕ್ಕಲುತನ ಉತ್ಪಾ ನೆಯು ಪ್ರತಿಯೊಬ್ಬ ಒಕ್ಕಲಿಗನ ಯೋಜನೆಯನ್ನು ಅವಲಂಬಿಸಿದೆ ನಾಲ್ ನೆಯ ಯೋಜನೆಯ ರೂಪರೇಖೆಗಳಲ್ಲಿ ಹೇಳಿರುವಂತೆ ಹಳ್ಳಿ, ತಾಲ್ಲೂಕು ಮತ್ತು ಜಿಲ್ಲಾ ಹಂತದಲ್ಲಿಯ ಯೋಜನೆಗಳು ಕ್ರಮಬದ್ಧವೂ ನೈಜವೂ ಆಗದಿದ್ದುದೆ ಅಯಶಸ್ಸಿಗೆ ಕಾರಣವೆಂದು ಹೇಳಲಾಗಿದೆ. ಈ ಕಾರಣಗಳಿಂದಲೇ ಮೂರನೆಯ ಯೋಜನೆಯಲ್ಲಿ ನಿಶ್ಚಿತ ಗುರಿಯನ್ನು ಸಾಧಿಸಲಾಗಲಿಲ್ಲ.

ಹಿಂದಿನ ಯೋಜನೆಗಳ ಅನುಭವವು ನಮಗೆ ಪಾಠವೆಂದು ತಿಳಿದರೆ ಒಕ್ಕಲುತನದ ವಿವಿಧ ಇಲಾಖೆಗಳ ಸಮನ್ವಯ ಸರಿಯಾಗಿ ಆಗದಿದ್ದುದು ಕಾ ಬರುತ್ತದೆ. ತಾಂತ್ರಿಕಸೇವೆ ಸಲ್ಲಿಸುವ ಇಲಾಖೆಗಳು ಮತ್ತು ಕಾರ್ಯಕಾರಿ ಇಲಾಖೆಗಳು ಒಂದಕ್ಕೊಂದು ಪೂರಕವಾಗಿ ಕೆಲಸಮಾಡಿದರೆ ಮಾತ್ರ ಯಶಸ್ಸು ಸಾಧ್ಯವಾಗುತ್ತದೆ.

(೨) ಒಕ್ಕಲುತನವು ಪ್ರಗತಿಹೊಂದಿದಂತೆಲ್ಲಾ ರಾಸಾಯನಿಕ ಗೊಬ್ಬ ಬೆಳೆಸಂರಕ್ಷಣೆಯ ವಿವಿಧ ಶಾಸ್ತ್ರೀಯ ಪ್ರಯೋಜನಗಳನ್ನು ಒಕ್ಕಲಿಗರು ಕಂಡು ಕೊಂಡಂತೆ ಅವುಗಳ ಉತ್ಪಾದನೆ ಹೆಚ್ಚುತ್ತಾ ಹೋಗಬೇಕು. ಇಲ್ಲದಿದ್ದ ಪ್ರಗತಿ ಕುಂಠಿತವಾಗುತ್ತದೆ.

(೩) **ಬೆಲೆಗಳ ಧೋರಣೆ:** ಬೆಲೆಗಳಲ್ಲಿ ಸಮನ್ವಯವಿಲ್ಲದ ಧೋ ಣೆಯು ಮೂರು ತರಹದ ಪರಿಣಾಮಗಳನ್ನುಂಟುಮಾಡುತ್ತದೆ. ಮೊದ ನೆಯದಾಗಿ, ಯೋಜನೆಯನ್ನು ರೂಪಿಸುವಾಗ ಇದ್ದ ಬೆಲೆಗಳ ಸ್ಥಿತಿ ಯೋಜ ಯನ್ನು ಕಾರ್ಯಗತಗೊಳಿಸುವಾಗ ಇಲ್ಲದಿರುವುದರಿಂದ ಕಾರ್ಯಾ ಹೆಚ್ಚಿನ ವೆಚ್ಚದ್ದಾಗುತ್ತದೆ. ಎರಡನೆಯದಾಗಿ, ಸಾಮಾನ್ಯವಾಗಿ ಸರಕಾ ಬೆಲೆಗಳನ್ನು ಜಯಪ್ರದವಾಗಿ ಸ್ಥಿರೀಕರಿಸುವಲ್ಲಿ ದುರ್ಬಲವಾಗಿದೆ ಎಂಬ ಭಾವ ಸಾರ್ವಜನಿಕರಲ್ಲಿ ಮೂಡುತ್ತದೆ. ಮೂರನೆಯದಾಗಿ, ಸರಕಾರವು ಸರಿಯಾ ಹತೋಟಿಯಲ್ಲಿಡದಿದ್ದರೆ ಸಂಪು ಹರತಾಳಗಳು ಸರ್ವಸಾಮಾನ್ಯವಾಗುತ್ತವೆ.

ಬೆಲೆಗಳ ಸ್ಥಿರೀಕರಣವೆಂದರೆ ಅವನ್ನು ಒಂದೇ ಹಂತದಲ್ಲಿ ನಿಲ್ಲಿಸಬೇಕೆಂದು ರ್ಥವಲ್ಲ. ಅಭಿವೃದ್ಧಿ ಹೊಂದುತ್ತಿರುವ ದೇಶಗಳಲ್ಲಿ ಬೆಲೆಯೇರಿಕೆ ಅನಿವಾರ್ಯವೆ. ದರೆ ಆ ಏರಿಕೆಯನ್ನು ನಿಯಂತ್ರಣದಲ್ಲಿಟ್ಟರೆ ಮಾತ್ರ ಉತ್ಪಾದನ ಚಟುವಟಿಕೆ ಳನ್ನು, ವೈಯಕ್ತಿಕ ವ್ಯವಹಾರದಾರರ ಉಳಿತಾಯಗಳನ್ನು ಹೆಚ್ಚಿಸಬಹುದು.

ಒಕ್ಕಲುತನ ವಸ್ತುಗಳ ವಿಷಯದಲ್ಲಿ ಒಂದು ನಿಜವಾದ ಬೆಲೆಯ ಧೋರಣೆ ಯನ್ನು ಪ್ರತಿಪಾದಿಸಬೇಕಾಗಿದೆ. ಬೆಲೆಯ ಏರಿಳಿತಗಳನ್ನು ಸರಿಪಡಿಸಲು ಂದು ಹೆಚ್ಚಳನಿಧಿ (Buffer stock) ಬೇಕಾಗಿದೆ; ಒಕ್ಕಲುತನ ಉತ್ಪಾದನೆಯ ವಸ್ತುಗಳ ಬೆಲೆಯನ್ನೇ ಆಗಲಿ, ಆಹಾರವಸ್ತುಗಳ ಬೆಲೆಯನ್ನೇ ಆಗಲಿ ತಡೆಗಟ್ಟುವುದಲ್ಲ, ಉತ್ಪಾದಕರನ್ನೂ ಗ್ರಾಹಕರನ್ನೂ ಸಂರಕ್ಷಿಸುವಂತಹ ಧೋರಣೆಯ ಆವಶ್ಯಕತೆ ಇದೆ. ಕೆಲವರು ವಾದಿಸುವಂತೆ, ಒಕ್ಕಲಿಗನಿಗೆ ಹೆಚ್ಚಿನ ಬೆಲೆಯನ್ನು ಕೊಟ್ಟರೆ ಮಾತ್ರ ಹೆಚ್ಚು ಉತ್ಪಾದನೆಯಾದೀತು ಎಂಬುದು ಸರ್ವ ಸಾಧುವಲ್ಲ. ಬೆಲೆಯ ಪ್ರತಿ ಎಕರೆಯ ಹೆಚ್ಚು ಇಳುವರಿಯಿಂದಲೂ ಉತ್ಪಾ-ದನೆಯ ಗುಣಸಂವರ್ಧನೆಯಿಂದಲೂ ಸಾಧಿಸಬೇಕೇ ಹೊರತು ಹೆಚ್ಚಿನ ಬೆಲೆ ಯನ್ನು ಕೊಡುವುದರಿಂದಲ್ಲ.

ಸರಕಾರದ ಬೆಲೆಧೋರಣೆ ರಾಜಕೀಯದಿಂದ ಮುಕ್ತವಾಗಿರಬೇಕು. ಕಳೆದ ಇಪ್ಪತ್ತು ವರುಷಗಳಲ್ಲಿ ಒಕ್ಕಲುತನಹುಟ್ಟುವಳಿಗಳ ಬೆಲೆಗಳು ನೂರಕ್ಕೆ ನೂರರಷ್ಟು ಏರಿವೆ ಆದರೆ ಕೈಗಾರಿಕೆಯ ಉತ್ಪಾದನೆಗಳ ಬೆಲೆಗಳು ಪ್ರತಿಶತ ಾರಷ್ಟು ಮಾತ್ರ ಏರಿವೆ. ಒಕ್ಕಲುತನ ಮತ್ತು ಕೈಗಾರಿಕೆವಸ್ತುಗಳ ಬೆಲೆಯಲ್ಲಿ ಸಮನ್ವಯ ಸಾಧಿಸದ ಧೋರಣೆ ಜಯಪ್ರದವಾಗಲಾರದು

ಕೈಗಾರಿಕೆವಸ್ತುಗಳ ವಿಷಯದಲ್ಲಿ ಸರಕಾರದ ಬೆಲೆಧೋರಣೆ ಸಮರ್ಪಕ ವಾಗಿರುವುದಕ್ಕೆ, ಬಂಡವಾಳ ತೊಡಗಿಸುವವರ, ವ್ಯಾಪಾರಿಗಳ ಹಾಗೂ ಗ್ರಾಹಕರ ತೀರ್ಮಾನಗಳನ್ನು ಸಂಪೂರ್ಣವಾಗಿ ಒಳಗೊಂಡಿರಬೇಕು. ಬೆಲೆ ಧೋರಣೆ ರಾಜಕೀಯ ಪ್ರಭಾವದಿಂದ ಅಲಿಪ್ತವಾಗಿರಬೇಕಲ್ಲದೆ, ವಿಕ್ರಯ ಆರ್ಥಿಕ ವ್ಯವಸ್ಥೆಯಲ್ಲಿ ಅದರ ಪಾತ್ರವು ಸ್ವತಂತ್ರವಾಗಿರಬೇಕು.

ಯಾವ ಬೆಲೆಧೋರಣೆ ಎಷ್ಟೇ ಸಮಂಜಸವಾಗಿದ್ದರೂ ಸರಿಯಾದ ಆರ್ಥಿಕ ಹಾಗೂ ಹಣಕಾಸು ಧೋರಣೆ ಅಳವಟ್ಟಿರಬೇಕು. ಪ್ರಸ್ತುತ ಪರಿಸ್ಥಿತಿ ನಮ್ಮ ದೇಶದ ಹಲವಾರು ವಸ್ತುಗಳ ಬೆಲೆಯೇರಿಕೆಗೆ ಹೆಚ್ಚಿನ ಕರಭಾರವು ಕಾರಣ ವಾಗಿದೆ. ಇಂತಹ ಮೂರು ಮಾದರಿಯ ಉದಾಹರಣೆಗಳನ್ನು ಕೊಡಬಹು ದಾಗಿದೆ. ಒಂದು : ಸಕ್ಕರೆ ಜೀವನದಲ್ಲಿ ಬಹು ಮುಖ್ಯವಾದ ಉಪಭೋಗವಸ್ತು ವಾಗಿದೆ; ಇದರ ಬೆಲೆಯ ಮೇಲೆ ಪ್ರತಿಶತ ೩೦ರಷ್ಟು ತೆರಿಗೆಯ ಭಾರವೇ ಇದೆ. ರಡು : ಉಕ್ಕು ಕೈಗಾರಿಕೆಯ ಉತ್ಪಾದನೆಗೆ ಅಗತ್ಯದ ವಸ್ತು: ಅದರ

ಬೆಲೆಯ ಮೇಲೆ ತೆರಿಗೆಯ ಭಾರ ಪ್ರತಿಶತ ೨೫ರಷ್ಟಿದೆ. ಹಾಗೆಯೇ ದೇಶ ವಾಹನಗಳ ಬೆಲೆಯ ಮೇಲೆ ಇರುವ ತೆರಿಗೆಯ ಭಾರ ನೂರಕ್ಕೆ ೪೦ರ ಉಪಭೋಗ್ಯವಸ್ತುಗಳ ಬಳಕೆ ಉತ್ಪಾದನೆಯನ್ನು ಕುಗ್ಗಿಸಿ, ದೇಶೀಕ ಹೆಚ್ಚಿಗೆಯನ್ನು ತಗ್ಗಿಸುವುದಕ್ಕಾಗಿ ಕರಭಾರ ಹೆಚ್ಚಿರಬೇಕೆಂದು ಒ ಕೊಂಡರೂ ಅದು ಉತ್ಪಾದನಾವೆಚ್ಚವನ್ನು ಏರಿಸದಂತೆ ಮಿತಿಯಲ್ಲಿರಬೇಕು.

ಆರ್ಥಿಕವಲ್ಲದ ಕಾರಣಗಳು :

ರಾಷ್ಟ್ರೀಯ ವರಮಾನ ಮತ್ತು ತಲಾ ಆದಾಯವನ್ನು ಹೆಚ್ಚಿಸು ಆರ್ಥಿಕ ಕಾರಣಗಳೇ ಮುಖ್ಯವೆಂದು ಒಪ್ಪಿಕೊಂಡರೂ ಯೋಜನೆ ಕುಂಟ ದಕ್ಕೆ ಆರ್ಥಿಕವಲ್ಲದ ಕಾರಣಗಳೂ ಹಲವಾರು ಉಂಟೆಂಬುದು ನಿದರ್ಶ ಬಂದಿದೆ. (೧) ರಾಜಕೀಯ ಶಿಸ್ತಿನ ಅಭಾವ; (೨) ಯೋಜನೆಗಳಲ್ಲಿ ಹೆ ಹೆಚ್ಚು ಜನ ಭಾಗವಹಿಸಿ ಪ್ರೋತ್ಸಾಹಿಸದೆ ಇರುವುದು; (೩) ಜನಸಂಖ್ಯೆ ಹೆಚ್ಚಳ : (೪) ಸೈನ್ಯಸಜ್ಜಿಕೆಗೆ ಹೆಚ್ಚಿನ ಬಂಡವಾಳದ ವಿನಿಯೋಗ- ಮೊದಲಾದವುಗಳಿಂದ ನಮ್ಮ ಪ್ರಗತಿ ಮುಗ್ಗರಿಸಿದೆ ಎಂದು ಹೇಳಬಹುದು.

ಸಮಾಜವಾದಿ ಸಮಾಜನಿರ್ಮಾಣವು ಪ್ರತಿಯೊಬ್ಬನ ದುಡಿಮೆಯಲ್ಲಿ ಹಣವು ಬಂಡವಾಳವಲ್ಲ. ದುಡಿಮೆಯೆ ಹಣವಾಗಿ ರೂಪಾಂತರ ಹೊಂದಿ ಬ ವಾಳವಾಗುತ್ತದೆ. ನಮಗೆ ಬೇಕಾದುದು ಆರ್ಥಿಕ ಕ್ಷೇಮ. ಆರ್ಥಿಕ ಕ್ಷೇ ಹೆಚ್ಚು ಹೆಚ್ಚು ವಸ್ತುಗಳ ಉತ್ಪಾದನೆಯನ್ನು ಅವಲಂಬಿಸಿದೆ. ನ ಯೋಜನೆಗಳು ಸಾಗಿಬಂದ ದಾರಿಯನ್ನು, ರಾಷ್ಟ್ರೀಯ ಆದಾಯ, ತ ಆದಾಯವನ್ನು ಪರಿಶೀಲಿಸಿ ನೋಡಿದರೆ ನಮ್ಮ ಯೋಜನೆಗಳು ಸುಭದ್ರವ ತಳಹದಿಯ ಮೇಲೆ ರೂಪಿತವಾಗಬೇಕು ಮತ್ತು ಅವುಗಳ ಕಾರ್ಯಾ ನೈಪುಣ್ಯದಿಂದ ನಡೆಯಬೇಕು; ಆಗ ಮಾತ್ರ ನಾವು ಪ್ರಗತಿಯನ್ನು ಹೊಂದ ಎಂಬ ಖಾತರಿ ಮನವರಿಕೆಯಾಗಿದೆ.

★ ಕೆ. ಆರ್. ಮಲ್ಲಿಕಾರ್ಜುನಸ

ಶ್ರಾವಣಕುಮಾರ*

(ಡೊಳ್ಳಿನ ಪದ)

ಶ್ರೀಸ್ವಾಮಿ ನಮ್ಮ ದೇವರು ಬಂದಾವ ।
ಗುರುವೇ ನಮಃ ॥

ಸಃ ಉತ್ತಮ ಕೂಡಿರಿ ಚಿತ್ತವಿಟ್ಟು ಕೇಳಿರಿ ।
ಸತ್ಯವಂತರು ಮನಿಗಳ ॥ ೧ ॥

ಸತ್ಯುಳ್ಳ ಧರಣಿಗೆ ಸದ್ಗತಿ ಆಗಿದ್ದು ।
ಸತ್ಯ ಸಭೆಯೊಳಗೆ ಬಿತ್ತರಿಸುವೆ ॥ ೨ ॥

ಸತ್ಯುಳ್ಳ ಶ್ರಾವಣನು ನಿತ್ಯಕಾಲದಲಿ ।
ತಂದೆತಾಯಿಗಳ ಸೇವೆ ಮಾಡುವನು ॥ ೩ ॥

ಕಂಡುಗೊಂಡಾವ ಮೆಚ್ಚಿ ಮಂದಿರಕೊಯ್ದಾನು ।
ಮುಂದಿನ ವಿಸ್ತಾರವ ಹೇಳುವೆನು ॥ ೪ ॥

ಶ್ರಾವಣನ ತಂದೆತಾಯಿ ಕುರುಡರು ಇಬ್ಬರು ।
ಇಬ್ಬರಿಗೆ ಕಣ್ಣುಗಳಿದ್ದಿಲ್ಲವೇ ॥ ೫ ॥

ಕಣ್ಣು ಕಾಣದೆ ಕೊರಗಿ ಸಣ್ಣಾಗಿ ಹೋದರು ।
ಇದ್ದರೇನು ಫಲವೆಂದರು ॥ ೬ ॥

ಒಂದು ದಿನ ತಮ್ಮ ಕಂದಾನ ಕರೆದಾರು ।
ಕಾಶಿಗೆ ಹೋಗ್ಬೇಕೆಂದಾರು ॥ ೭ ॥

ಕಾಶಿ ರಾಮೇಶ್ವರನ ಕಾಣದೇಕೆಂತೀವಿ ।
ನಮಗೆ ತೋರಿಸಬೇಕೇಳೆಂದರು ॥ ೮ ॥

ತಾಯಿತಂದೆಗೆ ವಚನ ಕೊಟ್ಟನು ಶ್ರಾವಣ ।
ಆ ಕ್ಷಣ ಕವಡಿಯು ಮಾಡ್ಯಾನs ॥ ೯ ॥

ಕವಡಿ ಒಳಗೆ ತಾಯಿತಂದಿನ ಕೂಡಿಸಿ ।
ಹೆಗಲ ಮೇಲಿಟ್ಟುಕೊಂಡು ನಡೆದಾನs ॥ ೧೦ ॥

---

* ಈ ಸಂಗ್ರಹದ ಕಾರ್ಯದಲ್ಲಿ ನನ್ನೊಂದಿಗೆ ಸಹಕರಿಸಿದ ಹಿಂದುಸ್ತಾನಿನ ವಿದ್ವ ಆತ್ಮೀಯ ಮಿತ್ರರಾದ ಶ್ರೀ ಮೊರಿಗೇರಿ [illegible] ಬಿ. ಎ. [illegible] ಅವರ ಹೆಸರನ್ನು ಇಲ್ಲಿ ಸ್ಮರಿಸುತ್ತೇವೆ.

ಹಾವುಗಾರನಂತೆ ಕೋವಿದ ಶ್ರಾವಣ ।
ಕಾಸಿಯು ಮಾರ್ಗವ ಹಿಡುದಾನು || ೧೧ ||

ಕೈಲಾಸಪುರದಲ್ಲಿ ಶಿವನು ಪಾರ್ವತಿದೇವಿ ।
ಶ್ರಾವಣ ಬರುವದ ಕಂಡಾರ || ೧೨ ||

ಶ್ರಾವಣ ಬರುತಾನೆಂದು ಕರುಣಸಾಗರ ಶಿವ ।
ಹಸನುಳ್ಳ ಜಾಗ ಮಾಡಿಟ್ಟಾನು || ೧೩ ||

ಹಿಂದೆ ಮುಂದೆ ಯಾರಿಲ್ಲ ಒಬ್ಬೊಬ್ಬನೆ ಗಂಭೀರ ।
ಹೋಗಿ ಸೇರಿದನು ಆರಣ್ಯಕೆ || ೧೪ ||

ಹಕ್ಕಿಪಕ್ಷಿಗಳೆಲ್ಲ ಹೇಳ್ಯಾವ ಆ ದಿನ।
ಶಕುನವ ತಿಳಿಯುತಾ ಹೂರಣಾನ || ೧೫ ||

ಹುಲಿ ಕರಡಿ ಬಂದಾವು ಮುಂದು ನಿಂತು ಹೇಳ್ಯಾವು ।
ಕಾಸಿಗೆ ಹೋಗಬ್ಯಾಡೆಂದಾವು || ೧೬ ||

ಯಾರ್‍ಯಾರು ಹೇಳಿದರೆ ಕೇಳಾದೆ ಶ್ರಾವಣನು ।
ರಾಮ ರಾಮನೆಂದು ನಡೆದಾನು || ೧೭ ||

ತಾಯಿತಂದೆಗಳಾಗ ಅಂಬತಾರೊ ಮಗನಿಗೆ ।
ನೀರಡಕಿ ನಮಗಾದೀತೆಂದಾರ || ೧೮ ||

ಹಸ್ತು ಸಾವತೀವಿ ತುರ್ತು ನೀರ ತಾರೊ ।
ಗಂಟಾಲ ಸ್ವರ ಹಾರಿತಂದಾರು || ೧೯ ||

ನೀರು ತರುತೀನಿ ಸ್ವಲ್ಪ ತಡೆಯಬೇಕೆಂದಾನು ।
ಹೆಗಲ ಮೇಲಿನ ಕವಡಿ ಇಳಿವ್ಯಾನ || ೨೦ ||

ಹೆಗಲ ಮೇಲಿನ ಕವಡಿ ಇಳಿವ್ಯಾನೊ ಶ್ರಾವಣ ।
ಗಿಡದ ಮೇಲೆ ತೂಗು ಬಿಟ್ಟ್ಯಾನ || ೨೧ ||

ಶಿವನಿಗೆ ಒಪ್ಪಿಸಿ ಪಾದದ ವ್ಯಾಲೆ ಬಿದ್ದು ।
ಹೂಜಿಯು ತಗೊಂಡು ಹೊರಟಾನೆ || ೨೨ ||

ಹಾದಿ ತಪ್ಪಿತೆಂದು ಹುಲ್ಲಹುಲ್ಲವ ಕಲಸಿ।
ಗಂಟು ಹಾಕುತೆ ಮುಂದೆ ನಡೆದಾನು || ೨೩ ||

ಕಾಂತಾರ ಗುಡ್ಡ ಅರಣ್ಯವ ಸೇರಿದನು ।
ತಿರುತಿರುಗಾಡಿ ನೀರು ಹುಡುಕೂತ || ೨೪ ||

ಹುಲಿಕರಡಿಮೃಗಕ್ಕೆಲ್ಲ ದೂರದಿ ಕೇಳಿದನು।
ನೀಯಾವಲ್ಲೈದಾವೆಂದಾನಽ ॥ ೧೫ ॥

ತಾಯಿತಂದೆಯುಂಬತಾರ ಬರಲಿಲ್ಲ ಶ್ರಾವಣ।
ಹುಲಿಕರಡಿ ಪಾಲಾದನಂತಾರಽ ॥ ೧೬ ॥

ಹುಡುಕಲಿಕ್ಕೆ ನಾವು ಹ್ಯಾಗೆ ಹೋಗಬೇಕು।
ಇಬ್ಬರಿಗೆ ಕಣ್ಣುಗಳಿಲ್ಲೆಂದಾರಽ ॥ ೧೭ ॥

ಮುಂದೆ ಕೇಳಿರಿ ಕಂದ ಶ್ರಾವಣನಿಗೆ।
ಹಂತ್ಯಗಾಲವ ಬಂದೊದಗೀತಽ ॥ ೧೮ ॥

ಬ್ರಹ್ಮನ ಬರದೂದ ಮಾಡಿದ ಕರ್ಮವು।
ಯಾರ್ಯಾರಿಗೆ ಬಿಟ್ಟೆಲ್ಲಾವೆ ॥ ೧೯ ॥

ದಶರಥರಾಜನು ನೀರ್ಕೆರೆ ಕಾವುತ।
ಕೆರೆಯು ದಂಡೆಯು ಮ್ಯಾಲ ಇದ್ದಾನ ॥ ೨೦ ॥

ಆನಿ ಬರ್ತಾವೆಂದು ಬಾಣಬಿಲ್ಲವ ಹಿಡಿದು।
ಮೂಲಿಮೂಲಿಗೆ ತಿರುಗೂತ ಇದ್ದಾನು ॥ ೨೧ ॥

ಕೆರೆಯು ಸುತ್ತಮುತ್ತ ಗಿಡದ ನೆರಳು ಬಿದ್ದಽ।
ಕಾಡಕತ್ತಲೆಗವಿದಿದ್ದಾವೆ ॥ ೨೨ ॥

ತಿರುಗಾಡಿ ಶ್ರಾವಣ ಕೆರೆಯು ದಂಡಿಗೆ ಬಂದು।
ನೀರ್ಕಂಡು ಸಂತೋಷ ಆದಾನಽ ॥ ೨೩ ॥

ತಾಯಿತಂದೆಗೆ ನೀರ್ಕುಡಿಸಿ ಹಿಂದಿನಿಂದನೆ।
ನೀರ್ಕುಡಿಯಬೇಕೆಂದಾನೆ ॥ ೨೪ ॥

ಹೂಜಿಯು ತುಂಬ್ಯಾನು ಗುಡು ಗುಡು ಅಂದೀತು।
ದಶರಥ ಶಬುದಾವು ಕೇಳ್ಯಾನು ॥ ೨೫ ॥

ಆನಿ ಬಂದೀತೆಂದು ಬಿಲ್ಲಿಗೆ ಬಾಣಸೂಡಿ।
ಠೇಂಕರಿಸಿ ಬಾಣವ ಬಿಟ್ಟ್ಯಾನಽ ॥ ೨೬ ॥

ಶಕ್ತಿಲಿಂದಲಿ ಬಾಣ ಬಿಟ್ಟ್ಯಾನು ದಶರಥ।
ಶ್ರಾವಣನಿಗೆ ಹೋಗಿ ಬಾಣಾವ ಬಡಿದಾವ ॥ ೨೭ ॥

ಬಾಣವ ಬಡಿದೀತು ನೆಲದ ಮೇಲೆ ಬಿದ್ದು।
ರಾಮ ರಾಮನೆಂದು ನುಡಿದಾನ ॥ ೨೮ ॥

ರಾಮನೆಂಬ ಶಬುದ ದಶರಥ ಕೇಳ್ಯಾನು |
ಇದೇನು ಸೋಜಿಗನೆಂದಾನು ॥ ೪೯ ॥

ಗಾಬ್ರ್ಯಾಗಿ ದಶರಥ ಓಡಿ ಬಂದು ಕೇಳ್ಯಾನು |
ಯಾರು ತಮ್ಮ ನೀನ್ಹೇಳೆಂದು ॥ ೫೦ ॥

ಯಾರ್ತಮ್ಮ ನೀನು ಇಲ್ಯಾಕೆ ಬಂದೀದಿ |
ಎಲ್ಲಿಗೆ ಹೋಗುತಿದೆಂದಾನು ॥ ೫೧ ॥

ಕೇಶುರಾಜನ ಮಗ ಅಂದಾನು ಶ್ರಾವಣ |
ಕಾಸಿಗೆ ಹೋಗುತ್ತಿದ್ದೀವಿಯೆಂದಾನ ॥ ೫೨ ॥

ತಾಯಿತಂದಿಗೆ ನಾನು ನೀರಿಗೆ ಬಂದೀರೆ |
ಬಾಣ ಹೊಡೆದು ಬಿಟ್ಟ್ಯಂದಾನು ॥ ೫೩ ॥

ಬಾಧಾವು ತಡೆಲಾರೆ ಪ್ರಾಣಾವ ಬಿಡುತೀನಿ |
ತುರ್ತ ಬಾಣವನ್ನು ಕಿತ್ತ್ಯಯ್ಯಾ ॥ ೫೪ ॥

ನಿಮ್ಮ ತಾಯಿತಂದಿಗೆ ನೀರ್ಕುಡಿಸಿ ಬರುತೀನಿ |
ಎಲ್ಲಿ ಐದಾರೆ ಕೂನಾವು ಹೇಳಲ್ಲಾ ॥ ೫೫ ॥

ಕವಡಿ ಇರುವದು ಕೂನ ಹೇಳ್ಯಾನ ಶ್ರಾವಣ |
ಮಾತನಾಡದೆ ಹೋಗೆಂದಾನು ॥ ೫೬ ॥

ಹುಡುಕೂತ ದಶರಥ ಹೂಜಿಯು ತಕ್ಕೊಂಡು |
ಕವಡಿಯು ಬಳಿಗ್ಹೋಗಿ ನಿಂತಾನು ॥ ೫೭ ॥

ಮಾತನಾಡದೆ ನೀರ ಹೂಜಿಯಲಿ ಕೊಟ್ಟು |
ಅವರ ಪಾದದ ಮ್ಯಾಲೆ ಬಿದ್ದಾನ ॥ ೫೮ ॥

ತಾಯಿ ತಂದಿ ಅಂಬತಾರ ಬ್ಯಾಸರಾದೆವು ಕಂದ |
ನೀರ್ಹಂಗ ಕುಡಿಯಬೇಕೆಂಬತಾರ ॥ ೫೯ ॥

ನಾನೇ ದಶರಥರಾಜ ನಿಮ್ಮ ಮಗನ ಹೊಡೆದು |
ನಾ ನೀರು ತಂದೀನೆಂದಾನು ॥ ೬೦ ॥

ಘಾತ ಮಾಡಿದೆಯಣ್ಣಾ ಕೊಂದು ನಮ್ಮ ಮಗನು |
ಅಂತಃಕರುಣ ನಿನಗಿಲ್ಲವೇನು ॥ ೬೧ ॥

ಕುರುಡಾರ ಕೈಕೋಲು ಮುರಿದು ಹಾಕಿದೆ ನೀನು |
ಕರಡಕ್ಕೆ ಬೆಂಕಿಯನಿಟ್ಟ್ಯಾಂಗೆ ॥ ೬೨

ನಿನಗೆ ಮಕ್ಕಳಾಗ್ಲಿ ಅಡವಿ ಪಾಲಾಗಿ ।
ದಶರಥನಿಗೆ ಮಕ್ಕಳಿಲ್ಲೆನಸಾಲಿ ॥ ೫೩ ॥

ಶೋಕವು ಮಾಡುತ ದಶರಥರಾಜನಿಗೆ ।
ಕೋಪದಿಂದಲೆ ಶಾಪಕೊಟ್ಟಾರು ॥ ೫೪ ॥

ಏನಾದದ್ದಾಗಲಿ ಎಂದಾನು ದಶರಥ ।
ಹೆಗಲ ಮ್ಯಾಲ ಕವಡಿ ಹೊತ್ತಾನ ॥ ೫೫ ॥

ಹೆಗಲಮ್ಯಾಲ ಕವಡಿ ಹೊತ್ತಾನು ದಶರಥ ।
ಕೆರೆಯು ದಂಡೆಯು ಮ್ಯಾಲ ಇಳಿವ್ಯಾನು ॥ ೫೬ ॥

ಬಿದ್ದ ಮಗನ ಕೈ ಹಿಡಿದು ಎಬ್ಬಿಸುತಾರ ।
ಒಳ್ಳೇ ಸಣ್ಣ ಬಾಳಾನೆಂದಾರ ॥ ೫೭ ॥

ತಾಯಿತಂದೆ ಬಾಳ ದುಃಖಮಾಡ್ಯಾರೋ ।
ದಶರಥ ಬಾಣವ ಕಿತ್ತ್ಯಾನೆ ॥ ೫೮ ॥

ಪಾದದ ಮೇಲೆ ಬಿದ್ದು ಪ್ರಾಣವ ಬಿಟ್ಯಾನು ।
ತಾಯಿತಂದಿಗೆ ಕಣ್ಣು ಬಂದಾವ ॥ ೫೯ ॥

ಮಗನ ಮುಖವ ನೋಡಿ ಪರಿಪರಿಯಿಂದಲಿ ।
ಶೋಕಸಾಗರದೊಳು ಮುಳಿಗ್ಯಾರೆ ॥ ೬೦ ॥

ಶೋಕಾವು ಮಾಡ್ಯಾಗ ಆಕಾಶದಿಂದಾಲಿ ।
ಹೂವಿನ ಮಳಿ ಸ್ಯಾನಿ ಸುರಿದಾವು ॥ ೬೧ ॥

ಹೂವಿಗೆ ಜಾಂಗಪ್ಪ ಛಳಿರೆಂದು ಘನದಿಂದ ।
ಶಿವದೂತರು ಬಂದಿಳಿದಾರು ॥ ೬೨ ॥

ಹಳು ಶರಣೆಂದು ರಥದೊಳು ಕುಂದಿರಿಸಿ ।
ಜೈಯೆಂದು ಮೇಲಕೊಯ್ದಾರ ॥ ೬೩ ॥

ತಾಯಿ ತಂದಿಗೆ ಸೇವಾ ಒಂದೇ ಭಾವದಿ ಮಾಡಿ ।
ಮಂಗಳಗಿರಿಗೆ ತಾ ಹೋದಾನೆ ॥ ೬೪ ॥

ಶರಣನ ಭಕ್ತಿಗೆ ಕರುಣಸಾಗರ ಮೆಚ್ಚಿ ।
ಮಂದಾರಗಿರಿಗೆ ತಾವೊಯ್ದಾನೆ ॥ ೬೫ ॥

★ ಶಾಶ್ವತಸ್ವಾಮಿ ಮುಳ್ಳ್ಯಂದಿಮಠ

ಅಮುದ್ರಿತ ಜೈನ ಕನ್ನಡ ಗ್ರಂಥಗಳು

'ಅಮುದ್ರಿತ ಜೈನ ಕನ್ನಡ ಗ್ರಂಥಗಳು' ಎಂಬ ಈ ಪಟ್ಟಿಯನ್ನು ಕರ್ನಾಟಕ ಕವಿಚರಿತೆಯ ಮೂರು ಸಂಪುಟಗಳ, ಈವರೆಗೆ ಪ್ರಕಟವಾದ ಕನ್ನಡದ ಎಲ್ಲ ಸೂಚೀಗ್ರಂಥಗಳ, ಜಯಕರ್ನಾಟಕ, ಜಯಂತಿ ಮೊದಲಾದ ಪತ್ರಿಕೆಗಳ ನೆರವಿನಿಂದ ಸಿದ್ಧಪಡಿಸಲಾಗಿದೆ. ಈ ಮೂಲಕ ನನ್ನ ಗಮನಕ್ಕೆ ಬಂದ ಅಪ್ರಕಟಿತ ಜೈನಕನ್ನಡ ಗ್ರಂಥಗಳತ್ತ ವಿದ್ವಾಂಸರ ಲಕ್ಷ್ಯ ಸೆಳೆಯುವುದು ನನ್ನ ಉದ್ದೇಶ. ಎಷ್ಟೇ ಎಚ್ಚರವಹಿಸಿದರೂ ಅನವಧಾನದಿಂದ ಉಳಿದಿರಬಹುದಾದ ದೋಷಗಳನ್ನು ಪ್ರಾಜ್ಞರು ಮನ್ನಿಸುವರೆಂದು ನಂಬಿದ್ದೇನೆ.

ಕೃತಿಯ ಹೆಸರು	ಕರ್ತೃವಿನ ಹೆಸರು	ವಿಷಯ	ಕಾಲ	ಉಲ್ಲೇಖ
ಅಕೃತ್ರಿಮ ಚೈತ್ಯಾಲಯ ವರ್ಣನೆ	—	—	—	ಕ ತಾ.ಸೂ. ೩೪
ಅಂಜನಾಚರಿತೆ	ಶಿಶುಮಾಯಣ	ಚರಿತೆ	೧೨೩೨	ಕ.ಕ.ಚ.
ಅಂಜಲಿನೋಂಪಿ	—	ವ್ರತವಿಧಾನ	—	ಎಚ್.ಎಲ್. ನಾಗರಾಜ
ಅನಂತನಾಥಚರಿತೆ	ಅನಂತಜಿನೇಶ್ವರ	ಚರಿತೆ	೧೫೮೫	ಜಯಕರ್ನಾಟಕ ೪-೯
ಅನಂತಸೌಂದರ್ಯನೋಂಪಿ	—	ವ್ರತವಿಧಾನ	—	ಎಚ್.ಎಲ್. ನಾಗರಾಜ
ಅನಂತವ್ರತಚರಿತೆ	ಆದಿಮಯ್ಯ	ಚರಿತೆ	—	ಕ.ತಾ.ಸೂ. ೧೪೯
ಅನಂತಚತುರ್ದಶೀ ನೋಂಪಿ	ವರ್ಣಿಶಾಂತಣ್ಣ	ವ್ರತವಿಧಾನ	—	ಕ.ತಾ.ಸೂ. ೧೫೯
ಅನಂತವ್ರತವಿಧಾನ	—	ವ್ರತವಿಧಾನ	—	ಕ.ತಾ.ಸೂ. ೨೬೭
ಅನಂತಮತಿಚರಿತೆ	ಪಲ್ಲವಪಂಡಿತ	ಚರಿತೆ	—	ಜಯಕರ್ನಾಟಕ ೪-೯
ಅನಂತನಾಥಚರಿತೆ	ಪದ್ಮಣಶೆಟ್ಟಿ	ಚರಿತೆ	೧೫೮೨	ಪ್ರಬುದ್ಧ ಕರ್ನಾಟಕ
ಅನಂತಮತಿಚರಿತ್ರೆ	ಸಾತವರ್ಣಿಶಿಷ್ಯ	ಚರಿತೆ	—	ಕ.ತಾ.ಸೂ. ೨೬೬
ಅನಂತನಾಥಾಷ್ಟಕ	—	ಸ್ತುತಿ	—	ಕ.ತಾ.ಸೂ. ೧೮೩
ಅನಂತಕುಮಾರಿಚರಿತೆ	ವರ್ಣಿಶಾಂತಣ್ಣ	ಚರಿತೆ	—	ಕ.ತಾ.ಸೂ. ೨೨೯
ಅನುಪ್ರೇಕ್ಷೆ	ಕಲ್ಯಾಣಕೀರ್ತಿ	ಅಧ್ಯಾತ್ಮ	೧೪೩೯	ಕ.ಕ.ಚ.

ಕೃತಿಯ ಹೆಸರು	ಕರ್ತೃವಿನ ಹೆಸರು	ವಿಷಯ	ಕಾಲ	ಉಲ್ಲೇಖ
ಅಮಿತಗತಿ ಶ್ರಾವಕಾಚಾರವ್ಯಾಖ್ಯೆ	ಕೇಶವವರ್ಣಿ	ಆಚಾರ	೧೩೫೯	ಕ.ಕ.ಚ.
ಅಮೃತಾಶೀತಿವ್ಯಾಖ್ಯೆ	ಬಾಲಚಂದ್ರ	ಅಧ್ಯಾತ್ಮ	ಸು. ೧೧೭೦	ಕ.ತಾ.ಸೂ.
ಅಮದುಣಲನನೋಂಪಿ	—	ವ್ರತವಿಧಾನ	—	ಎಚ್.ಎಲ್. ನಾಗರಾಜ
ಅರಿಂಗಮಭಟ್ಟಾರಕಕಥೆ	—	ಕಥೆ	—	ಕ.ತಾ.ಸೂ. ೧೫೯
ಅಶ್ವವೈದ್ಯ	ಬಾಚರಸ	ವೈದ್ಯ	೧೫೦೦	ಕ.ಕ.ಚ.
ಅಷ್ಟಕಸಂಗ್ರಹ	—	ಸ್ತುತಿ-ಪೂಜೆ	—	ಕ.ತಾ.ಸೂ. ೨೪೯
ಅರ್ಹತ್‌ಸಿದ್ಧಸ್ತೋತ್ರ	—	ಸ್ತುತಿ	—	ಕ.ತಾ.ಸೂ. ೧೯೩
ಅರ್ಹತ್‌ಸ್ತೋತ್ರ	—	ಸ್ತುತಿ-ಪೂಜೆ		ಕ.ತಾ.ಸೂ. ೧೮೩
ಅರ್ಹತ್‌ಪೂಜಾ	—	ಪೂಜೆ	—	ಕ.ತಾ.ಸೂ. ೮೪
ಅರ್ಹದಷ್ಟಕ	ನಾಗಚಂದ್ರ	ಸ್ತುತಿ		ಕ.ತಾ.ಸೂ. ೧೮೪
ಅಹಿಂಸಾಚರಿತೆ	ಪಾಯಣ್ಣ	ಚರಿತೆ	೧೭೪೮	ಕ.ತಾ.ಸೂ.
ಆಚಾರಸಾರವ್ಯಾಖ್ಯೆ	ವೀರನಂದಿ	ಆಚಾರ	೧೧೫೩	ಕ.ಕ.ಚ.
ಆಣತಿನೋಂಪಿ	—	ವ್ರತವಿಧಾನ	—	ಎಚ್.ಎಲ್. ನಾಗರಾಜ
ಆತ್ಮಾನುಭವ (ಗುಣಭದ್ರ) ವ್ಯಾಖ್ಯೆ	ಮಾಘನಂದಿ	ಅಧ್ಯಾತ್ಮ	೧೨೬೦	ಕ.ತಾ.ಸೂ. ೨೨
ಆತ್ಮೋದಯಸಾರ	—	ಅಧ್ಯಾತ್ಮ	—	ಕ.ತಾ.ಸೂ. ೨೦೫
ಆದಿತ್ಯವಾರನೋಂಪಿ	—	ವ್ರತವಿಧಾನ	—	
ಆದಿತೀರ್ಥಂಕರಭವಾವಳಿ	—	ಚರಿತೆ	—	ಭರತೇಶವೈಭವದ ಕಥಾಸಾರ
ಆದಿತೀರ್ಥಂಕರಚರಿತೆ	—	ಚರಿತೆ	—	ಕ.ತಾ.ಸೂ. ೨೬೮
ಆದಿನಾಥಯಕ್ಷಗಾನ	ಸದಾನಂದ	ಯಕ್ಷಗಾನ	—	ಕ.ತಾ.ಸೂ. ೧೫೧
ಆದಿನಾಥಶತಕ	—	ಸ್ತುತಿ	—	ಕ.ತಾ.ಸೂ. ೧೮೪
ಆದಿಪರಮೇಶ್ವರ ಯಕ್ಷಗಾನ	ಬೊಮ್ಮಣ್ಣ	ಯಕ್ಷಗಾನ	—	ಮೈಸೂರು ಪ್ರಾಚ್ಯ ಸಂ.
ಆದೀಶ್ವರ ಜನ್ಮಾಭಿಷೇಕಚರಿತೆ	—	ಚರಿತೆ	—	ಕ.ತಾ.ಸೂ. ೧೫೦
ಆರಾಧನಾಸಮುಚ್ಚಯ ವ್ಯಾಖ್ಯೆ	—	ಆಚಾರ		ಕ.ತಾ.ಸೂ. ೩೭

ಕೃತಿಯ ಹೆಸರು	ಕರ್ತೃವಿನ ಹೆಸರು	ವಿಷಯ	ಕಾಲ	ಉಲ್ಲೆ
ಆರಾಧನಸಾರ (ದೇವಸೇನ) ವ್ಯಾಖ್ಯೆ	ಕೇಶವವರ್ಣಿ	ಆಚಾರ	೧೩೫೯	ಕ. ಕ.
ಆರೋಗ್ಯಸ್ತೋತ್ರ	ಶ್ರುತಕೀರ್ತಿ	ಸ್ತುತಿ	—	ಕ.ತಾ. ಸೂ. ೭
ಆಸವಸಂತತಿ (ಶ್ರುತಮುನಿ) ವ್ಯಾಖ್ಯೆ	ಬಾಲಚಂದ್ರ	ಸಿದ್ಧಾಂತ	ಸು. ೧೧೭೦	ಕ.ತಾ. ಸೂ.
ಇಷ್ಟೋಪದೇಶ (ಪೂಜ್ಯಪಾದ) ವ್ಯಾಖ್ಯೆ	—	ಅಧ್ಯಾತ್ಮ	—	ಕ.ತಾ. ಸೂ.
ಉದ್ಯೋಗಸಾರ	ಬಾಲಚಂದ್ರ	ಧರ್ಮ-ನೀತಿ	—	ಕ.ತಾ. ಸೂ. ೧
ಉದ್ಯೋಗಸಾರ	ವಣವರ್ಮ (?)	ಧರ್ಮ-ನೀತಿ	—	ಕ.ತಾ. ಸೂ.
ಉದ್ಯೋಗಸಾರ	—	ಧರ್ಮ-ನೀತಿ	—	ಕ.ತಾ. ಸೂ.
ಉದ್ಯೋಗಸಾರ	ಬಾಲಚಂದ್ರ	ನೀತಿ	೧೭೮೨	ಕ. ಕ
ಉಪಸರ್ಗನಿವಾರಣ ನೋಂಪಿ	—	ವ್ರತವಿಧಾನ	—	ಕ.ತಾ. ಸೂ.
ಉಪಾಸಕಸಂಸ್ಕಾರ ವ್ಯಾಖ್ಯೆ	—	ಆಚಾರ	—	ಕ.ತಾ. ಸೂ.
ಏಕತ್ವಸಪ್ತತಿ (ಪದ್ಮನಂದಿ) ವ್ಯಾಖ್ಯೆ	ಕೇಶವವರ್ಣಿ	ಆಚಾರ	೧೩೫೯	ಕ. ಕ
ಏಕತ್ವಸಪ್ತತಿ (ಪದ್ಮನಂದಿ) ವ್ಯಾಖ್ಯೆ	ಬಾಲಚಂದ್ರ	ಆಚಾರ	ಸು. ೧೧೭೦	ಕ. ಕ. ಚ.
ಕರ್ಮಪ್ರಕೃತಿ (ನೇಮಿಚಂದ್ರ) ವ್ಯಾಖ್ಯೆ	ಪ್ರಭಾಚಂದ್ರ	ಸಿದ್ಧಾಂತ	ಸು. ೧೩೦೦	ಕ.ತಾ. ಸ
ಕಲಧೌತಾರ್ಣವನೋಂಪಿ	—	ಧರ್ಮ-ನೀತಿ	—	ಕ.ತಾ. ಸ
ಕಲ್ಯಾಣಮಾಲಾ	—	ಪಂಚಕಲ್ಯಾಣ	—	ಕ.ತಾ. ಸೂ.
ಕಲ್ಯಾಣಚೂಡಾಮಣಿ ನೋಂಪಿ	—	ವ್ರತವಿಧಾನ	—	ಎಚ್.ಎಲ್. ನಾ
ಕಲ್ಯಾಣಕಾರಕ	ಸೋಮನಾಥ	ವೈದ್ಯ	೧೧೫೦	ಕ.
ಕಾಮನಕಥೆ	ಕಲ್ಯಾಣಕೀರ್ತಿ	ಕಥೆ	೧೪೩೯	ಕ
ಕಾಲಜ್ಞಾನ	—	ಜ್ಯೋತಿಷ್ಯ	—	ಕ.ತಾ. ಸ
ಕುಜಪಂಚಮೀನೋಂಪಿ	—	ವ್ರತವಿಧಾನ	—	ಎಚ್.ಎಲ್. ನಾ

ಹೆಸರು	ಕರ್ತೃವಿನ ಹೆಸರು	ವಿಷಯ	ಕಾಲ	
[illegible]	ಮಾಣಿಕಚಂದ್ರಸೇನ	ಜ್ಯೋತಿಷ್ಯ	—	ಕ.ತಾ.ಸೂ. ೧೭೭
[illegible]	—	ಜ್ಯೋತಿಷ್ಯ	—	ಕ.ತಾ.ಸೂ. ೧೭೭
[illegible]	—	ಕ್ರಿಯಾವಿಧಾನ	—	ಕ.ತಾ.ಸೂ. ೧೭೬
[illegible]	—	ಕ್ರಿಯಾವಿಧಾನ	—	ಕ.ತಾ.ಸೂ. ೨೭೭
[illegible]	—	ಕ್ರಿಯಾಕಾಂಡ	—	ಕ.ತಾ.ಸೂ. ೧೭೬
[illegible]	—	ಕ್ರಿಯಾಕಾಂಡ	—	ಕ.ತಾ.ಸೂ. ೧೭೪
[illegible]	—	ಕಾವ್ಯ	—	ಕ.ತಾ.ಸೂ. ೯೩೧
[illegible]	ರಾಜಾದಿತ್ಯ	ಗಣಿತ	ಸು. ೧೨೦೦	ಕ.ಕ.ಚ.
[illegible]	—	ವ್ರತವಿಧಾನ	—	ಎಚ್.ಎಲ್. ನಾಗರಾಜ
[illegible]	ರಾಜಾದಿತ್ಯ	ಗಣಿತ	ಸು. ೧೨೦೦	ಕ.ಕ.ಚ.
[illegible]	ರಾಜಾದಿತ್ಯ	ಗಣಿತ	ಸು. ೧೨೦೦	ಕ.ಕ.ಚ.
[illegible]	ಬೊಮ್ಮರಸ	ಕಥೆ	—	ಕ.ತಾ.ಸೂ. ೧೫೫
[illegible]	ದೇವರಸ	ಚರಿತೆ	೧೬೫೦	ಕ.ಕ.ಚ.
[illegible]	ಕೇಶವವರ್ಣಿ	ಸಿದ್ಧಾಂತ	೧೩೫೯	ಕ.ಕ.ಚ.
[illegible]	ಗುರುರಾಯ	ಚರಿತೆ	—	ಕ.ತಾ.ಸೂ. ೨೩೮
[illegible]	ಬಾಹುಬಲಿ	ಚರಿತೆ	—	ಕ.ತಾ.ಸೂ. ೧೫೦
[illegible]	—	ಸ್ತುತಿ	—	ಕ.ತಾ.ಸೂ. ೧೯೬
[illegible]	[illegible]	ವೈದ್ಯ	ಸು. [illegible]	ಕ.ಕ.ಚ.
[illegible]	—	ವ್ರತವಿಧಾನ	—	ಎಚ್.ಎಲ್. ನಾಗರಾಜ
[illegible]	—	ಪುರಾಣ	—	ಕ.ತಾ.ಸೂ. ೨೩೨
[illegible]	[illegible]	ಪುರಾಣ	೧೭೨೪	ಕ.ತಾ.ಸೂ. [illegible]
[illegible]	[illegible]	[illegible]	ಸು. ೧೭೭೦	ಕ.ತಾ.ಸೂ. [illegible]
[illegible]	—	ವ್ರತವಿಧಾನ	—	ಕ.ತಾ.ಸೂ. ೮೫

ಕೃತಿಯ ಹೆಸರು	ಕರ್ತೃವಿನ ಹೆಸರು	ವಿಷಯ	ಕಾಲ	ಉಲ್ಲೇ
ಚಾರುಕೀರ್ತಿ ಪಂಡಿತಾಚಾರ್ಯಸ್ತುತಿ	—	ಸ್ತುತಿ	—	ಕ.ತಾ.ಸೂ.
ಚಿತ್ರಹಸುಗೆ	ರಾಜಾದಿತ್ಯ	ಗಣಿತ	ಸು. ೧೨೦೦	ಕ.ಕ.
ಚಂದದೇಮುಕಥೆ	ಚಂದ್ರಸಾಗರವರ್ಣಿ	ಕಥೆ	೧೮೦೦	ಕ.ತಾ.ಸೂ.
ಚಂದನಷಷ್ಠಿಕಥೆ	—	ಕಥೆ	—	ಕ.ತಾ.ಸೂ.
ಚಂದ್ರಪ್ರಭಚರಿತೆ	ದೊಡ್ಡಯ್ಯ	ಚರಿತೆ	೧೫೫೦	ಕ.ಕ.
ಚಂದ್ರಪ್ರಭಷಟ್ಪದಿ	ದೊಡ್ಡಣಾಂಕ	ಚರಿತೆ	೧೫೭೮	ಕ.ಕ.
ಚಂದ್ರನಾಥಸ್ತೋತ್ರ	—	ಸ್ತುತಿ	—	ಕ.ತಾ.ಸೂ.
ಚಂದ್ರಪ್ರಭಚರಿತೆ	—	ಚರಿತೆ	—	ಕ.ತಾ.ಸೂ.
ಚಂದ್ರಪ್ರಭಾಷ್ಟಕ	—	ಸ್ತುತಿ	—	ಕ.ತಾ.ಸೂ.
ಚಂದ್ರಸಾಗರಲಾವಣಿ	—	ಸ್ತುತಿ	—	ಹಂಪ ನಾಗರಾ
ಜಯಕುಮಾರಕಥೆ	—	ಕಥೆ	—	ಕ.ತಾ.ಸೂ.
ಜಿನಭಜನಸಂಗ್ರಹ	—	ಭಜನೆ	—	ಕ.ತಾ.ಸೂ.
ಜಿನಸ್ತುತಿ	ಕಲ್ಯಾಣಕೀರ್ತಿ	ಸ್ತುತಿ	೧೪೩೯	ಕ.ಕ.
ಜಿನಗುಣಸಂಪತ್ತಿ ವ್ರತಕಥೆ	—	ಕಥೆ	—	ಕ.ತಾ.ಸೂ.
ಜಿನಚತುರ್ವಿಂಶತಿಕಾ ಟೀಕೆ	—	ಸ್ತುತಿ		ಕ.ತಾ.ಸೂ.
ಜಿನಚಂದ್ರಾರ್ಣವ ನೋಂಪಿ	—	ವ್ರತವಿಧಾನ	—	ಎಚ್.ಎಲ್. ನಾಗರಾ
ಜಿನಚರಿತೆ	—	ಚರಿತೆ	—	ಕ.ತಾ.ಸೂ.
ಜಿನೇಂದ್ರಮಾಲಾವ್ಯಾಖ್ಯೆ	—	ಜ್ಯೋತಿಷ್ಯ	—	ಕ.ತಾ.ಸೂ.
ಜೀವರಗಳೆ	—	ಧರ್ಮ	—	ಕ.ತಾ.ಸೂ.
ಜೀವಂಧರಚರಿತೆ	ಬ್ರಹ್ಮಸೂರಿ (?)	ಚರಿತೆ	—	ಕ.ತಾ.ಸೂ.
ಜೀವಂಧರಸಾಂಗತ್ಯ	ಬೊಮ್ಮರಸ	ಚರಿತೆ	೧೪೮೫	ಕ.ಕ.
ಜೀವಂಧರ ಷಟ್ಪದಿ	ಕೋಟೀಶ್ವರ	ಚರಿತೆ	೧೫೦೦	ಕ.ಕ.
ಜೈನಕಥಾಸಂಗ್ರಹ	—	ಕಥೆ	—	ಕ.ತಾ.ಸೂ.
ಜೈನಪ್ರಕ್ರಿಯಾಸಂಕಲನ	—	ಕ್ರಿಯೆ	—	ಮೈಸೂರು ಪ್ರಾ

...ಯ ಹೆಸರು	ಕರ್ತೃವಿನ ಹೆಸರು	ವಿಷಯ	ಕಾಲ	ಉಲ್ಲೇಖ
...ಸಾರಟೀಕೆ	ಪದ್ಮನಂದಿ	ಅಧ್ಯಾತ್ಮ	—	ಕ.ತಾ.ಸೂ. ೨೫
...ಪಚಂದ್ರಾಭ್ಯುದಯ	ಕಲ್ಯಾಣಕೀರ್ತಿ	ಚರಿತೆ	೧೪೩೯	ಕ.ಕ.ಚ.
...ಸಾರನೋಂಪಿ	—	ವ್ರತವಿಧಾನ	—	ಎಚ್.ಎಲ್. ನಾಗರಾಜ
...ನಿಧಿಭಂಡಾರದ ನೋಂಪಿ	—	ವ್ರತವಿಧಾನ	—	ಎಚ್.ಎಲ್. ನಾಗರಾಜ
...ವಿಗೆನೋಂಪಿ	—	ವ್ರತವಿಧಾನ	—	ಎಚ್.ಎಲ್. ನಾಗರಾಜ
...ಶಂಕರಾಷ್ಟಕ	—	ಸ್ತುತಿ-ಪೂಜೆ	—	ಕ.ತಾ.ಸೂ. ೧೮೮
...ಶಂಕರಚರಿತೆ	—	ಚರಿತೆ	—	ಕ.ತಾ.ಸೂ. ೧೫೨
...ಶಂಕರವರ್ಣನೆ	—	ಚರಿತೆ	—	ಕ.ತಾ.ಸೂ. ೧೫೩
...ಗಳತವನಿಧಿನೋಂಪಿ	—	ವ್ರತವಿಧಾನ	—	ಎಚ್.ಎಲ್. ನಾಗರಾಜ
...ಭಂಗಿ (ನೇಮಿಚಂದ್ರ) ವ್ಯಾಖ್ಯೆ	ಬಾಲಚಂದ್ರ	ಸಿದ್ಧಾಂತ	ಸು. ೧೧೭೦	ಕ.ತಾ.ಸೂ. ೬೦
...ಭಂಗಿಸಾರಟೀಕೆ	—	ಸಿದ್ಧಾಂತ	—	ಮೈಸೂರು ಪ್ರಾ.ಸಂ.
...ಭುವನತಿಲಕದ ನೋಂಪಿ	—	ವ್ರತವಿಧಾನ	—	ಎಚ್.ಎಲ್. ನಾಗರಾಜ
...ಷಷ್ಠಿಮಹಾಪುರಾಣ ಕಥೆ	—	ಕಥೆ	—	ಮೈಸೂರು ಪ್ರಾ.ಸಂ.
...ಲಕ್ಷಣನೋಂಪಿ	—	ವ್ರತವಿಧಾನ	—	ಎಚ್.ಎಲ್. ನಾಗರಾಜ
...ನಸಾರ	ಪ್ರಭಾಚಂದ್ರದೇವ	ಧರ್ಮ	—	ಕ.ತಾ.ಸೂ. ೪೭
...ನಾವಳಿವ್ರತ ಕಥೆ	—	ಕಥೆ	—	ಕ.ತಾ.ಸೂ. ೨೬೯
...ತಿಪಾರಣನೋಂಪಿ	—	ವ್ರತವಿಧಾನ	—	ಎಚ್.ಎಲ್. ನಾಗರಾಜ
...ವ್ಯಸಂಗ್ರಹವ್ಯಾಖ್ಯೆ	ಬಾಲಚಂದ್ರಪಂಡಿತ	ಸಿದ್ಧಾಂತ	೧೨೭೩	ಕ.ಕ.ಚ.
...ವ್ಯಸಂಗ್ರಹಟೀಕೆ	—	ಸಿದ್ಧಾಂತ	—	ಕ.ತಾ.ಸೂ. ೨೭೫
...ದಶತಪನೋಂಪಿ	—	ವ್ರತವಿಧಾನ	—	ಎಚ್.ಎಲ್. ನಾಗರಾಜ
...ದಶಾನುಪ್ರೇಕ್ಷೆ	ವಿಜಯಣ್ಣ	ಅಧ್ಯಾತ್ಮ	೧೪೪೮	ಕ.ಕ.ಚ.
...ದಶಾನುಪ್ರೇಕ್ಷೆ	ಬಾಲಚಂದ್ರ	ಅಧ್ಯಾತ್ಮ	—	ಮದ್ರಾಸ ಹಸ್ತಗ್ರಂಥಾಗಾರ
...ದಶಾಂಗವ್ಯಾಖ್ಯಾನ	ಅಭಯಚಂದ್ರಸೂರಿ	ಅಂಗವಿವರಣ	—	ಕ.ತಾ.ಸೂ. ೪೦
...ದಶಾನುಪ್ರೇಕ್ಷೆ	ಬಾಹುಬಲಿ	ಅಧ್ಯಾತ್ಮ	—	ಕ.ತಾ.ಸೂ. ೪೯
...ದಶಾನುಪ್ರೇಕ್ಷೆ	—	ಅಧ್ಯಾತ್ಮ	—	ಮೈಸೂರು ಪ್ರಾ.ಸಂ.

ಕೃತಿಯ ಹೆಸರು	ಕರ್ತೃವಿನ ಹೆಸರು	ವಿಷಯ	ಕಾಲ	ಉಲ್ಲೇ
ದ್ವಾವಿಂಶತಿಪರೀಷಹ ಜಯಸ್ತೋತ್ರ	—	ಸ್ತುತಿ	—	ಕ.ತಾ.ಸೂ.
ಧನ್ಯಕುಮಾರಚರಿತೆ	ಆದಿಯಪ್ಪ	ಚರಿತೆ	೧೬೫೦	ಕ.ಕ.
ಧರ್ಮನಾಥಪುರಾಣ	ಬಾಹುಬಲಿ	ಪುರಾಣ	೧೩೫೨	ಕ.ಕ.
ಧರ್ಮಕಥಾಸಂಗ್ರಹ	—	ಧರ್ಮ	—	ಕ.ತಾ.ಸೂ.
ಧರ್ಮಚಕ್ರೋದಯ ನೋಂಪಿ	—	ವ್ರತವಿಧಾನ	—	ಎಚ್.ಎಲ್. ನಾಗರಾ
ಧರ್ಮಪರೀಕ್ಷೆ	ಪಾಯಣ್ಣ	ಸಮೀಕ್ಷೆ	—	ಕ.ತಾ.ಸೂ.
ಧರ್ಮಮಹೋದಯ ನೋಂಪಿ	—	ವ್ರತವಿಧಾನ	—	ಎಚ್.ಎಲ್. ನಾಗರಾ
ಧ್ಯಾನಸ್ವರೂಪ	—	ಯೋಗ	—	ಕ.ತಾ.ಸೂ.
ಧ್ಯಾನಲಕ್ಷಣ	—	ಯೋಗ	—	ಕ.ತಾ.ಸೂ.
ನಂದೀಶ್ವರದ ನೋಂಪಿ	—	ವ್ರತವಿಧಾನ	—	ಕ.ತಾ.ಸೂ.
ನಯಲಕ್ಷಣವ್ಯಾಖ್ಯೆ	—	ನ್ಯಾಯದರ್ಶನ	—	ಕ.ತಾ.ಸೂ.
ನಾಗಕುಮಾರಚರಿತೆ	ಕಲ್ಯಾಣಕೀರ್ತಿ	ಚರಿತೆ	—	ಕ.ತಾ.ಸೂ.
ನಾಗಕುಮಾರಚರಿತೆ	ವಿಜಯಣ್ಣ	ಚರಿತೆ	—	ಕ.ತಾ.ಸೂ.
ನಾಗಕುಮಾರಕಥೆ	—	ಕಥೆ	—	ಕ.ತಾ.ಸೂ.
ನಾಮಮಾಲಾ(ಧನಂಜಯ) ಟೀಕೆ	—	ಕೋಶ	—	ಕ.ತಾ.ಸೂ.
ನಿತ್ಯಸುಖದ ನೋಂಪಿ	—	ವ್ರತವಿಧಾನ	—	ಎಚ್.ಎಲ್. ನಾಗ
ನಿತ್ಯವ್ರತಾದಾನಕ್ರಮ	—	ವ್ರತವಿಧಾನ	—	ಕ.ತಾ.ಸೂ.
ನಿರಂಜನಸ್ತೋತ್ರ	—	ಸ್ತುತಿ	—	ಕ.ತಾ.ಸೂ.
ನಿರಂಜನಾಷ್ಟಕ	—	ಸ್ತುತಿ	—	ಕ.ತಾ.ಸೂ.
ನಿರ್ಮಲರೂಪಸ್ತವನ	—	ಸ್ತುತಿ	—	ಕ.ತಾ.ಸೂ.
ನೀತಿವಾಕ್ಯಾಮೃತ (ಸೋಮದೇವ)ಟೀಕೆ	ನೇಮಿನಾಥ	ನೀತಿ	—	ಕ.ತಾ.ಸೂ.
ನೀತಿರಸಾಯನ	—	ನೀತಿ	—	ಕ.ತಾ.ಸೂ.

…ಹೆಸರು	ಕರ್ತೃವಿನ ಹೆಸರು	ವಿಷಯ	ಕಾಲ	ಉಲ್ಲೇಖ
…ಸಾಮುನಶತಕ	ಶುಭಚಂದ್ರ	ನೀತಿ	—	ಕ.ತಾ.ಸೂ. ೧೩೯
…ಕುಮಾರಗೀತ	—	ಗೀತ	—	ಕ.ತಾ.ಸೂ. ೧೯೮
…ನಾಥಸ್ತೋತ್ರ	—	ಸ್ತುತಿ	—	ಕ.ತಾ.ಸೂ. ೧೯೦
…ನಾಥಪುರಾಣ	ಮಹಾಬಲ	ಪುರಾಣ	೧೨೫೪	ಕ.ಕ.ಚ.
…ಮಿಯ ಕಥೆಗಳು	—	ಕಥೆ	—	ಮೈಸೂರು ಪ್ರಾ.ಸಂ.
…ಶ್ವರವ್ರತಕಥೆ	ಚಂದಯ್ಯ	ಕಥೆ	೧೯ ಶ್ರೀ.ಶ.	ಕ.ತಾ.ಸೂ. ೧೬೦
…ಶ್ವರಗೀತ	—	ಗೀತ	—	ಕ.ತಾ.ಸೂ. ೧೯೮
…ಸ್ವನ ಚರಿತೆ	ಆದಿಯಪ್ಪ	ಚರಿತೆ	೧೭೦೦	ಕ.ಕ.ಚ.
…ವತಿದೇವಿಸ್ತೋತ್ರ …ಗ್ರಹ	—	ಸ್ತುತಿ	—	ಕ.ತಾ.ಸೂ. ೨೫೧
…ವತೀಭಜನ	—	ಭಜನೆ	—	ಕ.ತಾ.ಸೂ. ೧೯೮
…ವತೀಚರಿತೆ	ಶಂಕರಭಟ್ಟ	ಯಕ್ಷಗಾನ	—	ಕ.ತಾ.ಸೂ. ೧೫೩
…ವತೀಯಕ್ಷಗಾನ	ಬಾಹುಬಲಿ	ಯಕ್ಷಗಾನ	—	ಕ.ತಾ.ಸೂ. ೩೫೩
…ವಿಶನುಕ್ಕೃತ್ಯಣ …ಟೀಕೆ	—	ಸಿದ್ಧಾಂತ	—	ಕ.ತಾ.ಸೂ. ೧೯
…ತತ್ವಪ್ರಕಾಶ …ವೃತ್ತಿ	ಬಾಲಚಂದ್ರ	ಅಧ್ಯಾತ್ಮ	ಸು. ೧೧೭೦	ಕ.ಕ.ಚ. ೧
…ತತ್ವಪ್ರಕಾಶಟೀಕೆ	—	ಸಿದ್ಧಾಂತ	—	ಕ.ತಾ.ಸೂ. ೩೬
…ಕೃತಿನೋಂಪಿ	—	ವ್ರತವಿಧಾನ	—	ಎಚ್.ಎಲ್. ನಾಗರಾಜ
…ನಾರನೋಂಪಿ	—	ವ್ರತವಿಧಾನ	—	ಎಚ್.ಎಲ್. ನಾಗರಾಜ
…ರಾಮಭಾರತ	ಚಂದ್ರಸಾಗರವರ್ಣಿ	ಭಾರತ	೧೮೦೦	ಕ.ತಾ.ಸೂ.
…ಜನು	ಮುಕುಂದಕವಿ	ಧರ್ಮ	—	ಕ.ತಾ.ಸೂ. ೫೨
…ವಿಧಾನವ್ರತಕಥೆ	—	ಕಥೆ	—	ಕ.ತಾ.ಸೂ. ೧೬೦
…ಯಣಸಾರ …ಕುಂದಕುಂದ)ಟೀಕೆ	—	ಅಧ್ಯಾತ್ಮ	—	ಕ.ತಾ.ಸೂ. ೧೫
…ನದಿಗೆನೋಂಪಿ	—	ವ್ರತವಿಧಾನ	—	ಕ.ತಾ.ಸೂ. ೧೬೧
…ನಾಥಸ್ತೋತ್ರ	—	ಸ್ತುತಿ–ಪೂಜೆ	—	ಕ.ತಾ.ಸೂ. ೧೯೧
…ನಾಥ …ಚಕಲ್ಯಾಣಗೀತೆ	—	ಗೀತೆ	—	ಕ.ತಾ.ಸೂ. ೧೯೮

…. ೨೩

ಕೃತಿಯ ಹೆಸರು	ಕರ್ತೃವಿನ ಹೆಸರು	ವಿಷಯ	ಕಾಲ	ಉಲ್ಲೇಖ
ಪಾರ್ಶ್ವಜಿನಾಷ್ಟಕ	—	ಸ್ತುತಿ	—	ಕ.ತಾ.ಸೂ. ೧
ಪಾರ್ಶ್ವನಾಥಾಷ್ಟಕ	—	ಸ್ತುತಿ-ಪೂಜೆ	—	ಕ.ತಾ.ಸೂ. ೧
ಪಾರ್ಶ್ವನಾಥಚರಿತೆ	ಶಾಂತಿಕೀರ್ತಿ	ಚರಿತೆ	—	ಕ.ತಾ.ಸೂ. ೩
ಪಾರ್ಶ್ವನಾಥಪುರಾಣ	ಶಾಂತಿಕೀರ್ತಿ	ಪುರಾಣ	೧೭೨೪	ಕ.ತಾ.ಸೂ. ೧
ಪುಣ್ಯಾಶ್ರವಕಥೆ	ನಾಗರಾಜ	ಕಥೆ	೧೩೩೧	ಕ.ಕ.
ಪುರುದೇವಚರಿತೆ	ವರ್ಧಮಾನ	ಚರಿತೆ	೧೮೮೮	ಮೈ.ಪ್ರಾ.ಸ
ಪುರುದೇವಚರಿತೆ	ಮುನಿಶಾಂತಿ	ಚರಿತೆ	—	ಕ.ತಾ.ಸೂ. ೧
ಪುಷ್ಪಾಂಜಲಿನೋಂಪಿ	—	ವ್ರತವಿಧಾನ	—	ಎಚ್.ಎಲ್. ನಾಗರಾ
ಪುಷ್ಪಾಂಜಲಿಸ್ತೋತ್ರ	—	ಸ್ತುತಿ	—	ಮೈಸೂರು ಪ್ರಾ.ಸ
ಪೂಜ್ಯಪಾದಚರಿತೆ	ತ್ರಿದಶೇಂದು(?)	ಚರಿತೆ	—	ಮೈಸೂರು ಪ್ರಾ.ಸ
ಪೂಜ್ಯಪಾದಚರಿತೆ	ಪದ್ಮರಾಜ	ಚಾರಿತ್ರಿಕ	೧೭೯೨	ಕ.ತಾ.ಸ
ಪಂಚಪರಮೇಷ್ಠಿಬೊಲ್ಲಿ	ಬಾಲಚಂದ್ರಪಂಡಿತ	ಸ್ತುತಿ	೧೭೭೩	ಕ.ಕ.
ಪಂಚಪರಮೇಷ್ಠಿ ವ್ಯಾಖ್ಯಾನ	—	ಧರ್ಮ	—	ಕ.ತಾ.ಸೂ.
ಪಂಚನಮಸ್ಕಾರಭಾವನೆ	—	ಧರ್ಮ	—	ಕ.ತಾ.ಸೂ.
ಪಂಚಮೀನೋಂಪಿ	ಬಾಲಚಂದ್ರ	ವ್ರತವಿಧಾನ	—	ಕ.ತಾ.ಸೂ.
ಪಂಚಾದಂತರನೋಂಪಿ	—	ವ್ರತವಿಧಾನ	—	ಎಚ್.ಎಲ್. ನಾಗ
ಪಂಚಾಸ್ತಿಕಾಯಟೀಕೆ	ಪದ್ಮಪ್ರಭ	ಸಿದ್ಧಾಂತ	೧೩೦೦	ಕ.ತಾ.ಸೂ.
ಪಂಚಪರಮೇಷ್ಠಿಪೂಜೆ	—	ಪೂಜೆ	—	ಕ.ತಾ.ಸೂ.
ಪಂಚಕಲ್ಯಾಣ ಸ್ತೋತ್ರಟೀಕೆ	—	ಸ್ತುತಿ	—	ಮೈಸೂರು ಪ್ರಾ.
ಪಂಚಪರಮೇಷ್ಠಿವ್ಯಾಖ್ಯೆ	ಅನಂತರಾಜಯ್ಯ	ಧರ್ಮ	—	ಮೈಸೂರು ಪ್ರಾ.
ಪಂಚಪರಮೇಷ್ಠಿ ಸ್ವರೂಪ	ಬಾಲಚಂದ್ರ	ಧರ್ಮ	—	ಕ.ತಾ.ಸೂ.
ಪಂಚಗುರುಸ್ತೋತ್ರ	—	ಸ್ತುತಿ	—	ಮೈಸೂರು ಪ್ರಾ
ಪಂಚಕಲ್ಯಾಣ ಟಿಪಾಯ (?)	—	ಗೀತ	—	ಕ.ತಾ.ಸೂ
ಪ್ರತಿಕ್ರಮಣಟೀಕೆ	—	ಆಚಾರ	—	ಕ.ತಾ.ಸೂ

...ಥದ ಹೆಸರು	ಕರ್ತೃವಿನ ಹೆಸರು	ವಿಷಯ	ಕಾಲ	ಉಲ್ಲೇಖ
...ತಿಷ್ಠಾ ...ಮಾಉದ್ಧಾರಟೀಕೆ	—	ಪ್ರತಿಷ್ಠೆ	—	ಕ.ತಾ.ಸೂ. ೮೩
...ತಿಷ್ಠಾಕಲ್ಪವ್ಯಾಖ್ಯೆ	ಕುಮುದಚಂದ್ರ	ಪ್ರತಿಷ್ಠೆ	೧೧೦೦	ಕ.ಕ.ಚ.
...ಭಂಜನಚರಿತೆ	ಮಂಗರಸ	ಚರಿತೆ	೧೫೦೮	ಕ.ಕ.ಚ.
...ತಿಹಾರೋದಯ ...ನೋಂಪಿ	—	ವ್ರತವಿಧಾನ	—	ಎಚ್.ಎಲ್. ನಾಗರಾಜ
...ಭೃತನಾಮವ್ಯಾಖ್ಯೆ	ಬಾಲಚಂದ್ರ	ಅಧ್ಯಾತ್ಮ	ಸು. ೧೧೭೦	ಕ.ಕ.ಚ.
...ಯಶ್ಚಿತ್ತವಿಧಿ	—	ಪ್ರಾಯಶ್ಚಿತ್ತ	—	ಕ.ತಾ.ಸೂ. ೫೭
...ಯಶ್ಚಿತ್ ವಿಧಾನ	—	ಪ್ರಾಯಶ್ಚಿತ್	—	ಕ.ತಾ.ಸೂ. ೨೧೦
...ಷೋಪಗಮನ- ...ವಿಧಾನ	—	ಧರ್ಮ	—	ಕ.ತಾ.ಸೂ. ೫೮
...ಪತಿಚರಿತೆ	ಕಲ್ಯಾಣಕೀರ್ತಿ	ಚರಿತೆ	೧೪೩೯	ಕ.ತಾ.ಸೂ.
...ಮಂಗಳವಾರ ...ನೋಂಪಿ	—	ವ್ರತವಿಧಾನ	—	ಎಚ್.ಎಲ್. ನಾಗರಾಜ
...ರಹ ಅಣುಪ್ರೇಕ್ಷಾ ...ವ್ಯಾಖ್ಯೆ	ಕೇಶವವರ್ಣ	ಅಧ್ಯಾತ್ಮ	—	ಕ.ತಾ.ಸೂ. ೨೧೦
...ರಸ ಅಣುಪ್ರೇಕ್ಷಾ ...ವ್ಯಾಖ್ಯೆ	ಬಾಹುಬಲಿ	ಅಧ್ಯಾತ್ಮ	—	ಕ.ತಾ.ಸೂ. ೫೯
...ಲಗ್ರಹಚಿಕಿತ್ಸೆ	ದೇವೇಂದ್ರಮುನಿ	ವೈದ್ಯ	ಸು. ೧೨೦೦	ಕ.ಕ.ಚ.
...ಹುಬಲಿಚರಿತೆ	ಚಿದಾನಂದ	ಚರಿತೆ	—	ಕ.ತಾ.ಸೂ. ೨೩೩
...ಧಾಷ್ಟಮಿನೋಂಪಿ	—	ವ್ರತವಿಧಾನ	—	ಎಚ್.ಎಲ್. ನಾಗರಾಜ
...ಂಗುಳದ ವಿಸ್ತಾರ	ಅನಂತಕವಿ	ಚಾರಿತ್ರಿಕ	—	ಮೈ.ಆ.ರಿಪೋರ್ಟ್
...ಗೊಳ ...ಗೊಮ್ಮಟೇಶ್ವರಚರಿತೆ	ಅನಂತಕವಿ	ಚಾರಿತ್ರಿಕ	ಸು. ೧೭೮೦	ಕ.ತಾ.ಸೂ.
...ಹಶ್ಚಲ್ಯನೋಂಪಿ	—	ವ್ರತವಿಧಾನ	—	ಎಚ್.ಎಲ್. ನಾಗರಾಜ
...ದಸಂಗ್ರಹ	—	ಭಜನೆ	—	ಕ.ತಾ.ಸೂ. ೧೬೮-೨೮೦
...ಗಣಧರಾಷ್ಟಮಿ ...ನೋಂಪಿ	—	ವ್ರತವಿಧಾನ	—	ಎಚ್.ಎಲ್. ನಾಗರಾಜ
...ದುಃಖನಿವಾರಣ ...ನೋಂಪಿ	—	ವ್ರತವಿಧಾನ	—	ಎಚ್.ಎಲ್. ನಾಗರಾಜ

ಕೃತಿಯ ಹೆಸರು	ಕರ್ತೃವಿನ ಹೆಸರು	ವಿಷಯ	ಕಾಲ	ಉಲ್ಲೇಖ
ಭವ್ಯಜನಕಂಠ ರತ್ನಾಭರಣ	ಅಭಯಚಂದ್ರ	ಧರ್ಮ	—	ಕ.ತಾ.ಸೂ. ೬೦
ಭವ್ಯರಾಶಿಪರಿಮಾಣ	—	ಧರ್ಮ	—	ಕ.ತಾ.ಸೂ. ೨೦೪
ಭವ್ಯಾಮೃತಪುರಾಣ	ಚಂದ್ರಸಾಗರವರ್ಣಿ	ಪುರಾಣ	೧೮೦೦	ಮೈಸೂರು ಪ್ರಾ.ಸಂ.
ಭಾರತ	ಸಾಳ್ವಕವಿ	ಚಾರಿತ್ರಿಕ	೧೫೫೦	ಕ.ಕ.ಚ.
ಭಾವನಾಷ್ಟಕ	—	ಅಧ್ಯಾತ್ಮ	—	ಕ.ತಾ.ಸೂ. ೨೬
ಭಾಷಾಕೇವಲಿಪ್ರಶ್ನೆ	—	ಜ್ಯೋತಿಷ	—	ಕ.ತಾ.ಸೂ. ೨೪೩
ಭುಜಬಲಿಚರಿತೆ	ಪಂಚಬಾಣ	ಚಾರಿತ್ರಿಕ	೧೬೧೪	ಕ.ಕ.ಚ.
ಮಹರ್ಷಿಪರ್ಯುಪಾಸನಾ ಟೀಕೆ	—	ಉಪಾಸನೆ	—	ಕ.ತಾ.ಸೂ. ೨೭೮
ಮಾಘಮಾಲಾನೋಂಪಿ	—	ವ್ರತವಿಧಾನ	—	ಎಚ್.ಎಲ್. ನಾಗರಾಜ
ಮಾಣಿಕ್ಯಸ್ವಾಮಿಚರಿತೆ	ನಾಗವಕವಿ	ಚರಿತೆ	ಸು. ೧೭೦೦	ಕ.ಕ.ಚ.
ಮುಕ್ತಾವಳೀನೋಂಪಿ	—	ವ್ರತವಿಧಾನ	—	ಕ.ತಾ.ಸೂ. ೧೬೧
ಮುನಿವಂಶಾಭ್ಯುದಯ	ಚಿದಾನಂದಕವಿ	ಚಾರಿತ್ರಿಕ	ಸು. ೧೬೮೦	ಕ.ಕ.ಚ.
ಮುನಿರಗಳೆ	ಮಾಯಣ್ಣ	ಧರ್ಮ	—	ಕ.ತಾ.ಸೂ. ೬೦
ಮುನಿಸುವ್ರತಕಾವ್ಯ ವ್ಯಾಖ್ಯೆ	—	ಕಾವ್ಯ	—	ಕ.ತಾ.ಸೂ. ೧೨೭
ಮೂಲಾಚಾರಟೀಕೆ	—	ಆಚಾರ	—	ಕ.ತಾ.ಸೂ. ೬೦
ಮೇಲಾಪುರ ನೇಮೀಶ್ವರಾಷ್ಟಕ	—	ಸ್ತುತಿ	—	ಕ.ತಾ.ಸೂ. ೧೯೩
ಮಂಗಲಾವರ್ತನೋಂಪಿ	—	ವ್ರತವಿಧಾನ	—	ಎಚ್.ಎಲ್. ನಾಗರಾಜ
ಮಂಗಳವಾರನೋಂಪಿ	—	ವ್ರತವಿಧಾನ	—	ಎಚ್.ಎಲ್. ನಾಗರಾಜ
ಮೊಕ್ಖಪಾಹುಡ (ಕುಂದಕುಂದ) ವ್ಯಾಖ್ಯೆ	ಬಾಲಚಂದ್ರ	ಸಿದ್ಧಾಂತ	ಸು. ೧೧೭೦	ಕ.ತಾ.ಸೂ. ೧೭
ಮೋಕ್ಷಲಕ್ಷ್ಮೀನಿವಾಸದ ನೋಂಪಿ	—	ವ್ರತವಿಧಾನ	—	ಎಚ್.ಎಲ್. ನಾಗರಾಜ
ಯತಿಧರ್ಮ	—	ಆಚಾರ	—	ಕ.ತಾ.ಸೂ. ೨೫೯
ಯಶೋಧರಚರಿತೆ	ಚಂಪ್ರಮ	ಚರಿತೆ	—	ಕ.ತಾ.ಸೂ. ೧೫೬
ಯಶೋಧರಚರಿತೆ	ಪದ್ಮನಾಭ	ಚರಿತೆ	—	ಮೈಸೂರು ಪ್ರಾ.ಸಂ.

ಕೃತಿಯ ಹೆಸರು	ಕರ್ತೃವಿನ ಹೆಸರು	ವಿಷಯ	ಕಾಲ	ಉಲ್ಲೇಖ
ಯಶೋಧರಷಟ್ಪದಿ	ಚಂದ್ರಸಾಗರವರ್ಣಿ	ಚರಿತೆ	೧೮೦೦	ಮೈಸೂರು ಪ್ರಾ.ಸಂ.
ಯಶೋಧರಚರಿತೆ	ಚಂದನವರ್ಣಿ	ಚರಿತೆ	—	ಕ.ತಾ.ಸೂ. ೨೩೪
ಯೋಗರತ್ನಾವಳಿ	ಪಾರ್ಶ್ವ	ಯೋಗಶಾಸ್ತ್ರ	—	ಕ.ತಾ.ಸೂ. ೧೬೫
ಯೋಗಾಮೃತ	—	ಯೋಗಶಾಸ್ತ್ರ	—	ಕ.ತಾ.ಸೂ. ೨೬೧
ಯೋಗಾಷ್ಟಕ	ಉದಯಾರ್ಕ	ಯೋಗಶಾಸ್ತ್ರ	—	ಕ.ತಾ.ಸೂ. ೨೫೧
ಯೋಗಾಮೃತ	—	ಯೋಗಶಾಸ್ತ್ರ	—	ಕ.ತಾ.ಸೂ. ೮೦
ರತ್ನಕರಂಡಕಟೀಕೆ	—	ಆಚಾರ	—	ಕ.ತಾ.ಸೂ. ೬೧
ರತ್ನಕರಂಡಕಟೀಕೆ	—	ಆಚಾರ	೧೮೦೦	ಮದ್ರಾಸ ಹಸ್ತಭಂಡಾರ
ರತ್ನಕರಂಡಕಟೀಕೆ	—	ಆಚಾರ	—	ಮದ್ರಾಸ ಹಸ್ತಭಂಡಾರ
ರತ್ನತ್ರಯದ ನೋಂಪಿ	—	ವ್ರತವಿಧಾನ	—	ಕ.ತಾ.ಸೂ. ೧೬೧
ರತ್ನಾವಳೀನೋಂಪಿ	—	ವ್ರತವಿಧಾನ	—	ಎಚ್.ಎಲ್. ನಾಗರಾಜ
ರಾಜಾವಳೀಕಥೆ	ದೇವಚಂದ್ರ	ಚಾರಿತ್ರಿಕ	೧೭೭೦-೧೮೪೧	ಕ.ತಾ.ಸೂ.
ರಾಮಕಥಾವತಾರ	ದೇವಚಂದ್ರ	ಕಥೆ	೧೭೭೦-೧೮೪೧	ಕ.ತಾ.ಸೂ.
ರಾಮಚಂದ್ರಚರಿತೆ	ಪದ್ಮನಾಭ	ಚರಿತೆ	೧೭೫೦	ಕ.ತಾ.ಸೂ.
ರೂಪಾತಿಶಯದ ನೋಂಪಿ	—	ವ್ರತವಿಧಾನ	—	ಎಚ್.ಎಲ್. ನಾಗರಾಜ
ರೂಪಾರುಣವನೋಂಪಿ	—	ವ್ರತವಿಧಾನ	—	ಎಚ್.ಎಲ್. ನಾಗರಾಜ
ರೋಹಿಣಿನೋಂಪಿ	—	ವ್ರತವಿಧಾನ	—	ಕ.ತಾ.ಸೂ. ೧೬೧
ರೋಹಿಣೀಚರಿತೆ	—	ಚರಿತೆ	—	ಕ.ತಾ.ಸೂ. ೧೫೭
ಲಘುಪ್ರಾಯಶ್ಚಿತ್ತ	—	ಪ್ರಾಯಶ್ಚಿತ್ತ	—	ಕ.ತಾ.ಸೂ. ೬೭
ಲೀಲಾವತಿ	ರಾಜಾದಿತ್ಯ	ಗಣಿತ	ಸು. ೧೨೦೦	ಕ.ಕ.ಚ.
ಲೋಭದತ್ತಚರಿತೆ	ನೇಮರಸ	ಚರಿತೆ	—	ಕ.ತಾ.ಸೂ. ೨೩೪
ಲಕ್ಷ್ಮಣಬಂಗಪ್ರಶಸ್ತಿ	—	ಚಾರಿತ್ರಿಕ	—	ಕ.ತಾ.ಸೂ. ೩೦೨
ಲಕ್ಷ್ಮ್ಯಾವಳೀನೋಂಪಿ	—	ವ್ರತವಿಧಾನ	—	ಎಚ್.ಎಲ್. ನಾಗರಾಜ
ಲಕ್ಷ್ಮೀಮಂಗಲನೋಂಪಿ	—	ವ್ರತವಿಧಾನ	—	ಎಚ್.ಎಲ್. ನಾಗರಾಜ
ಲಬ್ಧಿಸಾರ (ನೇಮಿಚಂದ್ರ) ಟೀಕೆ	—	ಸಿದ್ಧಾಂತ	—	ಕ.ತಾ.ಸೂ. ೧೯
ಲಬ್ಧಿವಿಧಾನವ್ರತಕಥೆ	—	ವ್ರತಕಥೆ	—	ಕ.ತಾ.ಸೂ. ೧೬೧
ವಜ್ರಕುಮಾರಚರಿತೆ	ಬ್ರಹ್ಮಕವಿ	ಚರಿತೆ	ಸು. ೧೬೦೦	ಕ.ಕ.ಚ.

ಕೃತಿಯ ಹೆಸರು	ಕರ್ತೃವಿನ ಹೆಸರು	ವಿಷಯ	ಕಾಲ	ಉಲ್ಲೇಖ
ವರಾಂಗನೃಪಚರಿತೆ	ಧರಣಿಪಂಡಿತ	ಚರಿತೆ	೧೬೫೦	ಕ.ಕ.ಚ.
ವರಾಂಗಕಥಾದಿಸಂಗ್ರಹ	—	ಕಥೆ	—	ಕ.ತಾ.ಸೂ. ೨೩೫
ವರ್ಧಮಾನಚರಿತೆ	ಪದ್ಮಕವಿ	ಚರಿತೆ	೧೫೨೮	ಕ.ಕ.ಚ.
ವರ್ಧಮಾನಸ್ತವನ	—	ಸ್ತುತಿ	—	ಕ.ತಾ.ಸೂ. ೧೯೨
ವರ್ಧಮಾನ ಮಹೋದಯನೋಂಪಿ	—	ವ್ರತವಿಧಾನ	—	ಎಚ್.ಎಲ್. ನಾಗರಾಜ
ವರ್ಧಮಾನಪುರಾಣ (ಅಸಗ)ವ್ಯಾಖ್ಯೆ	ವಿಜಯರಾಜ	ಪುರಾಣ	೧೪೮೦	ಜಯಂತಿ ೧೮–೨
ವಲ್ಲಭಾಷ್ಟಕ	—	ಸ್ತುತಿ	—	ಕ.ತಾ.ಸೂ. ೧೯೨
ವಸಂತಿತಿಲಕಚರಿತೆ	ನೇಮಿಚಂದ್ರ	ಚರಿತೆ	—	ಕ.ತಾ.ಸೂ. ೨೩೪
ವಸುಧಾಭೂಷಣನೋಂಪಿ	—	ವ್ರತವಿಧಾನ	—	ಎಚ್.ಎಲ್. ನಾಗರಾಜ
ವಸ್ತುಕಲ್ಯಾಣದ ನೋಂಪಿ	—	ವ್ರತವಿಧಾನ	—	ಕ.ತಾ.ಸೂ. ೧೬೨
ವಾಸ್ತುಲಕ್ಷಣ	—	ಜ್ಯೋತಿಷ್ಯ	—	ಕ.ತಾ.ಸೂ. ೨೭೬
ವಿಜಯವಿಪ್ರಚರಿತೆ	—	ಚರಿತೆ	—	ಕ.ತಾ.ಸೂ. ೧೫೭
ವಿಜಯಕುಮಾರಿಚರಿತೆ	ಶ್ರುತಕೀರ್ತಿ	ಚರಿತೆ	೧೫೬೭	ಕ.ಕ.ಚ.
ವಿದ್ಯಾಮುಂಡನನೋಂಪಿ	—	ವ್ರತವಿಧಾನ	—	ಎಚ್.ಎಲ್. ನಾಗರಾಜ
ವಿಷಮಪದಪಂಚಿಕೆ (ಚಂದ್ರಪ್ರಭಕಾವ್ಯಟೀಕೆ)	—	ಕಾವ್ಯ	—	ಕ.ತಾ.ಸೂ. ೧೩೩
ವಿದ್ಯಾನುವಾದಾಂಗಟೀಕೆ	—	ಮಂತ್ರಶಾಸ್ತ್ರ	—	ಕ.ತಾ.ಸೂ. ೨೪೬
ವೀಸಪರುವಣಾಟೀಕೆ	—	ಸಿದ್ಧಾಂತ	—	ಕ.ತಾ.ಸೂ. ೨೦೪
ವೀಸಪರು(ವಣ)ಟೀಕೆ	ಪದ್ಮಪ್ರಭ	ಸಿದ್ಧಾಂತ	—	ಕ.ತಾ.ಸೂ. ೧೮
ವೈದ್ಯಸಾಂಗತ್ಯ	ಸಾಳ್ವಕವಿ	ವೈದ್ಯ	೧೫೫೦	ಕ.ಕ.ಚ.
ವೈದ್ಯಮಂತ್ರವಾದ-ಸಂಗ್ರಹ	—	ವೈದ್ಯಮಂತ್ರಶಾಸ್ತ್ರ	—	ಕ.ತಾ.ಸೂ. ೨೪೧
ವೈದ್ಯಾಮೃತ	ಶ್ರೀಧರದೇವ	ವೈದ್ಯ	೧೫೦೦	ಕ.ಕ.ಚ.
ವ್ಯವಹಾರರತ್ನ	ರಾಜಾದಿತ್ಯ	ಗಣಿತ	ಸು. ೧೨೦೦	ಕ.ಕ.ಚ.
ವ್ರತಕಥೆ	—	ಕಥೆ	—	ಕ.ತಾ.ಸೂ. ೨೩೬
ವ್ರತಕಥಾಸಂಗ್ರಹ	—	ಕಥೆ	—	ಕ.ತಾ.ಸೂ. ೨೬೯
ವ್ರತವಿಧಾನ	—	ವ್ರತವಿಧಾನ	—	ಕ.ತಾ.ಸೂ. ೮೮

ಕೃತಿಯ ಹೆಸರು	ಕರ್ತೃವಿನ ಹೆಸರು	ವಿಷಯ	ಕಾಲ	ಉಲ್ಲೇಖ
ವ್ರತಸ್ವರೂಪ	—	ವ್ರತವಿಧಾನ	—	ಕ.ತಾ.ಸೂ. ೬೬
ಶಕುನಶಾಸ್ತ್ರ	—	ಜ್ಯೋತಿಷ್ಯ	—	ಕ.ತಾ.ಸೂ. ೧೬೮
ಶಾಂತೀಶನುತಿ	ಚಂದ್ರಮ	ಸ್ತುತಿ	—	ಕ.ತಾ.ಸೂ. ೨೭೮
ಶಾಂತೀಶ್ವರನಕ್ಷತ್ರಮಾಲೆ	—	ಸ್ತುತಿ	—	ಕ.ತಾ.ಸೂ. ೧೯೪
ಶಾಂತೀಶ್ವರ ಪಂಚಕಲ್ಯಾಣಗೀತೆ	—	ಗೀತೆ	—	ಕ.ತಾ.ಸೂ. ೨೮೦
ಶಾಂತ್ಯಷ್ಟಕಟೀಕೆ	—	ಸ್ತುತಿ	—	ಕ.ತಾ.ಸೂ. ೧೯೩
ಶುಕ್ರವಾರನೋಂಪಿ	—	ವ್ರತವಿಧಾನ	—	ಕ.ತಾ.ಸೂ. ೮೯
ಶೃಂಗಾರಕಥೆ	ಪದ್ಮರಸ	ಕಥೆ	೧೫೯೯	ಕ.ಕ.ಚ.
ಶೋಭನಪದ್ಯಸಂಗ್ರಹ	—	ಗೀತೆ	—	ಕ.ತಾ.ಸೂ. ೨೫೨
ಶ್ರಾವಕಪ್ರಾಯಶ್ಚಿತ್ತ	—	ಪ್ರಾಯಶ್ಚಿತ್ತ	—	ಕ.ತಾ.ಸೂ. ೬೯
ಶ್ರಾವಕಾಚಾರ	ಮಾಘನಂದಿ	ಆಚಾರ	೧೨೬೦	ಕ.ಕ.ಚ.
ಶ್ರಾವಕಾಚಾರ	—	ಆಚಾರ	—	ಮೈಸೂರು ಪ್ರಾ.ಸಂ.
ಶ್ರಾವಕಾಚಾರ (ಅಮಿತಗತಿ)ಟೀಕೆ	—	ಆಚಾರ	—	ಕ.ತಾ.ಸೂ. ೬೯
ಶ್ರೀಪಾಲಚರಿತೆ	ಜಿನಚಂದ್ರ	ಚರಿತೆ	—	K.R.I. ಧಾರವಾಡ
ಶ್ರೀಪಾಲಚರಿತೆ	ಕೇಶಣ	ಚರಿತೆ	—	ಕ.ತಾ.ಸೂ. ೨೯೭
ಶ್ರೀಪಾಲಚರಿತೆ	ದೇವರಸ	ಚರಿತೆ	೧೭೦೦	ಕ.ಕ.ಚ.
ಶ್ರೀಪಾಲಚರಿತೆ	ಮಂಗರಸ	ಚರಿತೆ	೧೫೦೮	ಕ.ಕ.ಚ.
ಶ್ರೀಪಂಚಮೀವ್ರತಕಥೆ	—	ಕಥೆ	—	ಕ.ತಾ.ಸೂ. ೨೭೦
ಶ್ರೇಣಿಕಚರಿತೆ	ಜಿನದೇವಣ್ಣ	ಚರಿತೆ	೧೪೪೪	ಕ.ಕ.ಚ.
ಶ್ರೇಣಿಕಚರಿತೆ	—	ಚರಿತೆ	—	ಕ.ತಾ.ಸೂ. ೧೫೭
ಷೋಡಶಭಾವನಾಚರಿತೆ	ಜಿನಮುನಿಚಂದ್ರ	ಚರಿತೆ	—	ಕ.ತಾ.ಸೂ. ೭೧
ಷೋಡಶಭಾವನಾ ವಿವರಣ	—	ಧರ್ಮ	—	ಕ.ತಾ.ಸೂ. ೨೬೦
ಷೋಡಶ ಭಾವನೋದಯರಾಗ	—	ಗೀತೆ	—	ಕ.ತಾ.ಸೂ. ೧೯೯
ಷೋಡಶಭಾವನಾಪದ್ಯ	—	ಗೀತೆ	—	ಕ.ತಾ.ಸೂ. ೨೭
ಸಕಲಾಗಮಸಾರ	—	ಧರ್ಮ	—	ಕ.ತಾ.ಸೂ. ೭೧

ಕೃತಿಯ ಹೆಸರು	ಕರ್ತೃವಿನ ಹೆಸರು	ವಿಷಯ	ಕಾಲ	ಉಲ್ಲೇ…
ಸಜ್ಜನಚಿತ್ತವಲ್ಲಭಟೀಕೆ	ಮುನಿಬಾಲಚಂದ್ರ	ನೀತಿ	—	ಕ.ತಾ.ಸೂ. ೨೧…
ಸಜ್ಜನಚಿತ್ತವಲ್ಲಭಟೀಕೆ	ಶ್ರುತಕೀರ್ತಿ	ನೀತಿ	—	ಕ.ತಾ.ಸೂ. ೭೧…
ಸಜ್ಜನಚಿತ್ತವಲ್ಲಭ (ಮಲ್ಲಿಷೇಣ)ವ್ಯಾಖ್ಯೆ	ಶ್ರುತಮುನಿ	ಆಚಾರ	ಸು. ೧೩೬೫	ಕ.ಕ.ಚ…
ಸದ್ಬೋಧ ಚಂದ್ರೋದಯಟೀಕೆ	—	ಅಧ್ಯಾತ್ಮ	—	ಕ.ತಾ.ಸೂ. ೩…
ಸನತ್ಕುಮಾರಚರಿತೆ	ಪಾಯಣ್ಣಮುನಿ	ಚರಿತೆ	೧೬೦೬	ಕ.ಕ.ಚ…
ಸನತ್ಕುಮಾರಚರಿತೆ	ಬೊಮ್ಮರಸ	ಚರಿತೆ	೧೪೮೫	ಕ.ಕ.ಚ…
ಸಪ್ತಪರಮಸ್ಥಾನದ ನೋಂಪಿ	—	ವ್ರತವಿಧಾನ	—	ಕ.ತಾ.ಸೂ. ೮…
ಸಮವಸರಣ ಮಂಗಲನೋಂಪಿ	—	ವ್ರತವಿಧಾನ	—	ಎಚ್.ಎಲ್. ನಾಗರಾ…
ಸಮವಸರಣಗದ್ಯ	—	ಧರ್ಮ	—	ಕ.ತಾ.ಸೂ. ೮೯…
ಸಮಾಧಿವಿಧಾನನೋಂಪಿ	—	ವ್ರತವಿಧಾನ	—	ಎಚ್.ಎಲ್. ನಾಗರಾ…
ಸಮಾಧಿಶತಕವ್ಯಾಖ್ಯೆ	ಮೇಘಚಂದ್ರ	ಅಧ್ಯಾತ್ಮ	೧೧೪೮	ಕ.ಕ.ಚ…
ಸಮ್ಯಕ್ತ್ವಮಾರ್ಗಣ	—	ಧರ್ಮ	—	ಮೈಸೂರು ಪ್ರಾ.ಸಂ…
ಸಮ್ಯಕ್ತ್ವಕೌಮುದಿ	ಪಾಯಣ್ಣವ್ರತಿ	ಕಥೆ	ಸು. ೧೬೦೦	ಕ.ಕ.ಚ…
ಸರಸ್ವತೀಪ್ರಬಂಧ	ಹಿರಣ್ಯಗರ್ಭ	ಕಥೆ	೧೮೬೦	ಕ.ಕ.ಚ…
ಸರ್ವಜ್ಞಸಂಪತ್ಕರನೋಂಪಿ	—	ವ್ರತವಿಧಾನ	—	ಎಚ್.ಎಲ್. ನಾಗರಾ…
ಸರ್ವತೋಭದ್ರದ ನೋಂಪಿ	—	ವ್ರತವಿಧಾನ	—	ಕ.ತಾ.ಸೂ. …
ಸಹಜಾತ್ಮಪ್ರಕಾಶ (ಸಂಗ್ರಹ) ಟೀಕೆ	—	ಅಧ್ಯಾತ್ಮ	—	ಕ.ತಾ.ಸೂ. …
ಸಹಸ್ರನಾಮದ ನೋಂಪಿ	—	ವ್ರತವಿಧಾನ	—	ಎಚ್.ಎಲ್. ನಾಗರಾ…
ಸಾರಸ್ವತನೋಂಪಿ	—	ವ್ರತವಿಧಾನ	—	ಎಚ್.ಎಲ್. ನಾಗರಾ…
ಸಾರ್ವಮಂಗಲನೋಂಪಿ	—	ವ್ರತವಿಧಾನ	—	ಎಚ್.ಎಲ್. ನಾಗರಾ…
ಸಿದ್ಧಚಕ್ರವಿಧಾನ	—	ವ್ರತವಿಧಾನ	—	ಕ.ತಾ.ಸೂ. …
ಸಿದ್ಧರ ನೋಂಪಿ	—	ವ್ರತವಿಧಾನ	—	ಕ.ತಾ.ಸೂ. ೧…
ಸಿರಿಭೂವಲಯ	ಕುಮುದೇಂದು	ವಿವಿಧ	೯೦೦	

...ಥದ ಹೆಸರು	ಕರ್ತೃವಿನ ಹೆಸರು	ವಿಷಯ	ಕಾಲ	ಸಂಖ್ಯೆ
...ಮುಲಿಯ ನೋಂಪಿ	—	ವ್ರತವಿಧಾನ	—	ಎಚ್.ಎಲ್. ನಾಗರಾಜ
...ಕುಮಾರಚರಿತೆ	ಆದಿದೇವ	ಚರಿತೆ	೧೫೦೦	ಮೈಸೂರು ಪ್ರಾ.ಸಂ.
...ಕುಮಾರಚರಿತೆ	ಆದಿದೇವ	ಚರಿತೆ	೧೫೦೦	ಜಯಕರ್ಣಾಟಕ
...ಗ್ರೀವಮತಶಕುನ	—	ಜ್ಯೋತಿಷ	—	ಕ.ತಾ.ಸೂ. ೨೪೩
...ಗಂಧಪಂಚಮೀನೋಂಪಿ	—	ವ್ರತವಿಧಾನ	—	ಎಚ್.ಎಲ್. ನಾಗರಾಜ
...ದರ್ಶನಚರಿತೆ	ನೇಮರಸ	ಚರಿತೆ	೧೪೮೪	ಕ.ತಾ.ಸೂ. ೨೬೯
...ದರ್ಶನಚರಿತೆ	ನೇಮರಸ	ಚರಿತೆ	೧೪೮೪	ಕ.ತಾ.ಸೂ. ೨೬
...ಭಾಷಿತ	—	ಸುಭಾಷಿತ	—	ಕ.ತಾ.ಸೂ. ೨೦೧
...ಭಾಷಿತಸಂಗ್ರಹ	—	ಸುಭಾಷಿತ	—	ಕ.ತಾ.ಸೂ. ೧೯೯
...ವರ್ಣಭದ್ರಚರಿತೆ	—	ಚರಿತೆ	—	ಕ.ತಾ.ಸೂ. ೧೫೮
...ಕುಮಾರಚರಿತೆ	—	ನೇಮಿವೃತ್ತಿ	೧೬೫೦	ಕ.ಕ.ಚ.
...ಕ್ತಿಮುಕ್ತಾವಳಿಟೀಕೆ	ವಿಮಲಸೂರಿ	ನೀತಿಶಾಸ್ತ್ರ	—	ಮೈ.ಪ್ರಾ.ಸಂ.
...ತಕಪರಿಹಾರ ನೋಂಪಿ	—	ವ್ರತವಿಧಾನ	—	ಎಚ್.ಎಲ್. ನಾಗರಾಜ
...ಪಶಾಸ್ತ್ರ (ಮಂಗರಸ) ಟೀಕೆ	—	ಪಾಕಶಾಸ್ತ್ರ	—	ಕ.ತಾ.ಸೂ. ೨೭೭
...ಪಶಾಸ್ತ್ರ	ಮಂಗರಸ	ಪಾಕಶಾಸ್ತ್ರ	೧೫೦೮	ಕ.ಕ.ಚ.
...ಭಾಗ್ಯನೋಂಪಿ	—	ವ್ರತವಿಧಾನ	—	ಎಚ್.ಎಲ್. ನಾಗರಾಜ
...ಪತ್ಕರದ ನೋಂಪಿ	—	ವ್ರತವಿಧಾನ	—	ಎಚ್.ಎಲ್. ನಾಗರಾಜ
...ಉದ್ಯಾಪನ	—	ವ್ರತವಿಧಾನ	—	ಕ.ತಾ.ಸೂ. ೯೦
...ಮಂಜೂ- ಸ್ತೋತ್ರಟೀಕೆ	—	ಸ್ತುತಿ	—	ಕ.ತಾ.ಸೂ. ೨೨೯
...ರೂಪಸಂಬೋಧನಾ ಪಂಚವಿಂಶತಿಟೀಕೆ	ಕೇಶವವೃತ್ತಿ	—	—	ಕ.ತಾ.ಸೂ. ೩೨
...ರೂಪಸಂಬೋಧನಾ ಪಂಚವಿಂಶತಿಟೀಕೆ	ಪದ್ಮರಸ	—	—	ಕ.ತಾ.ಸೂ. ೩೧
...ರೂಪಸಂಬೋಧನಾ ಪಂಚವಿಂಶತಿಟೀಕೆ	ಮಹಾದೇವ	—	—	ಕ.ತಾ.ಸೂ. ೩೧

ಕೃತಿಯ ಹೆಸರು	ಕರ್ತೃವಿನ ಹೆಸರು	ವಿಷಯ	ಕಾಲ	ಉಲ್ಲೇ
ಸ್ವರೂಪಸಂಬೋಧನಾ ಪಂಚವಿಂಶತಿಟೀಕೆ	ಪದ್ಮಸೇನ	—	—	ಕ.ತಾ.ಸೂ
ಸ್ಯಾದ್ವಾದಮತಸಿದ್ಧಾಂತ	ಚಂದಯ್ಯ ಉಪಾಧ್ಯಾಯ	ಧರ್ಮ	—	ಕ.ತಾ.ಸೂ. ೨೦
ಸ್ತೋತ್ರಸಂಗ್ರಹ	ಮಾಣಿಕ್ಯದೇವ	ಸ್ತುತಿ	—	ಕ.ತಾ.ಸೂ. ೧೯
ಹರಿವಂಶಾಭ್ಯುದಯ	ಬಂಧುವರ್ಮ	ಪುರಾಣ	ಸು. ೧೨೦೦	ಕ.ಕ.ಚ
ಹೊಸದಚರಿತೆ	ಮಾಣಿಕ್ಯದೇವ	ಧರ್ಮ	—	ಕ.ತಾ.ಸು. ೨೩
ಹೋಮವಿಧಾನಟೀಕೆ	—	ಕರ್ಮಕಾಂಡ	—	ಕ.ತಾ.ಸೂ. ೨೦

★ ಕೆ. ಭುಜಬಲಿಶಾಸ್ತ್ರಿ

ಸಂಕೇತಸೂಚಿ

ಕ.ಕ.ಚ.— ಕರ್ಣಾಟಕ ಕವಿಚರಿತೆ (ಆರ್. ನರಸಿಂಹಾಚಾರ್).

ಕ.ತಾ.ಸೂ.—ಕನ್ನಡ ಪ್ರಾಂತೀಯ ತಾಡಪತ್ರೀಯ ಗ್ರಂಥಸೂಚೀ

(ಕೆ. ಭುಜಬಲಿಶಾಸ್ತ್ರಿ

ಈ ಎರಡು ಗ್ರಂಥಗಳಲ್ಲದೆ ಶ್ರೀ. ಎಸ್. ಶಿವಣ್ಣ ಅವರ 'ಅನುಕ್ತಕೃತಿಸೂಚಿ'ಯ ನೆರವನ್ನು ಪಡೆದಿದ್ದೇನೆ. ಈ ಲೇಖನದ ಸಿದ್ಧಹಸ್ತಪ್ರತಿಯನ್ನು ಶ್ರೀ ಎಸ್. ಶಿವಣ ಅವರು ಗಮನಿಸಿ ಉಪಯುಕ್ತ ಸೂಚನೆಗಳನ್ನಿತ್ತಿರುವರು. ನಾನು ಅವರಿಗೆ ಕೃತಜ್ಞ

ಶುಕಸಪ್ತತಿಯ ಕವಿ-ಕಾವ್ಯ ಪರಿಚಯ

ಶ್ರೀ ಕೆ. ವೆಂಕಟರಾಯಾಚಾರ್ಯರು 'ಶಕುಂತಲೆಯ ಕಥೆ—ಶುಕಸಪ್ತತಿಯಿಂದ' (ಕರ್ನಾಟಕ ಭಾರತಿ, ೧-೧) ಎಂದು ಪ್ರಕಟಿಸಿರುವ ಲೇಖನದಲ್ಲಿ ಶುಕ-ಸಪ್ತತಿಯ ಕವಿ ನಾಗಮಂತ್ರಿಯು ಕಾವ್ಯದ ಆದಿಯಲ್ಲಿ ಕೊಡಿಗಿಯಪುರದ ಶಂಕರನಾರಾಯಣನನ್ನು ಸ್ತುತಿಸಿರುವುದರಿಂದ ಅವನು ದಕ್ಷಿಣ ಕನ್ನಡ ಜಿಲ್ಲೆಯ ಕುಂದಾಪುರದ ತಾಲ್ಲೋಕಿನವನೆಂದು ಊಹಿಸಿ ಬರೆದಿದ್ದಾರೆ. ಇದು ಸರಿಯಲ್ಲ. ಶರಜಾ ನಾಗಮಂತ್ರಿಯು ನಮ್ಮ ಮನೆತನದವನಾಗಿದ್ದು, 'ಕೆಳದಿನೃಪವಿಜಯ'ದಲ್ಲಿ ಉಲ್ಲೇಖವಾಗಿರುವಂತೆ, ನಮ್ಮ ವಂಶಕ್ಕೆ ಸೇರಿದ ಶರಜಾ ಶಂಕರನಾರಾಯ-ಣಯ್ಯ, ಶರಜಾ ತಿರುಮಲಯ್ಯ, ಶರಜಾ ನಾಗಪ್ಪಯ್ಯ, ಹೂವಯ್ಯ, ವೆಂಕ-ಟಯ್ಯ ಮುಂತಾದವರು ಕೆಳದಿ ಅರಸರಲ್ಲಿ ಮಂತ್ರಿಗಳೂ ನಿಯೋಗಿಗಳೂ ಆಗಿ ಊಳಿಗ ಮಾಡಿದವರಾಗಿದ್ದರು. ಇಂದಿಗೂ ಕೊಡಗಿಯ ಶಂಕರನಾರಾಯಣನೇ ನಮ್ಮ ಮನೆತನದ ದೇವರು. ನಮ್ಮ ಹಿರಿಯರ ಹೇಳಿಕೆಯಂತೆ ನಮ್ಮ ಪೂರ್ವ-ಜರು ಕೆಳದಿ ಅರಸರ ಆಳಿಕೆಯಲ್ಲಿ ಬಿದನೂರಿನಲ್ಲಿದ್ದು (ಇಂದಿನ ನಗರ) ಕೆಳದಿ ಸಂಸ್ಥಾನದ ಪತನಾನಂತರ ತೀರ್ಥಹಳ್ಳಿ ತಾಲ್ಲೋಕಿನ ಸದಾಶಿವಪುರ ಅಗ್ರ-ಹಾರಕ್ಕೆ ಬಂದು ನೆಲೆಸಿದರು. ಆ ನಡುವೆ ಕೆಲವು ಕಾಲ, ನಗರದ ಸಮೀಪದಲ್ಲಿರುವ ಹುಲಿಕಲ್ಲಿನಲ್ಲಿ ಇದ್ದುದಾಗಿ, ಕೆಲವು ನಿರ್ದಿಷ್ಟ ಆಧಾರಗಳಿಂದ ತಿಳಿದು ಬಂದಿದೆ. ನಮ್ಮ ಮುತ್ತಜ್ಜನ ತಂದೆ ಶರಜಾ ಕೃಷ್ಣಪ್ಪನೆಂಬುವರು ತೀರ್ಥ-ಹಳ್ಳಿಯ ಸದಾಶಿವಪುರ ಅಗ್ರಹಾರಕ್ಕೆ ಮೊದಲು ಬಂದವರು. ಕ್ರಿ.ಶ. ೧೯೩೮ರಲ್ಲಿ ನಿಧನರಾದ ನಮ್ಮ ಅಜ್ಜನವರು, ಕ್ರಿ.ಶ. ೧೯೫೯ರಲ್ಲಿ ನಿಧನರಾದ ನಮ್ಮ ಚಿಕ್ಕಜ್ಜನವರು ತಮ್ಮ ಹೆಸರಿನ ಹಿಂಬದಿಯಲ್ಲಿ 'ಶರಜಾ' ಎಂದು ಉಪಯೋಗಿಸುತ್ತಿದ್ದರು. ಇತ್ತೀಚೆಗೆ ಅಂದರೆ ನಮ್ಮ ತಂದೆಯವರ ಕಾಲದಿಂದ ಇಂಗ್ಲೀಷಿಗೆ ಸರಿಹೋಂದುವ ಸರ್ಜಾ ಎಂಬ ಹೆಸರು ರೂಢಿಗೆ ಬಂದು ಶರಜಾ ಎನ್ನುವುದು ತಪ್ಪಿಹೋಗಿದೆ. ಎರಡನೆಯದಾಗಿ ಶ್ರೀ ವೆಂಕಟರಾಯಾಚಾರ್ಯರು ಹೇಳುವಂತೆ ಶರಜಾ (ಸ್ಕಂದ+ನಾಗ) ಎಂದರೆ ಸುಬ್ರಮಣ್ಯ ಎನ್ನುವುದೂ ಅಥವಾ ಸೇಡಿಯಾಪು ಕೃಷ್ಣಭಟ್ಟರು ಊಹಿಸುವಂತೆ ಒಂದು ಉಪಾಧಿಯಾಗುವುದೂ ಸರಿಯಲ್ಲವೆಂದು ತೋರುತ್ತದೆ ಏಕೆಂದರೆ ಕೆಳದಿಯ ಅರಸು ವೀರಭದ್ರನಾಯಕ (ಕ್ರಿ.ಶ. ೧೬೨೯-೧೬೪೫)ನ ನಿಯೋಗಿಯಾಗಿದ್ದ ಶಂಕರನಾರಾಯಣಯ್ಯನಿಗೆ ಬಿಜಾಪುರದ ಆದಿಲ್‌ಷಹನು 'ಶರಜಾರಾಯ' ಎಂಬ ಬಿರುದನ್ನು ಕೊಟ್ಟಿದುದಾಗಿ ಕೆಳದಿನೃಪ-ವಿಜಯದಲ್ಲಿ ಹೇಳಿದೆ. ಶರಜಾ ಎನ್ನುವುದು ಉರ್ದು ಪದವಾಗಿದ್ದು 'ಸಿಂಹ' ಎಂದಾಗುತ್ತದೆ.*

★ ಸರ್ಜಾ ಚಂದ್ರಶೇಖರಯ್ಯ

---

* ಶುಕಸಪ್ತತಿಯ ಓಲೆಗರಿಯ ಹಸ್ತಪ್ರತಿಯು ಕವಿ ಮುದ್ದಣ್ಣನವರ ಮಗ ಶ್ರೀ ರಾಧಾಕೃಷ್ಣಯ್ಯನವರಿಂದ ನನಗೆ ದೊರೆತಿದೆ.

ಜಂಗಮುರಗಳೆ*

'ಜಂಗಮುರಗಳೆ'ಯ ಕರ್ತೃ ಸ್ವತಂತ್ರಸಿದ್ಧಲಿಂಗೇಶ್ವರ. 'ಸಂತತ
ಪೇಳ್ದ ಸಿದ್ಧಲಿಂಗೇಶ್ವರನು' ಎಂದು ಕವಿ ಇದರ ಕೊನೆಯ ಕಂದಪದ್ಯ
ತನ್ನ ನಾಮನಿರ್ದೇಶನ ಮಾಡಿದ್ದಾನೆ. ಈತನ ಕಾಲ ಕ್ರಿ ಶ ಸು. ೧೬
ತೋಂಟದ ಸಿದ್ಧಲಿಂಗಯತಿಯ ಶಿಷ್ಯನಾಗಿರಬಹುದಾದ ಈತನ 'ಸ್ವತಂತ್ರಸಿ
ಲಿಂಗೇಶ್ವರವಚನ' ಮತ್ತು 'ಮುಕ್ತ್ಯಂಗನಾಕಂಠಮಾಲೆ' ಎಂಬವು ಈ ಹಿಂದೆ
ಪ್ರಕಟವಾಗಿದ್ದು ಈಗ ಈ 'ಜಂಗಮುರಗಳೆ' ಮೊದಲ ಬಾರಿಗೆ ಬೆಳಕು
ತ್ತಿದೆ. ಹೆಸರೇ ಸೂಚಿಸುವಂತೆ 'ಜಂಗಮ'ದ ಮಾಹಾತ್ಮ್ಯ ಇದರ ವ
ಲಲಿತರಗಳೆಯಲ್ಲಿರುವ ಇದರ ಆದಿ ಅಂತ್ಯಗಳಲ್ಲಿ ಒಂದೊಂದು ಕಂದಪದ್ಯವಿ
ನಡುವೆ ೧೦೮ ಪಂಕ್ತಿಗಳಿವೆ. ಪ್ರತಿಪಂಕ್ತಿಯೂ 'ಜಂಗಮಂ' ಎಂಬ ನುಡಿ
ನೊಡನೆ ಮುಕ್ತಾಯವಾಗುತ್ತದೆ. ಪ್ರಕೃತ ಕೃತಿಯನ್ನು ತಾಳವೋಲೆ
ಏಕೈಕ ಪ್ರತಿಯಿಂದ ಸಿದ್ಧಗೊಳಿಸಿರುವುದರಿಂದ ಅಲ್ಲಲ್ಲಿ ಪಾಠದೋಷಗ
ಹಾಗೂ ಛಂದೋದೋಷಗಳು ಉಳಿದುಕೊಂಡಿರುವುದು ಅನಿವಾರ್ಯವಾ

ಶ್ರೀ ಶಿವಜಂಗಮದಿರವಂ
ದಾಸೋಹಮೆಂದುಗೊಂಡು ಮೃದುನುಡಿಯಿಂದಂ ||
ಬೇಸರುಮಿನಿಸಿಲ್ಲದೆ ನಾಂ
ಲೇಸಾಗಿಯೆ ನುತಿಸಿ ಜನನಪಾಶವ ಪಱಿವೆಂ ||

|| ಲಲಿತ ||

ಶ್ರೀಮಹಾಲಿಂಗ ತಾನೇ ಮಹಾಜಂಗಮಂ
ನಾಮರೂಪಕ್ರಿಯಾದೂರ ನಿಜಜಂಗಮಂ
ಆದಿಮಧ್ಯಾಂತವರ್ಜಿತವೆನಿಪ ಜಂಗಮಂ
ನಾದಬಿಂದೂಕಳಾತೀತ ಘನಜಂಗಮಂ
ಪರತರಂ ನಿರವಯಂ ನಿರುಹರಣ ಜಂಗಮಂ

---

* ಪ್ರಕಟಣೆಗಾಗಿ ಈ ಪ್ರತಿಯನ್ನು ನನಗೆ ಉಪಯೋಗಿಸಿಕೊಳ್ಳಲು ಅವಕಾ
ಮೈಸೂರಿನ ಮಹಾರಾಜ ಸಂಸ್ಕೃತ ಪಾಠಶಾಲೆಯ 'ಅರಮನೆ ಸರಸ್ವತೀ ಭಂಡಾ
ಅಧಿಕಾರಿಗಳಿಗೂ ಪರಿಷ್ಕರಣಕಾರ್ಯದಲ್ಲಿ ನನ್ನೊಂದಿಗೆ ನೆರವಾದ ಶ್ರೀ ಶಾಸ್ತ್ರಿ
ಮುಕುಂದಿಮಠ ಅವರಿಗೂ ನನ್ನ ವಂದನೆಗಳು.

ಪರವೇದಶಾಸ್ತ್ರಂಗಳಳಿಯಂದಿಹ ಜಂಗಮಂ
ನಿರ್ಲೇಪನಿರ್ಗುಣಂ ನಿರತಿಶಯ ಜಂಗಮಂ
ಲೀಲೆಯಿಂ ಸೃಷ್ಟಿಯನಳಿದ ಕಾಲಾರಿ ಜಂಗಮಂ
ಸುರಲೋಕಪತಿಮುಖ್ಯನುತಪಾದ ಜಂಗಮಂ
ಸುರನದಿಯ[೧] ತೊಟ್ಟ ನಿಸ್ಸಮಾನ ಜಂಗಮಂ
ನಿತ್ಯನಿರ್ಮಲ ನಿರುಪ ನಿಶ್ಚಿಂತ ಜಂಗಮಂ
ಅತ್ಯತಿಷ್ಠದ್ದಶಾಂಗುಲನೆನಿಪ ಜಂಗಮಂ
ಅನೇಕಕೋಟಿಜಗಳ ತನುವಳೆದ ಜಂಗಮಂ
ಅನುಪಾದ ಮಾನವೃಕ್ಷ ಫಲಮಹಿಮ ಜಂಗಮಂ
ಕಾಮಹಿತ[೨] ನಯನ ಪೂಜಿತಪಾದ ಜಂಗಮಂ
ಕಾಮಹರ ಸೋಮಧರನೀ ಮಹಾಜಂಗಮಂ
ಕಮಲಭವ ವಿಮಲನತಹಸ್ತ [ನಾ] ಜಂಗಮಂ
ಅಮರಸಂಕುಳಸೇವ್ಯ ತಮದಹಿತ ಜಂಗಮಂ
ಮುನಿಮುನೀಂದ್ರಗಳಿಂ ಪ್ರತ್ಯಕ್ಷನಾದ ಜಂಗಮಂ
ಧನಪತಿಗೆ ಸು[೩][ಕೊಳ][೩]ಶವ ಪಾಲಿಸಿದ ಜಂಗಮಂ
ಹರಿಸುರಬ್ರಹ್ಮರ್ಗೆ ಗುರು ತಾನೆ ಜಂಗಮಂ
ಪರವೇದವರ್ಣಿಸದು ನಿರುತನಿಹ ಜಂಗಮಂ
ಗಿರಿಸುತೆಗೆ ವರಕಥೆಯ ಬೋಧಿಸಿದ ಜಂಗಮಂ
ಪರಿಯಜಗೆ ವರ[೪][ವಿತ್ತು][೪] ಬೋಧಿಸಿದ ಜಂಗಮಂ
ಗಿರಿಜೆಗಳ್ದಿಷ್ಟ ಕೊಟ್ಟು [೫]ಧರೆಯೊಳಿರ್ದ[೫] ಜಂಗಮಂ
ಪುರ ಮೂರನು ಸುಟ್ಟ ನೀಲಾರಿಗಣ್ಣ ಜಂಗಮಂ
ಗಜಚರ್ಮವಂ ಪೊದ್ದ ಯಜಮಾನ ಜಂಗಮಂ
ಭಜಕರ್ಗೆ ಸುಖವೀವ ನಿಜಮಹಿಮ ಜಂಗಮಂ
ಪುಲಿದೊವಲನೊಲಿದುಟ್ಟ ಬಲಪಕ್ಷ ಜಂಗಮಂ
ಎಲುಮಾಲೆ ನಲಿದುಡಿಪ ಗೆಲವಕ್ಷ ಜಂಗಮಂ
ದಕ್ಷಮುಖ ವಿಮುಖನಕ್ಷಯಮನಸ್ಕ ಜಂಗಮಂ

೧. +ವಿಶಿಷ. ೨. +ನ. ೩. ಮ. ೪. ಗುಹಂ. ೫. ದರಿಯಂದಿ.

ಭಿಕ್ಷಾಟನಕ್ಕೆಯ್ದಿ ಶಿಕ್ಷಿಸಿದ ಜಂಗಮಂ
ಪರಮಪಾವನರೂಪ ದುರಿತಹರ ಜಂಗಮಂ
ಗುರುಕರಕಮಲಜಾತ ನಿರುಪಮ[ಂ] ಜಂಗಮಂ
ಎಲ್ಲ ತತ್ತ್ವಂಗಳೊಳು ಸಲ್ಲಲಿತ ಜಂಗಮಂ
ಎಲ್ಲರೊಳಗಿದ್ದು ತಾನಿಲ್ಲದಿಹ ಜಂಗಮಂ
ಪಂಚಮುಖ ಪಂಚೇಂದ್ರಿಯಂಗಳೆದ ಜಂಗಮಂ
ಪಂಚದಶಲೋಚನವನೊಂಚಿಸಿದ (?) ಜಂಗಮಂ
ದಶಭುಜಂಗಳ್ತ್ರೀಪಾದ್ವಯು(?)ಮಾದ ಜಂಗಮಂ
ಆಸಮಾದಿ ಚರಣದಿಂ ರಸೆಗಿಳಿದ ಜಂಗಮಂ
ಪಿತಮಾತೆ ಸುತೆಸುತರತೀತನಹ ಜಂಗಮಂ
ಅತಿಶಯದ ಬಂಧುಗಳಗಗತಿಮೆಟ್ಟ ಜಂಗಮಂ
ಕುಲಜಾತಿ ಮೊದಲಾದ ಹೊಲಬಿಲ್ಲ ಜಂಗಮಂ
ನೆಲೆಗಾಣ ಬಾರದಿಹ ಮಲರಹಿತ ಜಂಗಮಂ
ಶಿವಜಾತಿ ತಾನೆಂಬ ವಿವರವೇ ಜಂಗಮಂ
ಅವಿರಳಬ್ರಹ್ಮದಾನಂದವೇ ಜಂಗಮಂ
ಪಂಚಮುದ್ರೆಗಳಿಂದ ಸಂಚರಿಪ ಜಂಗಮಂ
ಪಂಚಾಕ್ಷರದಿ ಮನವನೊಂಚಿಸಿದ ಜಂಗಮ
ಕಾದಿ ಲಿಂಗವ ತಳೆದ ಕ್ಷರ(?)ರಹಿತ ಜಂಗಮಂ
ನಿರುತದಿಂದರ್ಚಿಸುವ ಚಿರಕಾಲ ಜಂಗಮಂ
ವರಭಸಿತ ರುದ್ರಾಕ್ಷಿ ಧರಿಸಿರ್ಪ ಜಂಗಮಂ
ಸ್ಥಿರಚಿತ್ತನಾಗಿ ತಾ ಚರಿಸುತಿಹ ಜಂಗಮಂ
ಶೂನ್ಯಲಿಂಗದ ಪದವ ಜಾನಿಸುವ ಜಂಗಮಂ
ಮಾನವರನಾಶಗೆಯ್ಯದ ಜಾನಿ ಜಂಗಮಂ
ಪರರು ತನ್ನವರೆಂಬ ಇರವಳಿದ ಜಂಗಮಂ
ಕರುಣದಿಂದೆಲ್ಲರಂ ಪೊರೆವುತಿಹ ಜಂಗಮಂ
ದರೆಯ ಮನಜರಿಗೆಲ್ಲ ಗುರುವಾದ ಜಂಗಮಂ

ಪರಮಪದವಿಯ ಭರದಿ ಕರುಣಿಸಿದ ಜಂಗಮಂ
ಜಗವ ರಕ್ಷಿಸಬಂದನಘದೂರ ಜಂಗಮಂ
ಮಿಗೆ ನೆನೆವ ಭಕ್ತರೊಳಗಗಲದಿಹ ಜಂಗಮಂ
ಬೇಡಾಜಿಲಿಂಗಕ್ಕೆ ಒಡಲಾದ ಜಂಗಮಂ
ಷಡ್ವರ್ಗವೆಲ್ಲಮಂ ಕೆಡೆಬಡಿದ ಜಂಗಮಂ
ಪಾಶವೆಂಟುಂ ಹಱಿದ ದೋಷಾರಿ ಜಂಗಮಂ
ಕ್ಲೇಶಪಂಚಕವಳಿದ ಲೇಸಾದ ಜಂಗಮಂ
ಅಷ್ಟಮದಗಳ ಹೊಲಬ ಮೆಟ್ಟಿದಿಹ ಜಂಗಮಂ
ಇಷ್ಟಲಿಂಗಕೆ ಮನವ ಕೊಟ್ಟ ನಿಜಜಂಗಮಂ
ವ್ಯಸನವೇಳರ ಘಸಣಗೊಳಗಾಗ ಜಂಗಮಂ
ಅಸಮ ಷಡ್ಭ್ರಮೆಗಳನು ಮಸುಳಿಸಿದ ಜಂಗಮಂ
ಒಡಲಾಸೆಗಡಿಯಿಡದ ದೃಢಚಿತ್ತ ಜಂಗಮಂ
ಬಡಮನದಿ ಪರಧನಕೆ ತುಡುಕದಿಹ ಜಂಗಮಂ
ಬಿಟ್ಟು ಮುಮ್ಮಲಗಳಂ ಮುಟ್ಟದಿಹ ಜಂಗಮಂ
ಸೃಷ್ಟಿಸ್ಥಿತಿಪ್ರಳಯನಷ್ಟ ನಿಜಜಂಗಮಂ
ಹೊನ್ನುಮಣ್ಣುಗಳ[೧] ಬನ್ನಂ ಬಡದ ಜಂಗಮಂ
ತನ್ನಿರವನನ್ಯರೊಳ[೨][ಗು][೨]ಸುರ[೩][ದಿಹ][೩] ಜಂಗಮಂ
ವನಿತೆಯರ ವಿನಯಕ್ಕೆ ಮನವೆಳಸ ಜಂಗಮಂ
ಘನಮಹಾಲಿಂಗದೊಳನುವಾದ ಜಂಗಮಂ
ಕಾಯಗುಣಗಳ ಕಳೆದ ಮಾಯಾರಿ ಜಂಗಮಂ
ಜಾಯಬಡಿದೆಲ್ಲರನೊಯ್ದಳಿದ (?) ಜಂಗಮಂ
ಜಗದ ಜಂಜಡದೊಳಗೆ ಹೊಗದಜಡ ಜಂಗಮಂ
ಹಗಲಿರುಳು ಶರಣರೊಳಗಗಲದಿಹ ಜಂಗಮಂ
ಒಳ್ಳಿತನದಿಂದೆಲ್ಲರೊಳು ಸೋಲ ಜಂಗಮಂ
ಗೆಲ್ಲ ಸೋಲಕೆ ಹೆಣಗ ಸಲ್ಲಲಿತ ಜಂಗಮಂ

೧. +ಗಳಿ. ೨. ಗಿಸ್ಸು ೩. ಡ.

ಸ್ತುತಿನಿಂದ್ಯವೆಂಬೆರಡ ಧೃತಿಗುಂದದ ಜಂಗಮವು
ಜಾತಿಗೆಟ್ಟು ಜಾತನಾದ ಗತಿಗೆಟ್ಟ ಜಂಗಮವು
ಸಲ್ಲಲಿತ ಸದ್ಭಕ್ತರಲ್ಲಿರ್ಪ ಜಂಗಮವು
ಕಲ್ಪಿತವು ಮನಮನದೊಳಗಿಲ್ಲದಿಹ ಜಂಗಮವು
ಶಿವಧರ್ಮಶಾಸ್ತ್ರಗಳ ವಿವರಿಸುವ ಜಂಗಮವು
ತವೆ ತನ್ನ ನಿಜವಳಿದ ಶಿವಮೂರ್ತಿ ಜಂಗಮವು
ಸಂಗವಿರಹಿತ ನಿರ್ಮಳಾಂಗ ಗುರು ಜಂಗಮವು
ಅಂಗಕಂಗಗಳೆಲ್ಲ ಲಿಂಗಮಯ ಜಂಗಮವು
ಯತಿತತಿಗಳತಿಮುದದಿ ನುತಿಗೆಯ್ವ ಜಂಗಮವು
ವ್ರತಿತತಿಗಳುನ್ನತಿಯಿಂದೆ [1][ನತಿ][1]ಗೆಯ್ವ ಜಂಗಮವು
ಕ್ಷಣಿಕಲು ಮುಂಚಿನವನು ಪರಿಯಿಂದುವ ಜಂಗಮವು
ಮುಂಮನ್ನದಲಿ ಬರಿಸ[2] ಮರವಾನಿ ಜಂಗಮವು
ಅಪ್ಪಿದ ಭಕ್ತರ ರಕ್ಷಿಸುವ ಜಂಗಮವು
ಭಿಕ್ಷವ ನೀಡಿ ಮೋಕ್ಷವನೀವ ಜಂಗಮವು
ಹಾಡಿ ಕೊಂಡಾಡಿ ಮುಂದಾಡಿದರೆ ಜಂಗಮವು
ಬೇಡಿದಿಷ್ಟವನೀವುದಿಯಿಳು ಜಂಗಮವು
ನಿನ್ನ ಮಹಿಮೆಯ ಪೇಳ್ವುದೆನ್ನಳವೆ ಜಂಗಮವು
ಬನ್ನಣ್ಣ ತಪ್ಪು ನೀಂ ಮನ್ನಿಪುದು ಜಂಗಮವು
ಎಲ್ಲ ಬಿನ್ನ[ಹ]ವ ಕೇಳು ಮನ್ನಾಧ ಜಂಗಮವು
ಬನ್ನಬಡಲಾರೆ ಭವದೊಳು ಬಿದ್ದು ಜಂಗಮವು
ದೇಹ ಮಲಮಯವ ಕಾಯನು ನಿಮ್ಮ ಜಂಗಮವು
ಗಾಢ ನಿಮ್ಮಡಿಯೊಳಗೆ ಕೂಡಿಕೊ ಜಂಗಮವು
ಮರೆಯದಿರೆ ಕರುಣಿಪುದು ಶಂಕರಜ ಮೂರ್ತಿಯೆ

---

೧. ಮತಿ   ೨. ಅಃ ಅಥ

ಶಾಸನಪದಸೂಚೀ*

(ದಕ್ಷಿಣ ಭಾರತದ ಶಾಸನಗಳು : ಸಂಪುಟ ೯, ಭಾಗ ೧)

ಭಾರತೀಯ ಪ್ರಾಕ್ತನ ಅಧ್ಯಯನ ವಿಭಾಗದವರು ಕ್ರಿ.ಶ ೧೯೩೯ರ... "ದಕ್ಷಿಣಭಾರತದ ಶಾಸನಗಳು" ಸಂಪುಟ ೯, ಭಾಗ ೧ (South Indian Inscriptions, Vol. IX, Part I) ಎಂಬ ಶಾಸನಸಂಪುಟವನ್ನು ಪ್ರಕಟಿಸಿದರು. ಪದ... ಸೂಚಿಯ ಕೊರತೆಯಿಂದಾಗಿ ಸಂಶೋಧಕನು ಒಂದು ಸಣ್ಣ ಸಂಗತಿಗಾಗಿಯು... ದಿನಗಟ್ಟಲೆ ಇದರ ಪುಟ ತಿರುವಬೇಕಾಗುತ್ತಿತ್ತು. ಈ ಶ್ರಮನಿವಾರಣೆಗಾಗಿ ಈ... ಸಂಪುಟದ ಪದಸೂಚಿಯನ್ನು ಇಲ್ಲಿ ಸಿದ್ಧಪಡಿಸಲಾಗಿದೆ. ಇದು ಶಾಸನಾಭ್ಯಾ... ಗಳಿಗೆ ಉಪಯುಕ್ತವೆನಿಸಿದಲ್ಲಿ ನನ್ನ ಶ್ರಮ ಸಾರ್ಥಕವೆಂದು ಭಾವಿಸುತ್ತೇನೆ.

ಇದನ್ನು ಉಪಯೋಗಿಸುವಾಗ ಕೆಲವು ಅಂಶಗಳನ್ನು ಗಮನದಲ್ಲಿಟ್ಟು... ಕೊಳ್ಳಬೇಕು : 'ಅಧಿಕಾರಿ' ಎಂಬಲ್ಲಿ ಮಂತ್ರಿ, ಸೇನಬೋವ ಮೊದಲಾದವರೆಲ್ಲ... 'ಮಾಂಡಲಿಕ' ಎಂಬಲ್ಲಿ ಮಹಾಮಾಂಡಳಿಕ, ಸಾಮಂತಾದಿಗಳೆಲ್ಲ; 'ಪ್ರಾಂತ... ಎಂಬಲ್ಲಿ ಆಡಳಿತದ ಸಣ್ಣದೊಡ್ಡ ವಿಭಾಗಗಳೆಲ್ಲ ಸಮಾವೇಶಗೊಂಡಿವೆ. ಹೆಸ... ಗಳನ್ನು ಅಕಾರಾದಿಯಾಗಿ ಜೋಡಿಸಿದ್ದೇನೆ. ಮೊದಲು ಹೆಸರು, ಅದರ ಮುಂ... ಸಂಕೇತಾಕ್ಷರ, ತರುವಾಯ ಶಾಸನಸಂಖ್ಯೆ ಮತ್ತು ಸಾಲುಗಳನ್ನು ಸೂಚಿಸಿದ್ದೇ... ಶಾಸನದ ಆರಂಭದ ಸ್ತುತಿ, ಕೊನೆಯ ಫಲಶ್ರುತಿಗಳಲ್ಲಿಯ ಹೆಸರುಗಳನ... ಬಿಟ್ಟುಕೊಡಲಾಗಿದೆ. ವಿಶಿಷ್ಟ ಬಿರುದುಗಳನ್ನು ಮಾತ್ರ ಆಯ್ದುಕೊಳ್ಳಲಾಗಿ... ಇಲ್ಲಿ ಉಪಯೋಗಿಸಿದ ಸಂಕೇತಾಕ್ಷರಗಳು ಹೀಗಿವೆ :

ಸಂಕೇತಾಕ್ಷರ	ಪೂರ್ಣ	ಸಂಕೇತಾಕ್ಷರ	ಪೂರ್ಣ
ಅ.	ಅರಸ	ಪೌ.ವ್ಯ.	ಪೌರಾಣಿಕ ವ್ಯಕ್ತಿ
ಅಧಿ.	ಅಧಿಕಾರಿ	ಪ್ರಾ.	ಪ್ರಾಂತ
ಕ.	ಕವಿ	ಬ.	ಬಸದಿ
ಕ.ಚಾ.ರಾ.	ಕಲ್ಯಾಣಚಾಳುಕ್ಯರಾಜಧಾನಿ	ಬಿ.	ಬಿರುದು
ಕ.ವಂ.	ಕದಂಬವಂಶ	ಮಾ.	ಮಾಂಡಲಿಕ
ಕಳ.ವಂ.	ಕಳಚೂರ್ಯ ವಂಶ	ರಾ.	ರಾಣಿ
ಗಾ.	ಗಾಮುಂಡ	ಲಿ.ಕಾ.	ಲಿಪಿಕಾರ
ಗ್ರಾ.	ಗ್ರಾಮ	ವಂ.	ವಂಶ
ಚೋ.ವಂ.	ಚೋಳವಂಶ	ಸ್ತ್ರೀ	ಸ್ತ್ರೀ
ದೇ.	ದೇವತೆ	ಹೊ.ರಾ.	ಹೊಯ್ಸಳ ರಾಜ...
ನೊ.ಪ.ವಂ.	ನೊಳಂಬಪಲ್ಲವ ವಂಶ	ಹೊ.ವಂ.	ಹೊಯ್ಸಳ ವಂಶ
ಪ.ರಾ.	ಪಲ್ಲವ ರಾಜಧಾನಿ		

* ಬೆಲೆಯುಳ್ಳ ಈ ಸಂಪುಟವನ್ನು ಪ್ರಕಟಿಸಿದ ಭಾರತೀಯ ಪ್ರಾಕ್ತನ ಅಧ್ಯಯನದ... ಈ ಸೂಚಿಯನ್ನು ಸಿದ್ಧಪಡಿಸುವಲ್ಲಿ ನೆರವಾದ ಶ್ರೀ ಎಸ್. ಆರ್. ಗುಂಜಾಳ, ... ಶಾಂತ ಕಲಬುರ್ಗಿ, ಬಿ. ವ್ಹಿ. ಮಲ್ಲಾಪುರ, ವ್ಹಿ. ಆರ್. ಸಂಗೊಂಡಿಮಠ ... ಬಿ. ವ್ಹಿ. ಗುಂಜೆಟ್ಟಿ ಇವರಿಗೆ ನನ್ನ ಕೃತಜ್ಞತೆಗಳು.

ಆ

ಈ

ಉ

(ಮುಂದುವರಿದುದು)

★ ಎಸ್. ರಾಜ

ಗ್ರಂಥಾವಲೋಕನ

ನ್ನಡ ಭಾಷೆಯ ಸಂಕ್ಷಿಪ್ತ ಚರಿತ್ರೆ— ಡಾ. ಡಿ. ಎನ್. ಶಂಕರ ಭಟ್ಟ, ಭಾಷಾ ಪ್ರಕಾಶನ, ಧಾರವಾಡ, ಪುಟ. ಬೆಲೆ : ಮೂರುವರೆ ರೂಪಾಯಿ.

ಇದು ೧೦೩ ಪುಟಗಳ ಒಂದು ಕಿರುಹೊತ್ತಗೆ. ಮೂಲ ದ್ರಾವಿಡದಿಂದ ನ್ನಡಕ್ಕೆ, ಮೂಲ ಕನ್ನಡದಿಂದ ಆಧುನಿಕ ಪ್ರಭೇದಗಳಿಗೆ — ಎಂದೆರಡು ಮುಖ್ಯ ವಿಭಾಗಗಳೊಡನೆ ಮುಕ್ತಾಯ, ಅನುಬಂಧ, ಆಕರಸೂಚಿಗಳನ್ನೊಳಗೊಂಡಿದೆ.

ಕನ್ನಡದಲ್ಲಿ ನವೀನ ರೀತಿಯ ಭಾಷಾವಿಜ್ಞಾನಕ್ಕನುಸರಿಸಿ ಬರೆದ ಭಾಷಾ-ಚರಿತ್ರೆಯೊಂದಿಲ್ಲ. ಲೇಖಕರೇ ಹೇಳಿರುವಂತೆ, ಅನೇಕ ವಿಷಯಗಳಲ್ಲಿ ಸಂಶೋ-ಧನೆಗಳಿನ್ನೂ ಶೈಶವಾವಸ್ಥೆಯಲ್ಲಿಯೇ ಇದ್ದು, ನಿರ್ಣಾಯಕವಾಗಿ ಹೇಳಲಾಗದ ವಿಷಯಗಳೆಷ್ಟೋ ಇವೆ. ಇಂತಹ ಪರಿಸ್ಥಿತಿಯಲ್ಲಿ ಲೇಖಕರು ಕನ್ನಡದ ಸಂಕ್ಷಿಪ್ತ ಚರಿತ್ರೆಯನ್ನು, ' ಕನ್ನಡಭಾಷಾಶಾಸ್ತ್ರವನ್ನು ಆಳವಾಗಿ ಅಭ್ಯಸಿಸಬೇಕೆಂದಿರುವ ವಿದ್ಯಾರ್ಥಿಗಳಿಗೆ ಮತ್ತು ಸಂಶೋಧಕರಿಗೆ ಉಪಯುಕ್ತವಾಗುವಂತೆ ' ರಚಿಸುವ ಪ್ರಯತ್ನಮಾಡಿದ್ದಾರೆ. ಇಂಗ್ಲೀಷಿನಲ್ಲಿ ಲಭ್ಯವಿರುವ ಸಂಶೋಧನಾವಿಚಾರಗಳು ಇಂಗ್ಲೀಷು ತಿಳಿಯದ ವಿದ್ಯಾರ್ಥಿ ಹಾಗೂ ಸಂಶೋಧಕರಿಗೆ (?) ಪ್ರಯೋಜನವಾಗಬಹುದೆಂದೆಣಿಸಿ ಈ ಕೃತಿಯನ್ನು ರಚಿಸಿದಂತೆ ಕಾಣುತ್ತದೆ. ಎಂತಿದ್ದರೂ, ಇದು ಸಾಮಾನ್ಯ ಓದುಗರಿಗೋಸ್ಕರ ರಚಿತವಾದ ಪುಸ್ತಕವಲ್ಲ. ' ಆಳವಾಗಿ ಕನ್ನಡಭಾಷಾ ಶಾಸ್ತ್ರವನ್ನು ಅಭ್ಯಸಿಸಬೇಕೆಂಬ ವಿದ್ಯಾರ್ಥಿಗಳಿಗೆ ಮತ್ತು ಸಂಶೋಧಕರಿಗೆ ಉಪಯುಕ್ತವಾಗಿರುವಂತೆ' ... ಎಂಬ ಅವರ ಹೇಳಿಕೆಯಿಂದಲೂ ಗ್ರಂಥದಲ್ಲಿಯ ಆಧುನಿಕ ರೀತಿಯ ವಿಷಯನಿರೂಪಣೆಯಿಂದಲೂ, ಇದು ಮುಂದು-ವರಿಯುತ್ತದೆ. ಅಂತೂ, ಸಾಮಾನ್ಯ ಓದುಗರಿಂದ ದೂರವಾಗಿ, ವಿಶೇಷ ಅಭ್ಯಾಸಿಗಳಿಗೆ (Specialists) ಬಹುಶಃ ಒಂದು ಆಕರಗ್ರಂಥವಾಗಿ ಪ್ರಯೋಜನವಾದೀತೆಂದು ತೋರುತ್ತದೆ. ಆದರೆ ಅಂತಹ ವಿಶೇಷತರದ ಅಭ್ಯಾಸಿಗಳಿಗೆ ಈ ಸಂಕ್ಷಿಪ್ತತೆ ಎಷ್ಟಿನ ಪ್ರಯೋಜನವಿತ್ತೀತೇ ಎಂಬ ಸಂದೇಹ ಬಾರದೆಯೇ ಉಂಟಾಗುತ್ತದೆ. ವಿವರವಾಗಿ ಮತ್ತು ವಿಸ್ತಾರವಾಗಿ ಮುಂದಿನ ಪುಸ್ತಕವೊಂದರಲ್ಲಿ, ಇಲ್ಲಿ ಬಹಳ ಸಂಕ್ಷಿಪ್ತವಾಗಿ ವಿವೇಚಿಸಲಾದ ವಿಷಯಗಳನ್ನು ಕೊಡುವ ಯೋಜನೆಯನ್ನು ಲೇಖಕರು ಇಟ್ಟುಕೊಂಡಿದ್ದಾರೆಂದಾಗ ಈ ಪುಸ್ತಕದಲ್ಲಿ ಪ್ರತಿಪಾದಿತವಾದುದು ' ಎಲ್ಲಿ ಇಷ್ಟಿಷ್ಟು ' ಎಂಬಂತೆಂದು ಅವರಿಗೇ ಮನವರಿಕೆಯಾದಂತಿದೆ.

ಪೀಠಿಕಾಭಾಗದಲ್ಲಿ (ಪುಟ ೮) ' ಕೆಲವು ಭಾಷೆಯನ್ನಾಡುವವರು ಮೈಸೂರಿನ ಕರಾವಳಿಪ್ರದೇಶ ಸುಮಾರು ಎರಡು ಸಾವಿರ ವರ್ಷಗಳಿಂದಲೂ

ದಲ್ಲಿ ನೆಲೆನಿಂತವರಾದ್ದರಿಂದ—' ಎಂದು ಹೇಳಿದ್ದಾರೆ. ಇದನ್ನು ಊಹನೆಯಿಂ
ಹೇಳಿದುದೋ, ಅಥವಾ ಆ ಹೇಳಿಕೆಗೆ ಆಧಾರಗಳೇನಾದರೂ ಇವೆಯೋ ಎಂದು
ತಿಳಿಸಲಿಲ್ಲ. ಕೊರಗಭಾಷೆಯನ್ನು ಉತ್ತರ ದ್ರಾವಿಡಭಾಷೆಗಳ ಗುಂಪಿನೊಡನೆ
ಸೇರಿಸುವದು ಬಹುಮಂದಿ ಪಂಡಿತರಿಗೆ ಇನ್ನೂ ಸ್ವೀಕೃತವಾದಂತಿಲ್ಲ.

ಮೂಲಭಾಷೆಯ ಕಲ್ಪನೆ ಎಂಬ ವಿಭಾಗದಲ್ಲಿ (ಪುಟ ೧೧-೧೨
ಸಂಬಂಧಿತ ಭಾಷೆಗಳಿಗೆಲ್ಲ ಒಂದು ಮೂಲರೂಪವಿದ್ದಿರಬೇಕೆಂಬುದು....ಪೆಟ್ಟಿ
ಮಟ್ಟಿಗೂ ಕಲ್ಪಿತ ಮಾತ್ರ, ನಿಜವಾದ ಭಾಷೆಯಲ್ಲ—ಎಂದು ಸ್ಪಷ್ಟವಾ
ಹೇಳಿದ್ದಾರೆ. ಇದು ಸರಿಯಾದುದು. ಕೆಲವರಲ್ಲಿ ಇಂತಹ ಪುನರ್ಘಟಿ
(Reconstructed) ರೂಪಗಳು ನಿಜವಾದ ಭಾಷೆಯ ರೂಪಗಳೆಂಬ ಭಾವ
ಯುಂಟಾಗಿ ಆ ಕಾರಣದಿಂದ ಮೂಲಭೂತವಾದ ಕೆಲವು ತಪ್ಪುಗಳಾಗುತ್ತವೆ
—ಎಂಬುದಕ್ಕೆ ಲೇಖಕರ ಈ ನುಡಿ ಸ್ಪಷ್ಟವಾಗಿಯೂ ಸಮಯೋಚಿತವಾಗಿಯೂ
ಇದೆ. ದೀರ್ಘಸ್ವರಗಳು ಹ್ರಸ್ವಗಳಾಗುವಲ್ಲಿ ಕೊಟ್ಟಿರುವ ಪದಯುಗ್ಮಗಳ
ನೂಱು, ನುಗ್ಗು, ಸೋಕು, ಸೊಂಕು ಎಂಬ ಉದಾಹರಣೆಗಳನ್ನು (ಪುಟ ೧೭
ಕೊಟ್ಟಿದ್ದಾರೆ. ಸೋಕು ಎಂಬುದು ಸೋಂಕು ಎಂಬುದರ ನಿರನುನಾಸಿಕ ರೂಪ
ಸೊಂಕು ಸೋಂಕು ಎಂಬುದು ಕವಿಗಳು ಛಂದಸ್ಸಿನ ಅನುಕೂಲತೆಗೆ ಬಳಸು
ರೂಪಗಳಾಗಿದ್ದುವೆಂಬುದನ್ನು ಗಣಿಸಬೇಕು. ಅದಲ್ಲದೆ ಈಗಲೂ ಕನ್ನಡದ ಕೆ
ಪ್ರಭೇದಗಳಲ್ಲಿ ಸೋಂಕು ಎಂಬ ರೂಪವೇ ಹೊರತು ಸೊಂಕು ಎಂಬ ರೂ
ದೊರೆಯುವುದಿಲ್ಲ. ಉಚ್ಚಸ್ವರ ಮಧ್ಯಸ್ವರವಾಗುವಲ್ಲಿ, ಕುಂದು—ಎಂಬುದ
ಉಕಾರ ಒಕಾರವಾಯ್ತೆಂದು, ಕೊರತೆ ಎಂಬ ಪದವನ್ನು ಜೋಡಿಸಿದ್ದಾ
(ಪುಟ ೧೯). ಕೊರತೆ ಎಂಬುದು ಕುಱೈ—ಎಂಬುದರಿಂದ ಸಿದ್ಧವಾದುದೆಂದ
ತಿಳಿಯುವುದು ಸಮಂಜಸವಾದುದು. ಇದನ್ನು ಕುಂದು ಎಂಬುದಕ್ಕೆ ಜೋಡಿಸ
ವುದು ಯೋಗ್ಯವಲ್ಲ. ಇದಕ್ಕಿಂತ ಕುಡು—ಕೊಡು ಎಂಬ ಜೋಡಣೆ ಹೆಚ್ಚು
ಸರಿಯಾಗುತ್ತಿತ್ತು. ಇದೇ ಪುಟದಲ್ಲಿ ಕೊನೆಗೆ 'ನೊಗ' ಎಂಬುದನ್ನು ಕನ್ನ
ವೆಂದಿದ್ದಾರೆ. ಇದು ಸಂಸ್ಕೃತ ಪದವೋ, ದೇಶ್ಯವೋ ಎಂದಿನ್ನೂ ನಿರ್ಣಯವಾ
ಲಿಲ್ಲವೆಂಬುದನ್ನು ಲೇಖಕರು ಮರೆತಂತಿದೆ. ಅನುನಾಸಿಕ ಸಂಯುಕ್ತ ಸ್ಪರ್ಶಗಳ
(ಪುಟ ೩೦) 'ಜಕಾರ ಮಾತ್ರ, ಈ ಸನ್ನಿವೇಶದಲ್ಲಿ ದಕಾರವಾಗಿರುವುದು
ಎಂಬಲ್ಲಿ ಕಞ್ಜು—ಕನ್ದು ಎಂದಾಗಿರುವುದು ನಿಜವಾದರೂ, ಕಜು ಎಂದು ಅ
ನಾಸಿಕಲೋಪವಾದ ರೂಪವೂ ಇದೆಯೆಂದು ಅದರ ವಿವರಣೆ ಕೊಡುವುದಿಲ್ಲ

ಅಕರ್ಮಕ ಮತ್ತು ಸಕರ್ಮಕಗಳಲ್ಲಿ (ಪುಟ ೩೭) ಅಕರ್ಮಕ ಪ್ರಕೃ
ಗಳ ಕೊನೆಯಲ್ಲಿ ಬರುವ ಅನುನಾಸಿಕ ಮತ್ತು ಸಮಾನಸ್ಥಾನಿ ಸ್ಪರ್ಶಯು
ವಾದ ವ್ಯಂಜನಗುಚ್ಛವು ದ್ವಿಸ್ಪರ್ಶವಾಗಿ ಬದಲಾಗುವದರಿಂದ ಆ ಪ್ರಕೃ
ಸಕರ್ಮಕವಾಗುವುದೆಂಬುದೇ ಈ ನಿಯಮದ ಸ್ವರೂಪವಾಗಿದೆ. (ಈ ವಾ

ತ್ತು ಮತ್ತು ಜಟಿಲತೆಗಳಿಗೆ ಪ್ರತಿನಿಧಿಯಾಗಿದೆ) ಈ ನಿಯಮಗಳಿಗೆ ಒಳ-
ದ ಸಕರ್ಮಕ ಅಕರ್ಮಕ ದ್ವಂದ್ವಗಳು ಅದೆಷ್ಟೋ ಇವೆ ಎಂಬುದು
ವಿಡಭಾಷಾಭ್ಯಾಸಿಗಳಿಗೆ ತಿಳಿದ ವಿಷಯ. ತಂಗು ಅಕರ್ಮಕ, ದಕ್ಕು
ರ್ಮಕ. ಅಂತೆಯೇ, ಅಂಟು-ಅಟ್ಟು ಎಂಬ ಸಂಬಂಧಗಳು ಸಂದರ್ಭಸಾಧಿತ
ವೆಯೆಂಬಂತೆ ತೋರುತ್ತದೆ. ಕ್ರಿಯಾರೂಪದಿಂದ ನಾಮವೋ ನಾಮ-
ಪದಿಂದ ಕ್ರಿಯೆಯೋ—ಎಂಬುದು ಬೀಜವೃಕ್ಷನ್ಯಾಯದಂತೆ (ಪುಟ ೯೨)
ಸ್ತು. ಅಲ್ಲಿ ಮಾಡಿಕೊಂಡ ಸಂಧಿನಿಯಮ ಜಾಣ್ಮೆಯ ಕಸರತ್ತಾಗಿದೆ.

ಮೂಲಕನ್ನಡದಿಂದ ಆಧುನಿಕ ಪ್ರಭೇದಗಳಿಗೆ ಎಂಬ ಭಾಗದಲ್ಲಿ ನಿಯತ
ತ್ತು ಅನಿಯತ ಬದಲಾವಣೆಗಳೆಂಬ ಶೀರ್ಷಿಕೆಯಲ್ಲಿ (ಪುಟ ೯೮) ಕೆಲವೊಂದು
ತಿಪಾದಿತ ವಿಷಯಗಳು ಚೆನ್ನಾಗಿವೆ. ಆದರೆ ವಿಷಯನಿರೂಪಣೆಯು ಸ್ಪಷ್ಟತೆ-
ಕ್ಕರಣೆಯು ಕ್ಲಿಷ್ಟತೆಯೊಡನೆ ಕುಸ್ತಿ ಮಾಡಿ ಸೋತುಹೋಗಿದೆ. ಉದಾ:
ಂದು ಭಾಷೆಯನ್ನು ಬಳಸುತ್ತಿರುವ ಸಮಾಜವು ಬೇರೆ ಬೇರೆ ಸಾಮಾಜಿಕ
ತ್ತು ಭೌಗೋಳಿಕ ಕಾರಣಗಳಿಂದಾಗಿ ಅನೇಕ ಭಾಗವಿಭಾಗಗಳಾಗಿ ಒಡೆದು
ಂದಲ್ಲಿ ಆ ವಿಭಾಗಗಳು ಭಾಷೆಯಲ್ಲಿ ನಡೆಯುವ ಬೇರೆ ಬೇರೆ ಬದಲಾವಣೆ
ಳಿಗೂ ಕೂಡ ಮೂಲಗಳಾಗಬಲ್ಲವಾದ್ದರಿಂದ ಸಮಾಜವೊಂದರ ವಿಭಾಗಗಳಿಗನು-
ಸರಿಸಿ ಭಾಷೆಯಲ್ಲೂ ಕೂಡ ಬೇರೆ ಬೇರೆ ಪ್ರಭೇದಗಳೇರ್ಪಡುತ್ತವೆ; ಲಿಖಿತ-
ಸಿ, ಭಾಷೆಯಲ್ಲೂ ಕೂಡ ಬೇರೆ ಬೇರೆ ಮಾಡಿದ ತುಲನೆ ವೈಜ್ಞಾನಿಕ ದೃಷ್ಟಿಗನುಸರಿಸಿ
ಜನಗಳ ಮಾನ್ಯತೆಯಲ್ಲಿ ಮಾಡಿದ ತುಲನೆ ದೀರ್ಘವಾಕ್ಯಗಳು ದಾಖಲಾಗಿ
ನ್ನಾಗಿದ್ದರೂ, ಮೇಲೆ ಉದಾಹರಿಸಿದಂತೆ ದೀರ್ಘವಾಕ್ಯಗಳು ದಾಖಲಾಗಿ
ಕಾರವನ್ನು ಮುಂಗಿಡುತ್ತವೆ ಮೂಲ ಕನ್ನಡದ ಕಲ್ಪನೆಯೂ, ಮೂಲ
ಸೂಕ್ಷ್ಮವಾಗಿದೆ ಕವಿಗಳ
ಪ್ರತಿಪಾದಿಸಿದಂತೆ — ಬರೀ ಸಿದ್ಧಾಂತವೆಂಬ ದೃಷ್ಟಿ ಸೂಕ್ಷ್ಮವಾಗಿದೆ
ಲ್ಲವೇ ದಾಖಲೆಗಳ ಕಾಲವನ್ನನುಸರಿಸಿ ಕಲ್ಪಿಸಿಕೊಂಡಂತಹ ಕನ್ನಡಭಾಷಾ
ಚರಿತ್ರೆ, ದೇಶ್ಯ ಸಾಮಾಜಿಕ ಮತ್ತು ತರ್ಕಸಮ್ಮತವಲ್ಲವೆಂಬುದಾಗಿ ಪರಿಶೋಧ
ನಾಗಿ ಅಭಿಪ್ರಾಯಪಟ್ಟಿರುತ್ತಿದೆ. 'ಕನ್ನಡಭಾಷೆಯು ವಿವಿಧಪ್ರಭೇದಗಳ ಆಧ್ಯಾಸ
ನವನ್ನು ಬಾಲ್ಯಾವಸ್ಥೆಯಲ್ಲೇ ಇರುವುದರಿಂದ.......... (ಪುಟ ೫೧) ಆದರ
ಶಾಸನಗಳ ಮತ್ತು ವ್ಯಾಕರಣಾಂಶಗಳ ಚರಿತ್ರೆ, ಕನ್ನಡದ ಬೇರೆ ಬೇರೆ ಪ್ರಭೇದ
ಅಲ್ಲಿ ಯಾವ ದಿಕ್ಕಿನಲ್ಲಿ ಸಾಗಿದೆ—ಎಂಬುದನ್ನು ಕೆಲವು ಮುಖ್ಯವಾದ ಅಂಶ
ಸದ್ಯಕ್ಕೆ ಪ್ರಸ್ತುತಿಸಿ ನಿರ್ಣಯಿಸಲಾಗುವುದು' (ಈ ವಾಕ್ಯಬಂಧವನ್ನು
ಉಲ್ಲೇಖಿಸಿದ ಲೇಖಕರು ಒಮ್ಮೆ ಹಿನ್ನೆಲೆ, ಒಮ್ಮೆ ಹಳೆ
ಮುನ್ನುಡಿ)—ಎಂದು ಸಾರಿದ ಲೇಖಕರು ಒಮ್ಮೆ ಹಸ್ತಕ, ಒಮ್ಮೆ ಹಳೆ
ಕನ್ನಡ, ಮತ್ತೊಮ್ಮೆ ಹೊಸಗನ್ನಡ, ಇನ್ನೊಮ್ಮೆ ಗ್ರಾಂಥಿಕ, ಪಾಲಕ್ಕೆ, ಬರಗ,
ಪ್ಪುಗೂರು ಎಂದೆಲ್ಲ ದೇಶಾಂತರಕಾವಲ್ಲಿ ಹೆಸರಿಸಿ, ಅನುಕೂಲವಾದ ಉದಾಹರಣೆ
ಗಳನ್ನು ಕೊಟ್ಟಿದ್ದಾರೆ ಕನ್ನಡಕ್ಕೆ ಇವು ಮಾತ್ರ ಪ್ರಭೇದಗಳಲ್ಲ. ಇವುಗಳಿಂದ
ದಾತ್ರ, ಕನ್ನಡದ ಭಾಷಾಚರಿತ್ರೆ, ದೇಶ್ಯ ಸಾಮಾಜಿಕವೂ ತರ್ಕಸಮ್ಮತವೂ ಆಗ

ಲಾದರೂ ಒಟ್ಟಿನಲ್ಲಿ, ಒಂದು ರೀತಿಯ ಅವಸರಪ್ರವೃತ್ತಿಗೀಡಾಗಿ ಈ ಕೃ
ವುಂಟಾದಂತೆ ಕಾಣುತ್ತದೆ. ಯಾವುದಾದರೂ ಒಂದು ವಿಷಯವನ್ನೆತ್ತಿಕೊಂಡ
ಅದು ಎಲ್ಲ ಪ್ರಭೇದಗಳಲ್ಲಿಯೂ ಹೇಗೆ ಹೇಗೆ ವ್ಯಕ್ತಗೊಳ್ಳುತ್ತದೆಂದು ತೋರಿ
ದರೆ ಬರಿತ್ತು ಸರ್ವಸಮ್ಮತ, ಸಮರ್ಪಕ, ತರ್ಕಪೂರ್ಣವೆನ್ನಬಹುದು.

ಅನುಬಂಧದಲ್ಲಿ ಪಾರಿಭಾಷಿಕ ಶಬ್ದಗಳಿಗೆ ಸಮಾನವಾದ ಇಂಗ್ಲಿಷ ರೂ
ಗಳನ್ನೂ ಕೊಡಬೇಕಿತ್ತು.

ಅಕಾರಸೂಚಿ, ಕನ್ನಡ ಇಂಗ್ಲಿಷ — ಎರಡರಲ್ಲೂ ಇದೆ. ಇಂಗ್ಲಿ
ಅಕಾರಸೂಚಿಯಲ್ಲಿ ಇಂಗ್ಲಿಷ ಸ್ಪೆಲ್ಲಿಂಗ್ ಬಗ್ಗೆ ಲೇಖಕರು ಗಮನ ಹರಿಸಬೇ
ಉದಾ: ಪುಟ ೧೧೧ Gowda, K. K., ಎಂಬುದನ್ನು Gauda, K. K
ಎಂದೂ, Gowda Kannada ಎಂಬುದನ್ನು Gauda Kannada ಎಂದ
ತಪ್ಪಾಗಿ ಬರೆಯಲಾಗಿದೆ. ಹಾಗೆಯೇ ೧೧೩ನೇ ಪುಟದಲ್ಲಿ Narasimay
ಎಂದು Narasimhiah ಎಂಬುದನ್ನು ಬರೆದುದು ತಪ್ಪಾಗಿದೆ.

ಮುದ್ರಣ ಸುಂದರವಾಗಿದೆ. ಅಚ್ಚಿನ ತಪ್ಪುಗಳು ಕಡಿಮೆ. ಒಂದೆರ
ಗಳಲ್ಲಿ 'ಎಡೆಮಾಯ್ದು ಬಂದ ತಪ್ಪುಗಳು' — ಹ್ರಸ್ವ ಎಂಬುದು ಹ್ರ
(ಪುಟ ೪೩). ಬಳ್ಳಿಗೆ ಎಂಬುದು ಬೆಳ್ಳಿಗೆ (ಪುಟ ೫೩) ಎಂದಿವೆ.
ಎಂಬುದು ಅತೀ ಎಂಬ ಅಶುದ್ಧರೂಪದಲ್ಲಿ ಕೆಲವೆಡೆಗಳಲ್ಲಿ ಬಂದಿದೆ.

ಒಟ್ಟಿನಲ್ಲಿ ಲೇಖಕರು ಮಾಡಿದ ಪ್ರಯತ್ನ ಕೇವಲ ಪ್ರಯೋಗ ಎ
ದೃಷ್ಟಿಯಿಂದ ಅಭಿನಂದನೀಯ. ಕನ್ನಡ ಭಾಷೆಯ ಪ್ರಭೇದಗಳ ಕು
ಸಂಶೋಧನೆ ಬಾಲ್ಯಾವಸ್ಥೆಯಲ್ಲಿದೆಯೆಂದು ತಿಳಿದಿರುವ ಲೇಖಕರು ತಾತ್ಕಾ
ವಾಗಿ ಈ ಹೊತ್ತಗೆಯನ್ನು ರಚಿಸಿದ್ದಾರೆ. 'ನಡೆವರೆಡಹದೆ ಕುಳಿತಿರೆದಾಡುವ
ಎಂಬಂತೆ, ಬಾಲ್ಯ ದಾಟಿ, ತಾರುಣ್ಯ ತುಂಬಿ, ಪೂರ್ಣವಾಗುವ ಸಂಶೋಧನೆ
ಮೊದಲ ಹೆಜ್ಜೆಯಿದು ಎಂಬ ಭಾವನೆಯಿಂದ ಸಂಶೋಧಕರೂ, ವಿದ್ಯಾ
ಗಳೂ, ಇದನ್ನು ಸ್ವಾಗತಿಸಿ—ಬಳಸಿಕೊಂಡಾರೆಂದು ಆಶಿಸಬಹುದು.

★ ಕೆ. ಕೆ. ಗೌ

ಭರತೇಶವೈಭವಸಂಗ್ರಹ : (ದ್ವಿ. ಮು. ೧೯೬೭) ಸಂ.: ತ. ಸು. ಶಾಮರಾ
ಪ್ರಕಾಶಕರು: ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ. ೧
ಸಾದಾ ಪ್ರತಿ: ೬-೫೦, ಕಾಲಿಕೋ: ೮-೫೦.

ಮೈಸೂರು ವಿಶ್ವವಿದ್ಯಾಲಯದ ಕನ್ನಡ ಗ್ರಂಥಮಾಲೆಯ ೩೦
ಕುಸುಮವಿದು. ಪ್ರಧಾನ ಸಂಪಾದಕರು: ಡಾ|| ಕೆ. ವಿ. ಪುಟ್ಟಪ್ಪನ
ಈ ಗ್ರಂಥದ ಸಂಪಾದಕರು: ಟಿ. ಎಸ್. ಶಾಮರಾಯ. ೧೯೫೫ರಲ್ಲಿ ಮೊ

ಮೊದಲಾದ ಭಾಗಗಳಲ್ಲಿ ಮೂಲದ ಹೆಚ್ಚು ಭಾಗವನ್ನು ಇಟ್ಟುಕೊಂಡದ್ದು ಯೋಗ್ಯವಾಗಿದೆ. ದಿಗ್ವಿಜಯದ ಭಾಗವನ್ನು ಸಂಕ್ಷಿಪ್ತಗೊಳಿಸಿದುದು ಉಚಿತವಾಗಿದೆ. ರತ್ನಾಕರನ ದರ್ಶನವು ಕಾವ್ಯಮಯವಾಗಿ ವ್ಯಕ್ತವಾದ ಭಾಗವನ್ನು ಈ ಸಂಗ್ರಹದಲ್ಲಿ ಉಳಿಸಿಕೊಳ್ಳಲಾಗಿದೆ.

ಪ್ರಾರಂಭದ ೮೩ ಪುಟಗಳ ಪೀಠಿಕೆಯಲ್ಲಿ ಸಂಪಾದಕರು ಕಾವ್ಯದ ಪರಿಚಯವನ್ನೂ, ವಿಮರ್ಶೆಯನ್ನೂ ಮಾಡಿದ್ದಾರೆ. ಕವಿ, ಅವನು ಮಾಡಿಕೊಂಡಿರುವ ಮಾರ್ಪಾಟುಗಳು, ಭರತನ ಸಂಸಾರಚಿತ್ರ, ಪಾತ್ರದೃಷ್ಟಿ, ಅಂದಿನ ಸಮಾಜದ ಚಿತ್ರ, ರತ್ನಾಕರನ ಶೈಲಿ—ಮೊದಲಾದ ವಿಷಯಗಳ ಬಗೆಗೆ ವಿಮರ್ಶೆ ಈ ಪೀಠಿಕೆಯಲ್ಲಿದೆ. ಆದರೆ ಸಾಂಗತ್ಯವೆಂದರೇನು? ಅದರ ಸೊಗಸು ಯಾವ ಬಗೆಯದು? ರತ್ನಾಕರನು ಹೇಗೆ ಆ ಛಂದಸ್ಸನ್ನು ಉಪಯೋಗಿಸುವಲ್ಲಿ ಯಶಸ್ಸನ್ನು ಪಡೆದಿದ್ದಾನೆ? —ಎಂಬ ವಿಷಯಗಳ ವಿವೇಚನೆ ಪೀಠಿಕೆಯಲ್ಲಿ ಅವಶ್ಯವಾಗಿತ್ತು. ಆದೊಂದು ಭಾಗ ಇದ್ದರೆ ಈ ಪೀಠಿಕೆಯ ಉಪಯುಕ್ತತೆ ಇನ್ನೂ ಹೆಚ್ಚಾಗುತ್ತಿತ್ತು. ಕೊನೆಗೆ ಕೊಟ್ಟ 'ಶಬ್ದಕೋಶ' ಅಭ್ಯಾಸಿಗಳಿಗೆ ತುಂಬಾ ಉಪಯುಕ್ತವಾಗಿದೆ.

ಗ್ರಂಥದಲ್ಲಿ ಎಲ್ಲಿಯೂ ಮುದ್ರಾರಾಕ್ಷಸನ ಕೈಚಳಕ ಕಂಡುಬರುವುದಿಲ್ಲ; ಮುದ್ರಣವು ಅಂದವಾಗಿದ್ದು ಗ್ರಂಥವು ಸಂಗ್ರಾಹ್ಯವಾಗಿದೆ.

★ ಜಿ. ಡಿ. ನಾಡಕರ್ಣಿ

ಪ್ಲೇಟೋವಿನ 'ರಿಪಬ್ಲಿಕ್'—ಲೇಖಕರು : ಎಚ್. ಕೃಷ್ಣರಾವ್, ಎಂ.ಎ., ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ೧೯೬೮. ಪುಟ-೩೩೩. ಬೆಲೆ : ಸಾಧಾರಣ ಪ್ರತಿ : ರೂ. ೮-೫೦; ಕ್ಯಾಲಿಕೊ ಪ್ರತಿ : ರೂ ೧೦.೦೦

"ನಿಮ್ಮ ಪುಸ್ತಕ ಭಂಡಾರಗಳನ್ನೆಲ್ಲ ಸುಡಿ. ಅವುಗಳಲ್ಲಿನ ಪುಸ್ತಕಗಳ ವಿಷಯಗಳು ಪ್ಲೆಟೋವಿನ ಡಯಲಾಗುಗಳಲ್ಲಿವೆ" ಎಂದು ಅಮೇರಿಕಾದ ಪ್ರಖ್ಯಾತ ಸಾಹಿತಿ ಎಮರಸನ್‌ನು ಹೇಳುವಲ್ಲಿ ಅತಿಶಯೋಕ್ತಿಯೇನಿಲ್ಲ. ಪ್ಲೆಟೊ (ಕ್ರಿ. ಪೂ. ೪೨೭–ಕ್ರಿ. ಪೂ. ೩೪೭) ಜಾಗತಿಕ ಪ್ರಖ್ಯಾತ ತತ್ವಜ್ಞಾನಿಯು ಜಗವೆಲ್ಲ ನಿದ್ರಿಸುತ್ತಿದ್ದಾಗ ನಕ್ಷತ್ರಗಳ ಮಿಣುಕು ಬೆಳಕಿನಲ್ಲಿ ತಾತ್ವಿಕ ಪಥವನ್ನು ಹಿಡಿದು ಆದರ್ಶವತ್ತ ಮುನ್ನಡೆದ ಮಹಾನುಭಾವನು. ಸಾಕ್ರೆಟೀಸ್‌ನಂತ ಗುರುವಿನ ಉಪದೇಶಾಮೃತವನ್ನು ಈಂಟಿದ ಇವನಿಗೆ ಸಾಟಿಯುಂಟೆ ?

ಗ್ರೀಸ್ ದೇಶದ ಅಥೆನ್ಸ್ ನಗರದಲ್ಲಿ ಕ್ರಿ.ಪೂ. ೪೨೭ರಲ್ಲಿ ಪ್ಲೆಟೊ ಜನ ತಾಳಿದನು. ಮನೆಯೇ ಮೊದಲ ಪಾಠಶಾಲೆ ಎಂಬುದು ಸತ್ಯವಿರಲೇಬೇಕು ಅಂಥ ಪಾಠಶಾಲೆಯಲ್ಲಿ ಈತನು ಪರಿಣತನಾದನು. ತಂದೆಯಾದ ಅರಿಸ್ಟಾನ

ಮಾರ್ಗದರ್ಶನ, ತಾಯಿಯಾದ ಪೆರಿಕ್ಟಿಯೋನ್‌ಳ ಮಮತೆ, ಹಾಗು ಅಣ್ಣಂದಿರಾದ ಅಡಿಮಾಂಟಸ್ ಮತ್ತು ಗ್ಲಾಕನ್‌ರ ಸಹೋದರತ್ವಗಳು ಈತನನ್ನು ಕೈಹಿಡಿದು ಹೆಜ್ಜೆ ಇರಿಸಿದವು ಆದರ್ಶದೆಡೆಗೆ. ಇಷ್ಟು ಸಾಲದುದಕ್ಕೆ ದೈವವೂ ಸಹ ತನ್ನ ಕೈಚಳಕವನ್ನು ತೋರಿಸಿತು. ತಂದೆಯಾದ ಅರಿಸ್ಟಾನನ ಮರಣಾನಂತರ ತಾಯಿಯು ರಾಜಕಾರಣಿಯಾದ ಪೆರಿಕ್ಲಿಸ್‌ನ ಪರಮಮಿತ್ರನಾದ ಪೈರಿಲಾಂಪಸ್‌ನನ್ನು ಮದುವೆಯಾದುದು ಪ್ಲೇಟೋವಿನ ಜೀವನದಲ್ಲಿ ರಾಜಕೀಯ ಪ್ರಭಾವ ಬೀರಿತು. ರಾಜಕಾರಣಿಗಳ ಸಂಪರ್ಕದಲ್ಲಿ ಬಂದು ರಾಜಕೀಯ ವಿಷಯಗಳ ಚರ್ಚೆ ಮಾಡಿ ಆದರ್ಶ ರಾಜ್ಯದ ಬುನಾದಿಯನ್ನು ಹಾಕಲು ಯತ್ನ ನಡೆಸಿದನು. ತನ್ನ ೨೦ನೆಯ ವಯಸ್ಸಿಗೆ ತನ್ನ ಆತ್ಮದ ಕರೆಗೆ ಓಗೊಟ್ಟು ಮಹಾನ್ ವ್ಯಕ್ತಿಯೊಂದು ಆತನ ಬಳಿ ಸಾರಿತು. ೬೨ ವರ್ಷದ ವಯೋವೃದ್ಧ, ಜ್ಞಾನವೃದ್ಧ, ತತ್ವಜ್ಞಾನಿಯಾದ ಸಾಕ್ರೇಟೀಸ್‌ನ ದರ್ಶನವು ಪ್ಲೇಟೋವಿನ ಜೀವನವನ್ನು ಸಾರ್ಥಕಗೊಳಿಸಿತು. ಸಾಕ್ರೇಟೀಸನ ವಿಚಾರಸರಣಿಗಳೆಲ್ಲ ಓತಪ್ರೋತವಾಗಿ 'ರಿಪಬ್ಲಿಕ್'ದಲ್ಲಿ ಇಳಿದುಬಂದಿವೆ. ಸಾಕ್ರೇಟೀಸನು ತನ್ನ ಶಿಷ್ಯನಾದ ಪ್ಲೇಟೋವಿನ 'ರಿಪಬ್ಲಿಕ್'ದಲ್ಲಿ ಅಮರನಾಗಿದ್ದಾನೆ, ಚಿರನೂತನನಾಗಿದ್ದಾನೆ. ಅಷ್ಟೇ ಅಲ್ಲ, ಪ್ರಚಲಿತ ಪ್ರಶ್ನೆಗಳಿಗೂ ತಕ್ಕ ಉತ್ತರವನ್ನೀಯಲು ಸನ್ನದ್ಧನಾಗಿದ್ದಾನೆ.

ಪ್ಲೇಟೋವಿನ ಕಾಲದಲ್ಲಿ ಗುಲಾಮಗಿರಿಯು ಅನಿಷ್ಟ ಪದ್ಧತಿಯಿತ್ತು. ಈ ಅನಿಷ್ಟಕ್ಕೆ ಸ್ವತಃ ತಾನೇ ಬಲಿಯಾದ ಪ್ರಸಂಗವೂ ಇದೆ. ಒಮ್ಮೆ ಗುಲಾಮನಾಗಿ ಈತನು ಮಾರಲ್ಪಟ್ಟನು. ಆದರೆ ಕೊಂಡವನು ಒಳ್ಳೆಯವನಾದುದರಿಂದ ಈ ತತ್ವಜ್ಞಾನಿಯನ್ನು ಬಿಡುಗಡೆ ಮಾಡಿದನು.

ಪ್ಲೇಟೋ ಆದರ್ಶವನ್ನು ಅರಸುತ್ತ ಹೋಗಿ ತನ್ನ ಜೀವನವನ್ನು ಸಾರ್ಥಕಪಡಿಸಿಕೊಂಡು ಶರಣನಾದನೆಂಬುದರಲ್ಲಿ ಸಂಶಯವಿಲ್ಲ. ಶಿಷ್ಯನ ಮದುವೆಗೆ ಹೋದಾಗ ಗದ್ದಲಕ್ಕೆ ಬೇಸತ್ತು ಬಂದು ಕೊಠಡಿಯಲ್ಲಿ ನಿದ್ರಿಸಿದನು. ಜಗದ ಜಂಜಡದ ಗದ್ದಲವನ್ನು ಬಿಟ್ಟು ಬಹುದೂರ ಸರಿದು ನಿದ್ರೆಯಲ್ಲಿ ಶಾಂತಿಯನ್ನು ಪಡೆದಿದ್ದನು. ಶರಣರ ಜೀವನವನ್ನು ಮರಣದಲ್ಲಿ ಕಾಣಬಹುದು.

'ರಿಪಬ್ಲಿಕ್' ಮೂಲತಃ ಗ್ರೀಕ್ ಭಾಷೆಯಲ್ಲಿ ಪ್ಲೇಟೋವಿನಿಂದ ಬರೆಯಲ್ಪಟ್ಟಿದೆ. ಸದ್ಯಕ್ಕೆ ಈ ಗ್ರಂಥವು ಹಲವಾರು ಜಾಗತಿಕ ಭಾಷೆ, ಉಪಭಾಷೆಗಳಲ್ಲಿ ಅನುವಾದಗೊಂಡು ಗುರುಶಿಷ್ಯರಾದ ಪ್ಲೇಟೋ, ಅರಿಸ್ಟಾಟಲ್‌ರ ತತ್ವಜ್ಞಾನದ ಸೌರಭವನ್ನು ಜಗದಾದ್ಯಂತ ಸೂಸುತ್ತಿದೆ. ಈ ಪುಸ್ತಕವನ್ನು ...ವು. ನೂರಾರು ವರ್ಷಗಳ ಮೊದಲೇ ಬರೆದಿದ್ದರೂ ಅದರಲ್ಲಿಯ ಜ್ಞಾನಭಂಡಾರವು ಹಿಂದಿನ, ಇಂದಿನ ಹಾಗೂ ಮುಂದಿನ ತ್ರಿಕಾಲ ಜ್ಞಾನಸಂಪನ್ನವಾಗಿಯಾದಂತಿದೆ ಇದುವೇ ಈ ಗ್ರಂಥದ ಹಿರಿಮೆ. ಇದು ನಾಮತಃ

ರಾಜ್ಯಶಾಸ್ತ್ರ ಗ್ರಂಥವಾದರೂ ವಿಶೇಷತಃ ನೈತಿಕ ಶಾಸ್ತ್ರಗ್ರಂಥವು. ಇಡೀ ಗ್ರಂಥವು ಸಂಭಾಷಣಾರೂಪದಲ್ಲಿದೆ. ವಿಚಾರಗಳ ಮಂಥನದಲ್ಲಿ ಜ್ಞಾನದ ನಿಜ ತಿರುಳು ಪುಟಿದೆದ್ದಿದೆ.

'ರಿಪಬ್ಲಿಕ್' ಗ್ರಂಥದಲ್ಲಿ ಒಟ್ಟು ಹತ್ತು ಭಾಗಗಳುಂಟು. ಮೊದಲನೆಯ ಭಾಗವು 'ಪೂರ್ವರಂಗ' ಸಿದ್ಧಮಾಡಿದೆ. ಮಾನವನ ಹಾಗೂ ಸಮಾಜದ ಏಳ್ಗೆ ಆತನ ಶೀಲ ಮತ್ತು ಸದ್ವರ್ತನೆಯ ಮೇಲೆ ಅವಲಂಬಿಸಿದೆ ಎಂಬುದು ತ್ರಿಕಾಲಕ್ಕೂ ಸಮ್ಮತವಾದ ಸಂಗತಿಯೇನೋ ನಿಜ. ಆದರೆ ಶೀಲವೆಂದರೇನು? ಸದ್ವರ್ತನೆಯೆಂದರೇನು? ಅವುಗಳನ್ನು ಅವಲಂಬಿಸಿದವರಿಗೆ ಸುಖವುಂಟೆ? ಗೌರವ ದೊರೆಯುವುದೇ? ಎಂಬ ಹಲವಾರು ಪ್ರಶ್ನೆಗಳು ಉದ್ಭವಿಸುತ್ತವೆ. ಮಿತ್ರನಿಗೆ ಸಹಾಯ ಹಾಗು ಶತ್ರುವಿಗೆ ಕೇಡನ್ನು ಬಗೆಯುವುದೇ ಸದ್ವರ್ತನೆ ಎಂದು ಹಲವರು ವಾದಿಸಿದರೂ ಸಾಕ್ರೇಟೀಸನ ದೃಷ್ಟಿಯಲ್ಲಿ ಯಾರಿಗೂ ಕೇಡನ್ನು ಬಗೆಯದೆ ಇರುವುದೇ ನಿಜವಾದ ಸದ್ವರ್ತನೆ. ಅಹಿಂಸೆಯೇ ಪರಮಧರ್ಮ. ಆದರೆ ಸದ್ವರ್ತನೆ ಅವಲಂಬಿಸಿದವರಿಗೇನೇ ಹೆಚ್ಚು ಕಷ್ಟಕಾರ್ಪಣ್ಯಗಳು ಗಂಟು ಬೀಳುತ್ತವೆ. ನೀತಿಗೆಟ್ಟವರೇ ಸದ್ಯಕ್ಕೆ ಸುಖಿಗಳಂತಿರುವರು. ಈ ವಿಚಾರವನ್ನು ಸಾಕ್ರೇಟೀಸನು ಈ ರೀತಿಯಾಗಿ ಹೇಳಿದ್ದಾನೆ— "ಸದ್ವರ್ತನೆಯಿಂದ ಜೀವನ ಸಾಗಿಸಲೇ ಅಥವಾ ಮೋಸಮಾಡಿ ಮೇಲಕ್ಕೇರಲೇ, ಎಂಬ ಸಂಶಯ ಯುವಕ ನಿಗೆ ಬರುವುದು ಸಹಜ; ಒಳ್ಳೆಯವನಾಗಿದ್ದರೆ ನನಗೆ ಪ್ರಯೋಜನ ಕಡಿಮೆ. ಕಷ್ಟ-ನಷ್ಟ ಹೆಚ್ಚು. ಇವುಗಳನ್ನು ತಪ್ಪಿಸಿಕೊಳ್ಳಬೇಕಾದರೆ ನಾನು ಜೀವನದಲ್ಲಿ ಒಳ್ಳೆಯವನಂತೆ ನಟಿಸಬೇಕು. ಅದರಿಂದ ಖ್ಯಾತಿ ಬರುವುದಲ್ಲದೆ ಜೀವನವೂ ಸುಖಮಯವಾಗುವುದು. ಪ್ರಾಜ್ಞರು ಹೇಳುವಂತೆ— 'ವಾಸ್ತವಿಕತೆಗಿಂತ ತೋರಿಕೆ ಹೆಚ್ಚು ಗಣನೆಗೆ ಬರುವದು.' ಇದೇ ನಮ್ಮ ಇಹಸುಖವನ್ನು ನಿರ್ಧರಿ ಸುವದು. ಆದ್ದರಿಂದ ನಾನು ತೋರಿಕೆಯನ್ನೇ ಹಿಡಿಯುವೆನು. ಸೌಶೀಲ್ಯದ ಮುಖವಾಡ ಧರಿಸಿ ಗೋಮುಖವ್ಯಾಘ್ರವಾಗುವೆನು. ನರಿಯಂತೆ ಉಪಾಯ ಗಾರನಾಗಿ ಎಲ್ಲ ವಿದ್ಯೆಯಲ್ಲಿಯೂ ಮಾಯಾವಿಯಾಗಬೇಕು" ಎಂದು ಯುವ ಕನು ಹೇಳುವನು.

ಏನೇ ಆದರೂ ಸದ್ವರ್ತನೆಯನ್ನವಲಂಬಿಸುವುದೇ ಶ್ರೇಷ್ಠ. ಜೀವನ ಸಾಫಲ್ಯ ಹೊಂದುವದು. ನಿಜ ಜೀವನದಲ್ಲಿ "ಕೆಟ್ಟವನು ಧನಿಕನಾಗಿದ್ದರೆ ಬಹಿರಂಗವಾಗಿಯೂ ರಹಸ್ಯವಾಗಿಯೂ ಜನರು ಗೌರವಿಸುವರು. ಬಡವ ಒಳ್ಳೆಯವನಾಗಿದ್ದು ಬಲಹೀನನಾಗಿದ್ದರೆ ಯಾರೂ ಇವನನ್ನು ಗೌರವಿಸುವುದಿಲ್ಲ." ಇದಕ್ಕೆ ಮಾನವನು ಅಂಜಬೇಕಿಲ್ಲ.

ಎರಡನೆಯ ಭಾಗದಲ್ಲಿ "ಸಮಾಜೋತ್ಪತ್ತಿ ಮತ್ತು ರಾಜ್ಯರಚನೆಯ ಪೂರ್ವಸಿದ್ಧತೆಗಳು" ಇರುವವು. ಸಮಾಜ ಸ್ಥಾಪನೆ ಮನುಷ್ಯನ ಸ್ವಭಾವದ

ಮೇಲೆ ಆಧರಿತವಾಗಿದೆ. ಮನುಷ್ಯನು ಸಮಾಜಜೀವಿಯು. ರಾಜ್ಯವು ವ್ಯಕ್ತಿಯ ಪ್ರತಿರೂಪವು. ವ್ಯಕ್ತಿಯು ಸ್ವಯಂಪೂರ್ಣನಲ್ಲ. ಆತನು ಸಮಾಜದ ಮೇಲೆ ಅವಲಂಬಿಸಿದ್ದಾನೆ. ಸಮಾಜವು ಹಂದಿಯ ದೊಡ್ಡಿಯಂತಿರದೆ, ನಾಗರಿಕತೆ ಹಾಗೂ ಸಂಸ್ಕೃತಿಯ ನೆಲೆವೀಡಾಗಿರಬೇಕು. ಪ್ಲೇಟೋನ ಸಮಾಜದಲ್ಲಿ ಮುಖ್ಯವಾಗಿ ಮೂರು ವರ್ಗಗಳಿವೆ : (i) ರಾಜ್ಯರಕ್ಷಕರು. (ii) ಅವರ ಸಹಾಯಕರು ಹಾಗೂ (iii) ಬೇಸಾಯಗಾರರು, ವರ್ತಕರು ಮುಂತಾದವರು. ಈ ವರ್ಗಗಳು ಬಂಗಾರ, ಬೆಳ್ಳಿ ಹಾಗೂ ಕಬ್ಬಿಣವನ್ನು ಹೋಲುತ್ತವೆ. ಅಥವಾ ಆರ್ಯಸಂಸ್ಕೃತಿಯ ವರ್ಗೀಕರಣದಂತೆ ಸತ್ವ, ರಜಸ್ ಮತ್ತು ತಮಸ್‌ಗಳನ್ನು ಹೋಲುತ್ತವೆ.

ಮೂರನೆಯ ಭಾಗದಲ್ಲಿ 'ವಿದ್ಯಾಭ್ಯಾಸ'ದ ವಿವರವಾದ ಮಾಹಿತಿಯಿದೆ. "ರಾಜ್ಯರಕ್ಷಕರನ್ನು ಸತ್ವಶಾಲಿಗಳನ್ನಾಗಿ, ತಜ್ಞರನ್ನಾಗಿ ತರಬೇತು ಮಾಡಲು ವಿದ್ಯಾಭ್ಯಾಸವೇ ಸರಿಯಾದ ಮಾರ್ಗವು." ಅದರ ಒಳಗಣ್ಣನ್ನು ಜ್ಞಾನ-ಜ್ಯೋತಿಯ ಕಡೆಗೆ ತಿರುಗಿಸಿ ಅವರಲ್ಲಿ ಸದ್ಭಾವನೆಗಳನ್ನು ಪ್ರಚೋದಿಸಲು ಇದು ಅತ್ಯವಶ್ಯ ವ್ಯಕ್ತಿಯ ನೀತಿ ಸಮಾಜದ ಸಂಸ್ಕೃತಿ, ರಾಜ್ಯದ ಏಳ್ಗೆಗಳೆಲ್ಲವೂ ವಿದ್ಯಾಭ್ಯಾಸದ ಮೇಲೆ ಅವಲಂಬಿಸಿವೆ. ಈ ವಿಷಯವು ಎಲ್ಲ ಕಾಲಕ್ಕೂ ಸತ್ಯ ಸಂಗತಿಯು. ಸದ್ಯದ ಪ್ರಜಾಪ್ರಭುತ್ವದ ಯಶಸ್ಸು ಈ ವಿದ್ಯಾಭ್ಯಾಸವನ್ನೇ ಅವಲಂಬಿಸಿದೆ. ಪ್ಲೇಟೋನ ಪ್ರಕಾರ : ವಿದ್ಯೆಯು—ಜೀವನದುದ್ದಕ್ಕೂ ಇರಬೇಕಾದ ನಿಜ ಸಂಗಾತಿಯು. ವಿದ್ಯಾಭ್ಯಾಸದಲ್ಲಿ—ಸಾಹಿತ್ಯ, ಸಂಗೀತ ಮತ್ತು ವ್ಯಾಯಾಮಗಳೆಂಬ ಮೂರು ಹಂತಗಳು. ಇದರಲ್ಲಿ ಓದುವದು, ಬರೆಯುವದು ಹಾಗು ವ್ಯಾಯಾಮ ಮಾಡುವದು ಬರುವದು. ಶಿಕ್ಷಣ ಕ್ರಮದಲ್ಲಿ ಕಥೆಯ ಸ್ಥಾನ ಹಾಗೂ ದೇವರ ಸ್ಥಾನಗಳನ್ನು ಸಹ ಸಮಂಜಸವಾಗಿ ಪ್ಲೇಟೋನು ವಿವರಿಸಿರುವುದನ್ನು ಕಂಡಾಗ ಆತನೊಬ್ಬ ನಿಜವಾಗಿಯೂ ಶಿಕ್ಷಣ-ತಜ್ಞನಾಗಿದ್ದನೆಂಬುದು ಕಂಡುಬರುವುದು.

ನಾಲ್ಕನೆಯ ಭಾಗದಲ್ಲಿ "ರಾಜ್ಯರಕ್ಷಕರು ಮತ್ತು ಅವರ ಸಹಾಯಕರು" ಗಳ ಬಗ್ಗೆ ವಿವರಣೆಯನ್ನು ಕೊಡಲಾಗಿದೆ. ರಾಜ್ಯರಕ್ಷಕರು ಮತ್ತು ಬೌದ್ಧಿಕ ಮತ್ತು ಶಾರೀರಿಕ ದೃಷ್ಟಿಯಿಂದ ಉಚ್ಚಮಟ್ಟದವರು. ನೀತಿ ನಡತೆ ಹಾಗು ವರ್ತನೆಗಳಲ್ಲಿ ಶ್ರೇಷ್ಠರು. ಇವರು ಸ್ವತಃ ತತ್ವಜ್ಞಾನಿಗಳು. ಸ್ವಹಿತವನ್ನು ತ್ಯಜಿಸಿ ಪರಹಿತವನ್ನು ಚಿಂತಿಸುವ ಮಹಾನುಭಾವರು. ಇವರ ಸಹಾಯಕರೆಂದರೆ ಸೈನ್ಯಪಡೆಯವರು. ಇವರೂ ಸಹ ಐಹಿಕ ಸುಖಗಳನ್ನು ತ್ಯಜಿಸಿ ರಾಷ್ಟ್ರದ ಏಳ್ಗೆಗೆ ಹೋರಾಡುವ ಯೋಧರು. ಈ ಎರಡೂ ವರ್ಗದವರು ವೈವಾಹಿಕ ಸುಖವನ್ನಾಗಲಿ ಆಸ್ತಿಪಾಸ್ತಿಗಳ ಭೋಗವನ್ನಾಗಲಿ ಇಚ್ಛಿಸಬಾರದು. ಹೊನ್ನು, ಹೆಣ್ಣು ಹಾಗು ಮಣ್ಣುಗಳ ಮಡುವಿನಲ್ಲಿ ಬಿದ್ದರೆ ಪರಹಿತ ಸಾಧಿಸುವದು

ಶಕ್ಯವಿಲ್ಲವೆಂಬುದು ಸಾಕ್ರೇಟೀಸ್, ಪ್ಲೇಟೋರಿಗೆ ಅತೀವ ಮನದಟ್ಟಾಗಿತ್ತು. ಆದುದರಿಂದ ಅವರನ್ನು ಈ ಮೂರು ಮಾಯೆಗಳಿಂದ ದೂರಿಟ್ಟು ಆದರ್ಶ ರಾಜ್ಯ ರಕ್ಷಕರನ್ನಾಗಿ ಪಡೆಯಲು ಇಚ್ಛಿಸಿದ್ದಾರೆ. ಕಲ್ಪನೆಗೆ ಇದು ಸುಲಭವೇನೋ ಸರಿ, ಆದರೆ ನಿಜಜೀವನದಲ್ಲಿ ಇಂಥ ಕಠಿಣ ತಪಸ್ಸಿನಲ್ಲಿ ಜಯಶಾಲಿಗಳಾಗಬಲ್ಲ ರಾಜ್ಯ ರಕ್ಷಕರನ್ನು ಪಡೆಯಲು ಸಾಧ್ಯವೆ?

ಐದನೆಯ ಭಾಗದಲ್ಲಿ "ರಾಜ್ಯದ ಮತ್ತು ವ್ಯಕ್ತಿಯಲ್ಲಿನ ನ್ಯಾಯವಾದ ನಡತೆಯ ಬಗ್ಗೆ ವಿವೇಚಿಸಲಾಗಿದೆ. ರಾಜ್ಯವು ವ್ಯಕ್ತಿಯ ಪ್ರತಿರೂಪವು. ವ್ಯಕ್ತಿಯು ಒಳ್ಳೆಯವನಾದರೆ ರಾಜ್ಯವು ಒಳ್ಳೆಯದಾಗುವದು. ವ್ಯಕ್ತಿಯ ಮತ್ತು ಸಮಾಜದ ಒಳ್ಳೆಯ ಗುಣಗಳೆಂದರೆ ಜ್ಞಾನ, ಧೈರ್ಯ, ಆತ್ಮ-ಸಂಯಮ, ಒಳ್ಳೆಯ ನಡತೆಗಳು. ಇವೆಲ್ಲವುಗಳನ್ನು ದೊರಕಿಸುವ ಆದರ್ಶ ವನ್ನು ಸಾಕ್ರೇಟೀಸ್ ಮತ್ತು ಪ್ಲೇಟೋ ಇಟ್ಟುಕೊಂಡಿದ್ದರು. ಆದರ್ಶವು ಸತ್ಯಕ್ಕಿಂತ ಯಾವಾಗಲೂ ಬಲು ದೂರ. ಆದರೂ ಆಶಾವಾದಿಗಳ ದೃಷ್ಟಿ ಅದರಡೆಗೇ ಇರುವದು. ಅತಿ ವಿವಾದಾಸ್ಪದವಾದ ಸಂಗತಿಯೆಂದರೆ–'ಸ್ತ್ರೀಯರ ಮತ್ತು ಮಕ್ಕಳ ವಿಚಾರದಲ್ಲಿ–ಕೂಡು-ಒಡೆತನ ಪದ್ಧತಿ." ಆಸ್ತಿಪಾಸ್ತಿಯನ್ನು ಒಟ್ಟು ಸಮಾಜವಾದದ ದೃಷ್ಟಿಯಲ್ಲಿ ಉಪಭೋಗಿಸುವಂತೆ ಸ್ತ್ರೀಯರು ಹಾಗೂ ಮಕ್ಕಳನ್ನು ಸಹ ಸಮಾಜವಾದದ ದೃಷ್ಟಿಯಲ್ಲಿ ಕಾಣುವ ಅತೀವ ಆದರ್ಶದ ವಿಚಾರವನ್ನು ಪ್ಲೇಟೋ ಮುಂದಿಟ್ಟಿರುವನು. ಈ ವಿಚಾರವನ್ನು ಖಂಡಿಸಿ ಅದನ್ನು ಚೂರುಚೂರಾಗಿ ಮಾಡಿಬಿಡುವನು—ಆತನ ಶಿಷ್ಯ ಆರಿಸ್ಟಾಟಲನು. ನೀತಿ ಸದ್ವರ್ತನೆಯನ್ನು ಹುಡುಕಲು ಹೊರಟವನು ಇದರಿಂದ ಅದನ್ನು ಮತ್ತಷ್ಟು ದೂರ ಸರಿಸುತ್ತ ಹೋದಂತಾಗುವದು. ಕೂಡು-ಒಡೆತನ ಅನೀತಿಗೆ ಎಡೆಮಾಡು ವುದಲ್ಲದೆ ತಂದೆತಾಯಿ-ಬಂಧುಬಳಗವೆಂಬ ಸುಮಧುರ ಬಂಧನವನ್ನೇ ಕಡಿದು ಚೆಲ್ಲುವದು. ಈ ಕೂಡು-ಒಡೆತನ ಯಾವ ನಾಗರಿಕತೆಯಲ್ಲಿಯೂ ಕಂಡು ಬಂದಿಲ್ಲ.

ಆರನೆಯ ಭಾಗದಲ್ಲಿ "ಸ್ತ್ರೀಯರು ಮತ್ತು ಸಂಸಾರ"ದ ಬಗ್ಗೆ ಹೇಳ-ಲಾಗಿದೆ. ಸ್ತ್ರೀಯರ ಏಳ್ಗೆಗಾಗಿ ಪ್ರಪ್ರಥಮ ಹೋರಾಡಿದವರೆಂದರೆ ಬಹುಶಃ ಸಾಕ್ರೇಟೀಸನೇ ಇರಬೇಕು. ಆತನ ವಿಚಾರಗಳು 'ರಿಪಬ್ಲಿಕ್'ದಲ್ಲಿ ಮುದ್ರಿತ ವಾಗಿವೆ. ಸ್ತ್ರೀ ಪುರುಷಸಮಾನಳು. ಸಾಹಿತ್ಯ, ಸಂಗೀತ ಹಾಗು ವ್ಯಾಯಾಮ ಶಿಕ್ಷಣವನ್ನು ಅವಳಿಗೂ ಕೊಡಬೇಕು. ರಾಜಕಾರಣದಲ್ಲಿ ಭಾಗವಹಿಸಿ ಆದರ್ಶ ರಾಜ್ಯನಿರ್ಮಾಣಮಾಡುವಲ್ಲಿ ಅವಳೂ ಸಮರ್ಥಳಿರುವಳಲ್ಲದೆ ರಾಜ್ಯರಕ್ಷಣೆಗಾಗಿ ಅವಳೂ ಯೋಧಳಾಗಿ ಹೋರಾಡಬಲ್ಲಳೆಂದು ಕ್ರಿ.ಪೂ. ನೂರಾರು ವರ್ಷಗಳ ಹಿಂದೆಯೇ ಸಾಕ್ರೇಟೀಸನು ಸಾರಿರುವನು. ಸ್ತ್ರೀಯನ್ನು ಮೇಲೆತ್ತುವ ಉದ್ದೇಶದಿಂದಲೇ ಸ್ತ್ರೀಯರ ಮತ್ತು ಮಕ್ಕಳ ಕೂಡು-ಒಡೆತನ ಪದ್ಧತಿ

ಯನ್ನು ಸೂಚಿಸಲಾಗಿದೆ. ಸ್ತ್ರೀಸಮಾನತೆ, ಸ್ತ್ರೀಶಿಕ್ಷಣಗಳ ದೃಷ್ಟಿಯಿಂದ ಸಾಕ್ರೇಟೀಸ್ ಮತ್ತು ಪ್ಲೇಟೋರು ನಿಜವಾಗಿಯೂ ಒಳ್ಳೆಯ ಸಮಾಜಸುಧಾರ-ಕರು. ಆದರೆ ಕೂಡು-ಒಡೆತನ ಪದ್ಧತಿ ಮಾತ್ರ ಅಶಕ್ಯವಾದ ಅನೀತಿಮಾರ್ಗವು. ವಿವಾಹವು ಅತ್ಯವಶ್ಯವು. ಅದನ್ನು ಕಡೆಗಣಿಸಿದರೆ ನೀತಿಯನ್ನೇ ಕಡೆಗಣಿಸಿದಂತೆ. ಆದರ್ಶ, ರಾಜ್ಯದ ತಾಯಿಯು.

ಏಳನೆಯ ಭಾಗದಲ್ಲಿ 'ತಜ್ಞರ ಆಳಿಕೆ'ಯ ಬಗ್ಗೆ ಬರೆಯುತ್ತ 'ತಜ್ಞ' ಎಂದರೇನು ? ತಜ್ಞರ ಗುಣಗಳಾವವು ? ಇದು ಸಾಧ್ಯವಿದೆಯೆ ? ಎಂಬುದಾಗಿ ವಿವರಿಸಲಾಗಿದೆ. ತತ್ವಜ್ಞಾನಿಯೇ ರಾಜ್ಯವಾಳಬೇಕು—ಅಂದರೇನೇ ಆದರ್ಶರಾಜ್ಯ ನಿರ್ಮಾಣವಾಗುವದು. ಭದ್ರವಾದ ಶಿಸ್ತಿನ ಸರಕಾರ ಬೇಕಾದರೆ, ಜನರು ಸುಖ ದಿಂದಿರಬೇಕಾದರೆ ಅರ್ಹ ವ್ಯಕ್ತಿಗಳಿಗೆ ಅಧಿಕಾರ ಕೊಡಬೇಕು. ಈ ವಿಚಾರ ಗಳು ನಿಜರೂಪದಲ್ಲಿ ಬರುವದು ಅತಿ ಕಠಿಣ. ಒಳ್ಳೆಯವರು ರಾಜಕಾರಣದಲ್ಲಿ ಬರುವುದಿಲ್ಲ. ಬಂದವರು ಒಳ್ಳೆಯವರಾಗಿ ಉಳಿಯುವುದಿಲ್ಲ. ಕೆಸರಿನಲ್ಲಿ ಬಿದ್ದಾಗ ಸ್ವಚ್ಛವಾಗಿರಲು ಶಕ್ಯವೆ ? ಪ್ಲೇಟೋನ ಆದರ್ಶವು ಆದರ್ಶವಾಗಿಯೇ ಉಳಿದಿದೆ ಇನ್ನೂ !

ಎಂಟನೆಯ ಭಾಗದಲ್ಲಿ "ರಾಜ್ಯರಕ್ಷಕರ ವಿದ್ಯಾಭ್ಯಾಸ"ದ ಬಗ್ಗೆ ಪುನಃ ವಿವರಿಸಲಾಗಿದೆ. ರಾಜ್ಯರಕ್ಷಕರು ಗಣಿತಶಾಸ್ತ್ರ, ಜ್ಯಾಮಿತಿ, ಘನ ಜ್ಯಾಮಿತಿ, ಖಗೋಳಶಾಸ್ತ್ರ ಮುಂತಾದವುಗಳಲ್ಲಿ ಪರಿಣತರಾಗಿರಬೇಕು. ಅವರ ಆಯ್ಕೆ ಹಾಗು ವ್ಯಾಸಂಗ ಕ್ರಮ ವಿವರಣೆಯನ್ನು ಸಹ ಸಲ್ಲಿ ಕಾಣುವೆವು.

ಒಂಬತ್ತನೆಯ ಭಾಗದಲ್ಲಿ 'ಅಸಮಗ್ರ ಸಮಾಜಗಳು' ವಿವರಿಸಲ್ಪಟ್ಟಿವೆ. ಇಲ್ಲಿ ಸಾಕ್ರೇಟೀಸನು ಸಮಾಜಗಳ ಮತ್ತು ವ್ಯಕ್ತಿತ್ವದ ಅವನತಿಯನ್ನು ಪರಿ ಶೀಲಿಸಿರುವನು. ಟಿಮೊಕ್ರಸಿ (Timocracy), ಆಲಿಕಾರ್ಕಿ ಡೆಮೋಕ್ರಸಿ, ಟಿರನಿ ಮುಂತಾದ ಸಮಾಜಗಳ ವಿವೇಚನೆ ಮಾಡಲಾಗಿದೆ. ೨೦ನೆಯ ಶತಮಾನದಲ್ಲಿ ಆದರ್ಶವಾಗಿರುವ ಡೆಮೋಕ್ರಸಿಯು ಕ್ರಿ.ಪೂ. ಸುಮಾರು ೨೦೦ ವರ್ಷಗಳ ಹಿಂದೆ ಸಾಕ್ರೇಟೀಸ್, ಪ್ಲೇಟೋ ಮತ್ತು ಅರಿಸ್ಟಾಟಲರ ದೃಷ್ಟಿಯಲ್ಲಿ ಕೀಳು ಮಟ್ಟದ ಪದ್ಧತಿಯಾಗಿತ್ತು.

ಕೊನೆಯದಾದ ಹತ್ತನೆಯ ಭಾಗದಲ್ಲಿ 'ಕಲಾತತ್ವ' ಹೊರಹೊಮ್ಮಿದೆ. ಇಲ್ಲಿ ಕವಿತ್ವ, ಕಲೆಯ ತತ್ವ, ಪದ್ಯ ಮತ್ತು ನಾಟಕಗಳ ಪರಿಣಾಮ ಮುಂತಾ-ದವುಗಳ ಬಗೆಗೆ ವಿವರಿಸಲಾಗಿದೆ.

ಪ್ಲೇಟೋ ಒಳ್ಳೆಯ ಲೇಖಕ, ತತ್ವಜ್ಞಾನಿ ಹಾಗೂ ಸಮಾಜಸುಧಾರಕ ಎಂಬ ಅಂಶಗಳನ್ನು ಆತನ ಕೃತಿ 'ರಿಪಬ್ಲಿಕ್' ಎತ್ತಿ ತೋರಿಸುತ್ತಿದೆ. ಅಂದಿನ ಅವನೆಲ್ಲ ಭಾವನೆಗಳು ಇಂದಿಗೂ ಪ್ರಚಲಿತ ಭಾವನೆಗಳಾಗಿವೆ. ವಿಶ್ವಬಂಧುತ್ವ, ಮಿತಸಂತಾನಪದ್ಧತಿ, ಭಾಷಣಸ್ವಾತಂತ್ರ್ಯ, ಸಾರ್ವಜನಿಕ ಆಸ್ತಿ ಪದ್ಧತಿ,

ಸ್ತ್ರೀಪುರುಷರ ಸಮಾನತೆ ಹಾಗೂ ಧರ್ಮಶೀಲತೆಗಳು ಎಂದೆಂದಿಗೂ ಹೊಸ ವಿಚಾರಗಳೇ.

ದೇಶಭಾಷೆಯೇ ಶಿಕ್ಷಣಮಾಧ್ಯಮವಾಗಬೇಕೆಂಬ ವಾದಕ್ಕೆ ಈಗ ತಕ್ಕಷ್ಟು ಅನುಕೂಲ ಪರಿಸರ ಒದಗಿದೆ ದೇಶಭಾಷೆಯು ಅಷ್ಟೊಂದು ಪರಿಪುಷ್ಟವಲ್ಲ ಎಂಬ ಹಲವರ ಪ್ರತಿಕೂಲ ವಾದವನ್ನು ಶ್ರೀಮಾನ್ ಎಚ್. ಕೃಷ್ಣರಾವ, ಎಂ.ಎ, ರಂಥವರು ತಮ್ಮ ಸೇವೆಯಿಂದ ಅಲ್ಲಗಳೆಯುವ ಪ್ರಯತ್ನ ಮಾಡಿದ್ದಾರೆ. 'ಪ್ಲೇಟೋವಿನ ರಿಪಬ್ಲಿಕ್'ದಂಥ ಗ್ರಂಥವನ್ನು ಕನ್ನಡಭಾಷೆಯಲ್ಲಿ ಕೃತಿಗಿಳಿಸಿದುದು ಕೃಷ್ಣರಾವ್‌ರವರ ಮನೋದಾರ್ಢ್ಯವನ್ನು, ಹಾಗು ಭಾಷಾಭಿಮಾನವನ್ನು ಎತ್ತಿತೋರಿಸುತ್ತದೆ. ಅವರ ಕನ್ನಡ ಶೈಲಿಯು ಸರಾಗವಾಗಿ. ಓತಪ್ರೋತವಾಗಿ ಓದುಗನನ್ನು ಕರೆದೊಯ್ದಿದೆ. ಕೇವಲ ಮೈಸೂರು ಕನ್ನಡದ ಬಳಕೆ ಮಾಡದೆ ಉತ್ತರದ ಗಂಡುಕನ್ನಡವನ್ನು ಸ್ವಲ್ಪ ಕೈಮಾಡಿ ಕರೆಯುವ ಪ್ರಯತ್ನದಲ್ಲಿ ವಿಫಲರಾಗಿದ್ದಾರೆ. ಅಂತೂ ತಮ್ಮ ಕಾರ್ಯದಲ್ಲಿ ಸಾಕಷ್ಟು ಯಶಸ್ಸನ್ನು ಪಡೆದಿದ್ದಾರೆ ಎಂಬುದರಲ್ಲಿ ಸಂಶಯವಿಲ್ಲ. ಒಬ್ಬ ವಯೋವೃದ್ಧರು ಇಂಥ ಕಾರ್ಯವನ್ನು ಮಾಡುತ್ತಿರುವದು ಕನ್ನಡಮ್ಮನ ಭಾಗ್ಯವೆಂದೇ ಹೇಳಬಹುದು. ಲೇಖಕರು ಸ್ವತಃ ಮರೆಮಾಚದೆ ಹೇಳಿದ್ದಾರೆ: "ಆ ಬೃಹದ್ ಗ್ರಂಥದ ಸಮಗ್ರ ಭಾಗಗಳನ್ನೆಲ್ಲ ನನ್ನ ವೃದ್ಧಾಪ್ಯದ ಇತಿಮಿತಿಗಳಿಗನುಗುಣವಾಗಿ ಸಂಗ್ರಹಿಸಿ ರೂಪಿಸಿದ್ದೇನೆ."

ಈ ಮೊದಲು ಅವರ "ಪಾಶ್ಚಾತ್ಯ ರಾಜಕೀಯ ತತ್ವಶಾಸ್ತ್ರ"ದ ವಿಮರ್ಶೆಯನ್ನು ನಾನು ಮಾಡಿರುವೆ. ವಯೋವೃದ್ಧರಾದರೂ ಅದರಲ್ಲಿಯ ಹುಮ್ಮಸ್ಸು, ಜಿಗುಟುತನ, ಕನ್ನಡಾಭಿಮಾನ ಅವರನ್ನು ಸುಮ್ಮನೆ ಕೂಡಗೊಡದೆ ಇಂತಹ ಹೆಮ್ಮೆಯ ಕಾರ್ಯಗಳಿಗೆ ಅಣಿಮಾಡಿದೆ. ಇನ್ನೂ ಹೆಚ್ಚುಹೆಚ್ಚಾಗಿ, ಬಹು ಹುಲುಸಾಗಿ, ಕನ್ನಡದಲ್ಲಿ ಅವರಿಂದ ಉತ್ಕೃಷ್ಟ ಗ್ರಂಥಗಳು ಬರಲಿ, ಕನ್ನಡಮ್ಮನ ಕೀರ್ತಿ ಹೆಚ್ಚಲಿ ಹಾಗೂ ಲೇಖಕರ ಜೀವನ ಸಾರ್ಥಕವಾಗಲಿ ಎಂದು ಮನಸಾ ಹಾರೈಸುವೆ.

★ ಎ. ಎಮ್. ರಾಜಶೇಖರಯ್ಯ

ಸಾದರ ಸ್ವೀಕಾರ

೧. ವಿವೇಕಚಿಂತಾಮಣಿ

ಸಂಪಾದಕರು : ಪ್ರೊ. ಜಿ. ಎಮ್. ಉಮಾಪತಿಶಾಸ್ತ್ರಿಗಳು, ಎಂ. ಎ.
ಪ್ರಕಾಶಕರು : ಶ್ರೀ ಜಗದ್ಗುರು ಗಂಗಾಧರ ಧರ್ಮಪ್ರಚಾರಕ ಮಂಡಲ,
ಮೂರುಸಾವಿರ ಮಠ, ಹುಬ್ಬಳ್ಳಿ
ಪುಟಗಳು : xiv+೨೫೦+xiv+೬+೨೯೮+೯೭ ಬೆಲೆ : ೧೨-೦೦

೨. ಶ್ರೀ ಶರಣಬಸವೇಶ್ವರ ಪುರಾಣ

(ಕವಿತಿಲಕ ಗುರುಲಿಂಗಸಿದ್ಧಕವಿ ವಿರಚಿತ)

ಪ್ರಕಾಶಕರು : ಶ್ರೀ ಶರಣಬಸವೇಶ್ವರ ಸಂಸ್ಥಾನ, ಶರಣನಗರ, ಗುಲಬರ್ಗಾ
ಪುಟಗಳು : ೧೨+೪೩+೧೭೮+iv ಬೆಲೆ : ಸಾದಾ ಪ್ರತಿ ೫-೦೦
ಉತ್ತಮ ಪ್ರತಿ ೬-೦೦

೩. ತುಳುನಾಡಿನ ಇತಿಹಾಸ

ಲೇಖಕರು : ಡಾ. ಕೆ. ವಿ. ರಮೇಶ
ಪ್ರಕಾಶಕರು: ಗೀತಾ ಬುಕ್ ಹೌಸ್, ಮೈಸೂರು
ಪುಟಗಳು : ೧೪+೧೪೨ ಬೆಲೆ : ೧೨-೫೦

೪. ಜಗಲಿ ಹತ್ತಿ ಇಳಿದು (ಕವನಸಂಕಲನ)

ಲೇಖಕರು : ದೊಡ್ಡರಂಗೇಗೌಡ
ಪ್ರಕಾಶಕರು : ಶ್ರೀಮತಿ ಗೌರಿ ಗಂಗಾಧರಮೂರ್ತಿ, ಪ್ರಕೃತಿ ಪ್ರಕಾಶನ,
ಮೈಸೂರು-೫
ಪುಟಗಳು : ೪೦ ಬೆಲೆ : ೨-೦೦

೫. ಕಾವ್ಯಸಿಂಧು (ಕವಿತಾಸಂಕಲನ)

ಲೇಖಕರು : 'ಮಗು' ಬಿರಾದಾರ
ಪ್ರಕಾಶಕರು : ನಟರಾಜ ಪ್ರಕಾಶನ, ಗುಲಬರ್ಗಾ
ಪುಟಗಳು : ೭೮ ಬೆಲೆ : ಸಾದಾ ಪ್ರತಿ ೨-೨೫
ಉತ್ತಮ ಪ್ರತಿ ೨-೫೦

೭. ನಾಲ್ಕು ಹಿಡಿ ಬೆಂಕಿ (ಕವನಸಂಕಲನ)

ಲೇಖಕರು : ದೇಶಪಾಂಡೆ ಸುಬ್ಬರಾಯ
ಪ್ರಕಾಶಕರು : ಕಾವ್ಯಧಾರಾ ಪ್ರಕಾಶನ, ಧಾರವಾಡ
ಪುಟಗಳು : ೬೮ ಬೆಲೆ : ಸಾದಾ ಪ್ರತಿ ೨-೫೦
ಕ್ಯಾಲಿಕೊ ಪ್ರತಿ ೫-೦೦

೭. ಬಸವನ ಬಟ್ಟೆ

ಲೇಖಕರು : ಸಿದ್ಧರಾಮಪ್ಪ ಮಂ. ಪಾವಟೆ
ಪ್ರಕಾಶಕರು : ಲಿಂಗಸಾಹಿತ್ಯ ಪ್ರಕಾಶನ, ಮೂರುಸಾವಿರಮಠದ ಪೇಟೆ,
ಹುಬ್ಬಳ್ಳಿ
ಪುಟಗಳು : vi+೮೭+ix+೧೬ ಬೆಲೆ : ೧-೦೦

೮. ಗುರುಕುಲ (ತ್ರೈಮಾಸಿಕ)

ಸಂಪುಟ : ೧, ಸಂಚಿಕೆ : ೧, ಚೈತ್ರ ಸಂಚಿಕೆ
ಸಂಪಾದಕರು : ಜಿ. ಎಸ್. ಉಜ್ಜನಪ್ಪ
ಪ್ರಕಾಶಕರು : ಗುರುಕುಲ ಪ್ರಕಾಶನ, ಶ್ರೀ ಬೃಹನ್ಮಠ ಪ್ರೌಢಶಾಲೆ,
ಚಿತ್ರದುರ್ಗ

೯. ಶ್ರೀ ಬಸವೇಶ್ವರ ಸುಪ್ರಭಾತ

ಲೇಖಕರು : ಬಸವನಾಥ ಸೂಗೂರಮಠ, ತಿಮ್ಮಾಪುರ
ಪ್ರಕಾಶಕರು : "ಶರಣತತ್ವಪ್ರಚಾರ ಶಿಬಿರ", ರಂಗಂಪೇಟೆ, ಸುರಪುರ
ಪುಟಗಳು : ೨೪ ಬೆಲೆ : ೧-೦೦

೧೦. ವಿಚಾರತರಂಗ (ಕವನಸಂಗ್ರಹ)

ಲೇಖಕರು : ಎಸ್. ಎಮ್. ಹುಣಶ್ಯಾಳ
ಪ್ರಕಾಶಕರು : ಅಮರವಾಣಿ ಪ್ರಕಾಶನ, ರಾಯಚೂರ
ಪುಟಗಳು : ೨೦+೯೨ ಬೆಲೆ : ೨-೦೦

೧೧. ನಮ್ಮ ಪ್ರವಾಸ

ಲೇಖಕರು : ಕೆ. ಕೊಟ್ರಗೌಡ
ಪ್ರಕಾಶಕರು : ಶ್ರೀ. ಕೊಟ್ಟೂರೇಶ ಪ್ರಕಾಶನ
ಹಗರಿಬೊಮ್ಮನಹಳ್ಳಿ (ಬಳ್ಳಾರಿ ಜಿಲ್ಲೆ)
ಪುಟಗಳು : ೧೦+೪೨+೬ ಬೆಲೆ : ೦-೯೫

ಕನ್ನಡ ಭಾಷೆಯಲ್ಲಿ ಬಿಂದು

ಪುಟ ೬೪ ಸಾಲು ೬ ಪಡೆದಿದೆ ಇದನ್ನು ಪಡೆದಿಲ್ಲ ಎಂದು ಓದಬೇಕು.

ಪುಟ ೬೭ ಸಾಲು ೨೬ 'ಗಣಾನಾಂ ಗಣಪತಿಂ ವಂದೇ'ದಲ್ಲಿ ಗಣಪತಿನ್ ಎಂದು ಉಚ್ಚರಿಸುವದನ್ನು ಸ್ಮರಿಸಬಹುದು.

ಇದನ್ನು ಪುಟ ೬೭ ಸಾಲು ೨೮ ಮುಂದೆ ಮುಂದುವರಿಸಿಕೊಂಡು ಓದಬೇಕು.

ಸಂಪಾದಕೀಯ

ದ್ವಿತೀಯ ವರ್ಷ

'ಕರ್ನಾಟಕ ಭಾರತಿ' ಒಂದು ವರ್ಷ ಮುಗಿಸಿ, ಎರಡನೆಯ ವರ್ಷದಲ್ಲಿ ಅಡಿ ಇಡುತ್ತಿದೆ. 'ಭಾರತಿ' ವಿದ್ವಜ್ಜನರ, ಲೇಖಕರ ಹಾಗು ಓದುಗರ ಮೆಚ್ಚುಗೆಯನ್ನು ಪಡೆಯುತ್ತ ನಡೆದಿದೆಯೆಂದು ತಿಳಿಸಲು ಸಂತೋಷವೆನಿಸುತ್ತಿದೆ. ನಮ್ಮ ಲೇಖಕರ ಸಹಾಯ, ಸಹಕಾರ, ಔದಾರ್ಯಗಳಿಗಾಗಿ ವಿಶೇಷ ಕೃತಜ್ಞತೆಗಳನ್ನರ್ಪಿಸುತ್ತೇವೆ. ಇವರೆಲ್ಲರ ನೆರವು, ವಿಶ್ವವಿದ್ಯಾಲಯದ ಪ್ರೋತ್ಸಾಹ ಇವುಗಳ ಮೂಲಕ 'ಕರ್ನಾಟಕ ಭಾರತಿ'ಯ ಮಟ್ಟ ಇನ್ನೂ ಉನ್ನತವಾಗುವಂತೆ ನೋಡಿಕೊಳ್ಳಲಾಗುವುದೆಂಬ ಭರವಸೆಯನ್ನೀಯುತ್ತೇವೆ. ಚಂದಾದಾರರು ಹೆಚ್ಚು ಹೆಚ್ಚು ಮುಂದೆ ಬಂದು ಸಹಾಯ ನೀಡಬೇಕೆಂದು ಪ್ರಾರ್ಥಿಸಿ, ದ್ವಿತೀಯ ವರ್ಷದ ಮೊದಲ ಸಂಚಿಕೆಯನ್ನು ಸಾದರಪಡಿಸುತ್ತೇವೆ.

ಕನ್ನಡ ಅಧ್ಯಯನ ಸಂಸ್ಥೆ

ನಮ್ಮ ವಿಶ್ವವಿದ್ಯಾಲಯದ ಕನ್ನಡ ವಿಭಾಗ ವಿಸ್ತೃತವಾಗುತ್ತ ನಡೆದು, ಅಧ್ಯಯನಸಂಸ್ಥೆಯ ರೂಹುದಳೆಯುತ್ತ ನಡೆದಿದೆಯೆಂದು ತಿಳಿಸಲು ಸಂತೋಷವೆನಿಸುತ್ತಿದೆ. ಕನ್ನಡ ಸಂಸ್ಕೃತಿಯ ಸರ್ವಾಂಗೀಣ ಉನ್ನತಿಗೆ ಮುಕ್ತಹಸ್ತದಿಂದ ಸಹಾಯ ನೀಡುತ್ತಿರುವ ಮಾನ್ಯ ಉಪಕುಲಪತಿಗಳಾದ ಡಾ. ಎ. ಎಸ್. ಅಡಕೆ, ಬಿ. ಇ., ಪಿಎಚ್.ಡಿ., ಎಂ. ಐ. ಇ., ಅವರ ಅಮೃತಹಸ್ತದಿಂದ ಕನ್ನಡ ಸಂಸ್ಥೆಯ ಉದ್ಘಾಟನ ಸಮಾರಂಭ ದಿನಾಂಕ ೯-೮-೧೯೬೯ ರಂದು ವೈಭವಪೂರ್ಣವಾಗಿ ನೆರವೇರಿತು. ಅವರು ಇಂದು ಝರಿಯಂತೆ ಆರಂಭವಾಗುತ್ತಿರುವ ಈ ಅಧ್ಯಯನ ಸಂಸ್ಥೆ ನಮ್ಮ ಸಂಸ್ಕೃತಿಯ ಮಹಾಪ್ರವಾಹವಾಗಿ ಪ್ರವಹಿಸುವಂತಾಗಲೆಂದು ಆಶೀರ್ವದಿಸಿದರು. ಈ ಅಧ್ಯಯನ ಸಂಸ್ಥೆ ಅಧ್ಯಯನ, ಸಂಶೋಧನ ಎಂಬ ಎರಡು ಶಾಖೆಗಳಲ್ಲಿ ಸಂವರ್ಧಿಸುತ್ತ ನಡೆದಿದೆ. ಅಧ್ಯಯನ ಶಾಖೆಯೊಳಗಿನ ವಿವಿಧ ಅಭ್ಯಾಸಕ್ರಮಗಳು :

ಕನ್ನಡ ಎಂ. ಎ.
ಬಿ. ಲಿಟ್. ಡಿಗ್ರಿ
Diploma in Linguistics
Diploma in Translation
Certificate Course in Kannada

ಹಳೆಯ ಎಂ.ಎ. ಅಭ್ಯಾಸಕ್ರಮವನ್ನು, ಇಂದಿನ ಆವಶ್ಯಕತೆಗಳನ್ನು ಅನುಲಕ್ಷಿಸಿ ಪರಿಷ್ಕಾರಗೊಳಿಸಲಾಗಿದೆ. ಕನ್ನಡ ಸಾಹಿತ್ಯಾಭ್ಯಾಸದೊಡನೆ ವಿಶ್ವಸಾಹಿತ್ಯ, ತೌಲನಿಕ ಸಾಹಿತ್ಯ, ವಿಶ್ವಧರ್ಮ, ಜನಪದ ಸಾಹಿತ್ಯ, ಶಾಸನಶಾಸ್ತ್ರ, ಭಾಷಾಶಾಸ್ತ್ರಗಳ ವಿಶೇಷಾಧ್ಯಯನಕ್ಕೆ ಈ ಹೊಸ ಎಂ.ಎ. ಅಭ್ಯಾಸಕ್ರಮದಲ್ಲಿ ಅವಕಾಶವನ್ನು ಕಲ್ಪಿಸಲಾಗಿದೆ. ಹೊಸ ದೃಷ್ಟಿಯಿಂದ ರೂಪಿತವಾದ ಈ ಅಭ್ಯಾಸಕ್ರಮಗಳೆಲ್ಲ ವಿದ್ಯಾರ್ಥಿಗಳ ಚಿತ್ತವನ್ನು ವಿಶೇಷವಾಗಿ ಸೆಳೆದುದರ ಪರಿಣಾಮವಾಗಿ ಪ್ರತಿಯೊಂದು ವರ್ಗಕ್ಕೂ ವಿದ್ಯಾರ್ಥಿಗಳ ಸಂಖ್ಯೆ ಸಂವರ್ಧಿಸಿ ನಿಂತಿದೆ.

ಸಂಶೋಧನ ವಿಭಾಗದಲ್ಲಿ ಜೈನ, ವೀರಶೈವ, ಬ್ರಾಹ್ಮಣ ಸಾಹಿತ್ಯ ಸಂಶೋಧನ ಶಾಖೆಗಳು ಪ್ರಾರಂಭವಾಗಿ, ಪ್ರತಿಯೊಂದು ಶಾಖೆಯಲ್ಲಿಯೂ ಪ್ರಾಚೀನ ಗ್ರಂಥಗಳ ಸಂಸ್ಕರಣ ಹಾಗು ಸಂಪಾದನೆಯ ಕಾರ್ಯ ಭರದಿಂದ ನಡೆದಿದೆ. ವಚನವಾಙ್ಮಯ ಸಂಶೋಧನೆ ಹಾಗು ಶೂನ್ಯಸಂಪಾದನೆಯ ಇಂಗ್ಲಿಷ್ ಭಾಷಾಂತರದ ಕಾರ್ಯ ತೀವ್ರಗತಿಯಿಂದ ಮುಂದುವರಿದಿದೆ. ಮಹತ್ವದ ಕೆಲವು ಗ್ರಂಥಗಳು ಪ್ರಕಟವಾಗಿವೆ. ಇಷ್ಟರಲ್ಲಿಯೇ ಕೆಳಗೆ ಕಾಣಿಸಿದ ಗ್ರಂಥಗಳು ಪ್ರಕಟವಾಗಲಿವೆ :

೧. ಹರಿಹರನ ರಗಳೆಗಳು (ಪ್ರಥಮ ಸಂಪುಟ) : ಪುರಾತನರ ರಗಳೆಗಳು
೨. ಹರಿಹರನ ರಗಳೆಗಳು (ದ್ವಿತೀಯ ಸಂಪುಟ) : ಶಿವಶರಣರ ರಗಳೆಗಳು
೩. ಶೂನ್ಯಸಂಪಾದನೆ (ಶಿವಗಣಪ್ರಸಾದಿ ಮಹಾದೇವಯ್ಯ ಸಂಪಾದಿತ)
೪. ಶೂನ್ಯಸಂಪಾದನೆ (ಗುಮ್ಮಳಾಪುರದ ಸಿದ್ಧಲಿಂಗಯತಿ ಸಂಪಾದಿತ)
೫. ವೀರಶೈವಚಿಂತಾಮಣಿ
೬. ಬ್ರಹ್ಮಾದ್ವೈತಷಟ್‌ಸ್ಥಲಾಭರಣ
೭. ವಿಶೇಷಾನುಭವಷಟ್‌ಸ್ಥಲ
೮. ಮುಕ್ತಿಕಂಠಾಭರಣ
೯. ಲಿಂಗಚಿದಮೃತಬೋಧೆ
೧೦. ಸಕಲ ಪುರಾತನರ ವಚನಗಳು (ಭಾಗ ೧)
೧೧. ಸಕಲ ಪುರಾತನರ ವಚನಗಳು (ಭಾಗ ೨)
೧೨. ಜೀವಂಧರಚರಿತೆ
೧೩. ಪೌಲೋಮ ಆಸ್ತಿಕಪರ್ವ
೧೪. ಶೂನ್ಯಸಂಪಾದನೆ ಇಂಗ್ಲೀಷ್ ಭಾಷಾಂತರ—(ಭಾಗ ೪)

ಕನ್ನಡದಲ್ಲಿ ಪಠ್ಯಪುಸ್ತಕಗಳು

ಕರ್ನಾಟಕ ವಿಶ್ವವಿದ್ಯಾಲಯವು ಕೈಕೊಂಡ ಕನ್ನಡ ಪಠ್ಯಪುಸ್ತಕ ಯೋಜನೆಯಲ್ಲಿ ಅತ್ಯಂತ ಉಪಯುಕ್ತವಾದ ಗ್ರಂಥಗಳು ಹೊರಬರುತ್ತಿವೆಯೆಂದು ತಿಳಿಸಲು ಸಂತೋಷವೆನಿಸುತ್ತದೆ. ವಿಶ್ವವಿದ್ಯಾಲಯದ ಕುಲಪತಿಗಳೂ,

ಪಠ್ಯಪುಸ್ತಕ ಯೋಜನೆಯ ನಿರ್ದೇಶಕರೂ ವಿವಿಧ ವಿಷಯಗಳ ಪ್ರಾಧ್ಯಾಪಕರೂ ಈ ಬಗೆಗೆ ತೋರುತ್ತಿರುವ ಆಸ್ಥೆ ಸಂಸ್ಮರಣೀಯವಾಗಿದೆ. ಗಣ್ಯರಾದ ಅಧ್ಯಾಪಕರೂ, ಪ್ರಾಧ್ಯಾಪಕರೂ ಪಠ್ಯಪುಸ್ತಕ ರಚನೆಯ ಕಾರ್ಯದಲ್ಲಿ ತ್ರಿಕರಣ ಪೂರ್ವಕವಾಗಿ ದುಡಿಯುತ್ತಿರುವರು. ಇಂತಹರ ಪ್ರಯತ್ನದ ಫಲವಾಗಿ ಬರುತ್ತಿರುವ ಪಠ್ಯಪುಸ್ತಕಗಳು ವಿಷಯ, ಶೈಲಿಗಳ ದೃಷ್ಟಿಯಿಂದ ಉನ್ನತ ಮಟ್ಟವನ್ನು ಮುಟ್ಟುವದರಲ್ಲಿ ಸಂದೇಹವಿಲ್ಲ. ವಿವಿಧ ವಿಷಯಗಳ ಅಭಿವ್ಯಕ್ತಿಗೆ ಸಮರ್ಥವಾಗುವಂತೆ ಕನ್ನಡ ಭಾಷೆಯನ್ನು ಅಣಿಗೊಳಿಸುವ, ಹದಗೊಳಿಸುವ ಮಹತ್ವದ ಕಾರ್ಯವನ್ನೆಸಗುತ್ತಿರುವ ನಮ್ಮ ವಿಶ್ವವಿದ್ಯಾಲಯದ ವಿವಿಧ ವಿಷಯಗಳ ಪ್ರಾಧ್ಯಾಪಕರು ಅಭಿನಂದನಾರ್ಹರು. ಅವರಿಗೆ ನಮ್ಮ ಹಾರ್ದಿಕ ಅಭಿವಂದನೆಗಳು. ವಿಶ್ವವಿದ್ಯಾಲಯದಿಂದ ಪ್ರಕಟವಾಗುತ್ತಿರುವ ಈ ಹೊತ್ತಿಗೆಗಳ ಲಾಭವನ್ನು ನಮ್ಮ ವಿದ್ಯಾರ್ಥಿಗಳು ತೆಗೆದುಕೊಳ್ಳುವರೆಂದು ಆಶಿಸಲಾಗಿದೆ.

ಕಾಲೇಜುಗಳಲ್ಲಿ ಕನ್ನಡ ಮಾಧ್ಯಮ

ಪಿ. ಯು. ಸಿ., ಬಿ. ಎ. ಮೊದಲನೆಯ ಭಾಗಕ್ಕೆ ಸಂಬಂಧಪಟ್ಟ ಎಲ್ಲ ಕನ್ನಡ ಪುಸ್ತಕಗಳೂ ಬಹು ಬೇಗನೆ ಸಿದ್ಧವಾಗಲಿವೆ. ಕಾಲೇಜುಗಳಲ್ಲಿ ಕನ್ನಡ ಮಾಧ್ಯಮ ಪ್ರಾರಂಭಿಸುವ ಕಾಲ ಈಗ ಎಲ್ಲಂದದಿಂದಲೂ ಸನ್ನಿಹಿತವಾಗಿದೆಯೆಂದು ನಮ್ಮ ಪ್ರಾಮಾಣಿಕ ಅಭಿಪ್ರಾಯ. ಅನ್ಯಭಾಷೆಗಳಲ್ಲಿ ಬೋಧನೆ, ಅಭಿವ್ಯಕ್ತಿಯ ತೊಂದರೆಗಳೇ ವಿದ್ಯಾರ್ಥಿಗಳ ಅನುತ್ತೀರ್ಣತೆಗೆ ಬಹುಮಟ್ಟಿಗೆ ಕಾರಣವೆಂಬುದು ಶಿಕ್ಷಣ ತಜ್ಞರ ಮತ. ಹೀಗಿದ್ದರೂ ವಿದ್ಯಾರ್ಥಿಗಳೂ, ಅಧ್ಯಾಪಕರೂ, ಶಿಕ್ಷಣ ಸಂಸ್ಥೆಗಳ ಸಂಚಾಲಕರೂ ಪರಕೀಯ ಭಾಷೆಯಲ್ಲಿಯೇ ವಿವಿಧ ವಿಷಯಗಳ ಬೋಧನೆಯನ್ನು ಮುಂದುವರಿಸಿಕೊಂಡು ಹೋಗುತ್ತಿರುವುದು ಸೋಜಿಗವಾದರೂ ಸತ್ಯ. ಆದಕ್ಕೆ ವಿದ್ಯಾರ್ಥಿಗಳಿಗೂ ಅಧ್ಯಾಪಕರಿಗೂ ನೆರವಾಗಬಲ್ಲ ಯೋಗ್ಯ ಪಠ್ಯಪುಸ್ತಕಗಳು ಕನ್ನಡದಲ್ಲಿಲ್ಲವೆಂಬುದೂ ಒಂದು ಕಾರಣವಾಗಿರಬಹುದು. ವಿಶ್ವವಿದ್ಯಾಲಯವು ಈಗ ಈ ಕೊರತೆಯನ್ನು ಪೂರೈಸುತ್ತಿರುವುದರಿಂದ ನಮ್ಮ ಕಾಲೇಜುಗಳಲ್ಲಿ ಕನ್ನಡ ಮಾಧ್ಯಮದ ವರ್ಗಗಳು ಬೇಗನೆ ಪ್ರಾರಂಭವಾಗಲೆಂದು ಆಶಿಸುತ್ತೇವೆ. ಕಾಲೇಜುಗಳ ಪ್ರಾಚಾರ್ಯರೂ, ಅಧ್ಯಾಪಕರೂ ನಮ್ಮ ಶಿಕ್ಷಣ ಯೋಜನೆಯಲ್ಲಿ ಅತ್ಯಂತ ಮಹತ್ವದ್ದಾದ ಈ ಸಮಸ್ಯೆಯ ಕಡೆಗೆ ದಯವಿಟ್ಟು ಗಮನವಿತ್ತು ವಿದ್ಯಾರ್ಥಿಗಳ ಕಲ್ಯಾಣ ಹಾಗು ಕನ್ನಡ ನುಡಿಯ ಬೆಳವಣಿಗೆಗಳಿಗೆ ಕಾರಣರಾಗಬೇಕೆಂದು ಅವರಲ್ಲಿ ನಮ್ರತೆಯಿಂದ ನಮ್ಮ ಪ್ರಾರ್ಥನೆಯನ್ನು ನಿವೇದಿಸುತ್ತೇವೆ. ರಾಜ್ಯ ಹಾಗು ಕೇಂದ್ರ ಸರಕಾರಗಳೇ ದೇಶಭಾಷೆಗಳ ಸರ್ವತೋಮುಖ ಅಭಿವೃದ್ಧಿಗೆ ಮುಂದೆ ಬಂದಿರುವಾಗ, ದೇಶಭಾಷೆಗಳನ್ನೇ ಆಡಳಿತ ಭಾಷೆಯೆಂದು ರಾಜ್ಯ

ಸರಕಾರಗಳು ಒಪ್ಪಿಕೊಂಡಿರುವಾಗ ಕನ್ನಡಮಾಧ್ಯಮದ ಮೂಲಕ ಕಲಿತವರಿಗೆ ನೌಕರಿ ದೊರೆಯುವುದು ಕಷ್ಟವಾಗಬಹುದೆಂಬ ವಾದದಲ್ಲಿ ಹುರುಳಿಲ್ಲವೆಂದು ಹೇಳಬಯಸುತ್ತೇವೆ. ಇದರ ಲಾಭವನ್ನು ಪಡೆದುಕೊಳ್ಳಲು ನಮ್ಮ ವಿದ್ಯಾರ್ಥಿಗಳು ಹಿಂದುಳಿಯಬಾರದೆಂದು ನಮ್ಮ ನಮ್ರ ಸೂಚನೆ.

ಕಲಬುರ್ಗಿಯಲ್ಲಿ ಸ್ನಾತಕೋತ್ತರ ಕೇಂದ್ರ

ನಮ್ಮ ವಿಶ್ವವಿದ್ಯಾಲಯವು ಭಾರತದ ಅತ್ಯಂತ ಶ್ರೇಷ್ಠ ವಿಶ್ವವಿದ್ಯಾಲಯಗಳಲ್ಲಿ ಒಂದೆಂದು ಪರಿಗಣಿತವಾಗುವಂತೆ ಉನ್ನತ ಮಟ್ಟವನ್ನು ಕಾಯ್ದುಕೊಂಡು ಬಂದು ಬೃಹದ್ರೂಪದಲ್ಲಿ ಬೆಳೆಯುತ್ತಿದೆ. ಇದನ್ನರಿತು ನಮ್ಮ ಕುಲಪತಿಗಳು ಕಲಬುರ್ಗಿಯಲ್ಲಿ ಒಂದು ಸ್ನಾತಕೋತ್ತರ ಕೇಂದ್ರವನ್ನು ಸ್ಥಾಪಿಸಬೇಕೆಂದು ಮಾಡುತ್ತಿದ್ದ ಪ್ರಯತ್ನ ಇಷ್ಟರಲ್ಲಿ ಸಫಲವಾಗಲಿದೆಯೆಂದು ತಿಳಿಸಲು ಸಂತೋಷವೆನಿಸುತ್ತದೆ. ಕಲಬುರ್ಗಿ ನಾಡಿನ ಕಣಕಣಗಳಲ್ಲಿಯೂ ಪ್ರಾಚೀನ ಇತಿಹಾಸ, ಸಾಹಿತ್ಯ, ಸಂಸ್ಕೃತಿಗಳು ಪುಟನೆಗೆಯುತ್ತಿವೆ. ಕಲಬುರ್ಗಿಯಲ್ಲಿ ಅಧ್ಯಯನಕ್ಕೆ ಒಂದು ಹೊಸ ದಿಸೆ ಪ್ರಾಪ್ತವಾಗುವುದರಲ್ಲಿ ಸಂದೇಹವಿಲ್ಲ.

ಗಾಂಧೀ ಶತಮಾನೋತ್ಸವ

ನಮ್ಮ ವಿಶ್ವವಿದ್ಯಾಲಯದಲ್ಲಿ ಗಾಂಧೀ ಶತಮಾನೋತ್ಸವವನ್ನು ವೈಶಿಷ್ಟ್ಯಪೂರ್ಣವಾಗಿ ಆಚರಿಸಲಾಯಿತು. ಗಾಂಧೀ ಭವನ ಹೊಸ ಸ್ವರೂಪವನ್ನು ತಳೆದಿದೆ. ಗಾಂಧೀಜಿ ಅಭ್ಯಾಸಮಂಡಲ, ಪುಸ್ತಕ ಭಾಂಡಾರ, ಪ್ರದರ್ಶನ ಮಂದಿರಗಳೆಲ್ಲ ಅಲ್ಲಿ ಏರ್ಪಟ್ಟಿವೆ. ಪ್ರೊ. ವ್ಹಿ. ಜಿ. ಕುಲಕರ್ಣಿ, ಎಂ.ಎ., ಎಲ್‌ಎಲ್.ಬಿ. ಅವರನ್ನು ಗೌರವ ನಿರ್ದೇಶಕರೆಂದು ನಿಯಮಿಸಲಾಗಿದೆ. ಶತಮಾನೋತ್ಸವದ ಸಂದರ್ಭದಲ್ಲಿ ಏರ್ಪಡಿಸಲಾದ ವಿಚಾರಸಂಕಿರಣದಲ್ಲಿ ವಿಶ್ವವಿದ್ಯಾಲಯದ ಗಣ್ಯ ಪ್ರಾಧ್ಯಾಪಕರ ವಿಚಾರಾರ್ಹ ಭಾಷಣಗಳೂ, ಸಾರಸ್ಯಪೂರ್ಣ ಚರ್ಚೆಗಳೂ ನಡೆದುವು. ನಮ್ಮ ರಾಜ್ಯದ ಮುಖ್ಯಮಂತ್ರಿಗಳಾದ ಮಾನ್ಯ ಶ್ರೀ ವೀರೇಂದ್ರ ಪಾಟೀಲ ಅವರ ಅಮೃತಹಸ್ತದಿಂದ ವಿಶ್ವವಿದ್ಯಾಲಯದ ಆವರಣದಲ್ಲಿ 'ಮಹಾತ್ಮಾ ಗಾಂಧೀ ಮಾರ್ಗ'ದ ಉದ್ಘಾಟನ ಸಮಾರಂಭವು ನೆರವೇರಿತು.

ಭಾರತೀಯ ತತ್ವಜ್ಞಾನ ಸಮ್ಮೇಲನ

೪೩ನೆಯ ಅಖಿಲ ಭಾರತೀಯ ತತ್ವಜ್ಞಾನ ಸಮ್ಮೇಲನ ನಮ್ಮ ವಿಶ್ವವಿದ್ಯಾಲಯದ ಆಶ್ರಯದಲ್ಲಿ, ಕಳೆದ ಅಕ್ಟೋಬರ್ ೨೯ ರಿಂದ ೩೧ರವರೆಗೆ ಯಶಸ್ವಿಯಾಗಿ ನೆರವೇರಿತು. ಭಾರತ, ಜರ್ಮನಿ, ಸಿಂಹಳದ್ವೀಪ, ನೇಪಾಳ ವಿಶ್ವವಿದ್ಯಾಲಯಗಳಿಂದ ಅನೇಕ ಜನ ಪ್ರತಿನಿಧಿಗಳು ಆಗಮಿಸಿ, ಸಮ್ಮೇಲನವನ್ನು ಯಶಸ್ವಿಗೊಳಿಸಿದರು. ನಮ್ಮ ಉಪರಾಷ್ಟ್ರಪತಿಗಳಾದ ಮಾನ್ಯ ಜಿ. ಎಸ್. ಪಾಠಕ

ಅವರ ಅಮೃತಹಸ್ತದಿಂದ ಈ ಸಮ್ಮೇಲನದ ಉದ್ಘಾಟನ ಸಮಾರಂಭ ನೆರವೇರಿತು. ಖ್ಯಾತ ತತ್ವಜ್ಞಾನ ಪ್ರಾಧ್ಯಾಪರಾದ ಡಿ. ಡಿ. ವಾಡೇಕರ ಅವರ ಘನ ಅಧ್ಯಕ್ಷತೆಯಲ್ಲಿ ಈ ಸಮ್ಮೇಲನ ನಡೆಯಿತು. ಕುಲಪತಿಗಳ ಸ್ವಾಗತಭಾಷಣ, ಉಪರಾಷ್ಟ್ರಪತಿಗಳ ಉದ್ಘಾಟನ ಭಾಷಣ, ಪ್ರೊ. ವಾಡೇಕರರ ಅಧ್ಯಕ್ಷಭಾಷಣ ಮನನೀಯವಾದ ವಿಚಾರಗಳನ್ನೊಳಗೊಂಡಿವೆ. ಅಂತೆ ವಿವಿಧ ಗೋಷ್ಠಿಗಳ ಅಧ್ಯಕ್ಷ ಭಾಷಣ, ಅಲ್ಲಿ ಸಾದರಪಡಿಸಿದ ವಿವಿಧ ವಿಷಯಗಳ ಮೇಲಿನ ಪ್ರಬಂಧಗಳು ಉನ್ನತಮಟ್ಟದಲ್ಲಿದ್ದವು. ಜೊತೆಗೆ ಮಹತ್ವದ ವಿಷಯಗಳ ಮೇಲೆ ವಿಚಾರಸಂಕಿರಣಗಳನ್ನು ಏರ್ಪಡಿಸಲಾಗಿದ್ದಿತು.

ಸಮ್ಮೇಲನ ಎಲ್ಲಂದದಿಂದಲೂ ಯಶಸ್ವಿಯಾಯಿತು. ಅದಕ್ಕೆ ಪ್ರೋತ್ಸಾಹ-ವಿತ್ತ ನಮ್ಮ ವಿಶ್ವವಿದ್ಯಾಲಯದ ಕುಲಪತಿಗಳು, ಕಾರ್ಯಭಾರವನ್ನು ಹೊತ್ತ ಕಾರ್ಯವಾಹಕರು, ಸಮ್ಮೇಲನದ ಅಧ್ಯಕ್ಷರು—ಎಲ್ಲರಿಗೂ ನಮ್ಮ ಹಾರ್ದಿಕ ವಂದನೆಗಳು.

ಮಹಾಕವಿ ಪಂಪನ ಬಗೆಗೆ ಸಂಶೋಧನಯಾತ್ರೆ

ಮಹಾಕವಿ ಪಂಪನ ಜೀವನದ ಮೇಲೆ ಹೊಸ ಬೆಳಕು ಬೀರುತ್ತ ಬೆಳಕಿಗೆ ಬಂದ ಗಂಗಾಧರಂ ಶಾಸನವನ್ನು ಕುರಿತು ಬಹುಜನ ವಿದ್ವಾಂಸರು ಈ ವರೆಗೆ ಅಧ್ಯಯನ ನಡೆಸಿರುವರು. ಇವರಲ್ಲಿ ಅಧಿಕ ಪಾಲು ನಮ್ಮ ವಿಶ್ವವಿದ್ಯಾಲಯದ ಪ್ರಾಧ್ಯಾಪಕರಿಗೆ ಸಲ್ಲುತ್ತದೆ. ಈ ಶಾಸನದ ಪಾಠವಾಚನದಷ್ಟೇ ಶಾಸನಸ್ಥಳದ ಸಂದರ್ಶನವೂ ಅಭ್ಯಾಸಯೋಗ್ಯವಾದುದರಿಂದ ಕನ್ನಡ ವಿಭಾಗದ ಮುಖ್ಯಸ್ಥ-ರಾದ ಡಾ|| ಆರ್. ಸಿ. ಹಿರೇಮಠ, ಡಾ|| ಎಂ. ಎಸ್. ಸುಂಕಾಪುರ, ಪ್ರೊ|| ಎಂ. ಎಂ. ಕಲಬುರ್ಗಿ ಅವರು ಅಲ್ಲಿಗೆ ಸಂಶೋಧನ ಯಾತ್ರೆಯನ್ನು ಕೈಕೊಂಡಿದ್ದರು. ಕವಿತಾಗುಣಾರ್ಣವ ಕೆರೆ, ಕೆರೆಯ ನೆರೆಯ ಬೊಮ್ಮಲಗುಟ್ಟ (ಗೊಂಬೆಗಳ ಗುಡ್ಡ), ಬೊಮ್ಮಲಗುಟ್ಟದ ಮೇಲಿನ ಸಿದ್ಧಶಿಲೆ, ಸಿದ್ಧಶಿಲೆಯ ಮೇಲೆ ಕೆತ್ತಿದ ಶಾಸನ, ಚಕ್ರೇಶ್ವರಿ ಮತ್ತು ತೀರ್ಥಂಕರರ ಪ್ರತಿಮೆಗಳನ್ನು ಅಣುಅಣುವಾಗಿ ಅಭ್ಯಸಿಸಿದರು. ಶಾಸನದ ಪಡಿಯಚ್ಚನ್ನು ತೆಗೆದುಕೊಳ್ಳುವದ-ರೊಂದಿಗೆ ಆ ಸ್ಥಳದ ಪ್ರತಿಯೊಂದು ಮಗ್ಗುಲಿನ ಚಿತ್ರಗಳನ್ನು ಸಂಗ್ರಹಿಸಿದರು. ಹೆಚ್ಚಿನ ಸಂಶೋಧನೆಗಾಗಿ ಬೆಟ್ಟವನ್ನು, ಬೆಟ್ಟದ ಸುತ್ತಲಿನ ಪ್ರದೇಶವನ್ನು ನಿರೀಕ್ಷಿಸಿದರು. ಈ ಯಾತ್ರೆಯ ಫಲವಾಗಿ, ಹಲವು ಹೊಸ ವಿಷಯಗಳು ಅವರ ಗಮನಕ್ಕೆ ಬಂದಿವೆ.

ಬೆಂಗಳೂರು-ಮೈಸೂರು ವಿಶ್ವವಿದ್ಯಾಲಯಗಳ ನೂತನ ಕುಲಪತಿಗಳು

ನಮ್ಮ ರಾಜ್ಯದ ಎರಡು ವಿಶ್ವವಿದ್ಯಾಲಯಗಳಿಗೆ, ಕನ್ನಡ ನಾಡು, ನುಡಿ, ಸಂಸ್ಕೃತಿಗಳ ಬಗೆಗೆ ಒಳ್ಳೆ ಅಭಿಮಾನವನ್ನು ತಳೆದ ಇರ್ವರು ಕನ್ನಡಿಗರು ಕುಲಪತಿಗಳಾಗಿ ನಿಯಾಮಕಗೊಂಡಿರುವರು ಕರ್ನಾಟಕ ಕಾಲೇಜದ ಪ್ರತಿಭಾನ್ವಿತ ವಿದ್ಯಾರ್ಥಿಗಳೆಂದೂ, ಆಂಗ್ಲ ಕನ್ನಡ ಭಾಷೆಗಳೆರಡರ ಸವ್ಯಸಾಚಿಗಳೆಂದೂ, ಶ್ರೇಷ್ಠ ನ್ಯಾಯಮೂರ್ತಿಗಳೆಂದೂ ಹೆಸರಾದ ಶ್ರೀ ಟಿ. ಕೆ. ತುಕೋಳ, ಎಂ.ಎ., ಎಲ್‌ಎಲ್.ಬಿ., ಅವರು ಬೆಂಗಳೂರು ವಿಶ್ವವಿದ್ಯಾಲಯದ ಉಪಕುಲಪತಿಗಳೆಂದು ಬಹುಬೇಗನೇ ಅಧಿಕಾರ ವಹಿಸಲಿರುವರು. ಸಾಹಿತಿಗಳಾಗಿ ಜನಿಸಿ, ಪ್ರಾಧ್ಯಾಪಕರಾಗಿ ವೃತ್ತಿಯನ್ನು ಪ್ರಾರಂಭಿಸಿ, ಆಡಳಿತೆಯಲ್ಲಿ ಪಳಗಿ, ಮತ್ತೆ ಶಾರದೆಯ ಮುಂದಿರದ ಉಚ್ಚ ಪೀಠವನ್ನೇರಲಿರುವರು ನ್ಯಾಯಮೂರ್ತಿ ತುಕೋಳ ಅವರು.

ಪ್ರೊ|| ದೇ. ಜವರೇಗೌಡ ಅವರು ಹೆಸರಾಂತ ಪ್ರಾಧ್ಯಾಪಕರು; ಖ್ಯಾತ ಸಾಹಿತಿಗಳು. ಅಧ್ಯಾಪಕರಾಗಿ, ಪರೀಕ್ಷಾನಿಯಂತ್ರಕರಾಗಿ, ಡೀನರಾಗಿ, ಸಿಂಡಿಕೇಟ್ ಸದಸ್ಯರಾಗಿ, ಕನ್ನಡವಿಭಾಗದ ಮುಖ್ಯಸ್ಥರಾಗಿ, ಕನ್ನಡ ಅಧ್ಯಯನ ಸಂಸ್ಥೆಯನ್ನು ಕಟ್ಟಿ, ಅದರ ನಿರ್ದೇಶಕರಾಗಿ, ಮೈಸೂರು ವಿಶ್ವವಿದ್ಯಾನಿಲಯಕ್ಕೆ ವಿವಿಧಮುಖವಾದ ಸೇವೆಸಲ್ಲಿಸಿರುವರು. ಅವರ ನೇತೃತ್ವದಲ್ಲಿ ಕನ್ನಡ ವಿಭಾಗದ ಚಟುವಟಿಕೆಗಳು ವಿವಿಧ ಮುಖವಾಗಿ ಬೆಳೆದಿವೆ. ದೇ. ಜ. ಗೌ. ಕನ್ನಡ ಜನತೆಯ ಪ್ರೀತಿ–ವಿಶ್ವಾಸಗಳನ್ನು ಗಳಿಸಿರುವರು. ಇವರು ಮೈಸೂರು ವಿದ್ಯಾಲಯದ ಕುಲಪತಿಗಳಾಗಿ ಅಧಿಕಾರ ಸ್ವೀಕರಿಸಿರುವರು.

ಆದರಣೀಯರಾದ ಶ್ರೀ ಟಿ. ಕೆ. ತುಕೋಳ, ಸೋದರ ಪ್ರಾಧ್ಯಾಪಕರಾಗಿದ್ದ ಶ್ರೀ ಜವರೇಗೌಡ ಅವರಿಗೆ ನಮ್ಮ ಹಾರ್ದಿಕ ಅಭಿವಂದನೆಗಳು.

ಶ್ರದ್ಧಾಂಜಲಿ

ಮೈಸೂರು ರಾಜ್ಯದ ಹಿಂದಿನ ಶಿಕ್ಷಣಮಂತ್ರಿಗಳೂ ಕೆಲಕಾಲ ಮುಖ್ಯಮಂತ್ರಿಗಳೂ ಆಗಿದ್ದ ಶ್ರೀ ಎಸ್. ಆರ್. ಕಂಠಿ ಅವರು ಶಿವಾಧೀನರಾದುದರಿಂದ ನಾಡಿಗೆ ಅಪಾರವಾದ ಹಾನಿಯುಂಟಾಗಿದೆ. ಶ್ರೀ ಕಂಠಿ ಅವರು ಸಾಹಿತ್ಯ, ಸಂಸ್ಕೃತಿಗಳ ಉನ್ನತಪರಂಪರೆಯುಳ್ಳ ಮನೆತನದಲ್ಲಿ ಜನಿಸಿ ಸಾಹಿತ್ಯಾಭಿರುಚಿಯುಳ್ಳವರಾಗಿದ್ದರು. ಅಂಕಿಸಂಖ್ಯೆಗಳಲ್ಲಿಯಂತೂ ಅವರದು ಎತ್ತಿದ ಕೈ. ಕರ್ನಾಟಕ ಏಕೀಕರಣದ ವಿಷಯವಾಗಿ ಹಗಲಿರುಳು ಪ್ರಯತ್ನಪಟ್ಟವರು. ರಾಜ್ಯದ ಶಿಕ್ಷಣಮಂತ್ರಿಗಳಾಗಿ ಶಿಕ್ಷಣದಲ್ಲಿ ಅನೇಕ ಹೊಸ ಉಪಕ್ರಮಗಳನ್ನು ಸ್ಥಾಪಿಸಿದವರು. ನಮ್ಮ ರಾಜ್ಯದ ಬೆಂಗಳೂರು ವಿಶ್ವವಿದ್ಯಾಲಯ, ಕೃಷಿ ವಿಶ್ವವಿದ್ಯಾಲಯಗಳೆರಡೂ ಶ್ರೀ ಕಂಠಿ ಅವರ ನಿರ್ಮಿತಿಗಳು. ಬಸವೇಶ್ವ

ಅಷ್ಟಶತಮಾನೋತ್ಸವ, ಕಿತ್ತೂರು ಚೆನ್ನಮ್ಮ ಸ್ಮಾರಕ ಇವು ಶ್ರೀಯುತರ ಪ್ರಯತ್ನದ ಫಲ. ಶ್ರೀಯುತರ ಅಗಲುವಿಕೆಯಿಂದ ನಾಡು ಒಬ್ಬ ಹಿರಿಯ ಕಾರ್ಯಕರ್ತರನ್ನೂ ಅನುಭವಿಗಳನ್ನೂ ಕಳೆದುಕೊಂಡು ಬಡವಾಗಿದೆ. ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರುತ್ತೇವೆ.

ಉಸ್ಮಾನಿಯಾ ವಿಶ್ವವಿದ್ಯಾಲಯದ ಕನ್ನಡ ವಿಭಾಗದ ಮುಖ್ಯಸ್ಥರೂ, ಖ್ಯಾತ ಸಾಹಿತಿಗಳೂ ಎಂದು ಹೆಸರಾಗಿದ್ದ ಮಾನವಿ ನರಸಿಂಗರಾಯರು ಕನ್ನಡಕ್ಕೆ ಮಹತ್ವದ ಕಾಣಿಕೆಗಳನ್ನು ಸಲ್ಲಿಸುತ್ತಿದ್ದರು. ಕನ್ನಡದ ಏಳ್ಗೆಗೆ ನಿರಂತರ ಪರಿಶ್ರಮಿಸುತ್ತಿದ್ದರು. ಇಂತಹ ಶ್ರೇಷ್ಠ ಕನ್ನಡಿಗರು ನಮ್ಮನ್ನಗಲಿದುದರಿಂದ ಕನ್ನಡಕ್ಕೆ ಅಪಾರ ಹಾನಿಯುಂಟಾಗಿದೆ. ಅವರ ಆತ್ಮಕ್ಕೆ ಶಾಂತಿಯನ್ನು ಕೋರುತ್ತೇವೆ.

ಲೇಖಕರ ಪರಿಚಯ

೧ ಶ್ರೀ ಭೀಮರಾವ ಚಿಟಗುಪ್ಪಿ :

ಇವರು ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿಗಳ ಅಭ್ಯಾಸದಲ್ಲಿ ವಿಶೇಷ ಪರಿಣತರು. ಮುಂಬೈಯಲ್ಲಿದ್ದುಕೊಂಡು ತಮ್ಮ ಅಭ್ಯಾಸದ ಫಲವನ್ನು ಆಗಾಗ ಲೇಖನಗಳ ಮೂಲಕ ನೀಡುತ್ತಿದ್ದಾರೆ.

೨ ಶ್ರೀ ಎನ್. ಎಸ್. ಗದಗಕರ :

ಲಲಿತಪ್ರಬಂಧಗಳನ್ನು ಬರೆಯುವಲ್ಲಿ ಪಳಗಿದವರಾದ ಅವರು ಮೂರು-ನಾಲ್ಕು ಗ್ರಂಥಗಳನ್ನು ಪ್ರಕಟಿಸಿದ್ದಾರೆ.

೩ ಶ್ರೀ ಡಿ. ಎಸ್. ಶಿವಪ್ಪ :

ವೈದ್ಯಕೀಯ ವೃತ್ತಿಯ ಜೊತೆಗೆ ತಮ್ಮ ವೃತ್ತಿವಿಶಿಷ್ಟ ಲೇಖನಗಳನ್ನು ಬರೆಯುವ ಕೆಲವೇ ಜನರಲ್ಲಿ ಇವರೊಬ್ಬರು. 'ಸುಧಾ' ಮುಂತಾದ ಪತ್ರಿಕೆಗಳಲ್ಲಿ ಹಲವಾರು ವೈದ್ಯಕೀಯ ಲೇಖನಗಳು ಬೆಳಕು ಕಂಡಿವೆ.

೪ ಡಾ. ಶಿ. ಚಿ. ನಂದೀಮಠ :

ಹಿರಿಯ ತಲೆಮಾರಿನ ಸಂಶೋಧಕ ವಿದ್ವಾಂಸರು. ಅವರ ಇತ್ತೀಚಿನ ಸಂಪಾದನ ಗ್ರಂಥ 'ಕನ್ನಡ ಕುವಲಯಾನಂದ'.

೫ ಶ್ರೀ ಕೆ. ಎಸ್. ಸವಣೂರ :

ಕರ್ನಾಟಕ ಕಾಲೇಜಿನ ನಿವೃತ್ತ ಭೌತಶಾಸ್ತ್ರ ಪ್ರಾಧ್ಯಾಪಕರು. ಭೌತಶಾಸ್ತ್ರದ ವಿಷಯ ಗಳನ್ನು ಕುರಿತು ಆಗಾಗ ಲೇಖನಗಳನ್ನು ಬರೆಯುತ್ತಾರೆ.

೬ ಶ್ರೀ ಕೆ. ವಿರೂಪಾಕ್ಷಗೌಡ :

ಉತ್ಸಾಹೀ ತರುಣ ಕವಿಗಳು. ಜಾನಪದ ಸಾಹಿತ್ಯಸಂಗ್ರಹದಲ್ಲಿಯೂ ಆಸಕ್ತಿ ಅವರ ೨-೩ ಕವನಸಂಕಲನಗಳು ಈಗಾಗಲೇ ಪ್ರಕಟವಾಗಿವೆ.

೭ ಶ್ರೀ ಜಿ. ಎಸ್. ಕುಳ್ಳಿ :

ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ವಿಭಾಗದಲ್ಲಿ ಭಾಷಾಶಾಸ್ತ್ರದ ಅಧ್ಯಾಪಕರು.

೮ ಶ್ರೀ ಎಂ. ಎಂ. ಕಲಬುರ್ಗಿ :

ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ವಿಭಾಗದಲ್ಲಿ ಅಧ್ಯಾಪಕರು.

೧೯ **ಶ್ರೀ ಎಸ್. ಕೆ. ಕಡೆಕೊಡಿಟದ :**

ಕರ್ನಾಟಕ ವಿಶ್ವವಿದ್ಯಾಲಯದ ಮಾನವಶಾಸ್ತ್ರ ವಿಭಾಗದಲ್ಲಿ ಸಂಶೋಧನ ಸಹಾಯಕರು. ತಮ್ಮ ಸಂಶೋಧನೆಯ ಫಲವನ್ನು ಲೇಖನರೂಪದಲ್ಲಿ ಪ್ರಕಟಿಸುತ್ತಿರುತ್ತಾರೆ.

೨೦ **ಶ್ರೀಮತಿ ಕಲ್ಪನಾ :**

ಬಿ. ಎಸ್‌ಸಿ. ಪದವೀಧರರು. 'ಸಂಕ್ರಮಣ' ಮುಂತಾದ ಪತ್ರಿಕೆಗಳಲ್ಲಿ ಇವರ ಕವನಗಳು ಪ್ರಕಟವಾಗಿವೆ.

೨೧ **ಶ್ರೀ ಎಂ. ಎಸ್. ಸುಂಕಾಪುರ :**

ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ವಿಭಾಗದಲ್ಲಿ ರೀಡರರು.

೨೨ **ಶ್ರೀ ವೀ. ಕೆ. ವೀಣಾಕರ**

[illegible] ಕಾಲೇಜಿನಲ್ಲಿ ಕನ್ನಡ ಅಧ್ಯಾಪಕರಾದ ಇವರು 'ರಸಶಾಸ್ತ್ರ'ವನ್ನು ವಿಶೇಷ ಆಸಕ್ತಿಯಿಂದ ಅಭ್ಯಾಸ ಮಾಡುತ್ತಿದ್ದಾರೆ.

೨೩ **ಶ್ರೀ ಆರ್. ಆರ್. ಮುತಾಲಿಕ :**

ಬಿ.ಎ. ಪದವೀಧರರಾದ ಇವರು ಹುಕ್ಕೇರಿಯ ಉಚ್ಚ ಮಾಧ್ಯಮಿಕ ಶಾಲೆಯಲ್ಲಿ ಶಿಕ್ಷಕರಾಗಿದ್ದಾರೆ.

೨೪ **ಶ್ರೀ ಎಂ. ಎಸ್. ಮನ್ನಿಕೇರಿ :**

ಕರ್ನಾಟಕ ವಿಶ್ವವಿದ್ಯಾಲಯದ ಭೂಶಾಸ್ತ್ರ ವಿಭಾಗದಲ್ಲಿ ಸಂಶೋಧನ ಸಹಾಯಕರು.

೨೫ **ಶ್ರೀ ಕೆ. ಗೌಡರೆಡ್ಡಿ :**

ಕರ್ನಾಟಕ ವಿಶ್ವವಿದ್ಯಾಲಯದ ಭೂಶಾಸ್ತ್ರ ವಿಭಾಗದಲ್ಲಿ ಅಧ್ಯಾಪಕರು.

೨೬ **ಶ್ರೀಮತಿ ವೀಣಾ :**

ಶ್ರೀ ವೀಣಾ ಯಲಬುರ್ಗಿಯವರು ಕರ್ನಾಟಕ ಕಾಲೇಜಿನಲ್ಲಿ ಇಂಗ್ಲೀಷ ಅಧ್ಯಾಪಕರು.

೨೭ **ಶ್ರೀ ಕೆ. ಆರ್. ಮಲ್ಲಿಕಾರ್ಜುನಪ್ಪ :**

ಕರ್ನಾಟಕ ವಿಶ್ವವಿದ್ಯಾಲಯದ ವಾಣಿಜ್ಯ ವಿಭಾಗದಲ್ಲಿ ಅಧ್ಯಾಪಕರಾಗಿದ್ದಾರೆ. ಪ್ರಚಲಿತ ವಾಣಿಜ್ಯೋದ್ಯಮ ಸಮಸ್ಯೆಗಳನ್ನು ಕುರಿತು ಆಗಾಗ ಬರೆದ ಲೇಖನಗಳು ವಿವಿಧ ಪತ್ರಿಕೆಗಳಲ್ಲಿ ಪ್ರಕಟವಾಗಿವೆ.

೧೮ ಶ್ರೀ ಶಾಶ್ವತಸ್ವಾಮಿ ಮುಕ್ಕುಂದಿಮಠ :

ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ವಿಭಾಗದ ಪಿಎಚ್. ಡಿ. ವಿದ್ಯಾರ್ಥಿ. 'ಎಂ. ಎಸ್. ಸ್ವಾಮಿ' ಎಂಬ ಹೆಸರಿನಿಂದ ಈಗಾಗಲೇ ಇವರ ಕೆಲವು ಸಂಶೋಧನ ಲೇಖನಗಳು ಪ್ರಕಟವಾಗಿವೆ.

೧೯ ಶ್ರೀ ಕೆ. ಭುಜಬಲಿಶಾಸ್ತ್ರಿ :

ಕನ್ನಡ ಹಿರಿಯ ತಲೆಮಾರಿನ ವಿದ್ವಾಂಸರು. 'ಜೈನಧರ್ಮ' ಮತ್ತು ಸಾಹಿತ್ಯದಲ್ಲಿ ವಿಶೇಷ ಪರಿಣತಿ ಹೊಂದಿದ್ದಾರೆ.

೨೦ ಶ್ರೀ ಸರ್ಜಾ ಚಂದ್ರಶೇಖರಯ್ಯ :

ಶಿವಮೊಗ್ಗೆಯ ಕರ್ನಾಟಕ ಸಂಘದ ಕಾರ್ಯದರ್ಶಿಗಳಾಗಿದ್ದುಕೊಂಡು ಲೇಖನ ಕಾರ್ಯದಲ್ಲಿ ಆಸ್ಥೆಯುಳ್ಳವರಾಗಿದ್ದಾರೆ.

೨೧ ಶ್ರೀ ಎಸ್. ಶಿವಣ್ಣ :

'ಮಾನಸಗಂಗೋತ್ರಿಯ' ಪ್ರಸಾರಾಂಗದಲ್ಲಿ ಸಂಶೋಧನ ಸಹಾಯಕರು.

೨೨ ಶ್ರೀ ಎಸ್. ರಾಜಶೇಖರ :

ಇತಿಹಾಸ ವಿಷಯದಲ್ಲಿ ಪ್ರಥಮ ವರ್ಗದ ಎಂ.ಎ. ಪಡೆದ ಪ್ರತಿಭಾನ್ವಿತ ವಿದ್ಯಾರ್ಥಿ. ಈಗ ಕರ್ನಾಟಕ ಕಾಲೇಜಿನಲ್ಲಿ ಇತಿಹಾಸದ ಅಧ್ಯಾಪಕರಾಗಿದ್ದಾರೆ. ಸಂಶೋಧನೆಯಲ್ಲಿ ಇವರಿಗೆ ವಿಶೇಷ ಆಸಕ್ತಿ.

೨೩ ಶ್ರೀ ಕೆ. ಕುಶಾಲಪ್ಪಗೌಡ :

ಅಣ್ಣಾಮಲೈ ವಿಶ್ವವಿದ್ಯಾನಿಲಯದ ಭಾಷಾಶಾಸ್ತ್ರ ವಿಭಾಗದಲ್ಲಿ ರೀಡರರು.

೨೪ ಶ್ರೀ ಜಿ. ಡಿ. ನಾಡಕರ್ಣಿ :

ಧಾರವಾಡದ ಜೆ. ಎಸ್. ಎಸ್. ಕಾಲೇಜಿನಲ್ಲಿ ಕನ್ನಡದ ಅಧ್ಯಾಪಕರು. ಇವರ ಅನೇಕ ಲೇಖನಗಳು ಪತ್ರಿಕೆಗಳಲ್ಲಿ ಬೆಳಕು ಕಂಡಿವೆ.

೨೫ ಶ್ರೀ ಎ. ಎಂ. ರಾಜಶೇಖರಯ್ಯ :

ಕರ್ನಾಟಕ ವಿಶ್ವವಿದ್ಯಾಲಯದ ರಾಜ್ಯಶಾಸ್ತ್ರ ವಿಭಾಗದಲ್ಲಿ ರೀಡರರು.

KARNATAK UNIVERSITY PUBLICATIONS
ಕರ್ನಾಟಕ ವಿಶ್ವವಿದ್ಯಾಲಯದ ಪ್ರಕಟನೆಗಳು

I. Text Books
(ಪಠ್ಯಪುಸ್ತಕಗಳು)

		PRICE
1	Selections from Mahābhārata & Rāmāyaṇa (Sanskrit)	3·00
2	Sanskrit Selections for P. U. C. (Arts & Science)	1·50
3	ಕಾವ್ಯಮಂಜರಿ : ಭಾಗ ೧, ಸಂಪುಟ ೧	1·00
4	ಕಾವ್ಯಮಂಜರಿ : ಭಾಗ ೧, ಸಂಪುಟ ೨	1·00
5	ಕಾವ್ಯಮಂಜರಿ : ಭಾಗ ೨, ಸಂಪುಟ ೧	1.00
6	ಕಾವ್ಯಮಂಜರಿ : ಭಾಗ ೨, ಸಂಪುಟ ೨	1·00
7	ಗದ್ಯಮಂಜರಿ	2·00
8	ಕಾವ್ಯವಿಲಾಸ	1·50
9	ಗದ್ಯವಿಲಾಸ	1·25
10	ಕಾವ್ಯಕುಂಜ	1·50
11	ಕಾವ್ಯಮಂಜರಿ : ಭಾಗ ೧, ಸಂಪುಟ ೩	1·00

II. Research Publications Series
(ಸಂಶೋಧನ ಗ್ರಂಥಮಾಲೆ)

1	Pleistocene Studies in the Malaprabha Basin (Joint Publication of Karnatak University, Dharwar and Deccan College Research Institute, Poona) —*R. V. Joshi*		15·00
2	The Karnatak Theatre —*H. K. Ranganath*	Ord. binding	3·00
		Calico binding	5·00
3	Some Problems in Jaina Psychology —*T. G. Kalghatgi*	Full cal.	7·00
		Half calico	6·00
4	ಕನ್ನಡ ಜಾನಪದ ಗೀತಗಳು —*B. S. Gaddagimath*		5·00
5	The Concept of Comedy —*G. S. Amur*		7·00
6	Local Self-Government in Mediaeval Karnatak —*G. S. Dikshit*		7·00
7	ಕನ್ನಡ ಸಾಹಿತ್ಯದಲ್ಲಿ ಹಾಸ್ಯ —*M. S. Sunkapur*		8·00
8	Basic Syllabus in Practice —*N. R. Hiremath*		10·00
9	The Later Phase in the Development of W. B. Yeats —*S. R. Mokhashi*		10·00
10	Some Studies in Boolean Algebra —*E. Sampathkumarachar*		7·00

11 ನೇಮಿಚಂದ್ರ —*B. S. Kulkarni* 12·00
12 History of South Kanara —*K. V. Ramesh* (IN PRESS)
13 Havyaka Dialect of North Kanara —*K. G. Shastri* (,,)
14 A Critical Study of the Hindu Astronomy in the Light and Language of the Modern. —*D. A. Somayaji* (,,)

III. Extension Lectures Publications Series

(ವಿಶೇಷ ಉಪನ್ಯಾಸ ಗ್ರಂಥಮಾಲೆ)

1 Introduction to Karnatak Mysticism —*R. D. Ranade* 1.00
2 Hindu Code Bill —*P. B. Gajendragadkar* 2·00
3 Karnataka's Trans-Oceanic Contacts —*B. A. Saletore* 3.00
4 Kālidāsa —*R. D. Karmarkar* 4.00
5 Bhavabhūti —*R. D. Karmarkar* 3.00
6 Bāṇa —*R. D. Karmarkar* 3·00
7 Rockets, Satellites and Space Travel —*G. B. Pant* 2·00
8 Purandara and Haridāsa Movement —*M. V. Krishna Rao* 6.00
9 ಮಹಾಕವಿ ಷಡಕ್ಷರದೇವ ಹಾಗು ಅವನ ಕೃತಿಗಳು —*B. Shivamoorthy Shastry* 3.00
10 Śaṅkara's Advaita —*R. D. Karmarkar* 3·00
11 ಸಾಹಿತ್ಯ : ಸಂಪ್ರದಾಯ ಮತ್ತು ಹೊಸ ಮಾರ್ಗ —*V. Sitaramaiah* 4·00
12 ಕನ್ನಡ ಸಾಹಿತ್ಯದಲ್ಲಿ ನಾಲ್ಕು ನಾಯಕರತ್ನಗಳು —*D. R. Bendre* 3·00
13 ವಿಚಾರಸಾಹಿತ್ಯನಿರ್ಮಾಣ —*K. S. Karanth* 2·00
14 ಕನ್ನಡ ರಂಗಭೂಮಿಯ ಪುರೋಭಿವೃದ್ಧಿ —*Adya Rangacharya* 2·50
15 ಸಾಹಿತ್ಯವಿಮರ್ಶೆಯ ಮಾರ್ಗದರ್ಶಕ ಸೂತ್ರಗಳು —*R. S. Mugali* 3·00

IV. Economics Series

1 A Survey of Handicrafts in Eight Districts of the Mysore State —*S. S. Mensinkai* 5·00
2 Community Development and Employment —*D. M. Nanjundappa* 3·00
3 Research Reporting in Social Sciences —*M. H. Gopal* 2·00
4 Economy of Scarcity Areas —*T. K. Meti* 4·00

5 Foreign Trade and Economic Development — *V. L. D'souza* 1·50

6 Food and Freedom — *V. M. Dandekar* 2·50

7 Local Taxation in Urban Areas — *D. M. Nanjundappa & M. V. Nadkarni* 3·00

8 Economic Development in India — *R. Balakrishna* 5·00

9 Economic Development of the under-developed regions in Italy — *T. K. Meti* (IN PRESS)

V. ಕನ್ನಡ ಕಾವ್ಯಮಾಲೆ

Kannada Classical Series

1 ರಾಜಶೇಖರವಿಳಾಸ ಸಂಗ್ರಹ 2·00
ಸಂ. : ಆರ್. ಸಿ. ಹಿರೇಮಠ, ಎಂ. ಎಸ್. ಸುಂಕಾಪುರ

2 ಸೋಮನಾಥಚಾರಿತ್ರ 5·00
ಸಂ. : ಆರ್. ಸಿ. ಹಿರೇಮಠ, ಎಂ. ಎಸ್. ಸುಂಕಾಪುರ

3 ರಾಜಶೇಖರವಿಳಾಸಂ 10·00
ಸಂ. : ಆರ್. ಸಿ. ಹಿರೇಮಠ, ಎಂ. ಎಸ್. ಸುಂಕಾಪುರ

4 ಭೈರವೇಶ್ವರಕಾವ್ಯದ ಕಥಾಮಣಿಸೂತ್ರರತ್ನಾಕರ-ಭಾಗ ೧ 6·00
ಸಂ. : ಆರ್. ಸಿ. ಹಿರೇಮಠ, ಎಂ. ಎಸ್. ಸುಂಕಾಪುರ

5 ತ್ರಿಷಷ್ಟಿಪುರಾತನಚಾರಿತ್ರ ಸಂ. : ಆರ್. ಸಿ. ಹಿರೇಮಠ 12·00

6 ಬಸವರಾಜವಿಜಯಂ ಸಂ. : ಆರ್. ಸಿ. ಹಿರೇಮಠ 20·00

7 ಭೈರವೇಶ್ವರಕಾವ್ಯದ ಕಥಾಮಣಿಸೂತ್ರರತ್ನಾಕರ-ಭಾಗ ೨ 8·00
ಸಂ. : ಆರ್. ಸಿ. ಹಿರೇಮಠ, ಎಂ. ಎಸ್. ಸುಂಕಾಪುರ

8 ಹರಿಹರದೇವಕೃತ ಪುರಾತನರ ಆರು ರಗಳೆಗಳು 3·50
ಸಂ. : ಆರ್. ಸಿ. ಹಿರೇಮಠ

9 ನೇಮಿನಾಥಪುರಾಣಂ ಸಂ. : ಬಿ. ಎಸ್. ಕುಲಕರ್ಣಿ 6·00

10 ಅಕ್ರೂರಚರಿತ್ರೆ ಸಂ. : ಬೆಟಗೇರಿ ಕೃಷ್ಣಶರ್ಮಾ 4·00

11 ಹರಿಹರದೇವಕೃತ ಪುರಾತನರ ರಗಳೆಗಳು (ಅಚ್ಚಿನಲ್ಲಿ)
ಸಂ. : ಆರ್. ಸಿ. ಹಿರೇಮಠ

VI. ಉಪನ್ಯಾಸ ಗ್ರಂಥಮಾಲೆ

Kannada Extension Lectures Booklets Series

ಬೆಲೆ : ಪ್ರತಿ ಒಂದಕ್ಕೆ ೨೫ ಪೈಸೆ

1. ಭವಭೂತಿ — ಕೆ. ಕೃಷ್ಣಮೂರ್ತಿ
2. ಮನೋರೋಗಗಳು — ಎಸ್. ಆರ್. ಕುಲಕರ್ಣಿ
3. ಪ್ರಥಮ ಪಂಚವಾರ್ಷಿಕ ಯೋಜನೆ ಹಾಗೂ ಒಕ್ಕಲುತನ — ಎಸ್. ಪಿ. ಪಾಟೀಲ
4. ಗಾದೆಗಳು — ಎ. ಕೆ. ರಾಮಾನುಜನ್

5. ಭಾರತದಲ್ಲಿ ಜಾತಿಪದ್ಧತಿ — ವ್ಹಿ. ಎಚ್. ಡಿ'ಸೋಜಾ
6. ಕೀಟಕ ಪಿಡುಗುಗಳ ಪರಿವೀಕ್ಷಣೆ — ಎಸ್. ಎಸ್. ಕಟಗಿಹಳ್ಳಿಮಠ
7. ರಾಜಕೀಯ ಪಕ್ಷಗಳು — ಎನ್. ರಾಜಗೋಪಾಲರಾವ್
8. ಸ್ವಾದಿ ಅರಸುಮನೆತನ — ಎಸ್. ಎಸ್. ನಾಳವಾಡ
9. ಮಕ್ಕಳ ಶಿಕ್ಷಣ — ಡಿ. ಎಸ್. ಕರ್ಕಿ
10. ಮೂಢ ನಂಬಿಕೆಗಳು — ಎಲ್. ಆರ್. ಹೆಗಡೆ
11. ಸಂಸ್ಕೃತ ಕವಯಿತ್ರಿಯರು — ಕೆ. ಟಿ. ಪಾಂಡುರಂಗಿ
12. ನಿತ್ಯಜೀವನದಲ್ಲಿ ರಸಾಯನಶಾಸ್ತ್ರ — ಜಿ. ವಿರೂಪಾಕ್ಷಪ್ಪ
13. ಸಾರ್ವಜನಿಕ ಆಡಳಿತ — ಜಿ. ಎಸ್. ಹಾಲಪ್ಪ
14. ವಿಚಾರವಾದ — ಗೌರೀಶ ಕೈಕಿಣಿ
15. ಮಹಾಕವಿ ಮಿಲ್ಟನ್ — ಜಿ. ಎಸ್. ಆಮೂರ
16. ಭಾರತದಲ್ಲಿ ಗ್ರಂಥಾಲಯ ಪ್ರಸಾರ — ಕೆ. ಎಸ್. ದೇಶಪಾಂಡೆ
17. ಭಾರತೀಯ ನಾಗರಿಕತೆಗೆ ಮನುವಿನ ಕೊಡುಗೆ — ಜಿ. ಎಚ್. ಶ್ರೀಧರ
18. ಜನಸಂಖ್ಯೆ ಹಾಗೂ ಆಹಾರ ಸಮಸ್ಯೆ — ಸಿ. ಎಂ. ಉಮಾಕಾಂತಶಾಸ್ತ್ರಿ
19. ಸೌರವ್ಯೂಹ — ಪಿ. ಎನ್. ಶ್ರೀನಿವಾಸ ಅಯ್ಯಂಗಾರ
20. ಪ್ರಾಚೀನ ಭಾರತದಲ್ಲಿ ಸಾಮಾಜಿಕ ಜನಜೀವನ — ಸಿ. ವಿ. ರಂಗಸ್ವಾಮಿ
21. ಸಮಾಜ ಕಾರ್ಯ — ಎಚ್. ಎಂ. ಮರುಳಸಿದ್ಧಯ್ಯ
22. ಸಂಸತ್ತಿನ ಕಾರ್ಯಪದ್ಧತಿ — ಎ. ಎಂ. ರಾಜಶೇಖರಯ್ಯ
23. ಕನ್ನಡನಾಡಿನ ಶಾಸನಗಳು — ಪಿ. ಬಿ. ದೇಸಾಯಿ
24. ಕವೀಂದ್ರ ರವೀಂದ್ರರು — ಎಸ್. ಎಸ್. ನಾಳವಾಡ
25. ನಾಗಾನಂದ — ಎಚ್. ಪಿ. ಮಲ್ಲೇದೇವರು
26. ಜೀವನದಲ್ಲಿ ನಗೆ — ಎಂ. ಎಸ್. ಸುಂಕಾಪುರ
27. ಬಸವಣ್ಣನವರ ಯೋಜನೆಗಳು — ಜಿ. ಸಿ. ಜವಳಿ
28. [illegible] ಕ್ರಾಂತಿ — ಸಿ. ವೀರಬಸಣ್ಣ
29. ಕನ್ನಡ ಕಥಾಸೃಷ್ಟಿ — ಜಿ. ಜಿ. ಮಹೀಶವಾಡಿ
30. ಸಂಸ್ಕೃತ ಸಾಹಿತ್ಯದಲ್ಲಿ ಶೃಂಗಾರರಸ — ಕೆ. ಕೃಷ್ಣಮೂರ್ತಿ
31. ನೀರಾವರಿ ಬೇಸಾಯ — ಎಸ್. ಎ. ಹೊಸಮನಿ
32. ಸಾರ್ವಜನಿಕ ಅಭಿಪ್ರಾಯ — ಎನ್. ರಾಜಗೋಪಾಲರಾವ್
33. ಕನ್ನಡ ಕಾವ್ಯಗಳಲ್ಲಿ ಕಿರಾತಾರ್ಜುನಪ್ರಸಂಗ — ದೇವೇಂದ್ರಕುಮಾರ ಹಕಾರಿ
34. ಕನ್ನಡಕ್ಕೆ ಪುರಂದರದಾಸರು ನೀಡಿದ ಕೊಡುಗೆ — ಜಿ. ಡಿ. ನಾಡಕರ್ಣಿ
35. ಘ್ಯಾತನ್ಯಗಳು — ಕೆ. ಡಿ. ತಂಗೋಡ
36. ಮಹಾಕವಿ ರಾಘವಾಂಕನ ಪಾತ್ರಗಳಲ್ಲಿ ಸತ್ಯನಿಷ್ಠೆ — ಜಿ. ವ್ಹಿ. ಮಲ್ಲಾಪುರ
37. ಅಭಿವೃದ್ಧಿ ಯೋಜನೆಗಳಲ್ಲಿ ಸಹಕಾರದ ಪಾತ್ರ — ಎಸ್. ಜಿ. ಕರಬಂಟನಾಳ
38. ಕನ್ನಡ ಜೈನಪುರಾಣಗಳು — ಎಸ್. ಎನ್. ನಾಯಕ
39. ಕನ್ನಡ ನಾಟ್ಯಸೃಷ್ಟಿ — ಎಚ್. ಜಿ. ಲೋಕೂರ
40. ಹರಿಹರನು ಚಿತ್ರಿಸಿದ ಶಿವಶರಣೆಯರು — ಬಿ. ಬಿ. ಸಂಡಿ
41. ನೀವು ಬಯಸುವ ಮಗು ಗಂಡೋ? ಹೆಣ್ಣೋ? — ಕೆ. ಆರ್. ರಾಮಸ್ವಾಮಿ
42. ಅಂಡಯ್ಯ — ಬಿ. ಎಸ್. ಕುಲಕರ್ಣಿ
43. ಬೆಳವಲನಾಡಿನ ಬೆಳೆಗಳು — ಎಸ್. ಎ. ಹೊಸಮನಿ
44. ಜಾನಪದ ಕಥೆಗಳು — ಎಲ್. ಆರ್. ಹೆಗಡೆ

45. ಸುಧಾರಿಸಿದ ಬೇಸಾಯ — ಎ. ಡಿ. ಕಣ್ಣೂಗೌಡ
46. ಕನ್ನಡನಾಡಿನ ಐತಿಹಾಸಿಕ ಮಹಾಪುರುಷರು — ಜಿ. ಆರ್. ಕುಲಕರ್ಣಿ
47. ಗ್ರಹಮಾಲೆಯಿಂದ ಅಂತರಂಗ — ಎಸ್. ಆರ್. ಗುಂಜಾಳ
48. ಸ್ತ್ರೀ ಮತ್ತು ಶಿಕ್ಷಣ — ಮನಮೋಹನ ಅತ್ತಾರ್
49. ಜಾಗತಿಕ ಸರಕಾರ — ಶಿ. ಸಿದಬಸಪ್ಪ
50. ಸಮುದಾಯ ಸಂಘಟನೆ — ಎಸ್. ಎಂ. ಮರುಳಸಿದ್ದಯ್ಯ
51. ಅಶೋಕನ ಧರ್ಮಶಾಸನಗಳು — ಶ್ರೀನಿವಾಸ ರಿತ್ತಿ
52. ಪ್ರಾಚೀನ ಭಾರತದ ರಾಜ್ಯಪದ್ಧತಿ — ಬಿ. ಪ್ರ. ಸಂಗಣ್ಣವರ
53. ಅಕ್ಕಮಹಾದೇವಿ ಮತ್ತು ಮೀರಾಬಾಯಿ — ಎಸ್. ಎಸ್. ಕಪ್ಪನ
54. ಕನ್ನಡ ಕಾವ್ಯದಲ್ಲಿ ವೀರರಸಪರಿಪಾಕ — ಜಿ. ಜಿ. ಮಳಲಿಮಠ
55. ಹರಿಹರ ಮಹಾಕವಿಯ ಕೆಲವು ಮಹೋನ್ನತ ವಿಚಾರಗಳು

— ಬಿ. ಶಿ. ಜವಳಿ

56. ಭಾರತ ರಾಜ್ಯಘಟನೆ — ಎಂ. ಎಸ್. ಪಾಟೀಲ
57. ಪಂಚಾಯತಿ ರಾಜ್ಯ — ಎಸ್. ಜಿ. ಕರಭಂಟನಾಳ ಮತ್ತು ಕೆ. ಡಿ. ಬಸವ
58. ವಿಷಮಜ್ವರ — ಬಿ. ಎಸ್. ಶಂಕರ
59. ಪುಸ್ತಕ ಭಾಂಡಾರ ಕಾಯಿದೆ — ಜಿ. ಎಂ. ಪಾಟೀಲ
60. ಸರ್ ಐಸಾಕ್ ನ್ಯೂಟನ್ — ಆರ್. ಬಿ. ಅಣ್ಣಿಗೇರಿ
61. ಗ್ರಾಮಾಭ್ಯುದಯದ ಯೋಜನಾಂಗಗಳು — ಜಿ. ಕೆ. ಮೂಲಿ
62. ಹರಿಜನರ ಸಮಸ್ಯೆಗಳು ಹಾಗು ಅವುಗಳ ಪರಿಹಾರ

— ಎಸ್. ಕೆ. ಕಡೆಕೊಂಬದ

63. ರಾಸಾಯನಿಕ ಕ್ರಿಯೆಗಳು — ಎಂ. ಎಸ್. ಎಸ್. ರಾವ್
64. ಪ್ರಜಾಪ್ರಭುತ್ವದ ಮೂಲತತ್ವಗಳು — ಕೆ. ಜಿ. ಬಕ್ಷಿ
65. ಹೃದಯಾಘಾತ — ಬಿ. ಎಸ್. ಶಂಕರ್
66. ಅಪರಾಧಗಳ ಬಗೆಗೆ ಸಾಮಾಜಿಕ ದೃಷ್ಟಿಕೋನ — ಡಿ. ಎ. ಶೆಟ್ಟಿ
67. ಶ್ರೀ ರಾಮಾಯಣದರ್ಶನದಲ್ಲಿ ಕುವೆಂಪು ಸೃಜಿಸಿದ ಮೂರು ಪಾತ್ರಗಳು

— ಎಂ. ಜಿ. ಬಿರಾದಾರ

68. ಯೋಜನೆಗಳೇಕೆ ಬೇಕು? — ಎಸ್. ಎಸ್. ಯಬ್ಬಿ
69. ನಗರನಾಡಿನ ಶಿವಶರಣರು — ಬ್ರ. ಶಿವಾನಂದ
70. ವಿಜ್ಞಾನದ ದೃಷ್ಟಿಯಲ್ಲಿ ಸೃಷ್ಟಿ — ಆರ್. ಎಸ್. ಭೂಸನೂರಮಠ
71. ವಿಜಯನಗರದ ನಿರ್ಣಾಯಕ ಯುದ್ಧ — ಎಸ್. ಜಿ. ಕೆಂಭಾವಿ
72. ಬಸವಣ್ಣನವರನ್ನು ಕುರಿತ ಶಾಸನಗಳು — ಎಂ. ಎಂ. ಕಲಬುರ್ಗಿ
73. ಆಧುನಿಕ ಭಾಷಾವಿಜ್ಞಾನ — ಜಿ. ಎಸ್. ಕಾಳ್ಳಿ
74. ಪುರಾಣ ಜಿಜ್ಞಾಸೆ — ಎಲ್. ಆರ್. ಹೆಗಡೆ
75. ಭಾರತದಲ್ಲಿ ಕೈಗಾರಿಕ ಪ್ರಯೋಗ — ಬಿ. ಎಸ್. ಕಂಬಕಣ್ಣೆ
76. ಅಧಿಕ ಉತ್ಪಾದನೆಗಾಗಿ ಸಂಕರತಳಿ ಬೆಳೆಗಳು — ಎ. ಡಿ. ಕಣ್ಣೂರಮಠ
77. ಕನ್ನಡ ನುಡಿಯ ಬೆಳವಣಿಗೆ — ಎಸ್. ಜಿ. ಬಿರಾದಾರ
78 ಹರಿಹರನ ಗಿರಿಜಾಕಲ್ಯಾಣ — ಜಿ. ಬ್ರ. ಶಿರೂರ
79. ಹೊಟ್ಟೆಯ ಹುಣ್ಣು — ಬಿ. ಎಸ್. ಶಂಕರ
80. ಸಂಯೋಜಕ ಶಕ್ತಿ — ಜಿ. ಜಿ. ಶೆಟ್ಟಿ
81. ಸಂಸದೀಯ ಸರಕಾರವು ಭಾರತಕ್ಕೆ ಒಪ್ಪುವುದೇ? — ಎಸ್. ಎಚ್. ಪಾಟೀಲ
82. ನಮ್ಮ ರೈತರೇಕೆ ಹಿಂದುಳಿದಿದ್ದಾರೆ? — ಎಂ. ಬಿ. ಕೆಂಚಣ್ಣ

83. ನಗೆಗಾರ ನಯಸೇನ — ಎಂ. ಎಸ್. ಸುಂಕಾಪುರ
84. ಶೂನ್ಯಸಂಪಾದನೆ — ವ್ಹಿ. ಎಸ್. ಕಂಬಿ
85. ಮಹಮೂದ ಗವಾನ — ಎಲ್. ಆರ್. ಕುಲಕರ್ಣಿ
86. ಕೆಳದಿಯ ನಾಯಕರು — ಜಿ. ಎಸ್. ದೀಕ್ಷಿತ
87. ಮುಳುಗುಂದನಾಡು — ಎಸ್. ಎಚ್. ರಿತ್ತಿ
88. ಶ್ವಾಸಕೋಶಕ್ಷಯ — ಪಿ. ಎಸ್. ಶಂಕರ
89. ಕರ್ನಾಟಕದಲ್ಲಿ ಗ್ರಂಥಾಲಯಗಳು — ಎಸ್. ಆರ್. ಗುಂಜಾಳ
90. ಮಿರ್ಜಾ ಘಾಲಿಬ್ — ಅಬ್ದುಲ್ ಮಜೀದಖಾನ್

VII. ವಿಶೇಷ ವಾಙ್ಮಯ ಪ್ರಸಾರ ಪುಸ್ತಕಮಾಲೆ

		PRICE
1	ನಿಜಗುಣ ಶಿವಯೋಗಿ ಹಾಗೂ ಅವರ ಕೃತಿಗಳು	0·50
2	ಮಹಾಕವಿ ರನ್ನ ಹಾಗೂ ಅವನ ಕೃತಿಗಳು	1·00
3	ಮಹಾಕವಿ ಪಂಪ ಹಾಗೂ ಅವನ ಕೃತಿಗಳು	1·00
4	ಸರ್ವಜ್ಞಕವಿ : ಜೀವನ ಹಾಗೂ ಕಾವ್ಯ	1·50
5	ಬಸವಣ್ಣನವರ ವ್ಯಕ್ತಿತ್ವ ಹಾಗೂ ಜೀವನಸಿದ್ಧಿ	1·50
6	ಸಾಹಿತ್ಯವಿಮರ್ಶೆ	1·50

VIII. Other Publications

(ಇತರ ಪ್ರಕಟನೆಗಳು)

1	Hubli City—A Study in Urban Economic Life —*B. R. Dhekney*	10·00
2	Private International Law — *N. K. Dixit & Negalur Ranganath*	10·00
3	The Structure of Kannada — *R. C. Hiremath*	5·00
4	विवेकचिंतामणि (Marathi rendering of Nijaguna Shivayogi's Viveka Chintamani in Kannada) (Joint publication of the Karnatak University, Dharwar & the Poona University, Poona) —Ed. *D. N. Awalikar*	6·75
5	ಸಸ್ಯಶಾಸ್ತ್ರ — ಪಿ. ಎಸ್. ಚಿಕ್ಕಣ್ಣಯ್ಯ	1·50
6	ರಸಾಯನಶಾಸ್ತ್ರ — ಆರ್. ಎಸ್. ಹಮಸಾಗರ	4·00
7	ಪ್ರಾಯೋಗಿಕ ರಸಾಯನಶಾಸ್ತ್ರ — ಆರ್. ಬಿ. ಕಂಠಿ	3·00
8	ಕನ್ನಡ ಸಂತರ ಪರಮಾರ್ಥಪಥ —ಅನು. : ಎಂ. ಎಸ್. ದೇಶಪಾಂಡೆ	5·00
9	ಕನ್ನಡ ಪರಮಾರ್ಥಸೋಪಾನ —ಸಂ. ಎಂ. ಎಸ್. ದೇಶಪಾಂಡೆ	2·50
10	Studies in State Administration —Ed. *G. S. Halappa*	15.00
11	Yashodhara Charita —Ed. *K. Krishnamoorthy*	5·00
12	Essays in Sanskrit Criticism —*K. Krishnamoorthy*	5.00

13	The First General Elections in Goa —*G. S. Halappa, A. M. Rajashekharaiah & K. Raghavendra Rao*	3.00
14	Sunyasampadane—Vol-I (*English version of a Kannada work with Commentary and Notes*) —Ed. *S. C. Nandimath, L. M. A. Menezes & R. C. Hiremath*	12.00
15	Kavi Kaumudi —Ed. *K. Krishnamoorthy*	1.50
16	ಚನ್ನಬಸವಣ್ಣನವರ ವಚನಗಳು —ಸಂ. ಆರ್. ಸಿ. ಹಿರೇಮಠ	15.00
17	ಷಟ್‌ಸ್ಥಲಪ್ರಭೆ —ಆರ್. ಸಿ. ಹಿರೇಮಠ	7.00
18	ಶ್ರೀ ಸಿದ್ಧರಾಮೇಶ್ವರ ವಚನಗಳು —ಸಂ. ಆರ್. ಸಿ. ಹಿರೇಮಠ	20.00
19	ಶಿವಶರಣೆಯರ ವಚನಗಳು (ಸಮಗ್ರ ಸಂಪುಟ) —ಸಂ. ಆರ್. ಸಿ. ಹಿರೇಮಠ	20.00
20	Sunyasampadane—Vol-II —Ed. *S. S. Bhoosanurmath & Armando Menezes*	20·00
21	ಬಸವಣ್ಣನವರ ವಚನಗಳು —ಸಂ. ಆರ್. ಸಿ. ಹಿರೇಮಠ	20·00
22	ಮಹಾದೇವಿಯಕ್ಕನ ವಚನಗಳು —ಸಂ. ಆರ್. ಸಿ. ಹಿರೇಮಠ	7.00
23	ನೀಲಮ್ಮನ ವಚನಗಳು ಮತ್ತು ಲಿಂಗಮ್ಮನ ವಚನಗಳು —ಸಂ. ಆರ್. ಸಿ. ಹಿರೇಮಠ	5·00
24	ಇಪ್ಪತ್ತೇಳು ಶಿವಶರಣೆಯರ ವಚನಗಳು —ಸಂ. ಆರ್. ಸಿ. ಹಿರೇಮಠ	5·00
25	ಅಮುಗೆ ರಾಯಮ್ಮನ ವಚನಗಳು ಮತ್ತು ಅಕ್ಕಮ್ಮನ ವಚನಗಳು —ಸಂ. ಆರ್. ಸಿ. ಹಿರೇಮಠ	5.00
26	Critical Essays on Indian Writing in English —Ed. *M. K. Naik, S. K. Desai and G. S. Amur*	20.00
27	Sāyaṇa's Subhāṣita-Sudhānidhi —Ed. *K. Krishnamoorthy*	10.00
28	ಶಾಸನಸಂಪದ —Ed. *R. C. Hiremath & M. M. Kalburgi*	2.00
29	Urban Studies : An Aid to Research —*B. N. Sinha & T. N. Achut Rao*	30.00
30	Sunyasampadane (Vol. III) —*Ed. S. S. Bhoosnurmath & Armando Menezes*	
31	ಶೂನ್ಯಸಂಪಾದನೆ —ಸಂ. ಆರ್. ಸಿ. ಹಿರೇಮಠ	(IN PRESS)
32	Old Peopele of Makunti —*H. M. Marulasiddaiah*	(IN PRESS)

IX. UNIVERSITY JOURNALS

(Annuals)

1 Journal of the Karnatak University — Science
2 Journal of the Karnatak University — Humanities
3 Journal of the Karnatak University — Social Sciences

Rate of Annual Subscription for Each Journal :

Rs. 5-00 (In India)

2 Dollars }
14 Shillings } (Foreign)

KARNATAK UNIVERSITY BULLETIN (MONTHLY)

Subscription :

Monthly : 50 paise
Annual : Rs. 6/-

ಕರ್ನಾಟಕ ಭಾರತಿ (ಅಯನ ಪತ್ರಿಕೆ)

ವಾರ್ಷಿಕ ಚಂದಾ : ರೂ. ೫/- (ಅಂಚೆವೆಚ್ಚ ಸಹಿತ)
ಬಿಡಿ ಸಂಚಿಕೆಯ ಬೆಲೆ : ರೂ. ೩/- (ಅಂಚೆವೆಚ್ಚ ಪ್ರತ್ಯೇಕ)

For details please write to :

The Director,
Extension Service & Publications,
Karnatak University,
DHARWAR-3 (Mysore State)

ವಿವರಗಳಿಗೆ ಬರೆಯಿರಿ :

ನಿರ್ದೇಶಕರು,
ವ್ಯಾಸಂಗ ವಿಸ್ತರಣ ಹಾಗು ಪ್ರಕಟನ ವಿಭಾ
ಕರ್ನಾಟಕ ವಿಶ್ವವಿದ್ಯಾಲಯ,
ಧಾರವಾಡ-೩ (ಮೈಸೂರು ರಾಜ್ಯ)